ಶುಕ್ರವಾರ, ಮಾರ್ಚ್ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 85 | ಪುಟ 12 + 4
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಕಲೆ ಕೇವಲ ಮನರಂಜನೆಗಲ್ಲ ಎನ್ನುವ ನಟ ಚೇತನ್ ತಮ್ಮ ವಿಚಾರಧಾರೆಗೆ ಹತ್ತಿರವಿರುವ 'ರಣಂ'ನಲ್ಲಿ ಬಣ್ಣಹಚ್ಚಿದ್ದಾರೆ

ಆಳ-ಅಗಲ
ಲಸಿಕೆ ಪೋಲು ಕಡಿವಾಣ ಬೇಕು

'ಭವಿಷ್ಯದಲ್ಲಿ 4 ಬಗೆಯ ಬ್ಯಾಂಕ್‌ಗಳು' 2
ಜಾರಕಿಹೊಳಿ ಸಹೋದರರಿಗೆ ಪ್ರತಿಷ್ಠೆಯ ಕಣ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
48,440	14,325	₹46,250 (ಬೆಂಗಳೂರು)	₹65,600 (ಬೆಂಗಳೂರು)	72.62

ಇನ್ನೊಂದು ವಿಡಿಯೊ ಹರಿಯಬಿಟ್ಟ ಯುವತಿ • ಜಾರಕಿಹೊಳಿ ಮೊಬೈಲ್ ಫೋನ್ ವಶಕ್ಕೆ

ಸಿ.ಡಿ: ಮತ್ತೊಂದು 'ಮಹಾ' ತಿರುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾದ ಯುವತಿ ಗುರುವಾರ ಎರಡನೇ ವಿಡಿಯೊ ಹರಿಯಬಿಟ್ಟಿದ್ದು, ಎಸ್ಐಟಿ ವಿರುದ್ಧ ಹರಿಹಾಯ್ದಿದ್ದಾರೆ. ಏತನ್ಮಧ್ಯೆ, ಪ್ರಕರಣಕ್ಕೆ ಮಹತ್ವದ ಪುರಾವೆಯಾದ ಮೂಲ ವಿಡಿಯೊವನ್ನು ತನಿಖಾ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ಈ ಬೆಳವಣಿಗೆಯ ಮಧ್ಯೆಯೇ, 'ತನಗೆ ಯುವತಿಯ ಪರಿಚಯವೇ ಇಲ್ಲ' ಎಂದು ಹೇಳಿಕೆ ನೀಡಿದ್ದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರ ಮೊಬೈಲ್ ಫೋನ್ ಜಪ್ತಿ ಮಾಡಿರುವ ಅಧಿಕಾರಿಗಳು ತನಿಖೆಗೆ ಮತ್ತೊಂದು ಆಯಾಮವನ್ನು ನೀಡಿದ್ದಾರೆ.

'ನನಗೆ ರಕ್ಷಣೆ ನೀಡಿ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಉದ್ದೇಶಿಸಿ ಮನವಿ ಮಾಡಿರುವ ವಿಡಿಯೊ ಹರಿಬಿಟ್ಟಿದ್ದ ಯುವತಿ, ಇದೀಗ 1 ನಿಮಿಷ 13 ಸೆಕೆಂಡ್‌ಗಳ ಮತ್ತೊಂದು ವಿಡಿಯೊವನ್ನು ಮಾಧ್ಯಮಗಳಿಗೆ ತಲುಪಿಸಿದ್ದಾರೆ. ಹೊಸ ವಿಡಿಯೊದಲ್ಲಿ ಯುವತಿ ಪ್ರಸ್ತಾಪಿಸಿರುವ ವಿಷಯ, ವಿಚಾರಣೆಗೆ ಮತ್ತೊಂದು ತಿರುವು ನೀಡುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

ಪೊಲೀಸ್ ಕಮಿಷನರ್‌ಗೆ ಕಳುಹಿಸಿರುವ ವಿಡಿಯೊ ಸೋರಿಕೆಯಾಗಿರುವ ಬಗ್ಗೆ ಯುವತಿ ವ್ಯಕ್ತಪಡಿಸಿರುವ ಸಂದೇಹ ಚರ್ಚೆಗೂ ಗ್ರಾಸವಾಗಿದೆ.

ವಿಡಿಯೊದಲ್ಲಿ ಹೇಳಿದ್ದೇನು?: 'ನ್ಯಾಯ ಕೇಳಿ ಒಂದು ವಿಡಿಯೊ ಮಾಡಿದ್ದೆ. ಪೊಲೀಸ್ ಕಮಿಷನರ್ ಕಚೇರಿ ಹಾಗೂ ಎಸ್ಐಟಿಯವರಿಗೆ ಮಾರ್ಚ್ 12ರಂದು ತಲುಪಿಸಿದ್ದೆ. ಮರುದಿನ ಮಾ. 13ರಂದು ತರಾತುರಿಯಲ್ಲಿ ರಮೇಶ ಜಾರಕಿಹೊಳಿ ದೂರು ಕೊಟ್ಟಿದ್ದಾರೆ. ಅದಾಗಿ ಅರ್ಧ ಗಂಟೆಗೆ ನನ್ನ ವಿಡಿಯೊ ಹೊರಗೆ ಬಿಡಲಾಗಿದೆ. ಹಾಗಾದರೆ, ಎಸ್ಐಟಿ ಯಾರ ಪರವಿದೆ ? ಯಾರನ್ನು ರಕ್ಷಣೆ ಮಾಡುತ್ತಿದೆ' ಎಂದು ಯುವತಿ ಪ್ರಶ್ನಿಸಿದ್ದಾರೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಸಚಿವ ಕೆ. ಸುಧಾಕರ್ ಹೇಳಿಕೆ ಖಂಡಿಸಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಶಾಸಕಿಯರಾದ ಸೌಮ್ಯಾ ರೆಡ್ಡಿ, ಲಕ್ಷ್ಮಿ ಹೆಬ್ಬಾಳ್ಕರ್, ರೂಪಾ ಶಶಿಧರ್ ಮತ್ತಿತರರು ಬೆಂಗಳೂರಿನ ಕಾಂಗ್ರೆಸ್ ಭವನದ ಎದುರು ಗುರುವಾರ ಪ್ರತಿಭಟನೆ ನಡೆಸಿದರು

> **ರಮೇಶ ಬಳಿ ಇರುವ ದಾಖಲೆಗಳನ್ನು ಬಿಡುಗಡೆ ಮಾಡುವುದು ಬೇಡ ಎಂದು ಹೇಳಿದವರು ಯಾರು? ಅದರಲ್ಲಿ ಶಾಕ್ ಆದರೂ ಇರಲಿ, ಏನಾದರೂ ಇರಲಿ. ಅವರಿಗೆ ಒಳ್ಳೆಯದಾಗಲಿ ಪಾಪ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

'ಮಹಾನಾಯಕನ ಹೆಸರು ಬಹಿರಂಗ'

ಬೆಂಗಳೂರು: 'ಸಿ.ಡಿ ಪ್ರಕರಣದಲ್ಲಿ ಷಡ್ಯಂತ್ರ ನಡೆಸಿರುವ 'ಮಹಾನಾಯಕ'ನ ಹೆಸರನ್ನು ಶೀಘ್ರವೇ ಬಹಿರಂಗಪಡಿಸಲಿದ್ದೇನೆ. ನಾನೂ ಕೂಡ ಸಾಕ್ಷ್ಯ ಸಂಗ್ರಹಿಸಿದ್ದು, ಆ ಕುರಿತ ಮಾಹಿತಿ ಕೇಳಿದರೆ ಶಾಕ್ ಆಗುತ್ತೀರಾ' ಎಂದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದ್ದಾರೆ.

ಯುವತಿ ಬಿಡುಗಡೆ ಮಾಡಿರುವ ಎರಡನೇ ವಿಡಿಯೊ ಕುರಿತು ಪ್ರತಿಕ್ರಿಯೆ ನೀಡಿದ ಅವರು, 'ಇದು ಪಕ್ಕಾ ಷಡ್ಯಂತ್ರ. ನನ್ನ ವಿರುದ್ಧ ಇನ್ನು 10 ಸಿ.ಡಿಗಳು ಬಂದರೂ ಹೆದರುವುದಿಲ್ಲ. ನಮ್ಮ ಬಳಿಯೂ ಬೆಚ್ಚಿ ಬೀಳಿಸುವ ದಾಖಲೆಗಳಿವೆ' ಎಂದರು.

'ಷಡ್ಯಂತ್ರ ಮಾಡಿದವರನ್ನು ಜೈಲಿಗೆ ಹಾಕುವವರೆಗೂ ಬಿಡುವುದಿಲ್ಲ. ನಿರ್ದೋಷಿಯಾಗಿ ಹೊರಬರುತ್ತೇನೆ. ಈ ವಿಷಯವಾಗಿ ಚರ್ಚೆ ಮಾಡುತ್ತಿರುವವರ ಮೇಲೂ ನಾಳೆ ಸಿ.ಡಿ ಬರಬಹುದು. ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿದ ಸಾಕ್ಷ್ಯಗಳು ನನ್ನ ಜೇಬಿನಲ್ಲೇ ಇವೆ' ಎಂದರು.

'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಗ್ಗೆ ಗೌರವ ಇತ್ತು. ಆದರೆ, ನನ್ನ ವಿರುದ್ಧವೇ ಅತ್ಯಾಚಾರ ಪ್ರಕರಣ ದಾಖಲಿಸಿ ಎಂದು ಹೇಳಿದ ಬಳಿಕ ಆ ಗೌರವ ಹೋಯಿತು' ಎಂದೂ ರಮೇಶ ಜಾರಕಿಹೊಳಿ ಹೇಳಿದರು.

'ರಕ್ಷಣೆಗೆ ಪ್ರಧಾನಿ ಮೊರೆ ಹೋಗಿ'

ಬೀದರ್: 'ರಮೇಶ ಜಾರಕಿಹೊಳಿ ಅವರದ್ದು ಎನ್ನಲಾದ ಸಿ.ಡಿ. ಪ್ರಕರಣದ ಯುವತಿಯ ಜೀವಕ್ಕೆ ಅಪಾಯವಾಗುವ ಪರಿಸ್ಥಿತಿ ಬರಬಾರದು ಎಂದಾದರೆ ಗುಪ್ತ ಸ್ಥಳದಲ್ಲಿ ಕುಳಿತು ವಿಡಿಯೊ ಬಿಡುಗಡೆ ಮಾಡುವುದು ಬಿಡಬೇಕು. ನೇರವಾಗಿ ಮುಖ್ಯ ನ್ಯಾಯಮೂರ್ತಿಗಳನ್ನು ಭೇಟಿ ಮಾಡಿ ರಕ್ಷಣೆ ಪಡೆಯಬೇಕು. ರಾಜ್ಯ ಸರ್ಕಾರದ ಮೇಲೆ ನಂಬಿಕೆ ಇಲ್ಲದಿದ್ದರೆ ಪ್ರಧಾನಮಂತ್ರಿಗೆ ಸಂದೇಶ ಕಳುಹಿಸಿ ರಕ್ಷಣೆ ಪಡೆಯಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸಲಹೆ ಮಾಡಿದರು.

4ನೇ ಪುಟ ನೋಡಿ

ಕೈ ಚೆಲ್ಲುವ ಸಚಿವರು ಶಾಸಕರಿಂದ ಸಿ.ಎಂಗೆ ದೂರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಕೃಷ್ಣಾ'ದಲ್ಲಿ ನಡೆದ ಸಭೆಯಲ್ಲಿ 60 ಶಾಸಕರು ಭಾಗಿ
- ನೇರವಾಗಿ ಅನುದಾನ ಬಿಡುಗಡೆ ಮಾಡಲು ಸಿ.ಎಂಗೆ ಒತ್ತಾಯ

ಬೆಂಗಳೂರು: 'ಕೆಲವು ಸಚಿವರು ನಮ್ಮ ಕೆಲಸ ಮಾಡಿಕೊಡುತ್ತಿಲ್ಲ. ಕಡತಗಳನ್ನೂ ತಡೆ ಹಿಡಿದಿದ್ದಾರೆ. ಅವರನ್ನು ಕೇಳಲು ಹೋದರೆ 'ನಿಮ್ಮ ಮುಖ್ಯಮಂತ್ರಿ ಜತೆಗೇ ಮಾತನಾಡ್ರಿ' ಎನ್ನುತ್ತಾರೆ' ಎಂದು ಬಿಜೆಪಿಯ ಶಾಸಕರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬಳಿ ದೂರಿದ್ದಾರೆ.

'ಆರ್ಥಿಕ ಇಲಾಖೆಯು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಅನುದಾನ ನೀಡಿದ್ದರೂ ಗ್ರಾಮೀಣಾಭಿವೃದ್ಧಿ ಸಚಿವರು(ಕೆ.ಎಸ್. ಈಶ್ವರಪ್ಪ) ಅದನ್ನು ತಡೆ ಹಿಡಿದಿದ್ದಾರೆ. ನಿಮ್ಮ ಪರಮಾಧಿಕಾರವನ್ನು ಬಳಸಿ ನೇರವಾಗಿ ಅನುದಾನ ಬಿಡುಗಡೆ ಮಾಡಿಸಬೇಕು' ಎಂದು ಶಾಸಕರು ಒತ್ತಾಯಿಸಿದ್ದಾಗಿ ಗೊತ್ತಾಗಿದೆ.

ಆರೋಗ್ಯ, ಸಣ್ಣನೀರಾವರಿ, ಸಮಾಜ ಕಲ್ಯಾಣ, ಲೋಕೋಪಯೋಗಿ ಮತ್ತು ಇತರ ಇಲಾಖೆಗಳ ಬಗ್ಗೆಯೂ ಶಾಸಕರು ಮುಖ್ಯಮಂತ್ರಿಯವರ ಜತೆ ತಮ್ಮ ಅಹವಾಲು ತೋಡಿಕೊಂಡರು. 'ಕೃಷ್ಣಾ'ದಲ್ಲಿ ನಡೆದ ಸಭೆಯಲ್ಲಿ ಸುಮಾರು 60 ಶಾಸಕರು ಭಾಗವಹಿಸಿದ್ದರು.

ಶಾಸಕರು ಆಕ್ರೋಶದಿಂದ ಮಾತನಾಡಿದರೂ ಸಚಿವ ಸಂಪುಟದ ಸಹದ್ಯೋಗಿಗಳನ್ನು ಬಿಟ್ಟುಕೊಡದ ಯಡಿಯೂರಪ್ಪ, 'ಭಾವೋದ್ವೇಗದ ಕಾರಣ ಇಂತಹ ಪ್ರತಿಕ್ರಿಯೆ ಬಂದಿದೆ. ಸಚಿವರ ಬಗ್ಗೆ ಯಾವುದೇ ಶಾಸಕರು ಅಪಾರ್ಥ ಮಾಡಿಕೊಳ್ಳುವುದು ಬೇಡ. ಸಂಬಂಧಿಸಿದ ಸಚಿವರ ಜತೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಡುತ್ತೇನೆ' ಎಂದು ಅವರು ಭರವಸೆ ನೀಡಿದರು.

'ಎಲ್ಲ ಶಾಸಕರು ಮತ್ತು ಸಚಿವರನ್ನು ಒಟ್ಟಿಗೆ ಕರೆದೊಯ್ಯುವ ಜವಾಬ್ದಾರಿ ನನ್ನದು. ನನ್ನ ಮೇಲೆ ವಿಶ್ವಾಸವಿಡಿ ಎಂದು ಶಾಸಕರನ್ನು ಸಮಾಧಾನಪಡಿಸಿದರು' ಎಂದು ಮೂಲಗಳು ತಿಳಿಸಿವೆ.

'ಇವೆಲ್ಲ ನಾಲ್ಕು ಗೋಡೆಗಳ ಮಧ್ಯೆ ಪರಾಮರ್ಶೆ ನಡೆದರೆ ಸರ್ಕಾರ ಮತ್ತು ಪಕ್ಷಕ್ಕೆ ಆಗುವ ಮುಜುಗರ ತಪ್ಪುತ್ತದೆ' ಎಂದೂ ಹೇಳಿದರು.

ವಿವಿಧ ಶಾಸಕರ ಪ್ರಸ್ತಾವನೆಗಳು, ಮಂಜೂರಾದ ಬಳಿಕ ಸಂಬಂಧಿಸಿದ ಕಡತಗಳು ಯಾವ ಹಂತದಲ್ಲಿವೆ, ಅನುದಾನ ಬಿಡುಗಡೆ ಕುರಿತು ಸಭೆಯಲ್ಲೇ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಪಡೆದು ಶಾಸಕರಿಗೆ ಆ ಕುರಿತ ವಿವರಗಳನ್ನು ನೀಡಿದರು.

'ಬೇಸಿಗೆ ಕಾಲಿಟ್ಟಿರುವುದರಿಂದ ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು. ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಒತ್ತು ನೀಡಬೇಕು' ಎಂದು ಯಡಿಯೂರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

'ನನೆಗುದಿಗೆ ಬಿದ್ದಿರುವ ಕಡತಗಳು ಮತ್ತು ಪ್ರಸ್ತಾವನೆಗಳಿಗೆ ತ್ವರಿತವಾಗಿ ಅನುಮೋದನೆ ನೀಡಲು ಹಣಕಾಸು ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ. ಯಾವ ಅಧಿಕಾರಿಗೆ ಏನು ಜವಾಬ್ದಾರಿ ನೀಡಬೇಕು ಎಂಬುದು ಗೊತ್ತಿದೆ. ಎಲ್ಲ ಅಧಿಕಾರಿಗಳಿಗೂ ಕಾಲ ಮಿತಿ ನಿಗದಿ ಮಾಡಿ, ಆಡಳಿತಕ್ಕೆ ಚುರುಕು ಮುಟ್ಟಿಸುತ್ತೇನೆ' ಎಂದು ಯಡಿಯೂರಪ್ಪ ಶಾಸಕರಿಗೆ ಭರವಸೆ ನೀಡಿದರು.

ಕೊರೊನಾ ಕಾರಣ ಆರ್ಥಿಕ ಸಂಕಷ್ಟದಿಂದ ಬಹಳಷ್ಟು ಇಲಾಖೆಗಳ ಅನುದಾನ ಕಡಿತವಾಗಿದೆ. ಇದರ ಪರಿಣಾಮ ಕಾಮಗಾರಿಗಳ ಅನುಷ್ಠಾನ ತಡವಾಗಿದೆ. ಆರ್ಥಿಕ ಪರಿಸ್ಥಿತಿ ಚೇತರಿಕೆ ಆಗುತ್ತಿದ್ದು, ಹಂತ ಹಂತವಾಗಿ ಮಂಜೂರು ಮಾಡಿದ ಅನುದಾನ ಬಿಡುಗಡೆ ಆಗಲಿದೆ. ಶಾಸಕರು ಈ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು.

ಉಪಚುನಾವಣೆ: ಬಿಜೆಪಿಯ ನಾಲ್ಕು ಅಭ್ಯರ್ಥಿಗಳ ಆಯ್ಕೆ

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರ, ಮಸ್ಕಿ ಮತ್ತು ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಮಂಗಲಾ

ಶರಣು ಸಲಗರ

ಪ್ರತಾಪಗೌಡ

ರತ್ನಪ್ರಭಾ

ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ದಿವಂಗತ ಸುರೇಶ್ ಅಂಗಡಿ ಅವರ ಪತ್ನಿ ಮಂಗಲಾ ಅಂಗಡಿ, ಬಸವಕಲ್ಯಾಣ ಕ್ಷೇತ್ರಕ್ಕೆ ಶರಣು ಸಲಗರ, ಮಸ್ಕಿ ಕ್ಷೇತ್ರಕ್ಕೆ ಪ್ರತಾಪಗೌಡ ಪಾಟೀಲ ಅವರು ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ.

ಆಂಧ್ರ ಪ್ರದೇಶದ ತಿರುಪತಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ನಿವೃತ್ತಿಯಾಗಿರುವ ಕೆ.ರತ್ನಪ್ರಭಾ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿದೆ.

ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ಇಂದು

ಬಂದ್ ಇಲ್ಲ; ಕಾಯ್ದೆಯ ಶವಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ಹೋರಾಟ ಸಮಿತಿಯು ಕರೆ ನೀಡಿರುವ ಮುಷ್ಕರ ಬೆಂಬಲಿಸಿ ರಾಜ್ಯದಾದ್ಯಂತ ಶುಕ್ರವಾರ 'ಕೃಷಿ ಕಾಯ್ದೆಗಳ ಶವಯಾತ್ರೆ' ನಡೆಯಲಿದೆ.

ಕುರುಬೂರು ಶಾಂತಕುಮಾರ್

'ರಾಜ್ಯದಲ್ಲಿ ನಾಲ್ಕೈದು ತಿಂಗಳಲ್ಲಿ ಹಲವು ಬಾರಿ ಬಂದ್‌ಗೆ ಕರೆ ನೀಡಿ ಪ್ರತಿಭಟನೆ ಮಾಡಲಾಗಿದೆ. ಈ ಬಾರಿ ಬಂದ್ ಬದಲು ಶವಯಾತ್ರೆ ನಡೆಸಲು ಎಲ್ಲ ರೈತ, ದಲಿತ ಮತ್ತು ಕಾರ್ಮಿಕ ಸಂಘಟನೆಗಳು ತೀರ್ಮಾನಿಸಿವೆ. ರಾಜಧಾನಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದ್ದಾರೆ.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು. ರೈತ ನಾಯಕ ರಾಕೇಶ್ ಟಿಕಾಯತ್ ವಿರುದ್ಧ ದಾಖಲಿಸಿರುವ ಪ್ರಕರಣವನ್ನು ಹಿಂಪಡೆಯಬೇಕು ಎಂಬ ಬೇಡಿಕೆಗಳನ್ನು ಪ್ರಮುಖವಾಗಿಟ್ಟುಕೊಂಡು ಪ್ರತಿಭಟನೆ ನಡೆಸಲಾಗುವುದು' ಎಂದರು.

'ಪೊಲೀಸ್ ಬಲದ ಮೂಲಕ ರೈತ ಚಳವಳಿಯನ್ನು ಹತ್ತಿಕ್ಕುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ವಿವಿಧ ಸಂಘಟನೆಗಳ ಬೆಂಬಲ

ಮುಷ್ಕರಕ್ಕೆ ಬೆಂಬಲ ಸೂಚಿಸಿರುವ ಅನೇಕ ಸಂಘಟನೆಗಳು ಪ್ರತಿಭಟನೆ ನಡೆಸಲು ಸಜ್ಜಾಗಿವೆ.

'ರೈತರು, ಮಹಿಳೆಯರು ಮೂರುವರೆ ತಿಂಗಳಿನಿಂದ ದೆಹಲಿಯ ಬೀದಿಯಲ್ಲಿ ಹೋರಾಟ ನಡೆಸುತ್ತಿದ್ದರೂ ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ. ಮುಷ್ಕರ ಬೆಂಬಲಿಸಿ ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೇಳಿದೆ.

'ಮುಷ್ಕರಕ್ಕೆ ನಮ್ಮ ಬೆಂಬಲವಿದೆ. ಆದರೆ ಬಂದ್‌ಗೆ ಕರೆ ನೀಡಿಲ್ಲ. ಆಟೊ, ಟ್ಯಾಕ್ಸಿ ಸೇವೆ ಎಂದಿನಂತೆ ಇರುತ್ತದೆ. ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ' ಎಂದು ಸಿಐಟಿಯು ಕಾರ್ಯದರ್ಶಿ ಮೀನಾಕ್ಷಿ ಸುಂದರಂ ತಿಳಿಸಿದರು.

ಭಾರತ್ ಬಂದ್ ಅಂಗವಾಗಿ ನಡೆಯಲಿರುವ ಮುಷ್ಕರಕ್ಕೆ ಜೆಡಿಎಸ್, ಆಮ್ ಆದ್ಮಿ ಪಕ್ಷ ಸೇರಿದಂತೆ ಹಲವು ರಾಜಕೀಯ ಪಕ್ಷಗಳು ಬೆಂಬಲ ಸೂಚಿಸಿವೆ.

ಬೆಂಗಳೂರಿಗೆ ಬರಲು ಕೋವಿಡ್ ವರದಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ಸಂಜೆಯವರೆಗಿನ ಹಿಂದಿನ 24ಗಂಟೆಯಲ್ಲಿ ಬೆಂಗಳೂರಿನಲ್ಲಿ 1,623 ಸೇರಿದಂತೆ ರಾಜ್ಯದಲ್ಲಿ 2,523 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿರುವ ಬೆನ್ನಲ್ಲೇ, ರಾಜಧಾನಿ ಪ್ರವೇಶಿಸುವ ಹೊರ ರಾಜ್ಯದವರಿಗೆ ಮತ್ತಷ್ಟು ನಿರ್ಬಂಧ ವಿಧಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸುದ್ದಿಗಾರರ ಜತೆ ಮಾತನಾಡಿದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, 'ಅನ್ಯರಾಜ್ಯದಿಂದ ಬೆಂಗಳೂರಿಗೆ ಬರುವವರು ಕೋವಿಡ್ ಇಲ್ಲವೆಂದು ದೃಢೀಕರಿಸುವ ಆರ್‌ಟಿಪಿಸಿಆರ್ ಪರೀಕ್ಷಾ ವರದಿ ನೀಡುವುದನ್ನು ಏಪ್ರಿಲ್ 1ರಿಂದ ಕಡ್ಡಾಯಗೊಳಿಸಲಾಗುವುದು' ಎಂದು ತಿಳಿಸಿದ್ದಾರೆ.

'ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ನಗರದಲ್ಲಿ ಪತ್ತೆಯಾದ ಶೇ 60ಕ್ಕೂ ಹೆಚ್ಚು ಪ್ರಕರಣಗಳು ಹೊರರಾಜ್ಯಗಳಿಂದ ಬಂದವರಲ್ಲೇ ಕಾಣಿಸಿಕೊಂಡಿವೆ. ಇದುವರೆಗೆ ರಾಜ್ಯಕ್ಕೆ ಕೇರಳ, ಮಹಾರಾಷ್ಟ್ರ, ಪಂಜಾಬ್, ಚಂಡೀಗಢದಿಂದ ಬರುವವರಿಗೆ ಕೊರೊನಾ ಪರೀಕ್ಷೆಯ ವರದಿ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿತ್ತು. ಇನ್ನು ಇದು ಎಲ್ಲ ರಾಜ್ಯದವರಿಗೂ ಅನ್ವಯವಾಗಲಿದೆ' ಎಂದರು.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸೋಂಕಿತರ ಕೈಗೆ ಮುದ್ರೆ (ಸೀಲ್) ಹಾಕಲಾಗುವುದು' ಎಂದರು.

'ರೂಪಾಂತರಗೊಂಡ ಕೋವಿಡ್ ವೈರಾಣು ಸುಮಾರು 700 ಮಂದಿಯಲ್ಲಿ ಕಾಣಿಸಿಕೊಂಡಿವೆ. ತಜ್ಞರ ಪ್ರಕಾರ ಈ ವೈರಾಣು ಬಲುಬೇಗ ಹರಡುತ್ತದೆ. ಆದ್ದರಿಂದ ಸಾರ್ವಜನಿಕರು ಮುಂದಿನ ಎರಡು ತಿಂಗಳು ಬಹಳ ಎಚ್ಚರ ವಹಿಸಬೇಕು' ಎಂದು ಕೋರಿದರು.

ಇನ್ನಷ್ಟು ಸುದ್ದಿಗಳು 3

ಎರಡನೇ ದಿನವೂ ಪೆಟ್ರೋಲ್, ಡೀಸೆಲ್ ದರ ಇಳಿಕೆ

ನವದೆಹಲಿ/ಬೆಂಗಳೂರು: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ ಆಗುತ್ತಿರುವುದರಿಂದ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಎರಡನೇ ದಿನವೂ ಪೆಟ್ರೋಲ್, ಡೀಸೆಲ್ ದರ ಇಳಿಸಿವೆ.

10

ಇಂದಿನ ಪಾಡ್‌ಕಾಸ್ಟ್ ವಿಶೇಷ

ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ





‘ಹೃದಯವಂತ’ನಿಗಾಗಿ ಹರಕೆ ಹೊತ್ತ ಬಸವಕಲ್ಯಾಣ ಜನ

ಸೂರ್ಯಕಾಂತ ನಾಗಮಾರಪಳ್ಳಿಗೆ ಟಿಕೆಟ್: ಜನತಾ ಜನಾರ್ದನ್ ಬೇಡಿಕೆ

ಯುವ ಮುಖಂಡ ಸೂರ್ಯಕಾಂತ ನಾಗಮಾರಪಳ್ಳಿ ಅವರಿಗೆ ಟಿಕೆಟ್ ಸಿಗಬೇಕು ಎಂದು ಪ್ರಾರ್ಥಿಸಿ ಬಿಜೆಪಿ ಕಾರ್ಯಕರ್ತರು, ಬೆಂಬಲಿಗರು ಹಾಗೂ ಅಭಿಮಾನಿಗಳು ದೇವಸ್ಥಾನ ಗಳಲ್ಲಿ ವಿಶೇಷ ಪೂಜೆ ಮಾಡುತ್ತಿದ್ದಾರೆ. ಬಹುತೇಕ ಜಾತಿ, ಸಮುದಾಯಗಳ ಮುಖಂಡರು, ನೌಕರರು, ವ್ಯಾಪಾರಿಗಳು, ಕೆಲ ವಕೀಲರು, ರೈತರು, ಪ್ರಗತಿಪರ ಚಿಂತಕರು ಅವರಿಗೆ ತಮ್ಮ ಬೆಂಬಲವನ್ನೂ ಸೂಚಿಸಿದ್ದಾರೆ.

ಬೀದರ್: ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ, ಯುವ ನೇತಾರ ಸೂರ್ಯಕಾಂತ ನಾಗಮಾರಪಳ್ಳಿ ಅವರಿಗೆ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಬಿಜೆಪಿ ಟಿಕೆಟ್ ಕೊಡಬೇಕು ಎನ್ನುವ ಜನರ ದನಿ ಬಸವ ಕಲ್ಯಾಣದಲ್ಲಿ ಬಲಗೊಳ್ಳುತ್ತಲೇ ಇದೆ.

ದಿ.ಗುರುಪಾದಪ್ಪ ನಾಗಮಾರಪಳ್ಳಿ

ಜಾತಿ, ಮತ, ಪಂಥಗಳ ಭೇದ ಇಲ್ಲದೆ, ಹಿರಿಯರು-ಕಿರಿಯರು ಎನ್ನದೆ ಎಲ್ಲರೂ ಸೂರ್ಯ ಕಾಂತ ಅವರಿಗೇ ಟಿಕೆಟ್ ನೀಡಬೇಕು ಎಂದು ವರಿಷ್ಠರ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದು,

ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರೊಂದಿಗೆ ಸೂರ್ಯಕಾಂತ ನಾಗಮಾರಪಳ್ಳಿ

ಸೂರ್ಯಕಾಂತ ನಾಗಮಾರಪಳ್ಳಿ ಅವರ ಮೇಲೆ ಬಸವಕಲ್ಯಾಣ ಕ್ಷೇತ್ರ ಹಾಗೂ ಬೀದರ್ ಜಿಲ್ಲೆಯ ಜನ ಇಟ್ಟಿರುವ ಪ್ರೀತಿ, ಅಭಿಮಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಇಚ್ಛಾಶಕ್ತಿ ಇದ್ದರೆ ಏನೆಲ್ಲ ಮಾಡಬಹುದು ಎನ್ನುವುದಕ್ಕೆ ಯಾವುದೇ ಅಧಿ ಕಾರ ಇಲ್ಲದಿದ್ದರೂ ಜನ ಸೇವೆಯಲ್ಲಿ ನಿರತರಾಗಿರುವ ಸೂರ್ಯಕಾಂತ ಅವರೇ ನಿದರ್ಶನವಾಗಿದ್ದಾರೆ. ಸರಳತೆ, ಸೌಜನ್ಯ, ಹೃದಯವಂತಿಕೆಯಿಂದ ಎಲ್ಲರ ಮನ ಗೆದ್ದಿದ್ದಾರೆ. ಎರಡು ಬಾರಿ ವಿಧಾನಸಭೆ ಚುನಾವಣೆಯಲ್ಲಿ ಸೋತರೂ ಧೃತಿಗೆಡದೆ ತಮ್ಮ ಸಮಾಜ ಸೇವಾ ಕಾರ್ಯವನ್ನು ಮುಂದುವರಿಸಿದ್ದಾರೆ. ಅವರ ನಿಸ್ವಾರ್ಥ ಜನ ಸೇವೆಗೆ ಮನ್ನಣೆ ಕೊಡಬೇಕು.

ಸೂರ್ಯಕಾಂತ ನಾಗಮಾರಪಳ್ಳಿ

40 ಸಾವಿರ ಕುಟುಂಬಕ್ಕೆ ‘ನೆರವಿನ ಹಸ್ತ’

ಗುರುಪಾದಪ್ಪ ನಾಗಮಾರಪಳ್ಳಿ ಮಲ್ಟಿ ಸೂಪರ್ ಸ್ಪೆಷಾಲಿಟಿ ಸಹಕಾರ ಆಸ್ಪತ್ರೆ ಅಧ್ಯಕ್ಷರೂ ಆಗಿರುವ ಸೂರ್ಯಕಾಂತ ನಾಗಮಾರಪಳ್ಳಿ ಅವರು ಕೋವಿಡ್ ಪ್ರಯುಕ್ತ ವಿಧಿಸಲಾಗಿದ್ದ ಲಾಕ್‌ಡೌನ್ ವೇಳೆ 40 ಸಾವಿರ ಕುಟುಂಬಗಳಿಗೆ ಆಹಾರಧಾನ್ಯ ಕಿಟ್ ವಿತರಿಸಿ ಮಾನವೀಯತೆ ಮೆರೆದಿದ್ದರು. ‘ಜಿಂದಗೀಕೆ ಸಾಥ್ ಭೀ, ಜಿಂದಗೀ ಕೆ ಬಾದ್ ಭೀ’ ಘೋಷವಾಕ್ಯದಡಿ ಪ್ರತ್ಯೇಕ ಆಂಬುಲನ್ಸ್ ಹಾಗೂ ಸಿಬ್ಬಂದಿಯನ್ನು ನಿಯೋಜಿಸಿ, ಕೋವಿಡ್‌ನಿಂದ ಮೃತಪಟ್ಟ 118 ಜನರ ಗೌರವಯುತ ಅಂತ್ಯಸಂಸ್ಕಾರ ಕೂಡ ನೆರವೇರಿಸಿದ್ದರು.

ಸದಾ ಜನರ ಒಳಿತನ್ನೇ ಬಯಸುವ ಅವರಿಗೆ ಒಮ್ಮೆ ವಿಧಾನಸಭೆ ಪ್ರವೇಶಿಸಲು ಅವಕಾಶ ಕಲ್ಪಿಸಬೇಕು ಎನ್ನುವ ಮಾತುಗಳು ವ್ಯಾಪಕವಾಗಿ ಕೇಳಿ ಬರುತ್ತಿವೆ.

ಬಸವಕಲ್ಯಾಣ ಉಪ ಚುನಾವಣೆ ಬಿಜೆಪಿ ಟಿಕೆಟ್ ನೀಡಿದರೆ ಸೂರ್ಯಕಾಂತ ಅವರ ಗೆಲುವು ಪಕ್ಕಾ ಆಗಿದೆ. ಅವರ ಕೈಗೆ ಅಧಿಕಾರ ದೊರೆತರೆ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ಮಾದರಿಯಾಗಿ ರೂಪುಗೊಳ್ಳಲಿದೆ. ಜಿಲ್ಲೆಯ ಅಭಿವೃದ್ಧಿಗೂ ಹೊಸ ಆಯಾಮ ಸಿಗಲಿದೆ ಎನ್ನುವ ಅಭಿಪ್ರಾಯ ಎಲ್ಲೆಡೆ ವ್ಯಕ್ತವಾಗುತ್ತಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಸರ್ಕಾರ– ಜನರ ಸಂಪರ್ಕ ಕೊಂಡಿ

ಸೂರ್ಯಕಾಂತ ನಾಗಮಾರಪಳ್ಳಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಜಿಲ್ಲೆಯಲ್ಲಿ ಸರ್ಕಾರ ಹಾಗೂ ಜನರ ನಡುವೆ ಸಂಪರ್ಕ ಕೊಂಡಿಯಾಗಿ ಕೆಲಸ ಮಾಡುತ್ತಿದ್ದಾರೆ. ವಸತಿ ಸಚಿವ ವಿ. ಸೋಮಣ್ಣ ಅವರಿಗೆ ಮನವರಿಕೆ ಮಾಡಿ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಬಡವರಿಗೆ 5 ಸಾವಿರ ಮನೆಗಳನ್ನು ಮಂಜೂರು ಮಾಡಿಸಿದ್ದಾರೆ. ಬೀದರ್‌ನಲ್ಲಿ ಹಿಂದೆ ಅಂಗವಿಕಲರಿಗೆ 2,533 ಮನೆಗಳನ್ನು ಮಂಜೂರು ಮಾಡಿಸಿದ್ದಾರೆ. ಉರಿಲಿಂಗ ಪೆದ್ದಿ ಮಠದ ಜೀರ್ಣೋದ್ಧಾರಕ್ಕೆ ₹50 ಲಕ್ಷ ಅನುದಾನ ಮಂಜೂರಾತಿಗೆ ಕಾರಣರಾಗಿದ್ದಾರೆ. ಬಸವಕಲ್ಯಾಣ ತಾಲ್ಲೂಕಿನ ಅನೇಕ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿದ್ದಾರೆ. ಬೀದರ್‌ನಿಂದ ನಾಗರಿಕ ವಿಮಾನಯಾನ ಸೇವೆ ಶುರುವಾಗುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಜಿಲ್ಲಾ ಕನ್ನಡ ಭವನ ನಿರ್ಮಾಣಕ್ಕೆ ₹2 ಕೋಟಿ ಅನುದಾನ ದೊರಕಿಸಿಕೊಟ್ಟಿದ್ದಾರೆ.

ನಾಗಮಾರಪಳ್ಳಿ ನೆಟ್‌ವರ್ಕ್ ‘ಪವರ್‌ಫುಲ್’

ಏಳು ಬಾರಿ ಶಾಸಕ, ಮೂರು ಬಾರಿ ಸಚಿವರಾಗಿದ್ದ ದಿ. ಗುರುಪಾದಪ್ಪ ನಾಗಮಾರಪಳ್ಳಿ ಅವರು ಬೀದರ್ ಜಿಲ್ಲೆಯ ಮೇಲೆ ಹಿಡಿತ ಹೊಂದಿದ್ದರು. ಡಿಸಿಸಿ ಬ್ಯಾಂಕ್ ಮೂಲಕ ಎಸ್‌ಎಚ್‌ಜಿ ರಚನೆ, ಎನ್‌ಎಸ್‌ಎಸ್‌ಕೆ, ಸಹಕಾರ ಆಸ್ಪತ್ರೆ ಸ್ಥಾಪನೆ ಸೇರಿದಂತೆ ಜಿಲ್ಲೆಗೆ ಅವರ ಕೊಡುಗೆ ಅಪಾರವಾಗಿದೆ. ತಂದೆಯಂತೆಯೇ ಸೂರ್ಯಕಾಂತ ಅವರೂ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರ ಮಾತ್ರವಲ್ಲದೆ, ಇಡೀ ಜಿಲ್ಲೆಯಲ್ಲಿ ತಮ್ಮ ‘ಪವರ್‌ಫುಲ್’ ನೆಟ್‌ವರ್ಕ್ ಹಾಗೂ ಬೆಂಬಲಿಗರ ಪಡೆಯನ್ನು ಹೊಂದಿದ್ದಾರೆ.

ಡಿಸಿಸಿ ಬ್ಯಾಂಕ್, ಎನ್‌ಎಸ್‌ಎಸ್‌ಕೆ ಹಾಗೂ ಜಿ.ಎನ್. ಮಲ್ಟಿ ಸೂಪರ್ ಸ್ಪೇಷಾಲಿಟಿ ಸಹಕಾರ ಆಸ್ಪತ್ರೆಗಳು ನಾಗಮಾರಪಳ್ಳಿ ಕುಟುಂಬದ ಹಿಡಿತದಲ್ಲಿವೆ. ಗುರುಪಾದಪ್ಪ ನಾಗಮಾರಪಳ್ಳಿ ಅವರು ರಚಿಸಿದ್ದ 4.14 ಲಕ್ಷಕ್ಕೂ ಅಧಿಕ ಮಹಿಳಾ ಸ್ವಸಹಾಯ ಗುಂಪುಗಳು ಜಿಲ್ಲೆಯಲ್ಲಿ ಇವೆ. ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರವೊಂದರಲ್ಲೇ 50,603 ಮಹಿಳಾ ಸ್ವಸಹಾಯ ಗುಂಪುಗಳು ಇವೆ.

ನಗರದಲ್ಲಿ 100 ಸಿಎನ್‌ಜಿ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 100 ಸಿಎನ್‌ಜಿ (ಸಾಂದ್ರೀಕೃತ ನೈಸರ್ಗಿಕ ಅನಿಲ) ಘಟಕದ (ಸ್ಟೇಷನ್) ನಿರ್ಮಾಣಕ್ಕೆ ಸಂಬಂಧಿಸಿದಂತೆ ಭಾರತೀಯ ಅನಿಲ ಪ್ರಾಧಿಕಾರವು (ಗೇಲ್) ಕಾನ್ಫಿಡೆನ್ಸ್ ಪೆಟ್ರೋಲಿಯಂ ಇಂಡಿಯಾ ಲಿಮಿಟೆಡ್ (ಸಿಪಿಐಎಲ್) ಜೊತೆಗೆ ಗುರುವಾರ ಒಪ್ಪಂದ ಮಾಡಿಕೊಂಡಿದೆ.

ಗೇಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ವಿವೇಕ್ ವಾಥೋಡ್ಕರ್ ಹಾಗೂ ಸಿಪಿಐಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ನಿತಿನ್ ಖರಾ ಒಪ್ಪಂದಕ್ಕೆ ಸಹಿ ಹಾಕಿದರು.

ಮುಂದಿನ ಮೂರು ವರ್ಷಗಳಲ್ಲಿ ಈ ನೂರು ಸ್ಟೇಷನ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಒಪ್ಪಂದದ ಪ್ರಕಾರ ಬಹುತೇಕ ನಗರದ ಕೇಂದ್ರ ಭಾಗಗಳಲ್ಲಿ ಈ ಘಟಕಗಳು ತಲೆಯೆತ್ತಲಿದ್ದು, ಕೆಲವನ್ನು ಸಿಪಿಐಎಲ್‌ನ ಆಟೊ ಎಲ್‌ಪಿಜಿ ರಿಟೇಲ್ ಮಳಿಗೆ ಆವರಣದಲ್ಲಿ ತೆರೆಯಲು ಯೋಜಿಸಲಾಗಿದೆ.

ಈ ಒಪ್ಪಂದದೊಂದಿಗೆ ಇದೇ ಮೊದಲ ಬಾರಿಗೆ ವಿತರಕರ ಮೂಲಕ ಗೇಲ್ ತನ್ನ ಸಿಎನ್‌ಜಿ ಸ್ಟೇಷನ್‌ಗಳ ನಿರ್ವಹಣೆ ಮಾಡಲು ಮುಂದಾಗಿದೆ ಎಂದು ಗೇಲ್ ಪ್ರಕಟಣೆಯಲ್ಲಿ ತಿಳಿಸಿದೆ. ಇದುವರೆಗೆ ಸ್ವತಃ ಗೇಲ್ ಸಿಎನ್‌ಜಿ ಸ್ಟೇಷನ್‌ಗಳ ನಿರ್ವಹಣೆ ಮಾಡುತ್ತಿತ್ತು.

ಸದ್ಯ ನಗರದಲ್ಲಿ ಸಿಎನ್‌ಜಿ ದರ ಪ್ರತಿ ಕೆಜಿಗೆ ₹51.50 ಇದೆ. ರಾಜಧಾನಿಯಲ್ಲಿ ಈಗ 55 ಸಿಎನ್‌ಜಿ ಸ್ಟೇಷನ್‌ಗಳಿವೆ. ಒಟ್ಟಾರೆ ದೇಶಾದ್ಯಂತ 190 ಸಿಎನ್‌ಜಿ ಸ್ಟೇಷನ್‌ಗಳನ್ನು ಗೇಲ್ ನಿರ್ವಹಿಸುತ್ತಿದ್ದು, 52 ನಗರಗಳಲ್ಲಿ ಅನಿಲ ಕೊಳವೆ ಮಾರ್ಗ ನಿರ್ಮಿಸುತ್ತಿದೆ. ಸುಮಾರು 6.10 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಇದರ ಸಂಪರ್ಕ ದೊರೆಯಲಿದೆ.

ಅಧಿಕಾರಿಗಳಾದ ಇ.ಎಸ್. ರಂಗನಾಥನ್, ಎಂ.ವಿ. ರವಿ ಸೋಮೇಶ್ವರುಡು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಗೇಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ವಿವೇಕ್ ವಾಥೋಡ್ಕರ್ ಹಾಗೂ ಸಿಪಿಐಎಲ್‌ನ ಅಧ್ಯಕ್ಷ ನಿತಿನ್ ಖರಾ ಒಪ್ಪಂದ ಮಾಡಿಕೊಂಡರು. ಉಭಯ ಕಂಪನಿಗಳ ಅಧಿಕಾರಿಗಳು ಇದ್ದರು

‘ಭವಿಷ್ಯದಲ್ಲಿ 4 ಬಗೆಯ ಬ್ಯಾಂಕ್‌ಗಳು’

ಮುಂಬೈ (ಪಿಟಿಐ): ‘ಹತ್ತು ವರ್ಷಗಳಲ್ಲಿ ದೇಶದ ಬ್ಯಾಂಕಿಂಗ್ ವಲಯದಲ್ಲಿ ನಾಲ್ಕು ವಿಭಿನ್ನ ಬಗೆಯ ಬ್ಯಾಂಕ್‌ಗಳು ಮಾತ್ರ ಅಸ್ತಿತ್ವದಲ್ಲಿರಲಿವೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಭವಿಷ್ಯ ನುಡಿದಿದ್ದಾರೆ.



ಸಾರ್ವತ್ರಿಕ ಬ್ಯಾಂಕ್‌ಗಳು ಮತ್ತು ಸಣ್ಣ ಹಣಕಾಸು ಬ್ಯಾಂಕ್‌ಗಳ ಸ್ಥಾಪನೆಗೆ ಸಲ್ಲಿಕೆಯಾಗಲಿರುವ ಅರ್ಜಿ ಪರಿಶೀಲನೆಗೆ ಮಾಜಿ ಡೆಪ್ಯುಟಿ ಗವರ್ನರ್ ಶ್ಯಾಮಲಾ ಗೋಪಿನಾಥ್ ನೇತೃತ್ವದ ಸಮಿತಿ ನೇಮಿಸಿದ ಬೆನ್ನಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ದಾಸ್, ‘ರಿಸರ್ವ್ ಬ್ಯಾಂಕ್ ಹೆಚ್ಚು ಸ್ಪರ್ಧಾತ್ಮಕ, ಪರಿಣಾಮಕಾರಿ ಮತ್ತು ವೈವಿಧ್ಯಮಯ ಬ್ಯಾಂಕಿಂಗ್ ವಲಯ ರಚನೆಯತ್ತ ಸಾಗುತ್ತಿದೆ. ಸಾರ್ವತ್ರಿಕ ಬ್ಯಾಂಕುಗಳು, ಸಣ್ಣ ಹಣಕಾಸು ಬ್ಯಾಂಕುಗಳು (ಎಸ್‌ಎಫ್‌ಬಿ) ಮತ್ತು ಪಾವತಿ ಬ್ಯಾಂಕುಗಳಿಗೆ ಪರವಾನಗಿ ನೀಡುವ ನೀತಿಗಳು ಈ ದಿಕ್ಕಿನಲ್ಲಿ ಪ್ರಮುಖ ಹೆಜ್ಜೆಯಾಗಿದೆ’ ಎಂದಿದ್ದಾರೆ.

‘ಸದ್ಯ, ಹತ್ತು ಸಣ್ಣ ಹಣಕಾಸು ಬ್ಯಾಂಕ್‌ಗಳು ಮತ್ತು ಆರು ಪೇಮೆಂಟ್ ಬ್ಯಾಂಕ್‌ಗಳು ಕಾರ್ಯಾಚರಿಸುತ್ತಿವೆ’ ಎಂದು ತಿಳಿಸಿದ್ದಾರೆ.

ಯಾವುವು ನಾಲ್ಕು ಬಗೆಗಳು?

1) ದೇಶೀಯ, ಅಂತರರಾಷ್ಟ್ರೀಯ ಉಪಸ್ಥಿತಿ ಹೊಂದಿರುವ ದೊಡ್ಡ ಬ್ಯಾಂಕುಗಳು
2) ಮಧ್ಯಮ ಗಾತ್ರದ ಬ್ಯಾಂಕ್‌ಗಳು
3) ಖಾಸಗಿ ವಲಯದ ಸಣ್ಣ ಬ್ಯಾಂಕ್‌ಗಳು, ಸಣ್ಣ ಹಣಕಾಸು ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸಹಕಾರಿ ಬ್ಯಾಂಕ್‌ಗಳು
4) ಗ್ರಾಹಕರಿಗೆ ನೇರವಾಗಿ ಅಥವಾ ಬ್ಯಾಂಕುಗಳ ಮೂಲಕ ಸೇವೆ ಒದಗಿಸುವ ಡಿಜಿಟಲ್ ವಹಿವಾಟುದಾರರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

FORM NO. URC.2
Advertisement giving notice about registration under Part I of Chapter XXI
[Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

Notice is hereby given that in pursuance of sub-section (2) of section 366 of the Companies Act, 2013, an application has been made to the Registrar of Central Registration Centre (CRC), Indian Institute of Corporate Affairs (IICA), Plot No. 6,7,8, Sector 5, IMT Manesar, District Gurgaon (Haryana), Pin code- 122050, that M/s. Croydon Fashions a partnership firm may be registered under Part I of Chapter XXI of the Companies Act 2013, as a company limited by shares.

The principal objects of the company are as follows: To carry on the business of manufacturers, importers and exporters, buyers, sellers, whole sealers and retail dealers of clothing in men's, women's and children and wearing apparel of every kind, nature and description of all types, cotton, jute, hemp, silk, wool, any other fibrous materials, all kinds of synthetics and man-made fibres, robe, readymade garments apparel and dealers in fabrics and materials, all kinds of fabric, cotton silk and dealers in dress makers, customers, dress agents, tailors, tapestry, needlework, neckware, ties, collars, cuffs scarves, cells tinsel fabrics and thread and all articles of wearing attire for personal or household use, decoration ornaments.

A copy of the draft memorandum and articles of association of the proposed company may be inspected at the office at No. 35/7, Ground & First Floor, Basappa Complex, Hennur Cross, Kalyan Nagar Post, Bangalore 560043, Karnataka.

Notice is hereby given that any person objecting to this application may communicate their objection in writing to the Registrar of Central Registration Centre (CRC), Indian Institute of Corporate Affairs (IICA), Plot No. 6,7,8, Sector 5, IMT Manesar, District Gurgaon (Haryana), Pin code- 122050, within twenty-one days from the date of publication of this notice, with a copy to the company at its registered office.

Dated this 26/03/2021
For M/s. Croydon Fashions
Ijaz Kunjinelliyil Marzook
Partner
Roshanara Ijaz
Partner

RENTAL PROPERTIES

Accommodation Available

Commercial

1500 SQFT AND 3000 SQFT CAN BE RENTED SEPERATELY OR TOGETHER FACING RV. MAIN ROAD NEXT TO INDIAN OIL PETROL BUNK, 45 FEET GLASS FRONTAGE WITH HORIZONTAL GRILL SUITABLE FOR BANKS DEPARTMENTAL STORES ELECTRONIC GOODS SHOWROOMS GROUND FLOOR., RESERVED PARKING GIVEN REASONABLE RENT CONTACT OWNER 9740854176

House

4BHK DUPLEX House for Rent @90,000, Rajajinagar with 4 CarParking, East Facing fully furnished, 100% Vastu, Call: 9845216235/ 9945976441

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988

REAL ESTATE SELLING

Farm House/ Land/ Resorts

HAL And Around

THREE 30X46 sqft lot Fully developed location Rs 9999/- sqft contact on WhatsApp +15127962388

Nelamangala

FARM HOUSE SALE 22 guntas fruits bearing trees, fenced, 32kms Nelemangala-Guddemarnahalli 9141846168, 9663904949

Flat

CV Raman Nagar

LARGE:3BED APARTMENT in Versova Layout, Near IndiraNagar with-lift, private car-parking,and 24-hour security. Immediate Possession. Price- Rs.2.6Cr. Call: 7259665390

CAUTION NOTICE
Readers are advised to make appropriate thorough enquiries before acting upon any advertisement.
This newspaper does not vouch or subscribe to the claims and representations made by advertisers.
GM-Advertisement

Mahalakshmi Layout

READY TO Move, 3BHK Flats, 1KM from Iskcon Temple & Metro Station, 94Lakhs. 9845014364/ 9513999423

Begur

3 BEDROOM flat sale ARATT FLICITA Apartment covered car parking lot of amenities contact-09176808950

House

Koramangala

3BHK fully furnished property available for sale/rent/lease available in Rudrani AUM, 130, 1st A Main Road, S T Bed, 4th Block, Koramangala, Bangalore 560 034. For details contact Mr. Rajesh Kapur, Mobile No. 9845029510, Brokers excuse.

Vijayanagar

SALE 40X60SITE WITH HOUSE 32SQUARE BUILDING GROUND+FIRST FLOOR, VIJAYANAGAR NEAR METRO, CONTACT OWNER:9845716884

Vasanth Nagar

2 BHK converted to office fully furnished space 1262 sqft incl car park for sale. Palace garden compound, palace cross road. 1.27 cr neg. Contact 9845493251, 9449009325.

Sites

Bommasandra

SALE FROM OWNER Three Residential Sites. 30x40, 40x60(2) in well Developed R.K.Township, Yarandahalli, Jigani Link Road. West Facing, E-Katha. 9242894319, 7349683149.

Kumaraswamy Layout

2043 SQFT A Khata, odd Site for Sale at Kumaraswamy Layout, near Sri Srinivasa Theatre. Rs. 1.10cr (Negotiable). Contact: 9986867826.

Mysore

MUDA SITE for sale 9300 SqFt. Opp JSS Medical College, Royal Function Hall Road Bannimantap. Mysore 9845113876

CV Raman Nagar

PLOT FOR sale 2100 Sft East facing, Nagawarapalya DRDO, Near Byapanahalli Metro Station Contact :8179633651

Vishweshwariah Layout

WANTED AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

DH Classifieds
BOOK YOUR AD on SATURDAY & GET 50% OFF ON SUNDAY
*condition apply
For more information contact:
9880856233
9731810277 | 9901641752
9845114560 | 9886213331

Tumkur

SALE, TUMKUR, 30X50, TUDA Approved, East Facing, ward No. 1 Rangapura. Rs. 1700/- sqft. 9845613678

Agricultural Land Converted

Kanakapura Road

KANAKAPURA TOWN, Near Bus-stand 1.25Acres Farm Land +30 Guntas Karab & 36,000Sft Conversion Land with Water & Electricity. Contact: 99459-28994

JOB OPPORTUNITIES

Drivers

WANTED BIKE rider's Join with India's largest bike taxi service and earn up to 30,000 per month & ride at your convenience, redeemable earnings, insured rides & more details please contact:- 080-47096073

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

General

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS: 7676760299/ 7676760399

WANTED TRANSPORT SUPERVISOR, @ Yelahanka Doddaballpura, Salary 14k, Good Kannada, English, Tamil, Hindi, Call: 9900069150

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

AUTOMOTIVE

Four Wheelers Selling

Maruti

REQUIRED SALVAGE quote for burnt Maruti WagonR Lxi 2007 KA07MC 9688 & SFC 407/27 CLB pickup 2016 model KA51C 9801 without RC. Call: 9844036218

BUSINESS

Business to Business

Construction And Maintenance

RESIDENTIAL CONSTRUCTION @ 1400/- S.ft ON TURN-KEY BASIS AS PER VASTHU PLANS 3D ELEVATIONS QUALITY TIMELY COMPLETION ASSURED WE ALSO UNDERTAKE RENOVATION OF EXISTING BUILDINGS ALONG WITH COMPLETE INTERIOR WORKS 9740315588

CONSTRUCTION OF YOUR Dream House/ Villa- Renovation, Extension Floor Work etc with good Materials- 9353082981.

Finance

NRI'S INVESTMENT AND FINANCE AVAILABLE ON LOW INTEREST AGAINST, PROPERTIES, LAND& BUILDING, SITES, FLATS, (ALSO) BUSINESS, COMPANIES CALL: 7411265189

EDUCATIONAL

Admission

DIRECT FINAL Year: B.Ed/ LL.B/B.Tech/M.Tech/ Diploma/MBA/BBA/BCA/ B.Com. Govt,UGC Recognised, Join immediately. Asha Institute: Bangalore. 9448460103/ 7093438248

Correspondence Courses

DIRECT FINAL (ONE Sitting) PUC/B. Com/ BA/BBA/BCA/ MBA/ B.Ed/ Diploma/ B.Tech/ D.Pharma, 100%Success. Shilpa: 9663366823

PERSONAL

Lost

DOCUMENT LOST
I, RATHNAMMA
W/o. Nagaraju.K R/at. No.28/2, Kembathhalli, Bannerghatta road, Gottigere post, Blr-83, have lost my original sale deed Document No. BNG (U)KNGR/4232/2001-2002, CD No- 66, Registered on 09/07/2001 in Kengeri Sub- Registrar.
If found pls contact- 9632841938 or inform near the Police Station.

I, FUAD Yahya Mohsen Senan S/o.Yahya- Yemeni Nationality R/a.#5, 3rd Cross, Kammanahalli, Bangalore- 560084 Have Lost PASSPORT Number 07722097 Validity 07.05.2024. Finders Contact 8446145597

Change of Name

14839374K- SEP/MT- KHARADE JANARDHAN BHIMRAO at 536, ASC Bn, Pin-905536, changed my minor daughter's name PRIYANKA to PRIYANKA JANARDHAN KHARADE notary KV Mani Bangalore.

WEEKEND CORNER

I, SANYOGITA Spouse of No 7781495H, HAV (MP) Ajayver Residing at Village Faizalipur Post Bhushankalan Teh Narnaul Dist Mahendragarh State Haryana- 123001 have changed my name to SANYOGITA YADAV vide affidavit dated 25.03.2021 before notary Gangaraju Bangalore

SUJATA JANARDHAN W/o 14839374K- SEP/MT- KHARADE JANARDHAN BHIMRAO R/a Manjarde, Tasgion, Sangli, Maharashtra changed name from SUJATA JANARDHAN to SUJATA JANARDHAN KHARADE notary KV Mani Bangalore.

SANDIP BIRU DONE B/o 14892113X- SEP/MT- DONE KARSIDDH BIRU R/a Yamage, Kolhapur, Maharashtra, changed name from SANDIP BIRU DONE to AVAGHADI SANDIP BIRU DONE notary KV Mani Bangalore.

I, RAVI KUMAR GUPTA, aged about 29 years, S/o. Banshi Dhar Gupta, R/at No. 16/26, New Thimmaiah Road, Jeevanahalli, Cox Town, Bangalore -560005, have changed my name to MOHAMMED ZABI Vide affidavit dated 21-01-2021 sworn before Notary Mohammed Hussain.K, Bangalore

SRUTI GUPTA, W/o 14829637K, SEP/MT, JITENDRA KUMAR GUPTA, SALSALA, NAVANAGAR, BUXAR, BIHAR, have changed my name from SRUTI GUPTA to SHRUTI GUPTA, 25/03/2021, Notary K.V. Mani, Bangalore

14839374K- SEP/MT- KHARADE JANARDHAN BHIMRAO at 536, ASC Bn, Pin-905536, changed my minor daughter's name PRANALI JANARDAN KHARADE to PRANALI JANARDHAN KHARADE notary KV Mani Bangalore.

ಕೋವಿಡ್ ಸೋಂಕಿತರ ಕೈಗೆ ಮುದ್ರೆ

ಬಿಬಿಎಂಪಿ: ಅಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಆರೋಗ್ಯ ಸಚಿವ ಡಾ.ಸುಧಾಕರ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ಕ್ರಮೇಣ ಹೆಚ್ಚಾಗುತ್ತಿರುವುದರಿಂದ ಈ ಸೋಂಕು ದೃಢಪಟ್ಟಿರುವ ಎಲ್ಲರ ಕೈಗೂ ಮುದ್ರೆ (ಸೀಲ್) ಹಾಕಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಹರಡದಂತೆ ತಡೆಯಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಸಚಿವರು ಅಧಿಕಾರಿಗಳ ಜೊತೆ ಗುರುವಾರ ಸಮಾಲೋಚನಾ ಸಭೆ ನಡೆಸಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ‘20 ರಿಂದ 40 ವರ್ಷದೊಳಗಿರುವವರಲ್ಲೂ ಸೋಂಕು ಹೆಚ್ಚಾಗಿ ಕಂಡುಬರುತ್ತಿದೆ. 70 ವರ್ಷ ಮೇಲ್ಪಟ್ಟವರಲ್ಲಿ ಗಂಭೀರ ಪ್ರಕರಣಗಳು ಹೆಚ್ಚಾಗುತ್ತಿವೆ. ರೋಗ ಲಕ್ಷಣ ಇಲ್ಲದ ಸೋಂಕಿತರು ಮನೆಯಲ್ಲೇ ಪ್ರತ್ಯೇಕವಾಗಿರುವಂತೆ ಸೂಚಿಸಲಾಗಿದೆ. ಅಂತಹವರು ಹೊರಗಡೆ ಓಡಾಡಿದರೆ ಅವರಿಂದ ಬೇರೆಯವರಿಗೂ ಸೋಂಕು ತಗಲುವ ಅಪಾಯವಿದೆ. ಅಂತಹವರ ಕೈಗೆ ಮುದ್ರೆ ಹಾಕಲಾಗುತ್ತದೆ’ ಎಂದರು.

‘ವಾರ್ಡ್‌ಗೆ ತಲಾ ಒಂದು ಆಂಬುಲೆನ್ಸ್ ನಿಯೋಜನೆ ಮಾಡಲಾಗಿದೆ. ಸೋಂಕು ಪತ್ತೆ ಪ್ರಮಾಣ ನೋಡಿಕೊಂಡು ಅವಶ್ಯಕ್ಕನುಗುಣವಾಗಿ ಹೆಚ್ಚಿನ ಆಂಬ್ಯುಲೆನ್ಸ್ ನಿಯೋಜನೆ ಮಾಡಲು ಪಾಲಿಕೆ ಕ್ರಮವಹಿಸಲಿದೆ’ ಎಂದು ತಿಳಿಸಿದರು.

‘ಕ್ವಾರಂಟೈನ್ ವಾಚ್’ ನಿಗಾ: ‘ನಗರದಲ್ಲಿ ಸೋಂಕು ದೃಢಪಟ್ಟವರ ಮೇಲೆ ನಿಗಾವಹಿಸಲು ಕ್ವಾರಂಟೈನ್ ವಾಚ್ ತಂತ್ರಾಂಶವಿದೆ. ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗುವವರ ಚಲನವಲನದ ಬಗ್ಗೆ ಈ ತಂತ್ರಾಂಶದ ಮೂಲಕ ನಿಗಾ ವಹಿಸಲು ಕ್ರಮಕೈಗೊಳ್ಳಲಾಗುತ್ತದೆ. ಅವರಿಗೆ ಸರಿಯಾದ ಚಿಕಿತ್ಸೆ ನೀಡಲು ಕ್ರಮವಹಿಸಲಾಗುವುದು’ ಎಂದು ಆರೋಗ್ಯ ಸಚಿವರು ತಿಳಿಸಿದರು.

‘ಪಾಲಿಕೆ ವ್ಯಾಪ್ತಿಯಲ್ಲಿ 45 ವರ್ಷ ಮೇಲ್ಪಟ್ಟವರ ಸಂಖ್ಯೆ 25 ಲಕ್ಷಕ್ಕೂ ಅಧಿಕ ಇದೆ. ಎಲ್ಲರಿಗೂ ಲಸಿಕೆ ನೀಡಲು ನಗರದಲ್ಲಿ 450 ಕೇಂದ್ರಗಳಲ್ಲಿ ಪ್ರತಿನಿತ್ಯ 80ಸಾವಿರ ಮಂದಿಗೆ ಲಸಿಕೆ ನೀಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಲಸಿಕೆ ಪಡೆಯಲು ನಾಗರಿಕರು ಅಷ್ಟಾಗಿ ಬರುತ್ತಿಲ್ಲ. ಜನರಿಗೆ ನೆರವಾಗಲು ಎಲ್ಲಾ ಆಸ್ಪತ್ರೆಗಳಲ್ಲೂ ಸಹಾಯಕೇಂದ್ರ, ಕಿಯೋಸ್ಕ್ ಹಾಗೂ ನೋಡಲ್ ಅಧಿಕಾರಿಯನ್ನು ನಿಯೋಜನೆ ಮಾಡಲು ಕ್ರಮವಹಿಸಲಾಗುತ್ತಿದೆ’ ಎಂದರು.

24 ಗಂಟೆಯಲ್ಲಿ ಪರೀಕ್ಷಾ ವರದಿ: ‘ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆಯ ವರದಿಯನ್ನು 24 ಗಂಟೆಯೊಳಗೆ ಪಡೆಯಬೇಕು. ಸೋಂಕಿತರ ನೇರ ಅಥವಾ ಪರೋಕ್ಷವಾಗಿ ಸಂಪರ್ಕಕ್ಕೆ ಬಂದ ಕನಿಷ್ಠ 20 ಮಂದಿಯನ್ನು ಪತ್ತೆ ಹಚ್ಚಿ ಪ್ರತ್ಯೇಕವಾಸಕ್ಕೆ ಒಳಪಡಿಸಲು ಕ್ರಮವಹಿಸಲಾಗುತ್ತಿದೆ’ ಎಂದರು.

ಸಭೆ ಸಮಾರಂಭಗಳು, ಜನ ಸಂದಣಿ ಪ್ರದೇಶಗಳಿಗೆ ಅನಗತ್ಯವಾಗಿ ಹೋಗುವುದನ್ನು ಕನಿಷ್ಠ ಪಕ್ಷ ಎರಡು ತಿಂಗಳ ಕಾಲ ಕಡಿಮೆ ಮಾಡಿ ಎಂದು ಆರೋಗ್ಯ ಸಚಿವರು ಕೋರಿದರು.

ಹಾಸಿಗೆಗಳ ಮಾಹಿತಿ ಪೋರ್ಟಲ್‌ನಲ್ಲಿ ಲಭ್ಯ: ‘ನಗರದಲ್ಲಿರುವ ಆಸ್ಪತ್ರೆಗಳಲ್ಲಿ ಎಷ್ಟು ಹಾಸಿಗೆಗಳು ಭರ್ತಿಯಾಗಿವೆ, ಎಷ್ಟು ಲಭ್ಯ ಇವೆ, ತುರ್ತು ನಿಗಾ ಘಟಕಗಳಲ್ಲಿ (ಐಸಿಯು) ಎಷ್ಟು ಹಾಸಿಗೆಗಳಿವೆ ಎಂಬುದನ್ನು ತಿಳಿಯಲು ಸರಳೀಕೃತ ವ್ಯವಸ್ಥೆ ರೂಪಿಸಲಾಗುತ್ತಿದೆ. ಇದರ ಮಾಹಿತಿಯನ್ನು ಇನ್ನೊಂದು ವಾರದಲ್ಲಿ ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗುವುದು’ ಎಂದು ಡಾ. ಸುಧಾಕರ್ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜಾವೇದ್ ಅಖ್ತರ್, ಇಲಾಖೆಯ ಆಯುಕ್ತ ಡಾ. ಕೆ.ವಿ.ತ್ರಿಲೋಕಚಂದ್ರ ಭಾಗವಹಿಸಿದ್ದರು.

ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಜಾವೇದ್ ಅಖ್ತರ್ ಮಾತನಾಡಿದರು. ಮಂಜುನಾಥ ಪ್ರಸಾದ್, ಡಾ.ಕೆ.ಸುಧಾಕರ್ ಇದ್ದಾರೆ

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,22,859 ಒಟ್ಟು ಸೋಂಕಿತರು

4,05,817 ಗುಣಮುಖರಾದವರು

12,472 ಸಕ್ರಿಯ ಪ್ರಕರಣ

4,569 ಸಾವು

ಗುರುವಾರದ ಏರಿಕೆ

1,623 ದೃಢಪಟ್ಟ ಪ್ರಕರಣ

665 ಗುಣಮುಖ | **6** ಸಾವು

> ನಗರದಲ್ಲಿ ಕೋವಿಡ್ ಉಲ್ಬಣವಾಗುವುದನ್ನು ತಡೆಯಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ನಾಗರಿಕರು ಕೋವಿಡ್ ನಿಯಂತ್ರಣದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು
> **ಡಾ.ಕೆ.ಸುಧಾಕರ್,** ಆರೋಗ್ಯ ಸಚಿವ

‘ನಿಯಮ ಕಡೆಗಣನೆ–ಆಯೋಜಕರೇ ಹೊಣೆ’

‘ನಗರದ ಮಾರುಕಟ್ಟೆ, ಚಿತ್ರಮಂದಿರ, ಬಸ್ ನಿಲ್ದಾಣ, ರೈಲು ನಿಲ್ದಾಣ, ಮದುವೆ ಮಂಟಪ, ಧಾರ್ಮಿಕ ಸ್ಥಳ, ಶಾಲಾ-ಕಾಲೇಜು ಆವರಣ ಮುಂತಾದೆಡೆ ಹೆಚ್ಚು ಜನಸಂದಣಿ ಇರುವ ಕಡೆ ಕೋವಿಡ್ ನಿಯಂತ್ರಣ ನಿಯಮ ಪಾಲನೆ ಬಗ್ಗೆ ಮಾರ್ಷಲ್‌ಗಳು ನಿಗಾ ವಹಿಸಲಿದ್ದಾರೆ. ಕನಿಷ್ಠ 2 ಮೀ ಅಂತರ ಕಾಪಾಡದಿದ್ದರೆ, ಮಾಸ್ಕ್ ಧರಿಸದೇ ಇದ್ದರೆ ದಂಡ ವಿಧಿಸಲಿದ್ದಾರೆ. ಕಾರ್ಯಕ್ರಮಗಳಲ್ಲಿ, ಸಮಾರಂಭಗಳಲ್ಲಿ ಕೋವಿಡ್ ನಿಯಮ ಪಾಲನೆ ಮಾಡದಿರುವುದು ಕಂಡುಬಂದರೆ ಆಯೋಜಕರನ್ನೂ ಹೊಣೆಗಾರರನ್ನಾಗಿಸಿ, ಅವರಿಗೂ ದಂಡ ವಿಧಿಸಲಾಗುವುದು’ ಎಂದು ಸುಧಾಕರ್ ಸ್ಪಷ್ಟಪಡಿಸಿದರು.

‘ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳುವಾಗ ತೆರೆದ ಸಭಾಂಗಣದಲ್ಲಿ 500 ಮಂದಿ ಹಾಗೂ ಮುಚ್ಚಿದ ಸಭಾಂಗಣಗದಲ್ಲಿ 200 ಮಂದಿ ಮಾತ್ರ ಭಾಗವಹಿಸಬೇಕು. ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲಾಗುವುದು’ ಎಂದರು.

‘ಹೊರಗಿನವರಿಂದ ಹರಡುತ್ತಿದೆ’

‘ನಗರದಲ್ಲಿ ಹೆಚ್ಚಿನ ಕಡೆ ಸೋಂಕು ಹೊರ ರಾಜ್ಯದಿಂದ ಬಂದವರಿಂದಲೇ ಹರಡಿವೆ. ಸೋಂಕು ಪತ್ತೆ ಪ್ರಮಾಣದಲ್ಲಿ ಶೇ. 70 ರಷ್ಟು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಕಂಡುಬಂದಿದೆ. ಪಾಲಿಕೆ ವ್ಯಾಪ್ತಿಯ ಕೊಳಗೇರಿಗಳಲ್ಲಿ ಹೆಚ್ಚು ಕೋವಿಡ್ ಪ್ರಕಣಗಳು ಕಂಡುಬರುತ್ತಿಲ್ಲ’ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಮಾಹಿತಿ ನೀಡಿದರು.

‘ಪಾಲಿಕೆ ವ್ಯಾಪ್ತಿಯಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಿಸಲು ಹಲವಾರು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹೆಚ್ಚು ಹೆಚ್ಚು ಕೋವಿಡ್ ಪರೀಕ್ಷೆಗಳನ್ನು ಮಾಡಲಾಗುತ್ತಿದೆ. ಬುಧವಾರ 51,000 ಪರೀಕ್ಷೆಗಳನ್ನು ಮಾಡಲಾಗಿದೆ. ಕೋವಿಡ್ ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲು 216 ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ’ ಎಂದು ವಿವರಿಸಿದರು.

‘ನಗರದ ದಾಸರಹಳ್ಳಿ ಹಾಗೂ ಆರ್.ಆರ್.ನಗರ ವಲಯ ಹೊರತುಪಡಿಸಿ ಉಳಿದೆಲ್ಲಾ ವಲಯಗಳಲ್ಲಿ ಹೆಚ್ಚು ಕೋವಿಡ್ ಪ್ರಕರಣಗಳು ಕಂಡುಬರುತ್ತಿವೆ’ ಎಂದರು.

ಹೊಸದಾಗಿ 2,523 ಪ್ರಕರಣಗಳು ದೃಢ

ಐಸಿಯು ದಾಖಲಾತಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದ್ದು, ಗುರುವಾರ 2,523 ಪ್ರಕರಣಗಳು ದೃಢಪಟ್ಟಿವೆ. ಇದೇ ವೇಳೆ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಹೆಚ್ಚಳವಾಗಿದೆ. ಸದ್ಯ 150 ಮಂದಿ ಐಸಿಯುನಲ್ಲಿ ಇದ್ದಾರೆ.

ಈ ತಿಂಗಳ ಮೊದಲ ವಾರದಲ್ಲಿ ದಿನವೊಂದಕ್ಕೆ 500ರ ಗಡಿಯ ಆಸುಪಾಸಿನಲ್ಲಿದ್ದ ಪ್ರಕರಣಗಳ ಸಂಖ್ಯೆ ಒಮ್ಮೆಗೆ ಏರುಗತಿ ಪಡೆದಿದೆ. ಮೂರು ದಿನಗಳಿಂದ 24 ಗಂಟೆಗಳ ಅವಧಿಯ ಲೆಕ್ಕಾಚಾರದಂತೆ ದಿನವಹಿ ಸೋಂಕಿತರ ಸಂಖ್ಯೆ 2 ಸಾವಿರದ ಗಡಿ ದಾಟುತ್ತಿದೆ. ಈ ಅವಧಿಯಲ್ಲಿ 6,831 ಪ್ರಕರಣಗಳು ಖಚಿತಪಟ್ಟಿವೆ. ಈವರೆಗೆ ಸೋಂಕಿತರಾದವರ ಸಂಖ್ಯೆ 9.78 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 6 ಮಂದಿ, ಮೈಸೂರಿನಲ್ಲಿ ಇಬ್ಬರು, ಬಳ್ಳಾರಿ ಹಾಗೂ ಬೆಳಗಾವಿಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇವರಲ್ಲಿ ಎಲ್ಲರೂ 50 ವರ್ಷ ಮೇಲ್ಪಟ್ಟವರಾಗಿದ್ದು, ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್ಐ) ಮತ್ತು ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಎದುರಿಸಿದ್ದಾರೆ. ಒಟ್ಟು ಸಾವಿಗೀಡಾದವರ ಸಂಖ್ಯೆ 12,471ಕ್ಕೆ ಏರಿಕೆಯಾಗಿದೆ.

ರಾಜ್ಯದ ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ ಹಾಗೂ 19 ಜಿಲ್ಲೆಗಳಲ್ಲಿ ಎರಡಂಕಿ ತಲುಪಿದೆ. ಬೆಂಗಳೂರಿನಲ್ಲಿ ಮತ್ತೆ 1,623 ಮಂದಿ ಸೋಂಕಿತರಾಗಿದ್ದಾರೆ. ಇದರಿಂದಾಗಿ ಒಟ್ಟು ಸೋಂಕಿತರ ಸಂಖ್ಯೆ 4.22 ಲಕ್ಷ ದಾಟಿದೆ. ಉಡುಪಿಯಲ್ಲಿ 145, ಕಲಬುರ್ಗಿಯಲ್ಲಿ 100, ಮೈಸೂರಿನಲ್ಲಿ 89, ಬೀದರ್‌ನಲ್ಲಿ 78, ದಕ್ಷಿಣ ಕನ್ನಡದಲ್ಲಿ 72 ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ 18,207ಕ್ಕೆ ತಲುಪಿದೆ. ಸೋಂಕಿತರಲ್ಲಿ 1,192 ಮಂದಿ ಚೇತರಿಸಿಕೊಂಡಿದ್ದಾರೆ.

ಆಸ್ಪತ್ರೆಗಳ ಪರಿಶೀಲನೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ‘ಸೋಂಕಿತರ ಸಂಖ್ಯೆ ಇನ್ನಷ್ಟು ಏರಿಕೆ ಕಂಡಲ್ಲಿ ಖಾಸಗಿ ಆಸ್ಪತ್ರೆಗಳ ಸಹಕಾರ ಪಡೆಯಲಾಗುವುದು’ ಎಂದು ತಿಳಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ ಪೀಡಿತರಿಗೆ 400 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅಲ್ಲಿ ಚಿಕಿತ್ಸೆಗೆ ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ವೈದ್ಯಾಧಿಕಾರಿಗಳಿಂದ ಅವರು ಮಾಹಿತಿ ಪಡೆದುಕೊಂಡರು. ಗರ್ಭಿಣಿಯರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪೀಡಿತರಾಗುತ್ತಿರುವ ಕಾರಣ ವಾಣಿವಿಲಾಸ ಆಸ್ಪತ್ರೆಗೆ ಭೇಟಿ ನೀಡಿ, ಸೋಂಕು ಹರಡುವಿಕೆ ತಡೆಗಟ್ಟಲು ವೈಯಕ್ತಿಕ ಸುರಕ್ಷಾ ಸಾಧನಗಳ (ಪಿಪಿಇ ಕಿಟ್) ಬಳಕೆ ಸೇರಿದಂತೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಿದರು.

ರಾಜ್ಯಕ್ಕೆ ತಲುಪಿದ 4 ಲಕ್ಷ ಡೋಸ್ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಕಳುಹಿಸಿರುವ 4 ಲಕ್ಷ ಡೋಸ್ ಕೋವಿಡ್ ಲಸಿಕೆಯು ಬುಧವಾರ ತಡರಾತ್ರಿ ರಾಜ್ಯವನ್ನು ತಲುಪಿದೆ. ವಾರದೊಳಗೆ ಇನ್ನೂ 12 ಲಕ್ಷ ಲಸಿಕೆ ಇಲ್ಲಿಗೆ ಬರಲಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಲಸಿಕೆ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ‘ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಲಸಿಕೆ ಕೊರತೆ ಆಗದಂತೆ ಕ್ರಮ ಕೈಗೊಳ್ಳಲಾಗಿದೆ. ಕಳೆದ ವರ್ಷ ಕೋವಿಡ್ ಮೊದಲ ಅಲೆ ಅಪ್ಪಳಿಸಿದಾಗ ಲಸಿಕೆ ನಮಗೆ ಆಶಾಕಿರಣವಾಗಿತ್ತು. ಈಗ ಅದು ವಾಸ್ತವವಾಗಿದೆ. ಕೇವಲ ಒಂದು ವರ್ಷದಲ್ಲಿ ಲಸಿಕೆಯನ್ನು ಕಂಡುಹಿಡಿಯಲಾಗಿದೆ. ಎಲ್ಲ ಅರ್ಹ ಫಲಾನುಭವಿಗಳು ಹೆಸರು ನೋಂದಾಯಿಸಿಕೊಂಡು ಇದರ ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಮನವಿ ಮಾಡಿಕೊಂಡಿದ್ದಾರೆ.

ರಾಜ್ಯದಲ್ಲಿ ಗುರುವಾರ 1,982 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, ಮಧ್ಯಾಹ್ನ 3 ಗಂಟೆ ವೇಳೆಗೆ 35,531 ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಲಸಿಕೆ ಪಡೆದವರಲ್ಲಿ 23,106 ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 30.44 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.39 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.29 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ.

60 ವರ್ಷ ಮೇಲ್ಪಟ್ಟವರಲ್ಲಿ 14.74 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 4.18 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ಕೊಳೆಗೇರಿಗಳಲ್ಲಿ ಕೋವಿಡ್ ಲಸಿಕೆಗೆ ಆದ್ಯತೆ ನೀಡಲು ನಿರ್ದೇಶನ

ಕೊಳೆಗೇರಿ ಮತ್ತು ಜನದಟ್ಟಣೆ ಪ್ರದೇಶದಲ್ಲಿ ವಾಸಿಸುವ ಜನರಿಗೆ ಕೋವಿಡ್ ಲಸಿಕೆ ಕೊಡಿಸಲು ಆದ್ಯತೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ವಿಷಯದ ಕುರಿತ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತಿದೆ.

‘ಸೋಂಕು ಹರಡುವುದನ್ನು ತಡೆಯುವ ನಿಟ್ಟಿನಲ್ಲಿ ಈ ಪ್ರದೇಶಗಳಲ್ಲಿ ವಾಸಿಸುವ ನಾಗರಿಕರಿಗೆ ಲಸಿಕೆ ತೆಗೆದುಕೊಳ್ಳಲು ಮನವೊಲಿಸಲು ರಾಜ್ಯ ಸರ್ಕಾರ ವಿಶೇಷ ಪ್ರಯತ್ನ ಮಾಡಬೇಕಾಗುತ್ತದೆ’ ಎಂದು ಪೀಠ ಅಭಿಪ್ರಾಯಪಟ್ಟಿತು.

ಒಳಾಂಗಣ ಮತ್ತು ಹೊರಾಂಗಣದಲ್ಲಿ ನಡೆಯುವ ರಾಜಕೀಯ, ಧಾರ್ಮಿಕ ಮತ್ತು ಖಾಸಗಿ ಕಾರ್ಯಕ್ರಮಗಳಿಗೆ ಎಷ್ಟು ಜನ ಸೇರಬೇಕು ಎಂಬ ನಿಯಮಗಳನ್ನು ಒಳಗೊಂಡ ಮಾ.24ರ ಹೊರಡಿಸಿರುವ ಅಧಿಸೂಚನೆ ಅನುಷ್ಠಾನ ಸಂಬಂಧಿಸಿದಂತೆ ವಿವರ ಸಲ್ಲಿಸುವಂತೆ ಪೀಠ ತಿಳಿಸಿತು.

ಸತ್ತವರ ಸಂಖ್ಯೆ ಬಚ್ಚಿಟ್ಟು ಸುಳ್ಳುಲೆಕ್ಕ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಆರಂಭವಾಗಿರುವುದರಿಂದ ರಾಜ್ಯ ಸರ್ಕಾರ ಜನರನ್ನು ಭೀತಿಗೆ ಒಳಪಡಿಸದೇ, ವೈಜ್ಞಾನಿಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಆರ್ಥಿಕ ಚಟುವಟಿಕೆಗಳನ್ನು ನಿರ್ಬಂಧಿಸಬಾರದು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ್ ಧರಿಸುವ, ಸ್ಯಾನಿಟೈಸರ್ ಬಳಸುವ, ಸಣ್ಣ ರೋಗ ಲಕ್ಷಣಗಳು ಕಂಡು ಬಂದರೂ ಜನರೊಂದಿಗೆ ಬೆರೆಯದೇ ಪ್ರತ್ಯೇಕವಾಗಿ ಉಳಿಯುವ, ಪರೀಕ್ಷೆ ಮಾಡಿಸಿಕೊಳ್ಳುವುದಕ್ಕೆ ಪ್ರೇರಣೆ ನೀಡುವ ಕೆಲಸ ಸರ್ಕಾರ ಮಾಡಬೇಕು ಎಂದು ಸಲಹೆ ನೀಡಿದ್ದಾರೆ.

ಸಾವಿನ ಬಗ್ಗೆ ಸುಳ್ಳು ಲೆಕ್ಕ: ಸರ್ಕಾರ ಕೋವಿಡ್ ಸಾವುಗಳ ವಿಚಾರದಲ್ಲಿ ಸುಳ್ಳು ಹೇಳುತ್ತಿದೆ. ಈವರೆಗೆ ಕೋವಿಡ್‌ನಿಂದ 12,499 ಜನ ಮೃತಪಟ್ಟಿದ್ದಾರೆ ಎಂದು ಮಾಹಿತಿ ಬಿಡುಗಡೆ ಮಾಡಿದೆ. ಆದರೆ, ರಾಜ್ಯ ಸರ್ಕಾರದ ಸಾಂಖ್ಯಿಕ ಇಲಾಖೆ ಸಂಗ್ರಹಿಸಿರುವ ಜನನ, ಮರಣಗಳ ಅಂಕಿ–ಅಂಶಗಳ ಪ್ರಕಾರ ಸಾವುಗಳ ಸಂಖ್ಯೆ ಅಧಿಕವಾಗಿದೆ. ಕೊರೊನಾ ಸಾವುಗಳ ಪ್ರಮಾಣ ಶೇ 1.4 ರಷ್ಟು ಇದೆ. ರಾಜ್ಯ ಸರ್ಕಾರ ತಾನು ತೆಗೆದುಕೊಂಡ ಕ್ರಮಗಳಿಂದ ಸಾವುಗಳ ಸಂಖ್ಯೆ ಕಡಿಮೆ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದೆ ಎಂದು ಟೀಕಿಸಿದ್ದಾರೆ.

ಕೊರೊನಾ ಸಾವುಗಳಲ್ಲಿ ರಾಜ್ಯವು 19 ನೇ ಸ್ಥಾನದಲ್ಲಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಡಿಸೆಂಬರ್ ಅಂತ್ಯದವರೆಗಿನ ಮಾಹಿತಿಯ ಪ್ರಕಾರ ಸಾವಿನ ಪ್ರಮಾಣ ಸುಮಾರು ಶೇ 2.6 ರಷ್ಟಿದೆ. ಇದರಿಂದ ದೇಶದಲ್ಲಿ ಕೋವಿಡ್ ಕಾರಣದಿಂದ ಅತಿ ಹೆಚ್ಚು ಮರಣ ಹೊಂದಿದ ರಾಜ್ಯಗಳಲ್ಲಿ ಕರ್ನಾಟಕವು ಪಂಜಾಬ್ ನಂತರದ ಎರಡನೇ ಸ್ಥಾನದಲ್ಲಿದೆ. ಸತ್ತವರ ಸಂಖ್ಯೆ ಬಚ್ಚಿಟ್ಟು ಸುಳ್ಳು ಲೆಕ್ಕ ಹೇಳುತ್ತಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಕೊರೊನಾದಿಂದ ಮೃತಪಟ್ಟ ಅನೇಕರ ಕುಟುಂಬಗಳಿಗೆ ಇನ್ನೂ ಪರಿಹಾರವನ್ನೇ ನೀಡಿಲ್ಲ. ಕುಶಲ ಕರ್ಮಿಗಳು ಮತ್ತು ದುಡಿಯುವ ಕೆಲವೇ ಸಮುದಾಯಗಳಿಗೆ ಘೋಷಿಸಿದ್ದ ಪರಿಹಾರವನ್ನೂ ಸಮರ್ಪಕವಾಗಿ ವಿತರಿಸಲಿಲ್ಲ ಎಂದೂ ಟೀಕಿಸಿದ್ದಾರೆ.

ಹೆಚ್ಚು ಪರೀಕ್ಷೆಗಳನ್ನು ಮಾಡುವ ಮೂಲಕ ಹಾಗೂ ಸುರಕ್ಷತಾ ಲಸಿಕೆಗಳನ್ನು ನೀಡುವ ಮೂಲಕ, ವಯಸ್ಸಾದ ಹಿರಿಯರನ್ನು ಮತ್ತು ಇತರೆ ಅನಾರೋಗ್ಯ ಹೊಂದಿರುವವರ ಆರೋಗ್ಯವನ್ನು ವಿಶೇಷವಾಗಿ ಪರಿಗಣಿಸಿ ಎಚ್ಚರಿಕೆಯನ್ನು ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ವಿವಿಧ ರಂಗಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು

‘ಸಮಾಜಮುಖಿ ಚಟುವಟಿಕೆ ವಿಸ್ತರಣೆ’

ಯಲಹಂಕ: ‘ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ದತ್ತುಪಡೆಯುವುದೂ ಸೇರಿದಂತೆ ಸಮಾಜಮುಖಿ ಚಟುವಟಿಕೆಗಳನ್ನು ವಿಸ್ತರಿಸಲಾಗುವುದು’ ಎಂದು ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಹೇಳಿದರು.

ರೇವಾ ವಿಶ್ವವಿದ್ಯಾಲಯದ ವಾಣಿಜ್ಯ ಮತ್ತು ನಿರ್ವಹಣೆ ಶಾಲೆಯ ಬೆಳವಣಿಗೆ ಮತ್ತು ವಿದ್ಯಾರ್ಥಿಗಳ ಸಾಧನೆ ಪರಿಚಯಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರೇವಾ ಶಿಕ್ಷಣ ಸಂಸ್ಥೆ ಮತ್ತು ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಸಮಾಜಕ್ಕೆ ಕೊಡುಗೆ ನೀಡಬೇಕೆಂಬ ಉದ್ದೇಶ ಹೊಂದಿದೆ. ಮತದಾನ ಜಾಗೃತಿ, ಪರಿಸರ ಸಂರಕ್ಷಣೆ, ಸರ್ಕಾರಿ ಶಾಲೆಗಳನ್ನು ದತ್ತುಪಡೆದು ಅಭಿವೃದ್ಧಿಪಡಿಸುವಂತಹ ಹಲವು ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಿದೆ’ ಎಂದರು.

‘ವಿದ್ಯಾರ್ಥಿಗಳು ಕೇವಲ ಉದ್ಯೋಗಿಗಳಾದರೆ ಸಾಲದು, ಇನ್ನೊಬ್ಬರಿಗೆ ಉದ್ಯೋಗಗಳನ್ನು ನೀಡುವ ಮಟ್ಟಕ್ಕೆ ಬೆಳವಣಿಗೆಯಾಗಬೇಕೆಂಬುದು ನಮ್ಮ ಆಶಯ. ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ಮತ್ತು ಪ್ರೋತ್ಸಾಹ ನೀಡಲಾಗುತ್ತಿದೆ’ ಎಂದರು.

ಕುಲಪತಿ ಡಾ.ಎಂ.ಧನಂಜಯ, ‘ವಿದ್ಯಾರ್ಥಿಗಳು ಮಾಡಿರುವ ಪ್ರತಿಯೊಂದು ಸಾಧನೆಯೂ ವಿಶ್ವವಿದ್ಯಾಲಯ ಮತ್ತು ಪೋಷಕರಿಗೆ ಹೆಮ್ಮೆಯ ಸಂಗತಿ’ ಎಂದರು.

ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕುಲಸಚಿವ ಡಾ.ಎನ್.ರಮೇಶ್, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಬೀನಾ ಜಿ., ವಾಣಿಜ್ಯ ಮತ್ತು ನಿರ್ವಹಣೆ ಶಾಲೆಯ ನಿರ್ದೇಶಕಿ ಡಾ.ಶುಭಾ ಇದ್ದರು.

Bangalore: Whitefield / Yeleahanka / Mysore Road, Bimal Auto: 9742271855, 9538896904, 9742262403 | BG Road / KR Puram / Mysore Road / Whitefield / Uttrahalli, Kalyani Motors: 9008555785, 9900026475, 9740000799 | Sarjapur / Belandur, Pratham Motors: 9945199707, 9880552627 | Basaveshwar Nagar / JP Nagar, Vijayanagar, Yelahanka, Mandovi Motors: 9880018970, 9686699754 | Yeshwantpur / GG Palya, RNS Motors: 7760989633, 9538965803 | Kanakapura Road / Magadi Road, Garuda Automobiles: 9900019699, 7022266489 | Mysore Road, Kataria Automobiles: 6362394903/ 9513363279 | Banashankari / Elec. City, Surakshaa Car Care: 8884442354, 8884419037 | Hesarghatta / Summanahalli Junction, Varun Motors: 9513394748, 9513979160, 7353581757 | Chandapura, Surakshaa True Value: 9449865654, 9449865692 Tumkur, Saketh Automobiles: 7625000706.

ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದ ಘಟನೆ • ಪೊಲೀಸರಿಂದ ಆರೋಪಿ ಭರತ್‌ಕುಮಾರ್ ಬಂಧನ

ಮಂಚದ ಕೆಳಗೆ ಅವಿತು ಪತ್ನಿ ಸ್ನೇಹಿತನ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಶಿವಕುಮಾರ್ (27) ಎಂಬುವರನ್ನು ಹತ್ಯೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ಭರತ್‌ಕುಮಾರ್ (31) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಂಡಾ ನಿವಾಸಿ ಶಿವಕುಮಾರ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಆರೋಪಿ ಭರತ್‌ಕುಮಾರ್ ಪತ್ನಿ ವಿನುತಾ ಜೊತೆ ಸ್ನೇಹ ಬೆಳೆಸಿದ್ದ ಅವರು, ಸಲುಗೆ ಇಟ್ಟುಕೊಂಡಿದ್ದರು. ಪತಿಯನ್ನು ತೊರೆದಿದ್ದ ವಿನುತಾ, ಶಿವಕುಮಾರ್ ಜೊತೆ ಅಂದ್ರಹಳ್ಳಿಯಲ್ಲಿ ವಾಸವಿದ್ದರು. ಅದೇ ಮನೆಯಲ್ಲೇ ಗುರುವಾರ ಬೆಳಿಗ್ಗೆ ಈ ಕೊಲೆ ನಡೆದಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

'ಮನೆಯಲ್ಲಿದ್ದ ಶಿವಕುಮಾರ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ. ಆರೋಪಿ ಭರತ್ ಕುಮಾರ್‌ನನ್ನು ಬಂಧಿಸಲಾಗಿದ್ದು, ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದು ತಿಳಿಸಿದರು.

ಪ್ರೀತಿಸಿ ಮದುವೆಯಾಗಿದ್ದ ದಂಪತಿ: 'ನೆಲಮಂಗಲ ನಿವಾಸಿಯಾದ ಆರೋಪಿ ಭರತ್‌ಕುಮಾರ್ ಹಾಗೂ ತರೀಕೆರೆ ತಾಂಡಾದ ವಿನುತಾ, ಬೆಂಗಳೂರಿನ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಪರಸ್ಪರ ಪರಿಚಯವಾಗಿ, ಪ್ರೀತಿಸಿ ಎಂಟು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ' ಎಂದು ಡಿಸಿಪಿ ಹೇಳಿದರು.

'ಮದುವೆ ಬಳಿಕ ದಂಪತಿ ನೆಲಮಂಗಲದಲ್ಲಿ ವಾಸವಿದ್ದರು. ಕಳೆದ ವರ್ಷ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಶಿವಕುಮಾರ್, ವಿನುತಾ ಮನೆಯಲ್ಲೇ ಉಳಿದುಕೊಂಡಿದ್ದರು. ಒಂದೇ ಊರಿನವರಾಗಿದ್ದರಿಂದ ವಿನುತಾ ಹಾಗೂ ಶಿವಕುಮಾರ್ ನಡುವೆ ಸಲುಗೆ ಬೆಳೆದಿತ್ತು. ಅದು ಗೊತ್ತಾಗುತ್ತಿದ್ದಂತೆ ಭರತ್‌ಕುಮಾರ್, ಶಿವಕುಮಾರ್ ಜೊತೆ ಜಗಳ ತೆಗೆದು ಮನೆಯಿಂದ ಹೊರಹಾಕಿದ್ದ.'

'ಶಿವಕುಮಾರ್ ಜೊತೆಯೇ ವಿನುತಾ ಸಹ ಮನೆ ಬಿಟ್ಟು ಬಂದಿದ್ದರು. ಅವರಿಬ್ಬರು ಅಂದ್ರಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ನೆಲೆಸಿದ್ದರು. ಪತ್ನಿಯನ್ನು ಬೇರೆ ಮಾಡಿದನೆಂದು ಕೋಪಗೊಂಡಿದ್ದ ಭರತ್‌ಕುಮಾರ್, ಸಂಚು ರೂಪಿಸಿ ಶಿವಕುಮಾರ್‌ನನ್ನು ಕೊಂದಿದ್ದಾನೆ' ಎಂದೂ ಅವರು ತಿಳಿಸಿದರು.

ಆನ್‌ಲೈನ್‌ನಲ್ಲಿ ಚಾಕು ಖರೀದಿ: 'ಹತ್ಯೆಗೆಂದೇ ಆನ್‌ಲೈನ್‌ನಲ್ಲಿ ಚಾಕು ಖರೀದಿಸಿದ್ದ ಆರೋಪಿ, ಸಮಯಕ್ಕಾಗಿ ಕಾಯುತ್ತಿದ್ದ. ಬುಧವಾರ ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದ ಶಿವಕುಮಾರ್, ಮಧ್ಯಾಹ್ನ ವಿನುತಾಗೆ ಕರೆ ಮಾಡಿದ್ದ. ಕೋಳಿ ಮಾಂಸ ತಂದು ರಾತ್ರಿ ಅಡುಗೆ ಮಾಡುವಂತೆ ಹೇಳಿದ್ದ.'

'ಮನೆಯ ಬಾಗಿಲಿನ ಚಿಲಕ ಹಾಕಿಕೊಂಡು ವಿನುತಾ ಕೋಳಿ ಮಾಂಸ ತರಲು ಅಂಗಡಿಗೆ ಹೋಗಿದ್ದರು. ಅದೇ ಸಮಯಕ್ಕೆ ಚಿಲಕ ತೆರೆದು ಮನೆಯೊಳಗೆ ಬಂದಿದ್ದ ಆರೋಪಿ, ಮಂಚದ ಕೆಳಗೆ ಅವಿತು ಕುಳಿತಿದ್ದ. ಅದು ಯಾರಿಗೂ ಗೊತ್ತಿರಲಿಲ್ಲ. ಕೆಲಸ ಮುಗಿಸಿ ಮನೆಗೆ ಬಂದಿದ್ದ ಶಿವಕುಮಾರ್, ವಿನುತಾ ಜೊತೆ ಊಟ ಮಾಡಿ ಮಲಗಿದ್ದರು. ನಸುಕಿನಲ್ಲಿ ವಿನುತಾ, ಶೌಚಾಲಯಕ್ಕೆ ಹೋಗಿದ್ದರು. ಆಗ ಹೊರಗಿನಿಂದ ಶೌಚಾಲಯದ ಚಿಲಕ ಹಾಕಿದ್ದ ಆರೋಪಿ ಭರತ್‌ಕುಮಾರ್, ಮಂಚದ ಮೇಲೆ ಮಲಗಿದ್ದ ಶಿವಕುಮಾರ್ ಅವರ ಕತ್ತು ಹಿಸುಕಿದ್ದ. ನಂತರ ಚಾಕುವಿನಿಂದ ಹೊಟ್ಟೆಗೆ ಮೂರು ಬಾರಿ ಇರಿದು ಕೊಂದಿದ್ದಾನೆ' ಎಂದು ಡಿಸಿಪಿ ಹೇಳಿದರು.

ಸುದ್ದಿ 2 ನಿಮಿಷ

ಮೆಟ್ರೊ ಯೋಜನೆಗೆ ಮರ ಸ್ಥಳಾಂತರಕ್ಕೆ ಅನುಮತಿ

ಬೆಂಗಳೂರು: 'ನಾಗವಾರ–ಗೊಟ್ಟಿಗೆರೆ ಮೆಟ್ರೊ ಮಾರ್ಗಕ್ಕೆ ಮರಗಳನ್ನು ಕಡಿಯುವ ಮತ್ತು ಸ್ಥಳಾಂತರಿಸುವ ಮೊದಲು ಅಷ್ಟೇ ಸಂಖ್ಯೆಯ ಮರಗಳನ್ನು ಬೇರೆಡೆ ಬೆಳೆಸುವ ಬಗ್ಗೆ ಸಿದ್ಧಪಡಿಸಿರುವ ಯೋಜನೆ ಸಲ್ಲಿಸಬೇಕು' ಎಂದು ಬಿಎಂಆರ್‌ಸಿಎಲ್‌ಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಯೋಜನೆಗಾಗಿ 52 ಮರಗಳನ್ನು ಸ್ಥಳಾಂತರಿಸಲು ಮತ್ತು 39 ಮರಗಳನ್ನು ಕಡಿಯಲು ಅನುಮತಿ ನೀಡಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಅನುಮತಿ ಪಡೆಯದ 28 ಮರಗಳಿಗೆ ಯಾವುದೇ ಹಾನಿ ಆಗದಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿತು.

ಸ್ಥಳಾಂತರಗೊಂಡ ಮರಗಳನ್ನು 36 ತಿಂಗಳು ನಿರ್ವಹಣೆ ಮಾಡಲಾಗುವುದು ಎಂಬ ಬಿಎಂಆರ್‌ಸಿಎಲ್ ಅಫಿಡವಿಟ್ ಅಂಗೀಕರಿಸಿದ ಪೀಠ, 'ಅವಧಿ ಮುಗಿದ ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಅಗತ್ಯ ಎನಿಸಿದರೆ ಇನ್ನಷ್ಟು ದಿನ ನಿರ್ವಹಣೆ ಮಾಡಲು ಪತ್ರ ಬರೆಯಬೇಕು' ಎಂದು ಪೀಠ ಹೇಳಿತು.

ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಮತ್ತು ಪರಿಸರವಾದಿ ದತ್ತಾತ್ರಯ ಟಿ. ದೇವರೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

35 ಕೆ.ಜಿ ಗಾಂಜಾ ಜಪ್ತಿ; ಇಬ್ಬರ ಬಂಧನ

ಬೆಂಗಳೂರು: ಅಕ್ರಮವಾಗಿ ಸಾಗಿಸುತ್ತಿದ್ದ 30 ಕೆ.ಜಿ 500 ಗ್ರಾಂ ಗಾಂಜಾವನ್ನು ಬಸವನಗುಡಿ ಠಾಣೆ ಪೊಲೀಸರು ಜಪ್ತಿ ಮಾಡಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ಚಿಂತಾಮಣಿ ವೆಂಕಟಗಿರಿ ಕೋಟೆ ಸಿಮ್ದಾದ್ ಪಾಷಾ (25) ಹಾಗೂ ನಾಗಣ್ಣ ಅಲಿಯಾಸ್ ನಾಗಿ ಬಂಧಿತರು. ಗಾಂಜಾ ಸಾಗಣೆ ಜಾಲ ಭೇದಿಸಿದ ಪೊಲೀಸರಿಗೆ ಬೆಂಗಳೂರು ಕಮಿಷನರ್ ಅವರು ₹ 30 ಸಾವಿರ ಬಹುಮಾನ ಘೋಷಿಸಿದ್ದಾರೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ತಿಳಿಸಿದರು.

'ಠಾಣೆ ವ್ಯಾಪ್ತಿಯ ಕಾಲೇಜೊಂದರ ಬಳಿ ಕಾರು ನಿಲ್ಲಿಸಿಕೊಂಡು ನಿಂತಿದ್ದ ಆರೋಪಿಗಳು, ಗ್ರಾಹಕರಿಗಾಗಿ ಕಾಯುತ್ತಿದ್ದರು. ಆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಗಸ್ತಿನಲ್ಲಿದ್ದ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದೂ ಹೇಳಿದರು.

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
ದೂರವಾಣಿ ನಂ.08158–256884 ಇ–ಮೇಲ್: eotpsid@gmail.com
ಸಂಖ್ಯೆ: ತಾಪಂಶಿ/ಹೊ.ಗು/ಸಿಆರ್/2020–21 ದಿನಾಂಕ: 22.03.2021

ಕಛೇರಿ ಜ್ಞಾಪನ

ತಾಲ್ಲೂಕು ಪಂಚಾಯಿತಿ ಶಿಡ್ಲಘಟ್ಟ ಕಾರ್ಯಾಲಯಕ್ಕೆ ಡಾಟಾ ಎಂಟ್ರಿ ಆಪರೇಟರ್–2, ವಾಹನ ಚಾಲಕ–1, ಡಿ–ದರ್ಜೆ ನೌಕರರು–3 ರವರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅರ್ಹ ಸಂಸ್ಥೆಗಳಿಂದ ಅಲ್ಪಾವಧಿ ಇ–ಟೆಂಡರ್ **ದಿನಾಂಕ: 01.04.2021 ರಿಂದ 31.03.2022** ರ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಬಗ್ಗೆ.
(1) ಸಿಬ್ಬಂದಿಗಳ ವಿವರ: ಡಾಟಾ ಎಂಟ್ರಿ ಆಪರೇಟರ್–2 ವಾಹನ ಚಾಲಕ–1 ಡಿ ದರ್ಜೆ ನೌಕರರು–3 (2) ಇ–ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕ : 31.03.2021 ರ ಸಂಜೆ 5.30 ಗಂಟೆಗೆ** (3) ಇ–ಟೆಂಡರ್ ತೆರೆಯುವ **ದಿನಾಂಕ: 01.04.2021ರ ಸಂಜೆ 4.00 ಗಂಟೆಗೆ** (4) ಇ.ಎಂ.ಡಿ. ಮೊತ್ತ : ಶೇ 2.5% ಮೊತ್ತದಲ್ಲಿ ಒಟ್ಟು ಮೊತ್ತಕ್ಕೆ **ರೂ.33000/–** (5) ಇ–ಟೆಂಡರ್ ಅನುಷ್ಠಾನ : ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ, ಶಿಡ್ಲಘಟ್ಟ ರವರ ನಿರ್ಣಯದಂತೆ.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯಿತಿ, ಶಿಡ್ಲಘಟ್ಟ
ವಾಸಾಸಂಇ/ಚಿಕ್ಕಬಳ್ಳಾಪುರ/ಶಿರಡಿ ಸಾಯಿ/393/2020–21
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

The Karnataka State Cricket Association
M.Chinaswamy Stadium, Cubbon Road, Bangalore-560 001.

REGISTRATION & TENDER NOTIFICATION

The KSCA organises several IPL/International cricket matches annually at M.Chinnaswamy Stadium, Bangalore. The KSCA also has regular requirement of buses, cars etc. for transportation of teams, housekeeping services, security services and temporary infrastructure requirements at the stadium during the year April-March 2021-2022 as follows:
Reputed registered Manufacturers/ Vendors/ Suppliers/ Agencies having statutory compliances including GST registration (regular returns filed) are invited to register and submit their tender bids for Annual Rate Contracts for the financial year 2021-22.
1)Housekeeping services (2) Temporary Infrastructure including hiring of furniture (3) Logistics services including transportation (4) DG sets and Flood light tower manning (5) Public Address System, (6) Private Security (7) Gate control including bouncers and hostesses (8) Catering services (9) Licence fee for telecom services (10) Ticketing agents (11) Event Management (12) On ground entertainment (13) Setting up Hospitality stands (14) Insurance (15) Video Score Board (16) In-stadia Advertising and (17) other allied services connected to the hosting of the cricket matches.
Agency/vendor representative may visit the stadium to register their entity and to collect details and tender documents from the CFO's office at KSCA, M.Chinnaswamy stadium and submit their sealed quotation on or before 2:00 PM on Friday, 2nd April, 2021.
Sd/
Hon. Secretary-KSCA

₹2 ಲಕ್ಷ ಸುಪಾರಿ ಕೊಟ್ಟು ಪತಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 2 ಲಕ್ಷ ಸುಪಾರಿ ನೀಡಿ ತನ್ನ ಪತಿಯನ್ನೇ ಹತ್ಯೆ ಮಾಡಿಸಿದ್ದ ಪತ್ನಿ ಸೇರಿ 10 ಮಂದಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗೌಸಿಯಾನಗರದ ನಿವಾಸಿ ಮೊಹಮ್ಮದ್ ಶಫಿ ಕೊಲೆಯಾದವರು. ಮಾ. 19ರಂದು ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಹತ್ಯೆ ಮಾಡಲಾಗಿತ್ತು. ಅವರ ಪತ್ನಿ ತಸ್ಲೀಂಭಾನು, ಆಕೆಯ ಸ್ನೇಹಿತ ಅಪ್ಸರ್ ಖಾನ್, ಅಪರಾಧ ಹಿನ್ನೆಲೆಯುಳ್ಳ ತಬ್ರೇಜ್ ಪಾಷಾ, ವಸೀಂ ಹಾಗೂ ಸಹಚರರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತರಲ್ಲಿ ಒಬ್ಬ ಬಾಲಕ. ಸುಪಾರಿ ಪಡೆದಿದ್ದ ಹಣ ಹಾಗೂ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಮದುವೆಯಲ್ಲಿ ಪರಿಚಯವಾಗಿ ಸಲುಗೆ: 'ಮೊಹಮ್ಮದ್ ಶಫಿ ಹಾಗೂ ತಸ್ಲೀಂಭಾನು ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿ ಗೌಸಿಯಾನಗರದಲ್ಲಿ ವಾಸವಿದ್ದರು. ಪರಿಚಯಸ್ಥರೊಬ್ಬರ ಮದುವೆ ಹೊಗಿದ್ದಾಗ ತಸ್ಲೀಂಭಾನು ಅವರಿಗೆ ರಿಯಲ್ ಎಸ್ಟೇಟ್ ಉದ್ಯಮಿ ಅಪ್ಸರ್ ಖಾನ್ ಪರಿಚಯವಾಗಿತ್ತು. ಆ ನಂತರ ಸ್ನೇಹ ಏರ್ಪಟ್ಟು, ಸಲುಗೆಯೂ ಬೆಳೆದಿತ್ತು' ಎಂದು ಪೊಲೀಸರು ಹೇಳಿದರು.

ತಸ್ಲೀಂಭಾನು

ಅಪ್ಸರ್‌ಖಾನ್

'ಪಾಲುದಾರಿಕೆಯಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡೋಣವೆಂದು ಹೇಳಿ ಆರೋಪಿ ಅಪ್ಸರ್‌ಖಾನ್, ಮೊಹಮ್ಮದ್ ಶಫಿ ಅವರಿಗೆ ಹತ್ತಿರವಾಗಿದ್ದ. ಆ ನಂತರವೂ ತಸ್ಲೀಂಭಾನು ಜೊತೆ ಸಲುಗೆ ಮುಂದುವರಿಸಿದ್ದ. ಆಗಾಗ ಮನೆಗೂ ಹೋಗಿ ಬರುತ್ತಿದ್ದ' ಎಂದೂ ತಿಳಿಸಿದರು.

ಮಾಟಮಂತ್ರ ಯತ್ನ ವಿಫಲ: 'ತಮ್ಮ ನಡುವಿನ ಸ್ನೇಹಕ್ಕೆ ಪತಿ ಅಡ್ಡಿಯಾಗುತ್ತಾರೆಂದು ತಸ್ಲೀಂಭಾನು, ಅಪ್ಸರ್ ಖಾನ್‌ಗೆ ಹೇಳಿದ್ದಳು. ಬಳಿಕ ಇಬ್ಬರು ಸೇರಿಕೊಂಡು, ಮೊಹಮ್ಮದ್ ಶಫಿ ಸಾಯಿಸಲು ಮಾಟ ಮಂತ್ರ ಮಾಡಿಸಿದ್ದರು. ಆದರೆ, ಅದು ವಿಫಲವಾಗಿತ್ತು. ಅವಾಗಲೇ ಸುಪಾರಿ ಕೊಟ್ಟು ಕೊಲೆ ಮಾಡಿಸಲು ಮುಂದಾಗಿದ್ದರು' ಎಂದು ಪೊಲೀಸರು ಹೇಳಿದರು.

'ಅಪರಾಧ ಹಿನ್ನೆಲೆಯುಳ್ಳ ತಬ್ರೇಜ್ ಪಾಷಾ ಹಾಗೂ ವಸೀಂನನ್ನು ಸಂಪರ್ಕಿಸಿ, ₹2 ಲಕ್ಷ ಸುಪಾರಿ ಹಾಗೂ ಪ್ರಕರಣದ ಖರ್ಚು ನೋಡಿಕೊಳ್ಳುವುದಾಗಿ ಹೇಳಿದ್ದರು. ಸಂಚಿನಂತೆ ಅಪ್ಸರ್‌ಖಾನ್, ಮಾ. 19ರಂದು ಮೊಹಮ್ಮದ್ ಶಫಿ ಅವರಿಗೆ ಕರೆ ಮಾಡಿ ರಿಯಲ್ ಎಸ್ಟೇಟ್ ವ್ಯವಹಾರ ಸಂಬಂಧ ಮಾತನಾಡಬೇಕೆಂದು ಹೇಳಿ ನ್ಯೂ ಗುರಪ್ಪನಪಾಳ್ಯದ ಟಿಂಬರ್ ಗಲ್ಲಿ ಬಳಿ ಕರೆಸಿಕೊಂಡಿದ್ದ. ಅದೇ ಸಂದರ್ಭದಲ್ಲೇ ಇತರೆ ಆರೋಪಿಗಳು, ಮೊಹಮ್ಮದ್ ಶಫಿ ಮೇಲೆ ದಾಳಿ ಮಾಡಿ ಮಾರಕಾಸ್ತ್ರಗಳಿಂದ ಹೊಡೆದು ಕೊಂದು ಪರಾರಿಯಾಗಿದ್ದರು' ಎಂದೂ ತಿಳಿಸಿದರು.

'ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದಾಗಲೇ, ಪರಿಚಯಸ್ಥರೇ ಕೃತ್ಯ ಎಸಗಿದ್ದು ಗೊತ್ತಾಯಿತು. ಅಪ್ಸರ್‌ಖಾನ್, ತಸ್ಲೀಂಭಾನುಗೆ ಹಲವು ಉಡುಗೊರೆ ನೀಡಿದ್ದ. ಆತನ ಮೇಲೆಯೇ ಅನುಮಾನವಿತ್ತು. ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ. ಉಳಿದವರೂ ಸಿಕ್ಕಿಬಿದ್ದರು' ಎಂದೂ ಹೇಳಿದರು.

ರೈತ ಅನುವುಗಾರರ ರದ್ಧತಿಗೆ ಆಕ್ರೋಶ

ಬೆಂಗಳೂರು: ಸುಮಾರು 12 ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರೈತ ಅನುವುಗಾರರನ್ನು ಕೈಬಿಟ್ಟಿರುವ ರಾಜ್ಯ ಸರ್ಕಾರದ ನಡೆಯನ್ನು ರೈತ ಅನುವುಗಾರರ ಸಂಘ ಖಂಡಿಸಿದೆ.

ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಭೈರೇಗೌಡ '2008-09ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪನವರು ಭೂ ಚೇತನ ಎಂಬ ರೈತ ಸ್ನೇಹಿ ಯೋಜನೆ ಜಾರಿಗೊಳಿಸಿದ್ದರು. ಇದರ ಅಡಿಯಲ್ಲಿ ಒಟ್ಟು 9,657 ಮಂದಿಯನ್ನು ಅನುವುಗಾರರನ್ನಾಗಿ ನೇಮಿಸಲಾಗಿತ್ತು. ₹5,000 ಗೌರವ ಧನವನ್ನಷ್ಟೇ ನೀಡಲಾಗುತ್ತಿತ್ತು. ಆದರೆ, ಈಗ ಅವರನ್ನು ಏಕಾಏಕಿ ಕೈಬಿಟ್ಟು ಕೃಷಿ ಡಿಪ್ಲೊಮಾ ಮಾಡಿದವರನ್ನು ಈ ಹುದ್ದೆಗೆ ನೇಮಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಅನೇಕರು ಬೀದಿಗೆ ಬೀಳುವಂತಾಗಿದೆ. ಹೀಗಾಗಿ ಸರ್ಕಾರ ಕೂಡಲೇ ತನ್ನ ನಿರ್ಧಾರ ಹಿಂದಕ್ಕೆ ಪಡೆಯಬೇಕು' ಎಂದು ಒತ್ತಾಯಿಸಿದರು.

ರೈಲಿನಲ್ಲಿ ಗಾಂಜಾ ಸಾಗಣೆ; 'ಮ್ಯಾಂಗೊ' ಹೆಸರಿನಲ್ಲಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದಿಂದ ರೈಲಿನಲ್ಲಿ ಗಾಂಜಾ ತರಿಸಿಕೊಂಡು 'ಮ್ಯಾಂಗೊ' ಕೋಡ್ ಮೂಲಕ ಮಾರಾಟ ಮಾಡುತ್ತಿದ್ದ ಜಾಲವನ್ನು ಶ್ರೀರಾಮಪುರ ಠಾಣೆ ಪೊಲೀಸರು ಭೇದಿಸಿದ್ದಾರೆ.

'ಗಾಂಜಾ ಮಾರಾಟದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಮಾ. 21ರಂದು ಕಾರ್ಯಾಚರಣೆ ನಡೆಸಲಾಯಿತು. ಶ್ರೀರಾಮಪುರದ ಸತೀಶ್ ಅಲಿಯಾಸ್ ಕೋಳಿಬಾಡಿ (28) ಹಾಗೂ ವಸಂತ (24) ಎಂಬುವರನ್ನು ಬಂಧಿಸಲಾಗಿದೆ. ಅವರಿಂದ 45.10 ಕೆ.ಜಿ ಗಾಂಜಾ ಹಾಗೂ ಸಾಗಣೆಗೆ ಬಳಸಿದ್ದ ಆಟೊ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗಾಂಜಾ ಸಾಗಣೆ, ಸುಲಿಗೆ ಹಾಗೂ ಕೊಲೆ ಯತ್ನ ಪ್ರಕರಣದಲ್ಲಿ ಆರೋಪಿಯಾಗಿದ್ದ ಸತೀಶ್, ಇತ್ತೀಚಿನ ದಿನಗಳಲ್ಲಿ ಆಟೊ ಚಾಲಕನಾಗಿದ್ದ. ಆಂಧ್ರಪ್ರದೇಶದ ವ್ಯಕ್ತಿಯೊಬ್ಬನ ಜೊತೆ ಒಡನಾಟ ಹೊಂದಿದ್ದ ಆತ, ಅವರ ಮೂಲಕವೇ ಗಾಂಜಾ ಖರೀದಿ ಮಾಡುತ್ತಿದ್ದ.'

ಬಂಧಿತ ಆರೋಪಿಗಳು ಹಾಗೂ ಅವರನ್ನು ಬಂಧಿಸಿದ ಶ್ರೀರಾಮಪುರ ಠಾಣೆ ಪೊಲೀಸರು

'ವ್ಯಕ್ತಿಯ ಪರಿಚಯಸ್ಥನೇ ರೈಲಿನ ಮೂಲಕ ಗಾಂಜಾವನ್ನು ಬೆಂಗಳೂರಿಗೆ ತರುತ್ತಿದ್ದ. ನಿಲ್ದಾಣದಲ್ಲಿ ಗಾಂಜಾ ಪೊಟ್ಟಣ ಪಡೆಯುತ್ತಿದ್ದ ಸತೀಶ್ ಹಾಗೂ ವಸಂತ, ಆಟೊದಲ್ಲಿಟ್ಟುಕೊಂಡು ಹಲವರಿಗೆ ಹಂಚಿಕೆ ಮಾಡುತ್ತಿದ್ದರು. ಅವರ ಮೂಲಕವೇ ಗ್ರಾಹಕರಿಗೆ ಗಾಂಜಾ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದರು' ಎಂದೂ ಪೊಲೀಸರು ತಿಳಿಸಿದರು.

'ಯಾರಿಗೂ ಅನುಮಾನ ಬರಬಾರದೆಂದು ಆರೋಪಿಗಳು, 'ಮ್ಯಾಂಗೊ' ಕೋಡ್ ಬಳಸಿ ಗಾಂಜಾ ಮಾರುತ್ತಿದ್ದರು. ಗ್ರಾಹಕರು, 'ಮ್ಯಾಂಗೊ ಕೊಡಿ' ಎಂದೇ ಹೇಳಿ ಗಾಂಜಾ ಖರೀದಿ ಮಾಡುತ್ತಿದ್ದರು' ಎಂದೂ ಹೇಳಿದರು.

ಡ್ರಗ್ಸ್ ಪ್ರಕರಣ; ತೆಲುಗು ನಟನ ವಿಚಾರಣೆ

ಬೆಂಗಳೂರು: ₹ 4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದ ಪ್ರಕರಣ ಸಂಬಂಧ ತನಿಖೆ ಚುರುಕುಗೊಳಿಸಿರುವ ಗೋವಿಂದಪುರ ಠಾಣೆ ಪೊಲೀಸರು, ತೆಲುಗು ಸಿನಿಮಾ ನಟ ತನೀಶ್ ಅವರನ್ನು ವಿಚಾರಣೆ ನಡೆಸಿ ಹೇಳಿಕೆ ಪಡೆದಿದ್ದಾರೆ.

ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಸಂಬಂಧ ನೈಜೀರಿಯಾ ಪ್ರಜೆಗಳು ಸೇರಿ ಆರು ಮಂದಿಯನ್ನು ಬಂಧಿಸಿದ್ದ ಪೊಲೀಸರು, ಇತ್ತೀಚೆಗಷ್ಟೇ ಸಿನಿಮಾ ನಿರ್ಮಾಪಕ ಶಂಕರಗೌಡ ಅವರನ್ನೂ ಸೆರೆ ಹಿಡಿದಿದ್ದಾರೆ. ಇದೀಗ ತನೀಶ್ ಅವರನ್ನು ವಿಚಾರಣೆ ನಡೆಸಿ ಬಿಟ್ಟು ಕಳುಹಿಸಿದ್ದಾರೆ.

'ನನಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಸಿನಿಮಾವೊಂದರ ನಿರ್ಮಾಣ ಸಂಬಂಧ ಮಾತುಕತೆ ನಡೆಸಲು ನಿರ್ಮಾಪಕ ಶಂಕರಗೌಡ ಕಚೇರಿಗೆ ಬಂದು ಹೋಗಿದ್ದೆ. ಒಮ್ಮೆ ಮಾತ್ರ ಪಾರ್ಟಿಯಲ್ಲಿ ಪಾಲ್ಗೊಂಡಿದ್ದೆ. ಆದರೆ, ಡ್ರಗ್ಸ್ ಸೇವಿಸಿಲ್ಲ. ಶಂಕರಗೌಡ ಬಂಧನವಾಗುತ್ತಿದ್ದಂತೆ ಸಿನಿಮಾ ನಿರ್ಮಾಣವನ್ನೂ ಕೈಬಿಟ್ಟಿದ್ದೇನೆ' ಎಂದು ವಿಚಾರಣೆಯಲ್ಲಿ ತನೀಶ್ ಹೇಳಿರುವುದಾಗಿ ಗೊತ್ತಾಗಿದೆ.

'ಹೈದರಾಬಾದ್‌ನಲ್ಲಿ ಶಂಕರಗೌಡ ಪರಿಚಯವಾಗಿತ್ತು. ಕನ್ನಡ ಸಿನಿಮಾ ಮಾಡುವುದಾಗಿ ಹೇಳಿದ್ದ ಅವರು, ನನಗೂ ನಟಿಸಲು ಅವಕಾಶ ನೀಡುವುದಾಗಿ ತಿಳಿಸಿದ್ದರು. ಅದನ್ನು ನಂಬಿ ಅವರ ಜೊತೆ ಮಾತನಾಡುತ್ತಿದ್ದೆ' ಎಂದೂ ಅವರೂ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ತನೀಶ್ ಅವರ ಲಿಖಿತ ಹೇಳಿಕೆ ದಾಖಲಿಸಿಕೊಂಡಿರುವ ಪೊಲೀಸರು, ಅಗತ್ಯಬಿದ್ದರೆ ಪುನಃ ವಿಚಾರಣೆಗೆ ಕರೆಯಲಾಗುವುದೆಂದು ಹೇಳಿ ಕಳುಹಿಸಿದ್ದಾರೆ.

ಮಣಿಕಟ್ಟು ಗಾಯಕ್ಕೆ ಅತ್ಯಾಧುನಿಕ ಶಸ್ತ್ರಚಿಕಿತ್ಸೆ

ಬೆಂಗಳೂರು: ಕೈ ಮಣಿಕಟ್ಟು ಗಾಯದ ಸಮಸ್ಯೆ ಎದುರಿಸುತ್ತಿದ್ದ 30 ವರ್ಷದ ಮಹಿಳೆಗೆ ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯ ಫೋರ್ಟಿಸ್ ಆಸ್ಪತ್ರೆ ವೈದ್ಯರು ಅತ್ಯಾಧುನಿಕ ನ್ಯಾನೋಸ್ಕೋಪ್ ತಂತ್ರಜ್ಞಾನದ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಆಸ್ಪತ್ರೆಯ ಡಾ. ರಘು ನಾಗರಾಜ್ ಈ ಶಸಚಿಕಿತ್ಸೆಯ ನೇತೃತ್ವ ವಹಿಸಿದ್ದರು. ನ್ಯಾನೋಸ್ಕೋಪ್ ಚಿಕಿತ್ಸಾ ವಿಧಾನದ ಮೂಲಕ ದೇಹದಲ್ಲಿನ ಕೀಲುಗಳಿಗೆ ಯಾವುದೇ ಹಾನಿ ಆಗದ ರೀತಿಯಲ್ಲಿ ಚಿಕಿತ್ಸೆ ನೀಡಬಹುದು. ಆಯ ತಪ್ಪಿ ಕೆಳಗೆ ಬಿದ್ದಿದ್ದರಿಂದ ರೋಗಿಯ ಮಣಿಕಟ್ಟಿನ ಎಲುಬಿಗೆ ಗಾಯವಾಗಿತ್ತು. ನ್ಯಾನೋ-ಓಪರೇಟೀವ್ ಆರ್ಥ್ರೋಸ್ಕೋಪಿ ವಿಧಾನದಲ್ಲಿ ಕೀಲು ಭಾಗವನ್ನು ಕತ್ತರಿಸದೆಯೇ ರೋಗಿಗೆ ಚಿಕಿತ್ಸೆ ನೀಡಲಾಗುವುದುಎಂದು ಆಸ್ಪತ್ರೆ ತಿಳಿಸಿದೆ.

ಕದ್ದ ಆಭರಣ ಮಾರಿ ಐಷಾರಾಮಿ ಜೀವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪಿ ಸೈಯದ್ ರಿಯಾಜ್ ಪಾಷಾ ಅಲಿಯಾಸ್ ಬಾಬಿ ಡಿಯೋಲ್ (46) ಎಂಬಾತನನ್ನು ತಿಲಕನಗರ ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಜಿಲ್ಲೆಯ ತಿಪಟೂರು ಗಾಂಧಿನಗರದ ನಿವಾಸಿ ಸೈಯದ್ ರಿಯಾಜ್ ಪಾಷಾ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನಿಂದ ₹ 13 ಲಕ್ಷ ಮೌಲ್ಯ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಂಒಬಿ (ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿ) ಆಗಿದ್ದ ರಿಯಾಜ್‌ಪಾಷಾ, ಮನೆಯ ಬಾಗಿಲು ಮುರಿದು ಹಾಗೂ ಬಾಗಿಲು ತೆರೆದಿರುತ್ತಿದ್ದ ಮನೆಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ. ತಿಲಕನಗರ, ಮೈಕೋಲೇಔಟ್, ಸುದ್ದಗುಂಟೆಪಾಳ್ಯ ಸೇರಿದಂತೆ ಹಲವು ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ಎಸಗಿದ್ದ.'

'ಕದ್ದ ಆಭರಣಗಳನ್ನು ಪರಿಚಯಸ್ಥರು ಹಾಗೂ ಹಲವರಿಗೆ ಮಾರಾಟ ಮಾಡುತ್ತಿದ್ದ ಆರೋಪಿ, ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ' ಎಂದೂ ಪೊಲೀಸರು ತಿಳಿಸಿದರು.

ಬಂಧಿತ ಆರೋಪಿ ಹಾಗೂ ಜಪ್ತಿ ಮಾಡಲಾದ ಚಿನ್ನಾಭರಣ

ನ್ಯಾಯಮೂರ್ತಿಗಳ ಪ್ರಮಾಣ ವಚನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಮತ್ತು ನ್ಯಾಯಮೂರ್ತಿ ಖಾಜಿ ಜೈಬುನ್ನಿಸಾ ಮೊಹಿಯುದ್ದೀನ್ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ಪ್ರಮಾಣ ವಚನ ಬೋಧಿಸಿದರು. ಇದರೊಂದಿಗೆ ಹೈಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ 49ಕ್ಕೆ ಏರಿದೆ. ಮಂಜೂರಾದ ಸಂಖ್ಯೆ 62 ಇದೆ.

ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರು 1993ರ ಅಕ್ಟೋಬರ್‌ನಲ್ಲಿ ಮುನ್ಸಿಫ್ ಆಗಿ ನ್ಯಾಯಾಂಗ ಸೇವೆಗೆ ಸೇರಿದರು. ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಆಗಿ ಕಾರ್ಯನಿರ್ವಹಿಸಿದ್ದಾರೆ. ನ್ಯಾಯಮೂರ್ತಿ ಖಾಜಿ ಜೈಬುನ್ನಿಸಾ ಮೊಹಿಯುದ್ದೀನ್ ಅವರು 1993ರ ಅಕ್ಟೋಬರ್‌ನಲ್ಲಿ ಮುನ್ಸಿಫ್ ಆಗಿ ನ್ಯಾಯಾಂಗ ಸೇವೆ ಸೇರಿದರು. ರಿಜಿಸ್ಟ್ರಾರ್ (ವಿಜಿಲೆನ್ಸ್) ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಚಿತ್ರಾವಳಿ

ರಾಜರಾಜೇಶ್ವರಿ ನಗರದ ರಾಜೇಶ್ವರಿ ವಿದ್ಯಾಶಾಲೆಯಲ್ಲಿ ನಿರ್ಮಿಸಿರುವ ನೂತನ ಸೌರ ವಿದ್ಯುತ್ ಫಲಕಗಳ ಉದ್ಘಾಟನೆಯನ್ನು ಶಿಕ್ಷಣ ಸಚಿವ ಎಸ್‌.ಸುರೇಶ್ ಕುಮಾರ್ ನೆರವೇರಿಸಿದರು. ಕೈಲಾಸ ಆಶ್ರಮದ ಜಯೇಂದ್ರಪುರಿ ಸ್ವಾಮೀಜಿ, ಸಂಸ್ಥೆಯ ಕಾರ್ಯದರ್ಶಿ ಟಿ.ಆರ್‌.ಮೋಹನ್, ಬೆಂಗಳೂರು ನಗರ ಡಯಟ್ ಪ್ರಾಂಶುಪಾಲ ಹಸನ್ ಮೊಹಿದ್ದೀನ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಕೆ.ಪ್ರಕಾಶ್ ಮತ್ತು ಹಯಗ್ರೀವಾಚಾರ್ ಇದ್ದರು.

ನಗರದ ಜ್ಯೋತಿನಿವಾಸ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಟಿ.ಎನ್‌.ವಾಸುದೇವ ಮೂರ್ತಿ ಹಾಗೂ ಗೂಳಪ್ಪ ವಕ್ಕುಂದ ಅನುವಾದಿಸಿರುವ ಖಲೀಲ್ ಗಿಬ್ರಾನ್ ಅವರ 'ಮಾನವ ಪುತ್ರ ಯೇಸು' ಕೃತಿಯನ್ನು ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾಡೊ ಗುರುವಾರ ಬಿಡುಗಡೆ ಮಾಡಿದರು. ಸಿರಿಲ್ ವಿಕ್ಟರ್ ಜೋಸೆಫ್, ಜ್ಯೋತಿ ನಿವಾಸ ಕಾಲೇಜಿನ ಪ್ರಾಂಶುಪಾಲೆ ಸಿ.ಎಸ್‌. ಎಲಿಜಬೆತ್ ಮತ್ತು ಕಾಲೇಜಿನ ಸಿಬ್ಬಂದಿ ಇದ್ದಾರೆ.

ಡಿ.ಆರ್. ನಾಗರಾಜ್ 67 ವಿಚಾರ ಸಂಕಿರಣ 28ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಆರ್. ನಾಗರಾಜ್ 67 ವಿಚಾರ ಸಂಕಿರಣ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಸಂಸ ಥಿಯೇಟರ್ ಭಾನುವಾರ (ಮಾ.28) ಬೆಳಿಗ್ಗೆ 11 ಗಂಟೆಗೆ ಡಾ.ಬಿ. ಆರ್. ಅಂಬೇಡ್ಕರ್ ರಸ್ತೆಯಲ್ಲಿರುವ ಸರ್ಕಾರಿ ಕಲಾ ಕಾಲೇಜಿನ ಡಾ.ಬಿ. ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ವಿಚಾರ ಸಂಕಿರಣವನ್ನು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಉದ್ಘಾಟಿಸಲಿದ್ದಾರೆ. ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೋಡಸದ ರಾಜಶೇಖರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಾಹಿತಿ ಶೂದ್ರ ಶ್ರೀನಿವಾಸ್ ಹಾಗೂ ಪ್ರಾಧ್ಯಾಪಕ ಎಚ್. ಹನುಮಂತರಾಯಪ್ಪ ಭಾಗವಹಿಸಲಿದ್ದಾರೆ.

'ಅವೈದಿಕ ಚಿಂತನೆಗಳು: ಡಿ.ಆರ್. ನಾಗರಾಜ್ ಮುನ್ನೋಟ' ವಿಷಯದ ಕುರಿತು ಉಪನ್ಯಾಸಕ ರೇಣುಕಾರಾಧ್ಯ ಎಚ್.ಎಸ್. ಹಾಗೂ ಪ್ರಾಧ್ಯಾಪಕ ಕುಮಾರಸ್ವಾಮಿ ಬೆಜ್ಜಿಹಳ್ಳಿ ಮಾತನಾಡಲಿದ್ದಾರೆ. ವಿಮರ್ಶಕ ಸುರೇಶ ನಾಗಲಮಡಿಕೆ ಅಧ್ಯಕ್ಷತೆ ವಹಿಸಲಿದ್ದಾರೆ.

'ದಲಿತ ಚಳುವಳಿಗೆ ಡಿ.ಆರ್. ಒಳನೋಟಗಳು' ವಿಷಯವನ್ನು ಸಂಶೋಧಕ ನರಸಿಂಹಮೂರ್ತಿ ವಿ.ಎಲ್. ಮಂಡಿಸಲಿದ್ದಾರೆ. ನರಸಿಂಹಮೂರ್ತಿ ಹಳೇಹಟ್ಟಿ ಪ್ರತಿಕ್ರಿಯಿಸಲಿದ್ದಾರೆ.

ಉಪನ್ಯಾಸಕ ರವಿಕುಮಾರ್ ನೀಹ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 6 ಗಂಟೆಗೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

ಶಿವರಾಜ್ ಬ್ಯಾಡರಹಳ್ಳಿ ಅವರು ಸಂಪಾದಿಸಿರುವ 'ಅನನ್ಯ ಪ್ರತಿಭೆಯ ಪರಿ' ವಿಮರ್ಶಾ ಬರಹಗಳ ಸಂಕಲನವನ್ನು ಕಿರಂ ಪ್ರಕಾಶನ ಹೊರ ತಂದಿದೆ. ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಜಾಫೆಟ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕವಿ ಸಿದ್ಧಲಿಂಗಯ್ಯ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಕೆ.ಆರ್. ರಮೇಶ್ ಕುಮಾರ್ ಪುಸ್ತಕ ಬಿಡುಗಡೆ ಮಾಡಲಿದ್ದಾರೆ.

ಪುಸ್ತಕದ ಕುರಿತು ಲೇಖಕ ಅಗ್ರಹಾರ ಕೃಷ್ಣಮೂರ್ತಿ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೇಖಕ ಕಾಳೇಗೌಡ ನಾಗವಾರ, ವಿಮರ್ಶಕಿ ಎಂ.ಎಸ್. ಆಶಾದೇವಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ರಾಮನಗರ ಜಿಲ್ಲೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ರಾಮನಗರ – 562 159.
ದೂರವಾಣಿ : 080–2727 3094. ಇ–ಮೇಲ್ : rchoramanagaram@gmail.com
ಸಂಖ್ಯೆ : ಎನ್‌ಹೆಚ್‌ಎಂ/ಎನ್‌ಓಹೆಚ್‌ಪಿ/60/2020–21 ದಿನಾಂಕ : 20–03–2021

ದಂತ ಚಿಕಿತ್ಸಾ ಸಲಕರಣೆಗಳ ಖರೀದಿಗಾಗಿ ಅಲ್ಪಾವಧಿ ಟೆಂಡರ್ ಅಧಿಸೂಚನೆ

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಇಲ್ಲಿಗೆ ಎನ್.ಓ.ಹೆಚ್.ಪಿ. ಕಾರ್ಯಕ್ರಮದ ದಂತ ಚಿಕಿತ್ಸಾ ವಿಭಾಗಕ್ಕೆ ಬೇಕಾದ ಸಲಕರಣೆಗಳ ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ **(KTPP)** 1999 ನಿಯಮಗಳು 2000 ರ ಟೆಂಡರ್ ಮೂಲಕ ಪಡೆಯುವ ಬಗ್ಗೆ.
(1) ಟೆಂಡರ್ ಪ್ರಕಟಣೆ ದಿನಾಂಕ : ಸಂಖ್ಯೆ : ಎನ್‌ಹೆಚ್‌ಎಂ/ಎನ್‌ಓಹೆಚ್‌ಪಿ/60/2020–21 ದಿನಾಂಕ : 20–03–2021. (2) ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಜಿಲ್ಲಾ ಆ.ಕು.ಕ. ಸಂಘದ ಹೆಸರಿನಲ್ಲಿ ರೂ. 500/– ಗಳ ಡಿ.ಡಿ. ಮುಖಾಂತರ ಸಲ್ಲಿಸಿ ಪಡೆಯುವುದು. ದಿನಾಂಕ : 22–03–2021 ರಿಂದ ದಿನಾಂಕ : 27–03–2021 ರವರೆಗೆ. (3) ಟೆಂಡರ್ ಫಾರಂಗಳನ್ನು ಸಲ್ಲಿಸಲು ಪ್ರಾರಂಭಿಸುವ ದಿನಾಂಕ : 22–03–2021. (4) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 27–03–2021 ರ ಸಂಜೆ 4.00 ಗಂಟೆಗೆ. (5) ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ಜಿಲ್ಲಾ ಅ.ಕು.ಕ. ಅಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ ದಿನಾಂಕ : 29–03–2021 ರ ಬೆಳಿಗ್ಗೆ 11.00 ಗಂಟೆಗೆ. (6) ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : ಜಿಲ್ಲಾ ಅ.ಕು.ಕ. ಅಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ ದಿನಾಂಕ : 30–03–2021 ರ ಬೆಳಿಗ್ಗೆ 11.00 ಗಂಟೆಗೆ. (7) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ : ರೂ. 12,500/–. (8) ಟೆಂಡರ್ ಅಂದಾಜು ಮೌಲ್ಯ : ರೂ. 5,00,000/–. (9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ : ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
ರಾಮನಗರ ಜಿಲ್ಲೆ. ರಾಮನಗರ.
ಡಿಐಪಿಆರ್/ರಾಮನಗರ/546/ಮಣಿಪಾಲ್/20–21

ಸಾರ್ವಜನಿಕ ಸೂಚನೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಖರೀದಿಸಲಿಚ್ಚಿಸಿರುವ ಆವರಣ ಅಂದಾಜು ವಿಸ್ತೀರ್ಣ 32,774 ಚದರ ಅಡಿ ವಿಸ್ತೀರ್ಣದಲ್ಲಿರುವ 'ಮೈಂಡ್‌ಕಾಂಪ್ ಟೆಕ್ ಪಾರ್ಕ್' ಎಂದು ಕರೆಯಲ್ಪಡುವ ಅಭಿವೃದ್ಧಿಯ ಭಾಗವಾಗಿರುವ 'ಕಚೇರಿ 1' ("ಆವರಣ")ನ ಸಂಪೂರ್ಣ ನೆಲಮಹಡಿಯಾಗಿರುವ ದೊಡ್ಡದಾಗಿ ನಿರ್ಮಿಸಿದ ಪ್ರದೇಶದ ಆಸ್ತಿ ಹೊಂದಿರುವ ಹೊಸ ಸಂ.532, ಇಪಿಐಪಿ 2ನೇ ಹಂತ, ಕೈಗಾರಿಕಾ ಪ್ರದೇಶ, ಪ್ಲಾಟ್ ಸಂ. 149–ಎ (ಸರ್ವೆ ಸಂ. 156–ಹೂಡಿ ಗ್ರಾಮದ ಭಾಗ, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ರೂಪುಗೊಂಡಿದೆ) ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶ, ಹೋಬಳಿ ಕೃಷ್ಣರಾಜಪುರಂ, ಬೆಂಗಳೂರು ತಾಲ್ಲೂಕು ಪೂರ್ವ ("ಬೃಹತ್ ಭೂಮಿ"), ಅದರೊಂದಿಗೆ 60 ಕಾರುಗಳನ್ನು ನಿಲ್ಲಿಸುವಷ್ಟು ಜಾಗಗಳು ಮತ್ತು ಪ್ರಮಾಣುಗುಣವಾಗಿ ಅವಿಭಾಜಿತ ಪಾಲಿನಲ್ಲಿರುವ ಬೃಹತ್ ಭೂಮಿ (ಆವರಣದಲ್ಲಿರುವ ಪ್ರಮಾಣುಗುಣವಾದ ಅವಿಭಾಜಿತ ಪಾಲಿನಲ್ಲಿರುವ ಬೃಹತ್ ಭೂಮಿ ಮತ್ತು ಕಾರುಗಳನ್ನು ನಿಲ್ಲಿಸುವ ಸ್ಥಳಗಳು ಜೊತೆಗೆ ಇನ್ನು ಮುಂದೆ 'ಆಸ್ತಿ' ಎಂದು ಉಲ್ಲೇಖಿಸಲಾಗುತ್ತದೆ) ಮೈಂಡ್ ಕಾಂಪ್ ಟೆಕ್ ಪಾರ್ಕ್ ಪ್ರೈವೇಟ್ ಲಿ., ನಿಂದ ಹೊಂದಿರುವ ನೋಂದಾಯಿತ ಕಚೇರಿ ಸಂ. 3, ಸಾಲಾರ್‌ಪುರಿಯಾ ವಿಂಡ್ಸರ್, 4ನೇ ಮಹಡಿ, ಅಲಸೂರು ರಸ್ತೆ, ಬೆಂಗಳೂರು–560042.
ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧವಾಗಿ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಹಿತಾಸಕ್ತಿಯನ್ನು ಯಾವುದೇ ವ್ಯಕ್ತಿಗಳು ಹೊಂದಿದ್ದರೆ ಅಥವಾ ಯಾವುದೇ ರೀತಿಯ ಕ್ರಯ, ಕರಾರು, ಅನುಭವ, ಪಾಲುಗಾರಿಕೆ, ಆಧಾರ, ಭೋಗ್ಯ, ಅದಲು ಬದಲು, ವ್ಯವಸ್ಥಾ ಪತ್ರ, ಒಪ್ಪಂದ, ದಾನ, ಕೌಟುಂಬಿಕ ವ್ಯವಸ್ಥೆ, ಅನುಭೋಗದ ಹಕ್ಕು, ಉತ್ತರಾಧಿಕಾರತ್ವ ಅಭಿವೃದ್ಧಿಯ ಹಕ್ಕು, ಋಣ ಇವುಗಳ ಆಧಾರದ ಮೇಲೆ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಹಕ್ಕು/ಹಿತಾಸಕ್ತಿ/ಕ್ಲೇಮು ಹೊಂದಿದ್ದರೆ ಅಥವಾ ಮೇಲಿನ ವ್ಯವಹಾರದ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 7 ದಿನಗಳ ಒಳಗೆ ಬೆಂಬಲಾರ್ಥ ದಾಖಲೆಗಳೊಡನೆ ಕೆಳಸಹಿದಾರರಿಗೆ ಅವುಗಳನ್ನು ಸಲ್ಲಿಸಬೇಕು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಮಾಲೀಕರ ಹೊರತು ಬೇರೆ ಯಾವುದೇ ವ್ಯಕ್ತಿಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಯಾವುದೇ ಕ್ಲೇಮು/ಗಳು ಇದ್ದಲ್ಲಿ ಅವುಗಳನ್ನು ಉಪೇಕ್ಷಿಸಿರುತ್ತಾರೆ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್

ಕಚೇರಿ ಆವರಣ ಅಂದಾಜು ವಿಸ್ತೀರ್ಣ 32,774 ಚದರ ಅಡಿ ವಿಸ್ತೀರ್ಣದಲ್ಲಿರುವ 'ಮೈಂಡ್‌ಕಾಂಪ್ ಟೆಕ್ ಪಾರ್ಕ್' ಎಂದು ಕರೆಯಲ್ಪಡುವ ಅಭಿವೃದ್ಧಿಯ ಭಾಗವಾಗಿರುವ 'ಕಚೇರಿ 1' (ಆವರಣ)ನ ಸಂಪೂರ್ಣ ನೆಲಮಹಡಿಯಾಗಿರುವ ದೊಡ್ಡದಾಗಿ ನಿರ್ಮಿಸಿದ ಪ್ರದೇಶದ ಆಸ್ತಿ ಹೊಂದಿರುವ ಹೊಸ ಸಂ.532, ಇಪಿಐಪಿ 2ನೇ ಹಂತ, ಕೈಗಾರಿಕಾ ಪ್ರದೇಶ, ಪ್ಲಾಟ್ ಸಂ. 149–ಎ (ಸರ್ವೆ ಸಂ. 156–ಹೂಡಿ ಗ್ರಾಮದ ಭಾಗ, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ರೂಪುಗೊಂಡಿದೆ) ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶ, ಹೋಬಳಿ ಕೃಷ್ಣರಾಜಪುರಂ, ಬೆಂಗಳೂರು ತಾಲ್ಲೂಕು ಪೂರ್ವ ("ಬೃಹತ್ ಭೂಮಿ"), ಅದರೊಂದಿಗೆ 60 ಕಾರುಗಳನ್ನು ನಿಲ್ಲಿಸುವಷ್ಟು ಜಾಗಗಳು ಮತ್ತು ಪ್ರಮಾಣುಗುಣವಾಗಿ ಅವಿಭಾಜಿತ ಪಾಲು (8.157%) ಚದರ ಅಡಿಗಳು. ಚಕ್ಕುಬಂದಿ ಈ ಕೆಳಗಿನಂತಿದೆ:

ಪೂರ್ವಕ್ಕೆ:	ಪ್ಲಾಟ್ ಸಂ. 149–ಬಿ ಮತ್ತು ರಸ್ತೆ
ಪಶ್ಚಿಮಕ್ಕೆ:	ಖಾಸಗಿಯವರ ಭೂಮಿ
ಉತ್ತರಕ್ಕೆ:	ಖಾಸಗಿಯವರ ಭೂಮಿ ಮತ್ತು ಪ್ಲಾಟ್ ಸಂ. 149–ಸಿ
ದಕ್ಷಿಣಕ್ಕೆ:	ಪ್ಲಾಟ್ ಸಂ. 142 ರಿಂದ 144 ಮತ್ತು 145–ಪಿ1, 148 ಮತ್ತು 149–ಬಿ

ಬೆಂಗಳೂರು
ದಿನಾಂಕ: 26.03.2021
ಮಾಲಿನಿ ರಾಜು
ಜೆ. ಸಾಗರ್ ಅಸೋಸಿಯೇಟ್ಸ್, ವಕೀಲರು ಮತ್ತು ಸೊಲಿಸಿಟರ್ಸ್
ಹಂತ 3, ಪ್ರೆಸ್ಟಿಜ್ ಒಬೆಲಿಸ್ಕ್, 3, ಕಸ್ತೂರ್‌ಬಾ ರಸ್ತೆ,
ಬೆಂಗಳೂರು–560 001. ದೂ. +91 80 435 03600.
ಇ–ಮೇಲ್: malini.raju@jsalaw.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, (ಕೆಂಗೇರಿ ವಿಭಾಗ),
ಬೆಂಗಳೂರು–560056.
ಸಂ. ಕಾಪಾಅ/ಕೆಂ./ಟೆಂಡರ್/28/2020–21 ದಿನಾಂಕ : 25.03.2021

ಅಲ್ಪಾವಧಿ ಟೆಂಡರ್ ಆಹ್ವಾನ
(ದ್ವಿ ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಇವರು ಮೇಲ್ವಿಚಾರಣೆಗೆ ಸಲಹೆಗಾರರನ್ನು ನೇಮಿಸಲು ಪ್ರಸ್ತಾವನೆಗಳನ್ನು ಯೋಜನಾ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣದ (ಪಿಎಂಸಿ) ಯೋಜನೆಯನ್ನು, ಕಾರ್ಯಪಾಲಕ ಅಭಿಯಂತರರ ಕಛೇರಿ, (ಕೆಂಗೇರಿ ವಿಭಾಗ), ಬಿಬಿಎಂಪಿ. ಈ ಕೆಳಗಿನ ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಮೇಲ್ವಿಚಾರಣೆ ಸೇರಿದಂತೆ (ಪಿಎಂಸಿ) ಸೇವೆಗಳನ್ನು ಒದಗಿಸುವುದು, ರಸ್ತೆಗಳ ಸುಧಾರಣೆಗೆ ಗುಣಮಟ್ಟದ ನಿಯಂತ್ರಣ ಮತ್ತು ಜ್ಞಾನಭಾರತಿ ಲೇಔಟ್ 2ನೇ ಬ್ಲಾಕ್‌ನಲ್ಲಿ ಚರಂಡಿಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳು ವಾರ್ಡ್ ನಂ. 130 ಮತ್ತು ಕೆಂಗೇರಿ ಉಪನಗರ ಪಟ್ಟಣ ಮತ್ತು ಯಶವಂತಪುರ ಕ್ಷೇತ್ರದ ಸುತ್ತಮುತ್ತಲಿನ ಪ್ರದೇಶ ವಾರ್ಡ್ ನಂ. 159, (2 ಕಾಮಗಾರಿಗಳು)	ಇಎಂಡಿ ಘೋಷಣೆ

(1) ಆರ್‌ಎಫ್‌ಪಿ ಡಾಕ್ಯುಮೆಂಟ್ ಲಭ್ಯತೆ **ದಿನಾಂಕ : 29.03.2021,** (2) ಯಾವುದೇ ವಿಚಾರಣೆಗಾಗಿ ದಿನಾಂಕ : **03.04.2021 ರಂದು ಸಂಜೆ 4.00 ಗಂಟೆಯೊಳಗೆ,** (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : **07.04.2021 ರಂದು ಸಂಜೆ 4.00 ಗಂಟೆಯೊಳಗೆ,** (4) ತಾಂತ್ರಿಕ ಬಿಟ್ ತೆರೆಯುವ **ದಿನಾಂಕ : 09.04.2021 ರಂದು ಸಂಜೆ 4.30 ಕ್ಕೆ,** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಕೆಂಗೇರಿ ವಿಭಾಗ.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

1,500 ಉಚಿತ ಎಂಆರ್‌ಐ, ಸಿಟಿ ಸ್ಕ್ಯಾನ್

ಬೆಂಗಳೂರು: ಮುಂದಿನ ಒಂದು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ 1,500 ಜನರಿಗೆ ಉಚಿತವಾಗಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್ ಮಾಡುವುದಾಗಿ ಆಸ್ಟರ್ ಆಸ್ಪತ್ರೆಯು ಘೋಷಿಸಿದೆ.

ಆಸ್ಟರ್ ಡಿಎಂ ಹೆಲ್ತ್‌ಕೇರ್ ತನ್ನ 34ನೇ ಸಂಸ್ಥಾಪನಾ ದಿನದ ಅಂಗವಾಗಿ ಉಚಿತ ವೈದ್ಯಕೀಯ ತಪಾಸಣೆ ನಡೆಸುತ್ತಿದೆ. 10 ಸಾವಿರ ಬಡ ರೋಗಿಗಳಿಗೆ ಉಚಿತವಾಗಿ ತಪಾಸಣೆ ಮಾಡುವ ಗುರಿ ಹಾಕಿಕೊಂಡಿದೆ.

ಈ ಯೋಜನೆ ಅಡಿಯಲ್ಲಿ ಇಲ್ಲಿನ ಆಸ್ಟರ್ ಆಸ್ಪತ್ರೆಯು ಉತ್ತರ ಬೆಂಗಳೂರಿನ ಯಲಹಂಕ, ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ಸಾರ್ವಜನಿಕ ಆಸ್ಪತ್ರೆಯ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಅದೇ ರೀತಿ, ದಕ್ಷಿಣ ಬೆಂಗಳೂರಿನಲ್ಲಿ ಶ್ರೀಕೃಷ್ಣ ಸೇವಾ ಆಶ್ರಮ, ಸೇವಾಕ್ಷೇತ್ರ ಆಸ್ಪತ್ರೆ ಮತ್ತು ಆರ್.ವಿ. ಆಸ್ಪತ್ರೆ ಜತೆಗೆ ಒಡಂಬಡಿಕೆ ಮಾಡಿಕೊಂಡಿದ್ದು, ಈ ಆಸ್ಪತ್ರೆಗಳು ಶಿಫಾರಸು ಮಾಡುವ ವ್ಯಕ್ತಿಗಳಿಗೆ ಉಚಿತವಾಗಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್ ಮಾಡಲಾಗುತ್ತದೆ.

ತಜ್ಞ ವೈದ್ಯರ ಕೊರತೆ ನೀಗಿಸಲು ಆರೋಗ್ಯ ಇಲಾಖೆ ಯೋಜನೆ

ಎಲ್ಲ ಕಾಯಿಲೆಗಳಿಗೆ ಟೆಲಿ–ಐಸಿಯು ಸೇವೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ತಜ್ಞ ವೈದ್ಯರ ಕೊರತೆ ನೀಗಿಸಲು ಹಾಗೂ ಮರಣ ಪ್ರಮಾಣ ಇಳಿಕೆ ಮಾಡಲು ಹೃದ್ರೋಗ, ಕ್ಯಾನ್ಸರ್ ಸೇರಿದಂತೆ ಎಲ್ಲ ಕಾಯಿಲೆಗಳಿಗೆ ಟೆಲಿ-ಐಸಿಯು ಸೇವೆ ಒದಗಿಸುವ ಯೋಜನೆಯನ್ನು ಆರೋಗ್ಯ ಇಲಾಖೆ ರೂಪಿಸಿದೆ.

ಏಪ್ರಿಲ್ ಅಂತ್ಯಕ್ಕೆ ಈ ಸೇವೆಯು ರಾಜ್ಯದ ಪ್ರಮುಖ ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ದೊರೆಯಲಿದೆ.

ಆರೋಗ್ಯ ಇಲಾಖೆಯಡಿ 2,008 ತಜ್ಞ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಹಲವು ಸರ್ಕಾರಿ ಆಸ್ಪತ್ರೆಗಳು ತಜ್ಞ ವೈದ್ಯರ ಕೊರತೆ ಎದುರಿಸುತ್ತಿವೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ವಾರದ ಎಲ್ಲ ದಿನ 24 ಗಂಟೆಗಳೂ ಟೆಲಿ-ಐಸಿಯು ಸೇವೆ ಒದಗಿಸಲು ರೂಪುರೇಷೆ ಸಿದ್ಧಪಡಿಸಲಾಗಿದೆ. ವಿವಿಧ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರ ಸಹಕಾರ ಪಡೆದು, ಎಲ್ಲೆಡೆ ಒಂದೇ ರೀತಿಯ ವೈದ್ಯಕೀಯ ಸೇವೆ ಒದಗಿಸುವುದು ಯೋಜನೆಯ ಉದ್ದೇಶ.

ಟೆಲಿ-ಐಸಿಯು ವ್ಯವಸ್ಥೆಯಿಂದ ಕೋವಿಡ್ ಪೀಡಿತರಿಗೆ ಗುಣಮಟ್ಟದ ಸೇವೆ ಸಾಧ್ಯವಾಗಿ, ಮರಣ ಪ್ರಮಾಣ ಇಳಿಯಿತು. ಎಲ್ಲ ಕಾಯಿಲೆಗಳಿಗೆ ಇದನ್ನು ಏಪ್ರಿಲ್‌ನಲ್ಲಿ ಪ್ರಾರಂಭಿಸಲಾಗುತ್ತಿದೆ

ಡಾ.ಕೆ.ವಿ. ತ್ರಿಲೋಕ ಚಂದ್ರ
ಆರೋಗ್ಯ ಇಲಾಖೆ ಆಯುಕ್ತ

ಕಳೆದ ವರ್ಷ ಕೋವಿಡ್ ಪ್ರಕರಣಗಳು ಏರಿಕೆ ಕಂಡ ಬಳಿಕ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿತ್ತು. ಇದರಿಂದಾಗಿ ಎಲ್ಲ ರೋಗಿಗಳಿಗೆ ಗುಣಮಟ್ಟದ ಸೇವೆ ಒದಗಿಸುವುದು ವೈದ್ಯರಿಗೆ ಸವಾಲಾಗಿತ್ತು. ಹೀಗಾಗಿ, ದೇಶದಲ್ಲಿಯೇ ಮೊದಲ ಬಾರಿಗೆ ಟೆಲಿ-ಐಸಿಯು ಪರಿಕಲ್ಪನೆಯನ್ನು ಇಲ್ಲಿ ಪರಿಚಯಿಸಲಾಯಿತು. ಸಿಸಿಟಿವಿ, ಇಂಟರ್‌ನೆಟ್ ಸಂಪರ್ಕಿತ ಸೆನ್ಸರ್‌ಗಳ ಮೂಲಕ ರೋಗಿಯ ಸ್ಥಿತಿಗತಿಯ ಬಗ್ಗೆ ರಿಯಲ್ ಟೈಮ್ ಮಾಹಿತಿ ಪಡೆದು, ಚಿಕಿತ್ಸೆ ಒದಗಿಸಲಾಯಿತು. ಈಗ ಕೋವಿಡೇತರ ಕಾಯಿಲೆಗಳ ಮರಣ ಪ್ರಮಾಣ ತಗ್ಗಿಸಲು ಈ ವ್ಯವಸ್ಥೆ ಬಳಸಿಕೊಳ್ಳಲು ಸರ್ಕಾರ ಯೋಜನೆ ರೂಪಿಸಿದೆ.

ಗುಣಮಟ್ಟದ ಸೇವೆ ಸಾಧ್ಯ: 'ಕೋವಿಡ್ ಕಾಣಿಸಿಕೊಂಡ ಬಳಿಕ ಕೇಂದ್ರೀಕೃತ ಟೆಲಿ-ಐಸಿಯು ಘಟಕವನ್ನು ನಿರ್ಮಿಸಿ, ವರ್ಚುವಲ್ ಮಾದರಿಯಲ್ಲಿ ತಜ್ಞರ ನೆರವಿನಿಂದ ವೈದ್ಯರಿಗೆ, ಚಿಕಿತ್ಸೆಗೆ ಸಂಬಂಧಿಸಿದಂತೆ ಮಾರ್ಗದರ್ಶನವನ್ನು ಒದಗಿಸಲಾಯಿತು. ಐಸಿಯುದಲ್ಲಿ ಕ್ಲಿಷ್ಟಕರ ಸಮಸ್ಯೆ ಎದುರಿಸುತ್ತಿರುವ ಸೋಂಕಿತರ ಮಾಹಿತಿ ಸಂಗ್ರಹಿಸಿ, ತಜ್ಞರಿಗೆ ರವಾನಿಸಲಾಯಿತು. ಶೇ 60ಕ್ಕೆ ಏರಿಕೆಯಾಗಿದ್ದ ಐಸಿಯು ಮರಣ ಪ್ರಮಾಣವನ್ನು ಶೇ 24ಕ್ಕೆ ಇಳಿಕೆ ಮಾಡಲು ಸಾಧ್ಯವಾಯಿತು. ಈ ವ್ಯವಸ್ಥೆಯಿಂದ ತಜ್ಞ ವೈದ್ಯರ ಕೊರತೆಯನ್ನು ಶೇ 60ರಷ್ಟು ನಿವಾರಿಸಲು ಸಾಧ್ಯವಾಗುತ್ತದೆ. ಶುಶ್ರೂಷಕರಿಗೆ ಕೂಡ ಅಗತ್ಯ ತರಬೇತಿ ದೊರೆಯಲಿದೆ' ಎಂದು ಇಲಾಖೆಯ 'ಇ-ಆರೋಗ್ಯ' ವಿಭಾಗದ ಸಹಾಯಕ ಉಪನಿರ್ದೇಶಕ ಡಾ. ವಸಂತ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ ವಿಶೇಷ

'ರೋಗಿಗಳ ದತ್ತಾಂಶ ಸಂಗ್ರಹ'

'28 ಜಿಲ್ಲಾ ಆಸ್ಪತ್ರೆಗಳು ಹಾಗೂ ಬೆಂಗಳೂರಿನ 10 ಆಸ್ಪತ್ರೆಗಳಲ್ಲಿ ಟೆಲಿ-ಐಸಿಯು ಸೇವೆಯನ್ನು ಮೊದಲ ಹಂತದಲ್ಲಿ ಪ್ರಾರಂಭಿಸಲಾಗುವುದು' ಎಂದು ಡಾ. ವಸಂತ್ ಕುಮಾರ್ ತಿಳಿಸಿದರು.

'ಆರೋಗ್ಯಸೌಧದಲ್ಲಿರುವ ಕೇಂದ್ರೀಕೃತ ಘಟಕವು ಕಾರ್ಯಾಚರಣೆ ಮಾಡಲಿದೆ. ಜಯದೇವ ಹೃದ್ರೋಗ ಸಂಸ್ಥೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಸೇರಿದಂತೆ ವಿವಿಧ ವೈದ್ಯಕೀಯ ಸಂಸ್ಥೆಗಳ ತಜ್ಞ ವೈದ್ಯರು ಈ ವ್ಯವಸ್ಥೆಯಡಿ ಸೇವೆ ನೀಡುತ್ತಾರೆ. ಇ-ಆಸ್ಪತ್ರೆ ಯೋಜನೆಯಡಿ ರೋಗಿಗಳ ದತ್ತಾಂಶವನ್ನು ದಾಖಲಿಸಿಕೊಳ್ಳಲಾಗುತ್ತಿದೆ. ಐಸಿಯುಗೆ ದಾಖಲಾದವರ ವಿವರವನ್ನೂ ನಮೂದಿಸಿಕೊಳ್ಳಲಾಗುತ್ತದೆ. ಇ-ಆಸ್ಪತ್ರೆ ಲಾಗಿನ್ ಐಡಿಯನ್ನು ತಜ್ಞರಿಗೆ ಒದಗಿಸಿ, ವೈದ್ಯರೊಂದಿಗೆ ಸಮಾಲೋಚನೆಗೆ ಅವಕಾಶ ಕಲ್ಪಿಸಲಾಗುತ್ತದೆ' ಎಂದರು.

ಸುದ್ದಿ 2 ನಿಮಿಷ

'ಪೋಷಣ್ ಅಭಿಯಾನ ರಾಜ್ಯಕ್ಕೆ 2ನೇ ಸ್ಥಾನ'

ಬೆಂಗಳೂರು: 'ಅಪೌಷ್ಟಿಕತೆಯಿಂದ ತಾಯಿ, ಮಕ್ಕಳು ಸಾವಿಗೀಡಾಗುತ್ತಿರುವುದನ್ನು ತಪ್ಪಿಸಲು ಕೇಂದ್ರ ಸರ್ಕಾರ ಆರಂಭಿಸಿರುವ ರಾಷ್ಟ್ರೀಯ ಪೋಷಣ್ ಅಭಿಯಾನದ ಅನುದಾನದ ಬಳಕೆ ಹಾಗೂ ಒಟ್ಟು ಸಾಧನೆಯಲ್ಲಿ ದೇಶದಲ್ಲಿಯೇ ಕರ್ನಾಟಕ ಎರಡನೇ ಸ್ಥಾನದಲ್ಲಿದೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಹೇಳಿದ್ದಾರೆ.

ಇಲಾಖೆಯ ಆಯುಕ್ತರ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರ ಜೊತೆಗೆ ಗುರುವಾರ ವಿಡಿಯೊ ಸಂವಾದ ಮೂಲಕ ರಾಜ್ಯದಲ್ಲಿ ಪೋಷಣ್ ಅಭಿಯಾನದ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ಮುಂದಿನ ತ್ರೈಮಾಸಿಕ ಸಭೆಯ ವೇಳೆಗೆ ಈ ಅಭಿಯಾನದಲ್ಲಿ ರಾಜ್ಯ ಮೊದಲ ಸ್ಥಾನದಲ್ಲಿರುವಂತೆ ನೋಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಪೋಷಣ್ ಅಭಿಯಾನದ ಟ್ರ್ಯಾಕರ್ ಅಳವಡಿಕೆ, ಸಮುದಾಯ ಆಧಾರಿತ ಕಾರ್ಯಕ್ರಮಗಳು, ತರಬೇತಿ ಕುರಿತಂತೆ ಅಧಿಕಾರಿಗಳಿಂದ ಸಚಿವರು ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮೇಲ್ವಿಚಾರಕಿಯರಿಗೆ ನೀಡಿರುವ ಸ್ಮಾರ್ಟ್ ಫೋನ್ ಸಮಸ್ಯೆ ಕುರಿತು ಸಚಿವರ ಗಮನಕ್ಕೆ ತಂದರು.

ಎದುರಾಗುತ್ತಿರುವ ಸಮಸ್ಯೆಗಳ ಬಗ್ಗೆ ಲಿಖಿತವಾಗಿ ಆಯುಕ್ತರಿಗೆ ಮಾಹಿತಿ ನೀಡಿದರೆ, ಸಂಬಂಧಪಟ್ಟ ಕಂಪನಿಗಳ ಜೊತೆಗೆ ಮಾತನಾಡಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಜೊಲ್ಲೆ ಭರವಸೆ ನೀಡಿದರು.

ಚಾಲುಕ್ಯ ಕನ್ನಡೋತ್ಸವ ಇಂದಿನಿಂದ

ಬೆಂಗಳೂರು: ಚಾಲುಕ್ಯ ಡಾ. ರಾಜಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್ ವತಿಯಿಂದ ಇದೇ 26ರಿಂದ 29ರವರೆಗೆ ಚಾಲುಕ್ಯ ಕನ್ನಡೋತ್ಸವ ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಗ್ರಾಮದೇವತೆ ದೊಡ್ಡಮ್ಮದೇವಿ ಮಹೋತ್ಸವವೂ ನಡೆಯಲಿದೆ.

ಈ ನಿಮಿತ್ತ ಕುರುಬರಹಳ್ಳಿಯ ಕುಮಾರವ್ಯಾಸ ವೃತ್ತದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

26ಕ್ಕೆ ಬೆಳಿಗ್ಗೆ 10ರಂದು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಗ್ರಾಮದೇವತೆ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಅಂದು ಸಂಜೆ ಜನಪದ ಸಂಭ್ರಮ ನಡೆಯಲಿದೆ. ಸಚಿವರಾದ ಕೆ. ಗೋಪಾಲಯ್ಯ, ಅರವಿಂದ ಲಿಂಬಾವಳಿ, ಕರವೇ ಅಧ್ಯಕ್ಷ ಟಿ.ಎ. ನಾರಾಯಣಗೌಡ ಉಪಸ್ಥಿತರಿರುವರು.

27ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. 28ರಂದು ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ತಂಡದಿಂದ ಸಂಗೀತ ಮನರಂಜನಾ ಕಾರ್ಯಕ್ರಮ ನಡೆಯಲಿದೆ. ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಚಿತ್ರನಟ ಪುನೀತ್ ರಾಜಕುಮಾರ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಕೆ–100: ಜಲಮಾರ್ಗ ಯೋಜನೆಗೆ ಮುಖ್ಯಮಂತ್ರಿ ಶಂಕುಸ್ಥಾಪನೆ

'10 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೃದಯಭಾಗದಲ್ಲಿ 'ಜಲಮಾರ್ಗ'ವೊಂದು ತಲೆ ಎತ್ತಲಿದೆ. ವರ್ಷದ 365 ದಿನವೂ ಇಲ್ಲಿ ಹರಿಯಲಿರುವ ನೀರು ನಗರವನ್ನು ಆಕರ್ಷಣೆಯ ಕೇಂದ್ರವಾಗಿಸಲಿದೆ.

9.6 ಕಿ.ಮೀ ಉದ್ದದ ರಾಜಕಾಲುವೆಯನ್ನು ಜಲಮಾರ್ಗವಾಗಿ ರೂಪಿಸಿ, ಪ್ರೇಕ್ಷಣೀಯ ಸ್ಥಳವಾಗಿಸುವ ಕಾಮಗಾರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಶಂಕುಸ್ಥಾಪನೆ ನೆರವೇರಿಸಿದರು.

'ನಗರದ ಕೆ.ಆರ್ ಮಾರುಕಟ್ಟೆಯಿಂದ, ಬೆಳ್ಳಂದೂರಿಗೆ ಹರಿಯುವ ಕೋರಮಂಗಲ ಕಣಿವೆಯನ್ನು (ಕೆ-100) ಬೆಂಗಳೂರು ನಾಗರಿಕ ಜಲಮಾರ್ಗವನ್ನಾಗಿ ರೂಪಿಸಲಾಗುವುದು. ಈ ಯೋಜನೆಯಿಂದ ಕೃತಕ ನೆರೆ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ' ಎಂದರು.

'ಒಳಚರಂಡಿ ನೀರನ್ನು ರಾಜಕಾಲುವೆಯಿಂದ ಬೇರ್ಪಡಿಸಲಾಗುವುದು. ಗುಜರಾತಿನ ಸಬರಮತಿ ನದಿ ಮಾರ್ಗದ ಮಾದರಿಯಲ್ಲಿ ₹179 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಅಗತ್ಯ ಬಿದ್ದರೆ ಇನ್ನೂ ಹೆಚ್ಚು ಅನುದಾನ ಒದಗಿಸಲಾಗುವುದು. ಹತ್ತು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ, 'ರಾಜಕಾಲುವೆಯ ಕಲುಷಿತ ತಳಭಾಗವನ್ನು ಸಂಪೂರ್ಣ ಸ್ವಚ್ಛಗೊಳಿಸಿ, ಶುದ್ಧ ನೀರು ಹರಿಸಲಾಗುವುದು. ಇಂಗು ಗುಂಡಿಯೂ ನಿರ್ಮಾಣ ಆಗಲಿದೆ' ಎಂದರು.

'ಈ ಜಲಮಾರ್ಗದ ಪಕ್ಕದ ಜಲಮಾರ್ಗವನ್ನು ಚರ್ಚ್ ಸ್ಟ್ರೀಟ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು' ಎಂದೂ ಹೇಳಿದರು.

ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್, ಪರಿಷತ್ ಸದಸ್ಯ ಗೋವಿಂದರಾಜ್, ಬಿಎಂಟಿಸಿ ಅಧ್ಯಕ್ಷ ನಂದೀಶ್ ರೆಡ್ಡಿ, ರಮೇಶ್ ಗೌಡ, ಅಭಿವೃದ್ಧಿ ಆಯುಕ್ತರಾದ ನಂದಿತಾ ಶರ್ಮಾ, ಜಲಮಂಡಳಿ ಅಧ್ಯಕ್ಷ ಜಯರಾಂ ಇದ್ದರು.

'ಜಲಮಾರ್ಗ'ವಾಗಿ ಬದಲಾಗಲಿರುವ ರಾಜಕಾಲುವೆಯನ್ನು ಬಿ.ಎಸ್. ಯಡಿಯೂರಪ್ಪ ವೀಕ್ಷಿಸಿದರು. ನಂದೀಶ್ ರೆಡ್ಡಿ, ವಂದಿತಾ ಶರ್ಮಾ, ಗೌರವ್ ಗುಪ್ತ ಇದ್ದರು– ಪ್ರಜಾವಾಣಿ ಚಿತ್ರ

ಯೋಜನೆಯ ಮುಖ್ಯಾಂಶಗಳು

- ಒಳಚರಂಡಿ ನೀರನ್ನು ರಾಜಕಾಲುವೆಯಿಂದ ಬೇರ್ಪಡಿಸಿ ಪರಿಸರ ಹಾನಿ ತಪ್ಪಿಸುವುದು
- ತಳಮಟ್ಟದ ಸೇತುವೆಗಳ ಮರುವಿನ್ಯಾಸ
- ಬಹುಪಯೋಗಿ ಪರಿಸರಸ್ನೇಹಿ ಪ್ರಾಂಗಣ ನಿರ್ಮಾಣ
- ಸಿಸಿಟಿವಿ ಕ್ಯಾಮೆರಾ ಕಣ್ಗಾವಲು, ನಿಯಂತ್ರಣ ಕೊಠಡಿ ಸ್ಥಾಪನೆ
- ಆಯ್ದ ಸ್ಥಳಗಳಲ್ಲಿ ನೀರಿನ ಕಾರಂಜಿ
- ತ್ಯಾಜ್ಯ ನೀರು ನಿರ್ವಹಣೆಗೆ ಐದು ಎಸ್‌ಟಿಪಿ
- ಸ್ಟಾರ್ ಇನ್‌ಫ್ರಾ ಟೆಕ್ ಸಂಸ್ಥೆಗೆ ಗುತ್ತಿಗೆ

ಕಂಗನಾ ವಿರುದ್ಧ ತನಿಖೆ ಆದೇಶ ಬದಿಗಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಿವುಡ್ ನಟಿ ಕಂಗನಾ ರನೌತ್ ವಿರುದ್ಧದ ಖಾಸಗಿ ದೂರಿನ ಬಗ್ಗೆ ಪೊಲೀಸ್ ತನಿಖೆಗೆ ತುಮಕೂರು ನ್ಯಾಯಾಲಯ ನೀಡಿದ್ದ ನಿರ್ದೇಶನವನ್ನು ಹೈಕೋರ್ಟ್ ಬದಿಗಿರಿಸಿದೆ.

'ಕೃಷಿ ಕಾಯ್ದೆಗಳ ಬಗ್ಗೆ ವದಂತಿ ಹರಡುವವರು ಭಯೋತ್ಪಾದಕರು' ಎಂದು ಕಂಗನಾ ಟ್ವೀಟ್ ಮಾಡಿದ್ದರು. ಇದರ ವಿರುದ್ಧ ತುಮಕೂರಿನ ನ್ಯಾಯಾಲಯದಲ್ಲಿ ವಕೀಲ ರಮೇಶ್ ನಾಯಕ್ ಖಾಸಗಿ ದೂರು ದಾಖಲಿಸಿದ್ದರು.

'ದೂರಿನಲ್ಲಿ ಇರುವ ಆರೋಪಗಳ ಬಗ್ಗೆ ನ್ಯಾಯಾಧೀಶರೇ ತೃಪ್ತರಾಗಿಲ್ಲ. ಹೀಗಾಗಿ ಹೊಸದಾಗಿ ಪರಿಶೀಲನೆ ನಡೆಸಬೇಕು. ಈ ಆದೇಶದೊಂದಿಗೆ ಕಂಗನಾ ವಿರುದ್ಧದ ಎಫ್‌ಐಆರ್ ಕೂಡ ರದ್ದುಗೊಂಡಿದೆ' ಎಂದು ಪೀಠ ಹೇಳಿದೆ.

ಕಂಗನಾ ಮಾಡಿರುವ ಟ್ವೀಟ್ ಹಿಂಸಾಚಾರವನ್ನು ಪ್ರಚೋದಿಸುತ್ತದೆ. ಆದರೂ, ಅವರ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳು ವಿಫಲರಾಗಿದ್ದಾರೆ. ನ್ಯಾಯಾಲಯ ಮಧ್ಯ ಪ್ರವೇಶಿಸಿ ತನಿಖೆ ನಡೆಸಲು ಪೊಲೀಸರಿಗೆ ನಿರ್ದೇಶನ ನೀಡಬೇಕು ಎಂದು ದೂರುದಾರರು ಕೋರಿದ್ದರು.

ಕಂಗನಾ ರನೌತ್

ತುಮಕೂರು ನ್ಯಾಯಾಲಯದ ಆದೇಶ ಪ್ರಶ್ನಿಸಿ ಕಂಗನಾ ಪರ ವಕೀಲರು ಹೈಕೋರ್ಟ್‌ನಲ್ಲಿ ಅರ್ಜಿ ಮೇಲ್ಮನವಿ ಸಲ್ಲಿಸಿದ್ದರು. ಪೊಲೀಸರಿಗೆ ದೂರು ನೀಡಿದ ಮೂರು ದಿನಗಳ ಒಳಗೆ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗಿದೆ. ನ್ಯಾಯಾಧೀಶರು ಪೂರ್ಣ ಮನಸ್ಸಿನಿಂದ ಈ ಆದೇಶ ನೀಡಿಲ್ಲ ಎಂದು ಅರ್ಜಿಯಲ್ಲಿ ಕಂಗನಾ ಪ್ರತಿಪಾದಿಸಿದ್ದಾರೆ.

'ಈ ರೀತಿಯ ಆರೋಪಗಳನ್ನು ಮಾಡಲು ಕಂಗನಾ ಅವರಿಗೆ ಅಧಿಕಾರ ಕೊಟ್ಟವರು ಯಾರು. ತಮ್ಮ ವಿರುದ್ಧ ಇದೇ ರೀತಿಯ ಆರೋಪ ಮಾಡಿದರೆ ಕಂಗನಾ ಅವರ ಪ್ರತಿಕ್ರಿಯೆ ಏನು' ಎಂದು ವಿಚಾರಣೆ ವೇಳೆ ಹಾಜರಿದ್ದಕಂಗನಾ ಪರ ವಕೀಲರನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಪೀಠ ಪ್ರಶ್ನಿಸಿತು.

ನಗರದಲ್ಲಿ ಇಂದು

ವಸಂತ ನೃತ್ಯೋತ್ಸವ 2021: ಉದ್ಘಾಟನೆ: ವಿದ್ವಾನ್ ಎಸ್.ವಿ. ಗಿರಿಧರ್, ವಿದೂಷಿ ದೀಪಾ ಭಟ್, ಅಧ್ಯಕ್ಷತೆ: ಸರಸ್ವತಿ, ಸಾಂಸ್ಕೃತಿಕ ಕಾರ್ಯಕ್ರಮ: ನೃತ್ಯ ದಿಶಾ ಟ್ರಸ್ಟ್, ಆಯೋಜನೆ: ಪದ್ಮಿನಿಪ್ರಿಯ ನೃತ್ಯ ಕಲಾ ಅಕಾಡೆಮಿ, ಸ್ಥಳ: ಚನ್ನಬಸಪ್ಪ ಸಭಾಂಗಣ, ಕೆ.ಜಿ.ಎಸ್. ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1

ನೀರು ಮತ್ತು ನೈರ್ಮಲ್ಯ: ಆರೋಗ್ಯ, ಪರಿಸರ ಮತ್ತು ಗಿಡ ನೆಡುವ ಕಾರ್ಯಕ್ರಮ: ಸ್ವಚ್ಛ ಭಾರತ ಅಭಿಯಾನದ ಭಾಗವಾಗಿ ವಿದ್ಯಾರ್ಥಿಗಳಿಂದ ಸ್ವಚ್ಛತೆ, ಉದ್ಘಾಟನೆ: ಡಾ.ಸಿ.ಪಿ.ಎಸ್. ಪ್ರಕಾಶ್, ಮುಖ್ಯ ಅತಿಥಿ: ಡಾ.ಬಿ.ಎಸ್. ಸತೀಶ್ ಪ್ರಸಾದ್, ಉಪಸ್ಥಿತಿ: ಪ್ರಕಾಶ್ ಕೆ., ಪುಷ್ಪಲತಾ ಪರಮಶಿವಯ್ಯ, ಡಾ.ಎಚ್.ಕೆ. ರಾಮರಾಜು, ಆಯೋಜನೆ: ಸಮುದಾಯ ಸೇವಾ ಸಮಿತಿ, ಸಿವಿಲ್ ಎಂಜಿನಿಯರಿಂಗ್ ವಿಭಾಗ, ದಯಾನಂದ ಸಾಗರ್ ಕಾಲೇಜು, ಸ್ಥಳ: ಎಚ್. ಗೊಲ್ಲಹಳ್ಳಿ, ಮಧ್ಯಾಹ್ನ 3

ನಾಟಕ ಪ್ರದರ್ಶನ: 'ಕೋವಿಗೊಂದು ಕನ್ನಡಕ', ತಂಡ: ಬೆಂಗಳೂರು ಥಿಯೇಟರ್ ಕಲೆಕ್ಟಿವ್, ನಿರ್ದೇಶನ: ವೆಂಕಟೇಶ್ ಪ್ರಸಾದ್, ಸ್ಥಳ: ರಂಗ ಶಂಕರ, ಸಂಜೆ 7.30

'ಕೋವಿಗೊಂದು ಕನ್ನಡಕ' ನಾಟಕದ ದೃಶ್ಯ

ನೃತ್ಯದ ಝಲಕ್ ನಗರದ ಸಂಸ ರಂಗಮಂದಿರದಲ್ಲಿ ಗುರುವಾರ ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ ಆಯೋಜಿಸಿದ್ದ ಸಂಕ್ರಮಣ ಸಾಂಸ್ಕೃತಿಕ ಉತ್ಸವದಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

'ಯೋಜನೆ ಕೈಬಿಡುವ ಭರವಸೆಯನ್ನು ಸಿ.ಎಂ ನೀಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಿರ್ಮಿಸಲು ಉದ್ದೇಶಿಸಿರುವ ಡಾ.ಶಿವರಾಮ ಕಾರಂತ ಬಡಾವಣೆ ಯೋಜನೆಯನ್ನು ಕೈಬಿಡುವ ಬಗ್ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರೈತ ಮುಖಂಡರಿಗೆ ಯಾವುದೇ ಭರವಸೆ ನೀಡಿಲ್ಲ ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಸ್ಪಷ್ಟಪಡಿಸಿದರು.

ಈ ಯೋಜನೆಯ ಜಾರಿಯಾಗಲಿರುವ ಗ್ರಾಮಗಳ ನಿವಾಸಿಗಳು ಹಾಗೂ ಭೂಮಿ ಕಳೆದುಕೊಳ್ಳಲಿರುವ ರೈತರು ಬಡಾವಣೆ ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸಿದ್ದರು. ಮುಖ್ಯಮಂತ್ರಿ ಅವರು ಪ್ರತಿಭಟನಾಕಾರರನ್ನು ಕರೆಸಿಕೊಂಡು ಮಾತುಕತೆ ನಡೆಸಿದ್ದರು.

ಮಾತುಕತೆ ಬಳಿಕ ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ಕೋಡಿಹಳ್ಳಿ ಚಂದ್ರಶೇಖರ್ ಹಾಗೂ ಅವರ ಜೊತೆಯಲ್ಲಿದ್ದ ಹೋರಾಟಗಾರರು, 'ಈ ಬಡಾವಣೆ ನಿರ್ಮಿಸುವ ಯೋಜನೆ ಕೈಬಿಡುವ ಬಗ್ಗೆ ರಾಜ್ಯದ ಅಡ್ವೊಕೇಟ್ ಜನರಲ್ ಅವರ ಮೂಲಕ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ. ಹಾಗಾಗಿ ಪ್ರತಿಭಟನೆ ಕೈಬಿಡುತ್ತಿದ್ದೇವೆ' ಎಂದು ಹೇಳಿಕೆ ನೀಡಿದ್ದರು.

'ಈ ನಡುವೆ ಬಿಡಿಎ ಅಧ್ಯಕ್ಷರು ರಾಜಕೀಯ ಮಾಡಿದರೆ ನಾವು ಮತ್ತೆ ಹೋರಾಟ ನಡೆಸಬೇಕಾಗುತ್ತದೆ' ಎಂದೂ ಸ್ಪಷ್ಟಪಡಿಸಿದ್ದರು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ವಿಶ್ವನಾಥ್, 'ಪ್ರತಿಭಟನೆಯ ನಡುವೆಯೇ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದ ನಿಯೋಗ ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದು ಹೌದು. ಮುಖ್ಯಮಂತ್ರಿ ಅವರು ಭೂಸ್ವಾಧೀನ ಕೈಬಿಡುವ ಬಗ್ಗೆಯಾಗಲೀ ಅಥವಾ ಯೋಜನೆಯನ್ನು ಕೈಬಿಡುವ ಬಗ್ಗೆಯಾಗಲೀ ನಿಯೋಗಕ್ಕೆ ಯಾವುದೇ ಭರವಸೆಯನ್ನೂ ನೀಡಿಲ್ಲ. ಆದರೆ, ಕೋಡಿಹಳ್ಳಿ ಚಂದ್ರಶೇಖರ್ ಅವರು ಮಾಧ್ಯಮಗಳ ಮೂಲಕ ಈ ವಿಚಾರದಲ್ಲಿ ತಪ್ಪು ಸಂದೇಶವನ್ನು ನೀಡಿದ್ದಾರೆ' ಎಂದು ತಿಳಿಸಿದ್ದಾರೆ.

'ಬಡಾವಣೆ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಈ ಬಗ್ಗೆ ಅಡ್ವೊಕೇಟ್ ಜನರಲ್ ಜತೆಗೆ ಚರ್ಚೆ ನಡೆಸುತ್ತೇನೆ ಎಂದಷ್ಟೇ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಬಗ್ಗೆ ಸಾರ್ವಜನಿಕರು ಯಾವುದೇ ತಪ್ಪು ಸಂದೇಶಗಳು ಅಥವಾ ಮಾಹಿತಿಗಳಿಗೆ ಕಿವಿಗೊಡಬಾರದು' ಎಂದರು.

'ಈ ಬಡಾವಣೆ ನಿರ್ಮಾಣದ ವಿಚಾರದಲ್ಲಿ ಸುಪ್ರೀಂಕೋರ್ಟ್ ನೀಡುವ ತೀರ್ಪಿಗೆ ಸರ್ಕಾರ ಮತ್ತು ಬಿಡಿಎ ಬದ್ಧವಾಗಿರುತ್ತದೆ' ಎಂದರು.

ಜರ್ಮನಿಯ ಕನ್ನಡ ಬಳಗದಿಂದ 'ಎನ್‌ಎಸ್‌ಎಲ್ ನುಡಿ ನಮನ'

ಬೆಂಗಳೂರು: ಜರ್ಮನಿಯ ಕನ್ನಡ ಬಳಗವು ಇತ್ತೀಚೆಗೆ ನಿಧನರಾದ ಕನ್ನಡದ ಹೆಸರಾಂತ ಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರನ್ನು 'ಎನ್‌ಎಸ್‌ಎಲ್ ನುಡಿನಮನ' ಆನ್‌ಲೈನ್ ಕಾರ್ಯಕ್ರಮದ ಮೂಲಕ ಸ್ಮರಿಸಿತು.

'ಕಾರ್ಯಕ್ರಮದಲ್ಲಿ ಎನ್‌ಎಸ್‌ಎಲ್ ಅವರ ಜೀವನ ಮತ್ತು ಸಾಧನೆಗಳನ್ನು ಮೆಲುಕು ಹಾಕಲಾಯಿತು. ಜರ್ಮನಿಯಲ್ಲಿರುವ ಕನ್ನಡಿಗರು ಹಾಗೂ ಅವರ ಮಕ್ಕಳು ಭಾವಗೀತೆಗಳನ್ನು ಹಾಡಿದರು. ಕವನ ಮತ್ತು ಶಿಶು ಪದ್ಯಗಳನ್ನು ವಾಚಿಸಿದರು' ಎಂದು ಕೆರ್ಪೆನ್ ನಗರದಲ್ಲಿ ನೆಲೆಸಿರುವ ಸಂತೋಷ್ ಶ್ರೀಧರ್ ತಿಳಿಸಿದರು.

'ಒಕ್ಕಲಿಗ ಸಂಘದ ಭೂ ಕಬಳಿಕೆಗೆ ಡಿಕೆಶಿ, ಎಚ್‌ಡಿಕೆ ಕುಮ್ಮಕ್ಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಕ್ಕಲಿಗ ಸಂಘದ 44 ಎಕರೆ 36 ಗುಂಟೆ ಜಮೀನು ಕಬಳಿಸಲು ಕೆಲ ವ್ಯಕ್ತಿಗಳು ಪ್ರಯತ್ನಿಸುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಭೂಗಳ್ಳರಿಗೆ ಬೆಂಬಲವಾಗಿ ನಿಂತಿದ್ದಾರೆ' ಎಂದು ರಾಜ್ಯ ಒಕ್ಕಲಿಗ ಸಂಘದ ಮಾಜಿ ಅಧ್ಯಕ್ಷ ಅಪ್ಪಾಜಿ ಗೌಡ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಂಘದ ಅಧ್ಯಕ್ಷನಾಗಿದ್ದ ನನ್ನನ್ನು ಮೂರು ಬಾರಿ ಮನೆಗೆ ಕರೆಸಿಕೊಂಡಿದ್ದ ಕುಮಾರಸ್ವಾಮಿ ಆ ಜಮೀನು ಬಿಟ್ಟುಕೊಡಿ ಎಂದು ಸೂಚಿಸಿದ್ದರು. ಅದಕ್ಕೆ ನಾನು ಒಪ್ಪಲಿಲ್ಲ. ಇದು ಹಳ್ಳಿಯ ಬಡಮಕ್ಕಳಿಗಾಗಿ ಮೀಸಲಿಟ್ಟಿರುವ ಜಮೀನು, ಇದನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದೆ. ನಮ್ಮ ಆಡಳಿತ ಮಂಡಳಿಯವರೂ ಇದಕ್ಕೆ ಒಪ್ಪುವುದಿಲ್ಲ ಎಂದಿದ್ದೆ. ಹಾಗೇನಾದರೂ ಮಾಡಿದರೆ ಸಮುದಾಯಕ್ಕೆ ದ್ರೋಹ ಬಗೆದಂತೆ ಎಂದು ಹೇಳಿದ್ದೆ' ಎಂದರು.

'ತಮ್ಮ ಮಾತು ಕೇಳಲಿಲ್ಲ ಎಂಬ ಕಾರಣಕ್ಕೆ ಕುಮಾರಸ್ವಾಮಿ ನನ್ನ ವಿರುದ್ಧ ಷಡ್ಯಂತ್ರ ರೂಪಿಸಿದರು. ಸಜ್ಜೆಪಾಳ್ಯದ ಜಮೀನು ಕಬಳಿಸಲು ಹುನ್ನಾರ ಮಾಡುತ್ತಿರುವವರ ಪೈಕಿ ಮರಿಯಪ್ಪನಪಾಳ್ಯದ ಶಿವಕುಮಾರ್ ಮುಂಚೂಣಿಯಲ್ಲಿದ್ದಾನೆ. ಆತ ನನ್ನ ವಿರುದ್ಧ ನಕಲಿ ವಿಡಿಯೊ ಮಾಡಿ ಮಾಧ್ಯಮದವರಿಗೆ ಬಿಡುಗಡೆ ಮಾಡಿದ್ದ. ಅದಾದ ನಂತರ ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲಾಯಿತು. ಅದಕ್ಕೆಲ್ಲ ಡಿ.ಕೆ. ಶಿವಕುಮಾರ್ ಹಾಗೂ ಕುಮಾರಸ್ವಾಮಿ ಕುಮ್ಮಕ್ಕು ನೀಡಿದ್ದರು' ಎಂದು ದೂರಿದರು.

'ನನ್ನ ನಂತರ ಅಧ್ಯಕ್ಷರಾದ ಬೆಟ್ಟೇಗೌಡರು ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್‌ಗೆ ಬಹಳ ಆಪ್ತರಾಗಿದ್ದವರು. ಹೀಗಿದ್ದರೂ ಕುಮಾರಸ್ವಾಮಿ ತಾವು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲೇ ಸಂಘದ ಆಡಳಿತ ಮಂಡಳಿಯನ್ನು ವಿಸರ್ಜಿಸಿದ್ದರು. ಒಕ್ಕಲಿಗ ಸಮುದಾಯದ ನಾಯಕರಾಗಿದ್ದುಕೊಂಡು ಅವರು ಅಂತಹ ನಿರ್ಧಾರ ಕೈಗೊಂಡಿದ್ದು ಏಕೆ. ಅವರ ತೀರ್ಮಾನ ಎಷ್ಟು ಸಮಂಜಸ' ಎಂದು ಪ್ರಶ್ನಿಸಿದರು.

'ಭೂಗಳ್ಳರಿಗೆ ಅನುಕೂಲ ಮಾಡಿಕೊಡುವ ಸಲುವಾಗಿಯೇ ಕುಮಾರಸ್ವಾಮಿ ಆ ನಿರ್ಧಾರ ಕೈಗೊಂಡಿದ್ದರು. ಬೆಟ್ಟೇಗೌಡರನ್ನು ಅಧ್ಯಕ್ಷರನ್ನಾಗಿ ಮಾಡಲು ಅವರು ನನ್ನ ಪರವಾಗಿದ್ದ ಎಂಟು ಸದಸ್ಯರಿಗೆ ತಲಾ ₹60 ಲಕ್ಷ ಹಣ ನೀಡಿದ್ದರು. ಇದರಲ್ಲಿ ₹30 ಲಕ್ಷ ಆರ್‌ಟಿಜಿಎಸ್ ಮಾಡಿದ್ದರೆ ಉಳಿದ ₹30 ಲಕ್ಷ ನಗದು ರೂಪದಲ್ಲಿ ನೀಡಿದ್ದರು. ಬೆಟ್ಟೇಗೌಡ ತಮ್ಮ ಅಧಿಕಾರಾವಧಿಯಲ್ಲಿ 1,300 ನೌಕರರನ್ನು ನೇಮಿಸಿದ್ದರು. ಪ್ರತಿಯೊಬ್ಬರಿಂದ ತಲಾ ₹5 ಲಕ್ಷ, ₹10 ಲಕ್ಷ ಲಂಚ ಪಡೆದಿದ್ದರು' ಎಂದು ದೂರಿದರು.

13.36 ಲಕ್ಷ ಹೊಸ ಚಂದಾದಾರರ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಭವಿಷ್ಯನಿಧಿ ಸಂಘಟನೆಯಲ್ಲಿ ಜನವರಿಯಲ್ಲಿ ಒಟ್ಟು 13.36 ಲಕ್ಷ ಹೊಸ ಚಂದಾದಾರರು ನೋಂದಣಿಯಾಗಿದ್ದಾರೆ.

'ಕೋವಿಡ್ ಬಿಕ್ಕಟ್ಟಿನ ಹೊರತಾಗಿಯೂ ಪ್ರಸಕ್ತ ಹಣಕಾಸು ವರ್ಷದಲ್ಲಿ ಭವಿಷ್ಯನಿಧಿ ಯೋಜನೆಯ ಅಡಿಯಲ್ಲಿ 62.49 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ. 2020ರ ಡಿಸೆಂಬರ್‌ಗೆ ಹೋಲಿಸಿದರೆ 2021ರ ಜನವರಿಯಲ್ಲಿ ಶೇ 24ರಷ್ಟು ಬೆಳವಣಿಗೆಯಾಗಿದೆ. ವರ್ಷದಿಂದ ವರ್ಷಕ್ಕೆ ಚಂದಾದಾರರ ಸಂಖ್ಯೆಯಲ್ಲಿ ಶೇ 27.79ರಷ್ಟು ಹೆಚ್ಚಳವಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಮಗನ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟ ಸಿ.ಎಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ತಿದ್ದುಪಡಿ ತಂದಿರುವುದು ಖಂಡನೀಯ. ಈ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮಗ ವಿಜಯೇಂದ್ರ ಹಾಗೂ ಆತನ ಶಿಷ್ಯಂದಿರು ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳಲು ರಹದಾರಿ ಮಾಡಿಕೊಟ್ಟಂತಾಗಿದೆ' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ಸದಂ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಇದು ಜನ ವಿರೋಧಿ ನಡೆ.

ಅಡ್ಡದಾರಿಯ ಮೂಲಕ ಬಹಳ ತರಾತುರಿಯಲ್ಲಿ ಕಾಯ್ದೆಗೆ ಅಂಗೀಕಾರ ನೀಡಲಾಗಿದೆ. ಟೆಂಡರ್ ಕರೆಯದೆ ₹2 ಕೋಟಿ ಮೊತ್ತದವರೆಗಿನ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅನುಷ್ಠಾನಗೊಳಿಸಲು ಅನುವು ಮಾಡಿಕೊಡುವುದು ಈ ಕಾಯ್ದೆಯ ಉದ್ದೇಶ. ಇದರಿಂದ ಭ್ರಷ್ಟಾಚಾರಕ್ಕೆ ಮತ್ತಷ್ಟು ಕುಮ್ಮಕ್ಕು ನೀಡಿದಂತಾಗುತ್ತದೆ. ಕೆಟಿಪಿಪಿ ಕಾಯ್ದೆಯ ಮೂಲ ಆಶಯಕ್ಕೇ ಧಕ್ಕೆಯಾಗಲಿದೆ' ಎಂದರು.

ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಸುರೇಶ್ ರಾಥೋಡ್ 'ಸರ್ಕಾರ ಕೂಡಲೇ ಈ ಕಾಯ್ದೆ ಹಿಂಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ನಡೆಸಲಾಗುತ್ತದೆ' ಎಂದು ಎಚ್ಚರಿಸಿದರು.

ಹೆಚ್ಚಿದ ತಾಪಮಾನ: ಪೂರ್ವ ಮುಂಗಾರು ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆಯ ಧಗೆ ಹೆಚ್ಚುತ್ತಿದ್ದು, ಕೆಲವು ಭಾಗದಲ್ಲಿ ಒಂದೆರಡು ದಿನಗಳಲ್ಲಿ ಜೋರು ಮಳೆ ಸುರಿಯಬಹುದು ಎಂದು ಹವಾಮಾನ ಇಲಾಖೆ ಹೇಳಿದೆ.

'ತಾಪಮಾನ ಹೆಚ್ಚಾಗಿರುವುದರಿಂದ ಈ ಬಾರಿ ಪೂರ್ವ ಮುಂಗಾರು ಮಳೆ ಬೇಗ ಪ್ರಾರಂಭವಾಗುವ ನಿರೀಕ್ಷೆ ಇದೆ. ದಕ್ಷಿಣ ಕನ್ನಡ ಭಾಗದಲ್ಲಿ ಒಂದೆರಡು ದಿನಗಳಲ್ಲಿ ಜೋರು ಮಳೆ ಸುರಿಯಬಹುದು. ಆದರೆ, ಬೆಂಗಳೂರು ಸೇರಿದಂತೆ ರಾಜ್ಯದ ಬೇರೆ ಭಾಗಗಳಲ್ಲಿ ಸದ್ಯಕ್ಕೆ ಮಳೆ ಬರುವ ಸಾಧ್ಯತೆ ಇಲ್ಲ' ಎಂದು ಹವಾಮಾನ ಇಲಾಖೆಯ ನಿರ್ದೇಶಕ ಸಿ.ಎಸ್. ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಮಾನ್ಯವಾಗಿ ಮಾರ್ಚ್‌ನಿಂದ ಮೇ ಅಂತ್ಯದವರೆಗೆ ಪೂರ್ವ ಮುಂಗಾರು ಅವಧಿ ಎನ್ನುತ್ತಾರೆ. ರಾಜ್ಯದಲ್ಲಿ ಏಪ್ರಿಲ್‌ನಲ್ಲಿ ಮಳೆ ಸುರಿಯುತ್ತಿತ್ತು. ಈ ಬಾರಿ ಕೆಲವು ಭಾಗದಲ್ಲಿ ಬೇಗ ಮಳೆ ಸುರಿಯಬಹುದು' ಎಂದೂ ಹೇಳಿದರು.

'ಸಾಮಾನ್ಯವಾಗಿ ಪೂರ್ವ ಮುಂಗಾರಿನಲ್ಲಿ ಗುಡುಗು–ಮಿಂಚು ಜೋರಾಗಿರುತ್ತದೆ. ಗಾಳಿಯಿಂದಾಗಿ ಇದು ಎಲ್ಲೆಡೆ ಚಲಿಸಿ ಮಳೆ ಬರುತ್ತದೆ. ಕೇರಳ, ತಮಿಳುನಾಡು, ದಕ್ಷಿಣ ಮತ್ತು ಕರಾವಳಿ ಕರ್ನಾಟಕ ಭಾಗದಲ್ಲಿ ಪೂರ್ವ ಮುಂಗಾರು ಚಟುವಟಿಕೆ ಚುರುಕುಗೊಳ್ಳುವ ಸಾಧ್ಯತೆ ಇದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 27ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಮಾರ್ವೆಲ್ ಆಸ್ಪತ್ರೆ, ಜಕ್ಕಸಂದ್ರ ಎಕ್ಸ್‌ಟೆನ್ಷನ್, ರಹೇಜಾ ರೆಸಿಡೆನ್ಸಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಸಂಶೋಧಕ ಬಿಪ್ಲಬ್ ಕೇತನ್ ಪಾಲ್ ಅಭಿಮತ

'ಭುಂಗ್ರೂ ಪದ್ಧತಿಯಿಂದ ನೀರಿನ ಸದ್ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆನೀರು ಸಂಗ್ರಹ ವಿಧಾನ ಅಳವಡಿಕೆಯಿಂದ ನೀರಿನ ಸಮಸ್ಯೆಗೆ ಪರಿಹಾರ ದೊರೆಯುವ ಜತೆಗೆ ಅಂತರ್ಜಲದ ಮಟ್ಟವು ಹೆಚ್ಚಲಿದೆ' ಎಂದು ಸಂಶೋಧಕ ಬಿಪ್ಲಬ್ ಕೇತನ್ ಪಾಲ್ ತಿಳಿಸಿದರು.

ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ನಗರದಲ್ಲಿ ಆಯೋಜಿಸಿದ 'ಭುಂಗ್ರೂ ನೀರು ಕೊಯ್ಲು ತಂತ್ರಗಾರಿಕೆ' ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು. 'ಗುಜರಾತ್‌ನಲ್ಲಿ ಪರಿಚಯಿಸಲಾಗಿರುವ ಭುಂಗ್ರೂ ಪದ್ಧತಿಯು ನೀರಿನ ಸಮಸ್ಯೆಯನ್ನು ನಿವಾರಿಸಲು ಸಹಕಾರಿಯಾಗಿದೆ. ಈ ಪದ್ಧತಿಯನ್ನು ಕರ್ನಾಟಕದಲ್ಲಿ ಕೂಡ ಅಳವಡಿಸುವ ಕೆಲಸವಾಗಬೇಕು. ಹರಿದು ಹೋಗುವ ಮಳೆ ನೀರನ್ನು ಭೂಗರ್ಭದಲ್ಲಿ ಸಂಗ್ರಹಿಸುವ ಕೆಲಸವಾಗಬೇಕು. ಆಗ ನೀರಿನ ಸದ್ಬಳಕೆ ಸಾಧ್ಯವಾಗುತ್ತದೆ' ಎಂದು ವಿವರಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಅಶೋಕ್ ಡಿ. ಹಂಜಗಿ ಮಾತನಾಡಿ, 'ಹವಾಮಾನ ಬದಲಾವಣೆಯಿಂದ ಗಂಭೀರ ಅಪಾಯಗಳನ್ನು ಎದುರಿಸುತ್ತಿದ್ದೇವೆ. ನಿಸರ್ಗ ಕೇಂದ್ರಿತವಾದ ಬದುಕನ್ನು ಕಟ್ಟಿಕೊಳ್ಳುವುದು ಅನಿವಾರ್ಯ. ಭವಿಷ್ಯದ ಜನಾಂಗವನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯ' ಎಂದರು.

ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ, 'ಸುಸ್ಥಿರ ಅಭಿವೃದ್ಧಿಯಿಂದ ಮಾತ್ರ ಈ ನಿಸರ್ಗದಲ್ಲಿರುವ ಜನವನ್ನು ಕಾಪಾಡಲು ಸಾಧ್ಯ. ಇಲ್ಲದಿದ್ದಲ್ಲಿ ನೀರಿಗಾಗಿ ಮಹಾಯುದ್ಧಗಳು ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಮಳೆ ನೀರನ್ನು ಸಂಗ್ರಹಿಸಲು ಮುಂದಾಗದಿದ್ದಲ್ಲಿ ಅಪಾಯವನ್ನು ಎದುರಿಸಬೇಕಾಗುತ್ತದೆ' ಎಂದು ಹೇಳಿದರು.

ವಿಚಾರ ಸಂಕಿರಣವನ್ನು ಬಿಪ್ಲಬ್ ಕೇತನ್ ಪಾಲ್ ಉದ್ಘಾಟಿಸಿದರು. 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಅಶೋಕ್ ಡಿ. ಹಂಜಗಿ, ಆರ್. ಉಪೇಂದ್ರ ಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿ ಜೆ. ಸಂತೋಷ್ ಶೆಟ್ಟಿ ಹಾಗೂ ಪ್ರಾಂಶುಪಾಲ ವಿಶ್ವಾಸ್ ಪುಟ್ಟಸ್ವಾಮಿ ಇದ್ದರು.

ಚುಟುಕು ಸುದ್ದಿ

ಸ್ನಾತಕೋತ್ತರ ಪರೀಕ್ಷೆಗಳ ಮುಂದೂಡಿಕೆ

ಬೆಂಗಳೂರು: ಇದೇ 26 ಮತ್ತು 29ರಂದು ನಡೆಯಬೇಕಿದ್ದ ಎಲ್ಲ ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ತಿಳಿಸಿದೆ.

ಏ.11ಕ್ಕೆ ಕೆ–ಸೆಟ್ ಪರೀಕ್ಷೆ ನಿಗದಿಯಾಗಿದೆ. ಈ ಕಾರಣದಿಂದ ಈ ಎಲ್ಲ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ತಿಳಿಸಿದ್ದಾರೆ.

ಮುಂದಿನ ದಿನಾಂಕವನ್ನು ಶೀಘ್ರವೇ ತಿಳಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಘಟಿಕೋತ್ಸವ ಅರ್ಜಿ ಆಹ್ವಾನ

ಬೆಂಗಳೂರು ನಗರ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ 2020ರ ಸೆಪ್ಟೆಂಬರ್/ಅಕ್ಟೋಬರ್ ವೇಳೆಗೆ ತೇರ್ಗಡೆಯಾದ ಸ್ನಾತಕೋತ್ತರ, ಬಿ.ಇಡಿ, ಬಿ.ಪಿ.ಇಡಿ ವಿದ್ಯಾರ್ಥಿಗಳು ದಂಡ ಶುಲ್ಕವಿಲ್ಲದೆ ಏ.17ರವರೆಗೆ, ₹200 ದಂಡ ಶುಲ್ಕದೊಂದಿಗೆ ಏ.23ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ವಿಶ್ವವಿದ್ಯಾಲಯ ಹೇಳಿದೆ.

ವಿವರ ಹಾಗೂ ಸೂಚನೆಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ www.bcu.ac.in ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಭದ್ರಾ ಮೇಲ್ದಂಡೆ ಯೋಜನೆ: ಕೇಂದ್ರದ ಒಪ್ಪಿಗೆ

ಬೆಂಗಳೂರು: ಭದ್ರಾ ಮೇಲ್ದಂಡೆ ಯೋಜನೆಯ ₹16,125 ಕೋಟಿ ಯೋಜನೆಗೆ ಕೇಂದ್ರ ಜಲಶಕ್ತಿ ಸಚಿವಾಲಯದ ಹೂಡಿಕೆ ಸಮಿತಿ ಸಭೆಯಲ್ಲಿ ಅನುಮೋದನೆ ದೊರಕಿದೆ.

ಈ ಕುರಿತು ಹರ್ಷ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ, ಈ ಯೋಜನೆಯಿಂದ ದಾವಣಗೆರೆ, ಚಿತ್ರದುರ್ಗ, ತುಮಕೂರು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ತಮ್ಮ ಮನವಿಗೆ ಸ್ಪಂದಿಸಿ ಯೋಜನೆಗೆ ಅನುಮೋದನೆ ದೊರಕಿಸಿ ಕೊಟ್ಟ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮುಖ್ಯಮಂತ್ರಿ ಅಭಿನಂದನೆ ಸಲ್ಲಿಸಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ನೌಕರರ ಧರಣಿ

ಇಡುಗಂಟು, ಗೌರವಧನಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2016ರಿಂದ ನಿವೃತ್ತಿಯಾದ 7,304 ಅಂಗನವಾಡಿ ನೌಕರರಿಗೆ ಇಡುಗಂಟು ಹಣ ಮತ್ತು ನಿವೃತ್ತಿ ಆಗಲಿರುವ 29,073 ಜನರಿಗೆ ಸೇವಾ ಹಿರಿತನದ ಗೌರವಧನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಅಂಗನವಾಡಿ ನೌಕರರು ಸ್ವಾತಂತ್ರ್ಯಉದ್ಯಾನದಲ್ಲಿ ಗುರುವಾರ ಧರಣಿ ನಡೆಸಿದರು.

2015–16ನೇ ಸಾಲಿನಲ್ಲಿ 2,246 ಅಂಗನವಾಡಿ ಕಾರ್ಯಕರ್ತೆಯರು ಮತ್ತು 5,058 ಸಹಾಯಕಿಯರು ನಿವೃತ್ತಿಯಾಗಿದ್ದಾರೆ. 2011 ಮಾ.18ರ ಆದೇಶದ ಪ್ರಕಾರ ಅವರಿಗೆ ಕ್ರಮವಾಗಿ ₹50 ಸಾವಿರ ಮತ್ತು ₹30 ಸಾವಿರ ಪರಿಹಾರ ಇಡುಗಂಟು ನೀಡಬೇಕಿದೆ. ಅದಕ್ಕಾಗಿ ₹27.40 ಕೋಟಿ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಹೇಳಿದರು.

‘1980–85ನೇ ಸಾಲಿನಿಂದ ಐಸಿಡಿಎಸ್ ಯೋಜನೆಗಾಗಿ ದುಡಿದಿದ್ದಾರೆ. ನಿವೃತ್ತಿಯಾಗಿ ನಾಲ್ಕೈದು ವರ್ಷ ಕಳೆದರೂ ಇಡುಗಂಟು ಬಿಡುಗಡೆ ಮಾಡದೆ ವಂಚಿಸಲಾಗುತ್ತಿದೆ. ಇವರಲ್ಲಿ ಕೆಲವರು ಈಗಾಗಲೇ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ನೌಕರರು ಧರಣಿ ನಡೆಸಿದರು

20 ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿದ 24,800 ಕಾರ್ಯಕರ್ತೆಯರು, 15,711 ಸಹಾಯಕರಿಯರು ಸದ್ಯದಲ್ಲೇ ನಿವೃತ್ತಿ ಆಗಲಿದ್ದಾರೆ. ಕೊರೊನಾ ಸಂದರ್ಭದಲ್ಲಿ ವಯಸ್ಸನ್ನೂ ಲೆಕ್ಕಿಸದೆ ಯೋಧರಂತೆ ದುಡಿದಿದ್ದಾರೆ ಎಂದರು.

‘ಇವರಿಗೆ 2020 ಮಾರ್ಚ್‌ನಿಂದಲೇ ಪೂರ್ವಾನ್ವಯ ಆಗುವಂತೆ ಸೇವಾ ಹಿರಿತನ ಗೌರವಧನ ನೀಡಬೇಕು. ಉಳಿದ 64,552 ಕಾರ್ಯಕರ್ತೆಯರು ಮತ್ತು 59,603 ಸಹಾಯಕಿಯರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಗೌರವಧನ ನೀಡಬೇಕು. ಇದಕ್ಕೆ ₹153.25 ಕೋಟಿ ಅಗತ್ಯವಿದ್ದು, ಅದನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಭರವಸೆ ನೀಡಿದ್ದರು. ಆದರೆ, ಈವರೆಗೆ ಬಿಡುಗಡೆ ಮಾಡಿಲ್ಲ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ನಿರಂತರ ಧರಣಿ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಗುರುವಾರ ನಮ್ಮೊಂದಿಗೆ ಸಭೆ ನಡೆಸಿ ಮೇ 30ರ ತನಕ ಕಾಲಾವಕಾಶ ಕೋರಿದ್ದಾರೆ. ಸದ್ಯಕ್ಕೆ ಧರಣಿ ಕೈಬಿಡಲಾಗಿದೆ’ ಎಂದು ವರಲಕ್ಷ್ಮಿ ತಿಳಿಸಿದರು.

ಬಿಡುಗಡೆ ಆಗಬೇಕಿರುವ ಹಣ (₹ ಕೋಟಿಗಳಲ್ಲಿ)	
ಸೇವಾ ಜೇಷ್ಠತೆ ಆಧಾರದ ಗೌರವಧನ	₹153,26
ಮಿನಿ ಅಂಗನವಾಡಿ ಕೇಂದ್ರಗಳ ಸಹಾಯಕಿ ನೇಮಕಾತಿ	₹6.99
ಸಹಾಯಕಿಯರಿಗೆ ಸಂಬಳ ವ್ಯಾತ್ಯಾಸ	₹131.83
ನಿವೃತ್ತಿ ಸೌಲಭ್ಯ	₹47.82
ಒಟ್ಟು	₹339.48

ರೋಟರಿಯಿಂದ ‘ಗುರುದಕ್ಷಿಣೆ ಪ್ರಶಸ್ತಿ’ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಅತ್ಯುತ್ತಮ ಶಿಕ್ಷಕರಿಗೆ ‘ಗುರುದಕ್ಷಿಣೆ ಪ್ರಶಸ್ತಿ’ ನೀಡಲು ಮುಂದಾಗಿರುವ ರೋಟರಿ ಸಂಸ್ಥೆಯು ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ಶಿಕ್ಷಕರಿಗೆ ಅಗತ್ಯ ಇರುವ ಸಮಯದಲ್ಲಿ ನೆರವು ನೀಡಲು ನಿಧಿ ಸ್ಥಾಪಿಸುವ ಉದ್ದೇಶವನ್ನೂ ಸಂಸ್ಥೆ ಹೊಂದಿದೆ.

ರೋಟರಿ ಸಂಸ್ಥೆಯ ಬೆಂಗಳೂರು ಆಗ್ನೇಯ, ಸ್ಪಂದನ, ಲೇಕ್‌ಸೈಡ್ ಹಾಗೂ ರೋಟರಿ ಬೆಂಗಳೂರು ಮಾನ್ಯತಾ ಕ್ಲಬ್‌ಗಳು ಸೇರಿ ಈ ಪ್ರಶಸ್ತಿಯನ್ನು ನೀಡುತ್ತಿವೆ.

ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾಲೇಜು, ಕ್ರೀಡೆ, ಕಲೆ ಮತ್ತು ಸಂಗೀತ, ಸಾಂಪ್ರದಾಯಿಕ ಜ್ಞಾನ ಹಾಗೂ ವಿಶೇಷ ಮಕ್ಕಳು ಎಂಬ ಎಂಟು ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

ಅರ್ಜಿ ಸಲ್ಲಿಸುವವರು ಅಥವಾ ನಾಮನಿರ್ದೇಶಿತರು ತಮ್ಮ ಹೆಸರು, ವಿಳಾಸ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ, ಸಂಪರ್ಕ ಸಂಖ್ಯೆ, ಇ–ಮೇಲ್ ವಿಳಾಸ, ಹಿಂದಿನ ಮೂರು ವರ್ಷಗಳಲ್ಲಿ ನೀಡಿರುವ ಕೊಡುಗೆ ಹಾಗೂ ಅದರ ಪರಿಣಾಮ, ಸೇವಾ ಅನುಭವ, ಶೈಕ್ಷಣಿಕ ಅರ್ಹತೆ, ಹಿಂದೆ ಕೆಲಸ ಮಾಡಿದ ಸಂಸ್ಥೆಗಳು, ಇತರ ಕ್ಷೇತ್ರಗಳಲ್ಲಿನ ಕೊಡುಗೆ ಮತ್ತು ಯಾವುದಾದರೂ ಪ್ರಶಸ್ತಿಗಳನ್ನು ಪಡೆದಿದ್ದರೆ ಆ ಕುರಿತ ಮಾಹಿತಿಯನ್ನು ಪಿಡಿಎಫ್ ರೂಪದಲ್ಲಿ ಒದಗಿಸಬೇಕು.

ಇತ್ತೀಚೆಗೆ ತಮ್ಮ ವಿದ್ಯಾರ್ಥಿಗಳಿಗೆ ಮಾಡಿದ ಬೋಧನೆ, ಕಲಿಕೆ ಅಥವಾ ಮೌಲ್ಯಮಾಪನದಲ್ಲಿ ಪ್ರಯತ್ನಿಸಿದ ಮೂರು ನವೀನ ವಿಚಾರಗಳು ಅಥವಾ ಪ್ರಯೋಗಗಳ ಕುರಿತು ಸುಮಾರು 300 ಪದಗಳಲ್ಲಿ ವಿವರಿಸಬೇಕು. ಇದನ್ನು ಕನಿಷ್ಠ ಎರಡು ಮಾದರಿಗಳೊಂದಿಗೆ ತರಗತಿಯಲ್ಲಿ ಅನುಷ್ಠಾನಗೊಳಿಸಿರಬೇಕು. ಇದರ ಜೊತೆಗೆ ಎರಡು ಛಾಯಾಚಿತ್ರಗಳು, ಎರಡು ನಿಮಿಷದ ವಿಡಿಯೊ ತುಣುಕು, ವಿದ್ಯಾರ್ಥಿಗಳ ಪ್ರತಿಕ್ರಿಯೆ, ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಸಹ ಶಿಕ್ಷಕರ ಪ್ರತಿಕ್ರಿಯೆ ಮತ್ತು ಸ್ವಯಂ ಅವಲೋಕನದ ವಿವರಗಳನ್ನು ಲಗತ್ತಿಸಿರಬೇಕು. ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಸಲ್ಲಿಕೆ ಅಥವಾ ನಾಮನಿರ್ದೇಶನಕ್ಕೆ ಮಾರ್ಚ್ 31 ಕೊನೆಯ ದಿನ. ಏ. 25ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಮಾಹಿತಿಗೆ, 9449750492.

‘ರಾಜಕೀಯ ವೇದಿಕೆಯ ಮನಸ್ಥಿತಿಯಿಂದ ಹೊರಬನ್ನಿ’

ವಿರೋಧ ಪಕ್ಷಕ್ಕೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್ಸಿನ ನಡೆಗೆ ತೀವ್ರ ಬೇಸರ ವ್ಯಕ್ತಪಡಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಸದನವನ್ನು ರಾಜಕೀಯ ವೇದಿಕೆಯಾಗಿ ಮಾಡುವ ಮನಸ್ಥಿತಿಯಿಂದ ಹೊರಬರಬೇಕು’ ಎಂದು ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಸದನದ ಹೊರಗಡೆ ರಾಜಕೀಯ ಚಟುವಟಿಕೆ ತಮ್ಮ ಇಚ್ಛೆಗೆ ತಕ್ಕಂತೆ ನಡೆಸಿ. ಆದರೆ, ಸದನದ ಒಳಗಿನ ಸಂವಾದ, ತರ್ಕಕ್ಕೆ ಇರುವಂಥ ಅವಕಾಶವನ್ನು ಮೊಟಕುಗೊಳಿಸಿರುವುದು ಸರಿಯಲ್ಲ. ಹಾಗೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ವಿರೋಧ ಪಕ್ಷದ ಮೇಲಿದೆ’ ಎಂದರು.

‘ಆಡಳಿತ ಪಕ್ಷದ ಸಭಾನಾಯಕರಿಗೆ ಇರುವಷ್ಟೇ ಜವಾಬ್ದಾರಿ ವಿರೋಧ ಪಕ್ಷದ ನಾಯಕರಿಗೆ ಇದೆ. ಸಂಸದೀಯ ವ್ಯವಸ್ಥೆಗೆ ಶಕ್ತಿ ಬರಬೇಕಾದರೆ ವಿರೋಧ ಪಕ್ಷ ಕೂಡಾ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ‘ಒಂದು ದೇಶ, ಒಂದು ಚುನಾವಣೆ’ ವಿಷಯವನ್ನು ಎರಡು ದಿನ ಚರ್ಚೆಗೆ ತೆಗೆದುಕೊಳ್ಳಲು ಬಯಸಿದ್ದೆ. ಆದರೆ ಚರ್ಚೆ ಆಗಲೇ ಇಲ್ಲ. ಅವರು (ಕಾಂಗ್ರೆಸ್) ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಿತ್ತು. ಭಿನ್ನಾಭಿಪ್ರಾಯಗಳು ಇರುವುದು ಸಹಜ. ಅದನ್ನಾದರೂ ವ್ಯಕ್ತಪಡಿಸಬೇಕಿತ್ತು. ಚರ್ಚೆಗೆ ಅಡ್ಡಿಪಡಿಸಿರುವುದು ಅಕ್ಷಮ್ಯ. ಚರ್ಚೆ ಆಗದಂತೆ, ಸದನ ನಡೆಯದಂತೆ ಮಾಡಿರುವುದನ್ನು ಜನರು ಹಾಗೂ ಸಂವಿಧಾನವೂ ಒಪ್ಪುವುದಿಲ್ಲ’ ಎಂದರು.

‘ಸದನದ ಒಳಗೆ ಮಾತಿನಲ್ಲಿ, ಕ್ರಿಯೆಯಲ್ಲಿ ರಾಜಕೀಯ ಇರಲಿ. ಅದು ಸಂಸದೀಯ ಮೌಲ್ಯಗಳಿಗೆ ಪೂರಕವಾಗಿರಲಿ. ಆಡಳಿತ ಪಕ್ಷದ ನ್ಯೂನತೆಗಳನ್ನು ಎತ್ತಿ ತೋರಿಸಲಿ. ಚರ್ಚೆ ಮಾಡದೆ, ಉಳಿದವರಿಗೂ ಅವಕಾಶ ನೀಡುವುದಿಲ್ಲವೆಂದರೆ ಹೇಗೆ’ ಎಂದೂ ಪ್ರಶ್ನಿಸಿದರು.

‘ಕಲಾಪದಲ್ಲಿ ಸಚಿವರು, ಶಾಸಕರ ಪಾಲ್ಗೊಳ್ಳುವಿಕೆ ಗಮನಿಸಿದಾಗ ಅವರು ಇನ್ನೂ ಉತ್ತಮವಾಗಿ ಸ್ಪಂದಿಸಬಹುದಿತ್ತು. ಅಧಿವೇಶನ ನಡೆಯುವ ಅಷ್ಟೂ ದಿನ ಬೇರೆ ಕಾರಣಗಳಿಗೆ ಗೈರಾಗುವುದು, ಭಾಗವಹಿಸಿದರೂ ಸಕ್ರಿಯವಾಗಿ ತೊಡಗಿಸಿಕೊಳ್ಳದಿರುವುದು ಸರಿಯಲ್ಲ. ಸಚಿವರು, ಶಾಸಕರು ಕಾರಣಗಳನ್ನು ಕೊಟ್ಟು ಗೈರಾಗುವುದು ಹೆಚ್ಚಾಗುತ್ತಿದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪರಿಶೀಲಿಸಿ ಕ್ರಮ: ‘ಸಚಿವ ಡಾ. ಸುಧಾಕರ್ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ ಕಾಂಗ್ರೆಸ್ ನಾಯಕರು ಪತ್ರ ಬರೆದಿದ್ದಾರೆ. ಸುಧಾಕರ್ ತಮ್ಮ ಹೇಳಿಕೆಗೆ ಸ್ಪಷ್ಟೀಕರಣ ನೀಡಿದ್ದಾರೆ. ಎರಡನ್ನೂ ಪರಿಗಣಿಸಿ ಏನು ಮಾಡಬಹುದು, ಯಾವ ರೀತಿಯ ಕ್ರಮ ಕೈಗೊಳ್ಳುವ ಅವಕಾಶ ಇದೆ ಎಂಬ ಬಗ್ಗೆ ಪರಿಶೀಲಿಸುತ್ತೇನೆ’ ಎಂದರು.

ಶಾಸಕರ ನಿಧಿ: ಒಂದೇ ತಿಂಗಳಲ್ಲಿ ₹ 150 ಕೋಟಿ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿಲ್ಲಾಧಿಕಾರಿಗಳ ಪಿ.ಡಿ (ವೈಯಕ್ತಿಕ ಠೇವಣಿ) ಖಾತೆಯಲ್ಲಿದ್ದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಕಳೆದೊಂದು ತಿಂಗಳ ಅವಧಿಯಲ್ಲಿ ₹ 150 ಕೋಟಿ ವೆಚ್ಚವಾಗಿದೆ. ಅಧಿಕಾರಿಗಳು ಚುರುಕಿನಿಂದ ಕೆಲಸ ಮಾಡಿದ್ದರಿಂದ ಇದು ಸಾಧ್ಯವಾಗಿದೆ’ ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವ ಕೆ.ಸಿ. ನಾರಾಯಣಗೌಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತಿಂಗಳ ಹಿಂದೆ ಪ್ರಗತಿ ಪರಿಶೀಲನಾ ಸಭೆ ನಡೆಸಿದಾಗ ₹ 1,150 ಕೋಟಿ ಅನುದಾನ ಪಿ.ಡಿ ಖಾತೆಯಲ್ಲಿರುವುದು ಗಮನಕ್ಕೆ ಬಂದಿತ್ತು. ಅನುದಾನ ಬಳಕೆಯಾಗದೆ ಇರುವುದಕ್ಕೆ ಗರಂ ಆಗಿದ್ದ ಸಚಿವರು, ತಿಂಗಳ ಗಡವು ನೀಡಿದ್ದರು.



ಕೆ.ಸಿ. ನಾರಾಯಣ ಗೌಡ

ವಿಕಾಸಸೌಧದಲ್ಲಿ ಗುರುವಾರ ವಿಡಿಯೊ ಸಂವಾದದ ಮೂಲಕ ಜಿಲ್ಲಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ‘ಕೆಲವು ಜಿಲ್ಲೆಗಳಲ್ಲಿ ಪ್ರಗತಿ ಇನ್ನೂ ವೇಗ ಪಡೆಯಬೇಕು. ಮೈಸೂರು ಸೇರಿದಂತೆ ಕೆಲವು ಜಿಲ್ಲೆಯ ಜಿಲ್ಲಾಧಿಕಾರಿಗಳು ಸ್ಪಷ್ಟ ಮಾಹಿತಿಯೊಂದಿಗೆ ಸಭೆಗೆ ಬಂದಿಲ್ಲ. ಹೀಗಾಗದಂತೆ ನೋಡಿಕೊಳ್ಳಬೇಕು’ ಎಂದರು.

ಜಿಲ್ಲಾಧಿಕಾರಿಗಳು ನೀಡಿರುವ ಮಾಹಿತಿ ಅನ್ವಯ 2019-20ನೇ ಸಾಲಿನಲ್ಲಿ 45 ಶಾಸಕರು ಮತ್ತು ವಿಧಾನಪರಿಷತ್‌ನ ಆರು ಸದಸ್ಯರು ಕ್ರಿಯಾಯೋಜನೆ ಕೊಟ್ಟಿದ್ದಾರೆ. 2020-21ನೇ ಸಾಲಿನಲ್ಲಿ 53 ಶಾಸಕರು, ಪರಿಷತ್ ಎಂಟು ಸದಸ್ಯರು ಮಾತ್ರ ಕ್ರಿಯಾಯೋಜನೆ ಸಲ್ಲಿಸಿದ್ದಾರೆ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಕೇವಲ ಶೇ 32 ರಷ್ಟು ಮಾತ್ರ ಬಳಕೆಯಾಗಿದೆ. ಏಪ್ರಿಲ್ ಅಂತ್ಯದೊಳಗೆ ಪ್ರಗತಿಯಲ್ಲಿರುವ ಎಲ್ಲ ಕಾಮಗಾರಿ ಮುಗಿಸಿ ವರದಿ ನೀಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಹಣ ವಾಪಸ್- ಎಚ್ಚರಿಕೆ: ‘ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದ ಅಡಿ ಕಾಮಗಾರಿಗಳು ಎರಡು ವರ್ಷವಾದರೂ ಆರಂಭಿಸದಿದ್ದರೆ ಅವುಗಳನ್ನು ರದ್ದುಪಡಿಸಿ, ಹಣ ವಾಪಸ್ ಪಡೆಯಲಾಗುವುದು. ಜಿಲ್ಲಾಧಿಕಾರಿಗಳು ಕಾಮಗಾರಿಗಳಿಗೆ ಅನುಮೋದನೆ ನೀಡುವಾಗ ಸರ್ಕಾರದ ಮಾರ್ಗಸೂಚಿ ಪಾಲಿಸಬೇಕು. 2019-20ನೇ ಸಾಲಿಗೆ ಪ್ರತಿ ಶಾಸಕರ ಅನುದಾನದಲ್ಲಿ ₹ 2 ಕೋಟಿಗೆ ಮಾತ್ರ ಅನುಮೋದನೆ ನೀಡಬೇಕು. ಪ್ರಸಕ್ತ ಸಾಲಿಗೆ ₹ 1 ಕೋಟಿಗೆ ಮಾತ್ರ ಅನುಮೋದನೆ ನೀಡಬೇಕು’ ಎಂದು ಸಚಿವರು ಸೂಚನೆ ನೀಡಿದರು.

ಹಾಸನ ಪ್ರಥಮ: ಹಾಸನ ಜಿಲ್ಲೆಯಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಶೇ 68ರಷ್ಟು ಬಳಕೆಯಾಗಿದ್ದು ಮೊದಲ ಸ್ಥಾನದಲ್ಲಿದೆ. ಉಡುಪಿ ಹಾಗೂ ಚಿಕ್ಕಮಗಳೂರು ಶೇ 61ರಷ್ಟು ಬಳಕೆ ಮಾಡಿ ನಂತರದ ಸ್ಥಾನಗಳಲ್ಲಿವೆ’ ಎಂದು ಸಚಿವರು ಹೇಳಿದರು.

18 ಹುಲಿ ಉಗುರು, 2 ಹಲ್ಲು ವಶ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಹುಣಸೂರಿನಲ್ಲಿ ಹುಲಿಯ ಉಗುರು ಹಾಗೂ ಹಲ್ಲುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು, ಅರಣ್ಯ ಸಂಚಾರ ದಳದ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ.

ಕೆ.ಆರ್.ಪೇಟೆ ತಾಲ್ಲೂಕಿನ ಶಂಕರ (40) ಹಾಗೂ ಹುಣಸೂರಿನ ಗಣೇಶ್ (48) ಬಂಧಿತರು. ಆರೋಪಿಗಳಿಂದ ಹುಲಿಯ 18 ಉಗುರು ಹಾಗೂ ಎರಡು ಹಲ್ಲುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಡಿಸಿಎಫ್ ಎ.ಟಿ.ಪೂವಯ್ಯ ತಿಳಿಸಿದ್ದಾರೆ.

ಆರ್‌ಎಫ್‌ಒ ವಿವೇಕ್, ಸಿಬ್ಬಂದಿ ಲಕ್ಷ್ಮೀಶ, ನಾಗರಾಜ್, ಪ್ರಮೋದ್, ಸುಂದರ್, ವಿನೋದ್, ಸ್ನೇಹಾ, ಮೇಘನಾ, ಚನ್ನಬಸಪ್ಪ, ವಿರೂಪಾಕ್ಷ, ಶರಣಪ್ಪ, ಗೋವಿಂದ, ಕೊಟ್ರೇಶ್, ರವಿಕುಮಾರ್, ಮಧು, ಪುಟ್ಟಸ್ವಾಮಿ ಕಾರ್ಯಾಚರಣೆ ತಂಡದಲ್ಲಿ ಇದ್ದರು.

‘ರಂಗಭೂಮಿ ಕನ್ನಡ ಭಾಷೆ ಕಲಿಸಿತು’

ಪ್ರಜಾವಾಣಿ ವಾರ್ತೆ

ನೆಲಮಂಗಲ: ’ರಂಗಭೂಮಿ ಕನ್ನಡ ಭಾಷೆಯನ್ನು ಹಾಗೂ ಬದುಕುವ ಕಲೆಯನ್ನು ಕಲಿಸಿಕೊಟ್ಟಿತು‘ ಎಂದು ಹಿರಿಯ ನಟಿ ಮಾಲತಿಶ್ರೀ ಮೈಸೂರು ತಿಳಿಸಿದರು.

ಕನ್ನಡ ಸಾಂಸ್ಕೃತಿಕ ರಂಗವು ಬಸವೇಶ್ವರ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ, ಡಿ.ವಿ.ಗುಂಡಪ್ಪ ಅವರ ಜನ್ಮದಿನಾಚರಣೆ ಹಾಗು ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ‘ಡಿ.ವಿ.ಗುಂಡಪ್ಪ ಅವರ ಸಾಹಿತ್ಯವನ್ನು ಓದಿ ಅಳವಡಿಸಿಕೊಳ್ಳುವ ಮೂಲಕ ಅವರ ಜನ್ಮದಿನಾಚರಣೆಯ ಸಾರ್ಥಕತೆ ಕಂಡುಕೊಳ್ಳಬೇಕು’ ಎಂದರು.

ವಿವಿಧ ಕ್ಷೇತ್ರಗಳ ಮಹಿಳಾ ಸಾಧಕಿಯರನ್ನು ಗೌರವಿಸಲಾಯಿತು

ಮಹಿಳಾ ಸಾಧಕಿಯರಾದ ಕೆ.ಸಿ. ವೇದಾವತಿ (ಸಹಕಾರ ಕ್ಷೇತ್ರ), ಹಿರಿಯ ಶುಶ್ರೂಷಕಿ ಶಶಿರೇಖಾ, ಪೊಲೀಸ್ ಕಾನ್‌ಸ್ಟೆಬಲ್ ದೀಪಿಕ, ಪೌರ ಕಾರ್ಮಿಕ ಚೆನ್ನಮ್ಮ, ಪದವಿಯಲ್ಲಿ ಚಿನ್ನದ ಪದಕ ವಿಜೇತರಾದ ಪರೋಜಾ ಭಾನು, ಬಿ.ಎಸ್.ಪವಿತ್ರಾ ಅವರನ್ನು ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು ಗೌರವಿಸಿದರು.

ಪ್ರಾಂಶುಪಾಲೆ ಎಚ್.ಎಸ್.ನೀಲಾ, ರಂಗಶಿಕ್ಷಣ ಕೇಂದ್ರದ ವ್ಯವಸ್ಥಾಪಕ ನಿರ್ದೇಶಕಿ ಮಂಜುಳ ಸಿದ್ದರಾಜು, ಮುಖ್ಯ ಶಿಕ್ಷಕಿ ಗೌಹರ್ ಜಾನ್, ಗ್ರಾ.ಪಂ.ಸದಸ್ಯ ಉಮೇಶ್ ಗೌಡ, ಕನ್ನಡ ವಿಭಾಗದ ಮುಖ್ಯಸ್ಥೆ ಅಕ್ಕಮಹಾದೇವಿ ಇದ್ದರು.

ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ ಆದಿಜಾಂಬವ ಸಮುದಾಯ

ಒಳಮೀಸಲಾತಿ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು:ನ್ಯಾ.ಸದಾಶಿವ ಆಯೋಗದ ವರದಿ ಜಾರಿ ಮಾಡುವುದರ ಜತೆಗೆ ಒಳಮೀಸಲಾತಿ ನೀಡಬೇಕು ಎಂದು ಆದಿ ಜಾಂಬವ ಸಮುದಾಯದ ಸ್ವಾಮೀಜಿಗಳು ಮತ್ತು ಜನಪ್ರತಿನಿಧಿಗಳು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಹಿರಿಯೂರು ಆದಿಜಾಂಬವ ಮಠದ ಷಡಕ್ಷರಮುನಿ ದೇಶೀಕೇಂದ್ರ ಸ್ವಾಮೀಜಿ, ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ಮತ್ತು ಹರಳಯ್ಯ ಸ್ವಾಮೀಜಿ ಅವರು ಆದಷ್ಟು ಬೇಗ ಈ ಸಂಬಂಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

‘ಸಮುದಾಯವು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಮಾತಿಗೆ ಗೌರವ ಕೊಡುತ್ತಲೇ ಬಂದಿದೆ. ಸರ್ಕಾರ ಸದಾಶಿವ ಆಯೋಗದ ವರದಿ ಮಂಡನೆಗೆ ಸ್ಪಷ್ಟ ನಿಲುವು ತಳೆಯುತ್ತದೆ ಎಂದು ನಂಬಿದ್ದೇವೆ. ಒಂದು ವೇಳೆ ಬೇಡಿಕೆ ಈಡೇರಿಸಲು ಹಿಂದೇಟು ಹಾಕಿದರೆ, ಮುಂದಿನ ದಿನಗಳಲ್ಲಿ ಸಮುದಾಯದ ಎಲ್ಲರನ್ನು ಒಳಗೊಂಡಂತೆ ಸದಾಶಿವ ಆಯೋಗದ ವರದಿ ಜಾರಿಗೆ ಹೋರಾಟ ರೂಪಿಸಲಾಗುವುದು’ ಎಂದು ಮಠಾಧೀಶರು ಎಚ್ಚರಿಕೆ ನೀಡಿದರು.

ಆದಿಜಾಂಬವ ಸಮುದಾಯದ ಮಠಾಧೀಶರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ನೀಡಿದರು. ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಂಸದ ನಾರಾಯಣಸ್ವಾಮಿ ಇದ್ದರು

ಈ ವಿಷಯವಾಗಿ ಸಮುದಾಯದ ಎಲ್ಲ ಸ್ವಾಮೀಜಿಗಳು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಷಡಕ್ಷರಮುನಿ ಸ್ವಾಮೀಜಿ ಹೇಳಿದರು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಚಿತ್ರದುರ್ಗ ಸಂಸದ ಎ.ನಾರಾಯಣಸ್ವಾಮಿ, ನಿಗಮ–ಮಂಡಳಿಗಳ ಅಧ್ಯಕ್ಷರು, ಜನಪ್ರತಿನಿಧಿಗಳು ಇದ್ದರು.

‘ಕೆಲ ಮಠಾಧೀಶರಿಂದಲೇ ವಿರೋಧ’

ಜಾತಿ ಗಣತಿ ವರದಿ ಬಿಡುಗಡೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಹಿಂದುಳಿದ ವರ್ಗಗಳ ಆಯೋಗದ ಈ ಹಿಂದಿನ ಅಧ್ಯಕ್ಷ ಎಚ್. ಕಾಂತರಾಜು ನೇತೃತ್ವದ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ–ಶೈಕ್ಷಣಿಕ ಸಮೀಕ್ಷಾ (ಜಾತಿ ಗಣತಿ) ವರದಿ ಬಿಡುಗಡೆಗೆ, ಕೆಲವು ಪ್ರಭಾವಿ ಮಠಾಧೀಶರೇ ವಿರೋಧ ವ್ಯಕ್ತಪಡಿಸುತ್ತಿದ್ದು, ಇದು ಸಲ್ಲದು’ ಎಂದು ಕಾಗಿನೆಲೆ ಮಹಾಸಂಸ್ಥಾನದ ತಿಂಥಿಣಿ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಿಡಿಕಾರಿದರು.

ಜಾತಿ ಗಣತಿಯ ವರದಿ ಬಿಡುಗಡೆಗೆ ಅಡ್ಡಿಪಡಿಸುತ್ತಿರುವವರು ಮಾನವೀಯತೆಯ ವಿರೋಧಿಗಳು ಎಂದು ಹರಿಹಾಯ್ದ ಅವರು, ‘ವರದಿ ಜಾರಿಯಾದರೆ 2 ಎ, ಎಸ್‌ಸಿ/ಎಸ್‌ಟಿ ಮೀಸಲಾತಿಯ ಸಮಸ್ಯೆ ಪರಿಹಾರವಾಗಲಿದೆ. ಸಣ್ಣ ಸಮುದಾಯಗಳಿಗೆ ಧ್ವನಿ ಸಿಗಲಿದೆ. ಆದರೆ, ಆಡಳಿತಾರೂಢರು ಉಳ್ಳವರ ಪರವಾದ ಕಾನೂನು ರಚಿಸುವಲ್ಲೇ ನಿರತರಾಗಿದ್ದಾರೆ. ಇವರ ವರ್ತನೆ ಈಗಾಗಲೇ ಜಗಜ್ಜಾಹೀರಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಅಧ್ಯಯನ ಸಂಸ್ಥೆಯು ತಾರತಮ್ಯ ಎಸಗುವ ಕೇಂದ್ರವಾಗಿದೆ. ಕೆಎಎಸ್ ಅಧಿಕಾರಿ ಕಾರ್ಯ ನಿರ್ವಹಿಸಬೇಕಾದ ಸ್ಥಳದಲ್ಲಿ ನಿಯೋಜನೆಗೊಂಡ ಪ್ರೊಫೆಸರ್ ಕೆಲಸ ಮಾಡುತ್ತಿದ್ದಾರೆ. ಆದಿವಾಸಿಗಳಿಗೆ ನ್ಯಾಯ ದೊರಕಬೇಕು ಎಂದರೆ, ಮೊದಲು ಅಲ್ಲಿ ಕೆಎಎಸ್ ಅಧಿಕಾರಿಯನ್ನು ನೇಮಿಸಬೇಕು’ ಎಂದು ಆಗ್ರಹಿಸಿದ ಸ್ವಾಮೀಜಿ, ವಾಲ್ಮೀಕಿ ನಿಗಮವೂ ಜಾತಿಗಷ್ಟೇ ಸೀಮಿತವಾಗಿದ್ದಾಗಿ ದೂರಿದರು.

‘ಮಹಾರಾಷ್ಟ್ರ: ಶುಕ್ಲಾರಿಂದ ಗೋಪ್ಯ ಪತ್ರ ಸೋರಿಕೆ’

ಮುಂಬೈ (ಪಿಟಿಐ): ಪೊಲೀಸರ ವರ್ಗಾವಣೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಗೋಪ್ಯ ಪತ್ರವನ್ನು ಐಪಿಎಸ್ ಅಧಿಕಾರಿ ರಶ್ಮಿ ಶುಕ್ಲಾ ಅವರೇ ಸೋರಿಕೆ ಮಾಡಿರುವ ಸಾಧ್ಯತೆ ಇದೆ ಎಂದು ಮಹಾರಾಷ್ಟ್ರ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೀತಾರಾಂ ಕುಂಟೆ ಅವರು ಸಲ್ಲಿಸಿರುವ ಸತ್ಯಶೋಧನಾ ವರದಿಯಲ್ಲಿ ಹೇಳಲಾಗಿದೆ.

‘ಪೊಲೀಸರ ವರ್ಗಾವಣೆ ಹಗರಣಕ್ಕೆ ಸಂಬಂಧಿಸಿದಂತೆ ಶುಕ್ಲಾ ಅವರು ಸಲ್ಲಿಸಿರುವ ವರದಿಯನ್ನು ರಾಜ್ಯ ಸರ್ಕಾರವೇ ಮುಚ್ಚಿಟ್ಟಿದೆ’ ಎಂದು ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಇತ್ತೀಚೆಗೆ ಆರೋಪಿಸಿದ್ದರು.

ಈ ಸಂಬಂಧ ವರದಿ ಸಲ್ಲಿಸುವಂತೆ ಕುಂಟೆ ಅವರಿಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಸೂಚನೆ ನೀಡಿದ್ದರು. ಇತ್ತೀಚಿನ ವರ್ಷಗಳಲ್ಲಿಯೇ ಪೊಲೀಸ್ ಇಲಾಖೆಯಲ್ಲಿ ಭಾರಿ ವರ್ಗಾವಣೆ ಮಾಡಲಾಗಿದ್ದು, ಇದು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿದೆ.

ಭೂಮಿ ನೀಡುವಂತೆ ಸಿ.ಎಂಗೆ ಪತ್ರ ಬರೆದ ಸಚಿವ

ಈ ಸಂಬಂಧ, ಕಂದಾಯ ಸಚಿವ ಆರ್. ಅಶೋಕ ಅವರಿಗೂ ಪ್ರತ್ಯೇಕ ಪತ್ರ ಬರೆದಿದ್ದಾರೆ.

‘1 ಲಕ್ಷ ಬಹುಮಹಡಿ ವಸತಿ ಯೋಜನೆಗೆ ಇನ್ನೂ 500 ಎಕರೆ ಅವಶ್ಯ’

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 1 ಲಕ್ಷ ಬಹುಮಹಡಿ ವಸತಿ ನಿರ್ಮಾಣ ಮಾಡುವ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಅವಶ್ಯವಿರುವ 500 ಎಕರೆ ವಸತಿ ಯೋಗ್ಯ ಭೂಮಿ ಮಂಜೂರು ಮಾಡುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ವಸತಿ ಸಚಿವ ವಿ. ಸೋಮಣ್ಣ ಪತ್ರ ಬರೆದಿದ್ದಾರೆ.

‘ಸರ್ಕಾರ ಈಗಾಗಲೇ 1,014 ಎಕರೆ ಭೂಮಿಯನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರಿಸಿದೆ. ಆದರೆ, ಈ ಭೂಮಿಯಲ್ಲಿ 311 ಎಕರೆ ಪ್ರದೇಶ ಮಾತ್ರ ವಸತಿ ಯೋಜನೆಗೆ ಬಳಸಲು ಯೋಗ್ಯವಾಗಿದೆ. ಈವರೆಗೆ 46,499 ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಇನ್ನೂ 500 ಎಕರೆ ಭೂಮಿ ಅವಶ್ಯವಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಹರಾಜು ಹಾಕಲು ಉದ್ದೇಶಿಸಿರುವ 103.12 ಎಕರೆ ಸರ್ಕಾರಿ ಕಂದಾಯ ಭೂಮಿ ಸೇರಿದಂತೆ ಒಟ್ಟು 500 ಎಕರೆ ಭೂಮಿಯನ್ನು ಈ ಉದ್ದೇಶಕ್ಕಾಗಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಮಂಜೂರು ಮಾಡಬೇಕು’ ಎಂದೂ ಅವರು ಪತ್ರದಲ್ಲಿ ಮನವಿ ಮಾಡಿದ್ದಾರೆ.



ಬಿಬಿಎಂಪಿ ಆಯುಕ್ತರಿಗೂ ಪತ್ರ ಬರೆದಿರುವ ಅವರು, ‘ಈ ಯೋಜನೆಗಾಗಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಮಂಜೂರು ಮಾಡಿರುವ ಭೂಮಿಯ ಪೈಕಿ, ಬಿಬಿಎಂಪಿ ವ್ಯಾಪ್ತಿಯಲ್ಲಿ 30 ಎಕರೆ ಜಾಗ ಕ್ವಾರಿಗಳು, ಹಳ್ಳಕೊಳ್ಳಗಳಿಂದ ಕೂಡಿದ್ದು ಅನುಪಯುಕ್ತವಾಗಿದೆ. ಈ ಭೂಮಿಯನ್ನು ಪಾಲಿಕೆ ವತಿಯಿಂದಲೇ ಸಮತಟ್ಟು ಮಾಡಿಕೊಡಲು ಹಾಗೂ ಅಲ್ಲಿ ವಸತಿ ನಿರ್ಮಾಣ ಮಾಡಲು ಪಾಲಿಕೆ ವತಿಯಿಂದ ಅನುದಾನ ಒದಗಿಸಬೇಕು’ ಎಂದೂ ಮನವಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ವೈಜ್ಞಾನಿಕ ಸಲಹೆಗಾರ ವಿಜಯರಾಘವನ್ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿರುವ ಪ್ರೊ.ಕೆ.ವಿಜಯರಾಘವನ್ ಅವರ ಸೇವಾವಧಿಯನ್ನು ಒಂದು ವರ್ಷ ವಿಸ್ತರಿಸಿ ಸಿಬ್ಬಂದಿ ಸಚಿವಾಲಯ ಗುರುವಾರ ಆದೇಶ ಹೊರಡಿಸಿದೆ.

ಪ್ರೊ.ಕೆ.ವಿಜಯರಾಘವನ್ ಅವರ ಸೇವಾವಧಿಯು ಮುಂದಿನ ವರ್ಷ ಏಪ್ರಿಲ್ 2ರಂದು ಅಂತ್ಯಗೊಳ್ಳುವುದು ಎಂದು ನೇಮಕಾತಿಗೆ ಸಂಬಂಧಿಸಿದ ಸಂಪುಟ ಸಮಿತಿ ಪ್ರಕಟಣೆ ತಿಳಿಸಿದೆ.

ಬ್ಯಾಂಕುಗಳಿಗೆ ವಂಚನೆ: ಬೆಂಗಳೂರು ಸೇರಿ 100 ಸ್ಥಳಗಳಲ್ಲಿ ಶೋಧ

ನವದೆಹಲಿ (ಪಿಟಿಐ): ವಿವಿಧ ಬ್ಯಾಂಕುಗಳಿಗೆ ವಂಚಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬೆಂಗಳೂರು, ಬಳ್ಳಾರಿ ಸೇರಿದಂತೆ ದೇಶದ 100 ಸ್ಥಳಗಳಲ್ಲಿ ಸಿಬಿಐ ಗುರುವಾರ ಶೋಧಕಾರ್ಯ ಕೈಗೊಂಡಿತ್ತು.

₹ 3,700 ಕೋಟಿಗೂ ಅಧಿಕ ಮೊತ್ತದ ಅವ್ಯವಹಾರಕ್ಕೆ ಸಂಬಂಧಿಸಿದಂತೆ 11 ರಾಜ್ಯಗಳಲ್ಲಿ ಒಟ್ಟು 30 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ವಂಚನೆ ಕುರಿತು ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಎಸ್‌ಬಿಐ, ಐಡಿಬಿಐ, ಕೆನರಾ ಬ್ಯಾಂಕ್, ಇಂಡಿಯನ್ ಬ್ಯಾಂಕ್ ಹಾಗೂ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನೀಡಿರುವ ದೂರುಗಳ ಆಧಾರದ ಮೇಲೆ ಶೋಧ ಕಾರ್ಯ ಕೈಗೊಳ್ಳಲಾಗಿತ್ತು ಎಂದು ಸಿಬಿಐ ವಕ್ತಾರ ಆರ್.ಸಿ.ಜೋಶಿ ತಿಳಿಸಿದ್ದಾರೆ.

ಮಸೀದಿ, ಚರ್ಚ್‌ಗೆ ವಿದ್ಯುತ್ ದರ ಯುನಿಟ್‌ಗೆ ₹ 2.85

ಚಿಕ್ಕಮಗಳೂರು: ‘ದೇವಸ್ಥಾನಕ್ಕೆ ವಿದ್ಯುತ್ ದರ ಯುನಿಟ್‌ಗೆ ₹ 8, ಮಸೀದಿ ಮತ್ತು ಚರ್ಚ್‌ಗೆ ಯುನಿಟ್‌ಗೆ ₹ 2.85 ಇದಕ್ಕೊಂದು ಅಭಿಯಾನ ಶುರುವಾಗಬೇಕಿದೆ. ಅಭಿಯಾನಕ್ಕೆ ಬೆಂಬಲ ನೀಡುವುದಾದರೆ ಶೇರ್ ಮಾಡುವ ಮೂಲಕ ವೈರಲ್ ಮಾಡಿ ಎಂಬ ಹುಸಿ ಪೋಸ್ಟ್‌ವೊಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

‘ಇದೊಂದು ಸುಳ್ಳು ಪೋಸ್ಟ್. ವ್ಯಾಟ್ಸ್ ಅಪ್‌ನಲ್ಲಿ ವೈರಲ್ ಮಾಡಿದ್ದಾರೆ. ಈ ಪೋಸ್ಟ್ ಅನ್ನು ದುರುದ್ದೇಶದಿಂದ ವೈರಲ್ ಮಾಡಿರಬಹುದು. ಇಂಥವುಗಳನ್ನು ನಂಬಬಾರದು. ಧಾರ್ಮಿಕ ಮಂದಿರಗಳಿಗೆ ಪ್ರತ್ಯೇಕ ವಿದ್ಯುತ್ ದರ ನಿಗದಿಪಡಿಸುವುದಿಲ್ಲ’ ಎಂದು ಮೆಸ್ಕಾಂ ಸೂಪರಿಂಟೆಂಡೆಂಡ್ ಎಂಜಿನಿಯರ್ ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ಹೂವಿನಹಡಗಲಿ ತಾಲ್ಲೂಕು ಮೈಲಾರ ಸುಕ್ಷೇತ್ರದಲ್ಲಿ ಕಾಣಿಕೆ ಹುಂಡಿ ತೆರೆದು ಎಣಿಕೆ ಮಾಡಲಾಯಿತು

ಮೈಲಾರ: ₹ 27.23 ಲಕ್ಷ ಕಾಣಿಕೆ ಸಂಗ್ರಹ

ಹೂವಿನಹಡಗಲಿ : ತಾಲ್ಲೂಕಿನ ಸುಕ್ಷೇತ್ರ ಮೈಲಾರದಲ್ಲಿ ಜಾತ್ರೆ ಪ್ರಯುಕ್ತ ದೇವಸ್ಥಾನದಲ್ಲಿ ಅಳವಡಿಸಿದ್ದ ಕಾಣಿಕೆ ಹುಂಡಿಗಳನ್ನು ಬುಧವಾರ ತೆರೆಯಲಾಗಿದ್ದು ₹27.23 ಲಕ್ಷ ಕಾಣಿಕೆ ಸಂಗ್ರಹವಾಗಿದೆ.

‘ಜಾತ್ರೆ ಮುನ್ನ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಅಳವಡಿಸಿದ್ದ ಎಂಟು ಹುಂಡಿ, ಗಂಗಿಮಾಳಮ್ಮ ದೇವಸ್ಥಾನದಲ್ಲಿಯ ಎರಡು ಕಾಣಿಕೆ ಹುಂಡಿಗಳು ಸೇರಿ ಭಕ್ತರಿಂದ ಕಾಣಿಕೆ ಸಂಗ್ರಹವಾಗಿದೆ’ ಎಂದು ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಎಂ.ಎಚ್.ಪ್ರಕಾಶ್ ರಾವ್ ತಿಳಿಸಿದರು.

ದೇವಸ್ಥಾನ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಗಂಗಾಧರಪ್ಪ, ಮುಜರಾಯಿ ಇಲಾಖೆ ಪರಿವೀಕ್ಷಕ ಮಲ್ಲಪ್ಪ, ವಿವೇಕಾನಂದ ಒಡೆಯರ್, ಮುಖಂಡ ಎಂ. ಮಾಲತೇಶ, ಕೆ.ಶಂಕರಗೌಡ ಇದ್ದರು.

ಅರ್ಚಕರ ಸಂಭಾವನೆ ಹೆಚ್ಚಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಜರಾಯಿ ಇಲಾಖೆಯ ಅಡಿಯಲ್ಲಿ ರಾಜ್ಯದಲ್ಲಿ ಸುಮಾರು 34 ಸಾವಿರ ‘ಸಿ’ ದರ್ಜೆಯ ದೇವಾಲಯಗಳಿವೆ. ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಚಕರಿಗೆ ಮಾಸಿಕ ಕೇವಲ ₹1,400 ಸಂಭಾವನೆ ನೀಡಲಾಗುತ್ತಿದೆ. ಇದರಿಂದಾಗಿ ಹಳ್ಳಿಗಾಡಿನಲ್ಲಿ ವಾಸಿಸುತ್ತಿರುವ ಅರ್ಚಕರ ಜೀವನ ನಿರ್ವಹಣೆ ಕಷ್ಟವಾಗಿದೆ. ಹೀಗಾಗಿ ಸರ್ಕಾರ ಈ ಮೊತ್ತವನ್ನು ₹5 ಸಾವಿರಕ್ಕೆ ಹೆಚ್ಚಿಸಬೇಕು’ ಎಂದು ಕರ್ನಾಟಕ ರಾಜ್ಯ ಧಾರ್ಮಿಕ ದತ್ತಿ ದೇವಾಲಯಗಳ ಅರ್ಚಕರ ಮತ್ತು ಆಗಮಿಕರ ಸಂಘದ ರಾಜ್ಯಾಧ್ಯಕ್ಷ ಜಾನಕಿರಾಮ್ ಒತ್ತಾಯಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಸರ್ಕಾರವು ಪ್ರತಿ ದೇವಾಲಯಕ್ಕೆ ಮಾಸಿಕ ₹4 ಸಾವಿರ ಹಣ ನೀಡುತ್ತದೆ. ಇದರಲ್ಲಿ ಪೂಜಾ ಸಾಮಾಗ್ರಿ ಹಾಗೂ ಇತರ ಖರ್ಚು ಕಳೆದರೆ ಉಳಿಯುವುದು ₹1,400 ಮಾತ್ರ. ಈ ಹಣದಲ್ಲಿ ಕುಟುಂಬದ ನಿರ್ವಹಣೆ ಕಷ್ಟ. ಈ ಸಂಬಂಧ ಮುಖ್ಯಮಂತ್ರಿ ಹಾಗೂ ಮುಜರಾಯಿ ಸಚಿವರನ್ನು ಹಲವು ಬಾರಿ ಭೇಟಿ ಮಾಡಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎಂದರು.

ಯತ್ನಾಳ್ ಉಚ್ಚಾಟನೆಗೆ ಆಗ್ರಹ: ಶಾಸಕರ ಸಹಿ ಸಂಗ್ರಹ

ಬೆಂಗಳೂರು: 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ನಿರಂತರ ವಾಗ್ದಾಳಿ ನಡೆಸುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು' ಎಂದು ಆಗ್ರಹಿಸಿ ಸಹಿ ಸಂಗ್ರಹ ಆರಂಭವಾಗಿದ್ದು, ಸುಮಾರು 65 ಶಾಸಕರು ಈ ಮನವಿಗೆ ಸಹಿ ಮಾಡಿದ್ದಾರೆ.

'ಆದಷ್ಟು ಬೇಗನೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಮತ್ತು ವರಿಷ್ಠರಿಗೆ ಮನವಿ ಪತ್ರ ನೀಡಲಾಗುವುದು. ಎಲ್ಲ ಶಾಸಕರೂ ಮುಖ್ಯಮಂತ್ರಿಯವರ ನಾಯಕತ್ವದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸುವುದಾಗಿ ಭರವಸೆ ನೀಡಿದ್ದೇವೆ' ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ಅಧಿವೇಶನದ ಸಂದರ್ಭದಲ್ಲೇ ಸಹಿ ಸಂಗ್ರಹಿಸುವ ಕಾರ್ಯ ನಡೆಯಿತು. ಇವತ್ತು ಮುಖ್ಯಮಂತ್ರಿಯವರ ಮನೆಯಲ್ಲಿ ಸೇರಿದ್ದ ಶಾಸಕರು ಯತ್ನಾಳ ಅವರ ವರ್ತನೆಯ ಬಗ್ಗೆ ಯಡಿಯೂರಪ್ಪ ಬಳಿ ಅಸಮಾಧಾನವನ್ನು ತೋಡಿಕೊಂಡಿದ್ದೇವೆ' ಎಂದರು.

ಮುಖ್ಯಮಂತ್ರಿ, ಸ್ಪೀಕರ್‌ಗೆ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಆಗ್ರಹ

'ಸುಧಾಕರ್ ಶಾಸಕ ಸ್ಥಾನ ರದ್ದು ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಮ್ಮ ಮೇಲಿರುವ ಆರೋಪದಿಂದ ತಪ್ಪಿಸಿಕೊಳ್ಳಲು ರಾಜ್ಯದ ಎಲ್ಲ ಶಾಸಕರಿಗೂ ಕಳಂಕ ಹೊರಿಸಲು ಯತ್ನಿಸಿದ್ದಾರೆ. ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸುವುದಷ್ಟೇ ಅಲ್ಲ ಶಾಸಕ ಸ್ಥಾನದಿಂದಲೂ ಅನರ್ಹಗೊಳಿಸಬೇಕು ಎಂದು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಒತ್ತಾಯಿಸಿದೆ.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಶಾಸಕಿಯರೊಂದಿಗೆ ಗುರುವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, 'ಸುಧಾಕರ್ ಆರೋಗ್ಯ ಸಚಿವರಲ್ಲ. ಅನಾರೋಗ್ಯ ಸಚಿವ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಕ್ಷಣವೇ ಸುಧಾಕರ್ ಅವರನ್ನು ಸಂಪುಟದಿಂದ ಕೈಬಿಡಬೇಕು' ಎಂದು ಒತ್ತಾಯಿಸಿದರು.

ಸುಧಾಕರ್ ಶಾಸಕರಾಗಿಯೂ ಮುಂದುವರಿಯಲು ಅರ್ಹರಲ್ಲ. ವಿಧಾನಸಭೆಯ ಅಧ್ಯಕ್ಷರು ಸುಧಾಕರ್ ಅವರ ಸದಸ್ಯತ್ವ ರದ್ದತಿಗೂ ಅಗತ್ಯ ಕ್ರಮ ಕೈಗೊಳ್ಳಬೇಕು. ಮುಖ್ಯಮಂತ್ರಿ, ಸ್ಪೀಕರ್ ಸೇರಿದಂತೆ ಎಲ್ಲ ಶಾಸಕರ ಘನತೆಯನ್ನೂ ಕುಂದಿಸುವ ಕೆಲಸ ಮಾಡಿರುವವರ ವಿರುದ್ಧ ತ್ವರಿತವಾಗಿ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಸುಧಾಕರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮಹಿಳಾ ಕಾಂಗ್ರೆಸ್ ಸಮಿತಿ ರಾಜ್ಯದಾದ್ಯಂತ ಹೋರಾಟ ನಡೆಸಲಿದೆ. ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಹೋರಾಟದ ರೂಪುರೇಷೆಯನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು.

'ಸ್ಪೀಕರ್ ಕ್ರಮ ಜರುಗಿಸಬೇಕಿತ್ತು'

'ತಮ್ಮ ಮೇಲೆ ಬಂದಿರುವ ಆರೋಪದಿಂದ ಮುಕ್ತರಾಗಲು ದಾಖಲೆ ಒದಗಿಸುವ ಕೆಲಸವನ್ನು ಸುಧಾಕರ್ ಮಾಡಲಿ. ಅದನ್ನು ಬಿಟ್ಟು ಎಲ್ಲ ಶಾಸಕರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದಿತ್ತು. ಅಸಭ್ಯ ವರ್ತನೆ ಆರೋಪದ ಮೇಲೆ ಕಾಂಗ್ರೆಸ್ ಶಾಸಕ ಬಿ.ಕೆ. ಸಂಗಮೇಶ್ವರ ಅವರನ್ನು ಸದನದಿಂದ ಅಮಾನತು ಮಾಡಿದ್ದ ಸ್ಪೀಕರ್, ಶಾಸಕರನ್ನು ಅವಮಾನಿಸಿದ ಸುಧಾಕರ್ ವಿರುದ್ಧವೂ ಕ್ರಮ ಜರುಗಿಸಬೇಕಿತ್ತು. ಅವರಿಗೊಂದು ನ್ಯಾಯ, ನಮಗೊಂದು ನ್ಯಾಯದ ಧೋರಣೆ ಸರಿಯೇ?'

ರೂಪಾ ಶಶಿಧರ್, ಶಾಸಕಿ

'ಕಾನೂನು ಹೋರಾಟಕ್ಕೆ ಚಿಂತನೆ'

'ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂಬ ಗಾದೆಗೆ ಸುಧಾಕರ್ ಪ್ರಕರಣ ಹೋಲುತ್ತದೆ. ಜನಪ್ರತಿನಿಧಿಯೊಬ್ಬರು ಹೀಗೆ ಮಾತನಾಡುವುದಾ? ಅವರ ಹೇಳಿಕೆಯಿಂದ ರಾಜ್ಯದ ಎಲ್ಲ ಶಾಸಕರನ್ನೂ ಜನರು ಅನುಮಾನದಿಂದ ನೋಡುವಂತಾಗಿದೆ. ಶಾಸಕಿಯರಂತೂ ಕ್ಷೇತ್ರದಲ್ಲಿ ಓಡಾಡುವುದೇ ಕಷ್ಟವಾಗಿದೆ. ಸುಧಾಕರ್ ವಿರುದ್ಧ ಕಾನೂನು ಹೋರಾಟಕ್ಕೂ ಚಿಂತನೆ ನಡೆದಿದೆ'

ಸೌಮ್ಯಾ ರೆಡ್ಡಿ, ಶಾಸಕಿ

'ಪ್ರಧಾನಿಗೆ ದೂರು'

'ಎಲ್ಲ ಶಾಸಕರನ್ನೂ ಅವಮಾನಿಸಿರುವ ಸುಧಾಕರ್ ಅವರನ್ನು ಸಂಪುಟದಿಂದ ಕೈಬಿಡುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಇ-ಮೇಲ್ ಮೂಲಕ ಮನವಿ ರವಾನಿಸಲಾಗುವುದು. ಮುಖ್ಯಮಂತ್ರಿ, ಸ್ಪೀಕರ್ ಸೇರಿದಂತೆ ಎಲ್ಲ ಶಾಸಕರ ಜೀವನದ ಬಗ್ಗೆಯೂ ಕಳಂಕ ಹೊರಿಸುವ ಕೆಲಸವನ್ನು ಸುಧಾಕರ್ ಮಾಡಿದ್ದಾರೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಮೇಶ್ ಕುಮಾರ್, ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ನೇರ ಆರೋಪ ಮಾಡಿದ್ದಾರೆ. ಯಾವುದೇ ಶಾಸಕರ ವಿರುದ್ಧ ದಾಖಲೆ ಇದ್ದರೆ ನ್ಯಾಯಾಲಯಕ್ಕೆ ಸಲ್ಲಿಸಲಿ'

ಲಕ್ಷ್ಮಿ ಹೆಬ್ಬಾಳ್ಕರ್, ಶಾಸಕಿ

ಸುದ್ದಿ 2 ನಿಮಿಷ

'ಪೊಲೀಸ್‌ಗಿರಿ ಮಾಡ್ತಿದ್ದೀರಾ ಅಥವಾ ಗೂಂಡಾಗಿರಿ ಮಾಡ್ತಿದ್ದೀರಾ?'

ಮೈಸೂರು: 'ಬೈಕ್ ಸವಾರನನ್ನು ಸಾಯಿಸಿದ ಪೊಲೀಸರಿಗೆ ಪ್ರಶಂಸನಾ ಪತ್ರ ಕೊಡ್ತೀಯಾ? ನೀನು ಯಾವ ಸೀಮೆ ಪೊಲೀಸ್ ಕಮಿಷನರಯ್ಯ? ಥೂ, ನಿನ್ನ ಯೋಗ್ಯತೆಗಿಷ್ಟು ಬೆಂಕಿ ಹಾಕ... ಓಡಿಸಿಕೊಂಡು ಹೋಗಿ ಪ್ರಾಣ ತೆಗೆಯುತ್ತೀರಾ? ನೀವು ಪೊಲೀಸ್‌ಗಿರಿ ಮಾಡ್ತಿದ್ದೀರಾ ಅಥವಾ ಗೂಂಡಾಗಿರಿ ಮಾಡ್ತಿದ್ದೀರಾ?' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಗುರುವಾರ ಇಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ರಿಂಗ್ ರಸ್ತೆಯ ಬಳಿಯಲ್ಲಿ ಇತ್ತೀಚೆಗೆ ಸಂಚಾರ ಪೊಲೀಸರು ತಪಾಸಣೆ ನಡೆಸುತ್ತಿದ್ದ ವೇಳೆ, ವ್ಯಕ್ತಿಯೊಬ್ಬರು ಅಪಘಾತಕ್ಕೀಡಾಗಿ ಮೃತಪಟ್ಟ ಘಟನೆಯನ್ನು ಪ್ರಸ್ತಾಪಿಸಿ, ಮೈಸೂರು ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ಅವರನ್ನು ತರಾಟೆಗೆ ತೆಗೆದುಕೊಂಡರು.



'ಪೊಲೀಸ್ ಕಮಿಷನರ್ ಬೀದಿಗೆ ಬರಲ್ಲ, ಸಿಟಿ ರೌಂಡ್ ಹಾಕಲ್ಲ. ಎಷ್ಟು ವರ್ಷ ಆಯ್ತು ಮೈಸೂರಿಗೆ ಬಂದು? ಎಷ್ಟು ಜನ ಡಿಸಿಪಿ, ಎಸಿಪಿಗಳಿದ್ದೀರಿ, ಏನು ಮಾಡುತ್ತಿದ್ದೀರಿ? ಜನಪ್ರತಿನಿಧಿಗಳು, ಜನರ ಬಗ್ಗೆ ಇವರಿಗೆ ಗೌರವ ಇಲ್ಲ' ಎಂದು ಹರಿಹಾಯ್ದರು.

'ಓಡಾಡಿಸಿಕೊಂಡು ಬೈಕ್ ಹಿಡಿಯಿರಿ ಅಂತ ಕಾನೂನು ಎಲ್ಲಿದೆ? ಸಿ.ಸಿ ಟಿ.ವಿ ಕ್ಯಾಮೆರಾ ಇಲ್ವಾ? ಸರ್ಕಾರದ ದುಡ್ಡಲ್ಲಿ ಕ್ಯಾಮೆರಾ ಹಾಗೂ ಇತರ ಉಪಕರಣಗಳನ್ನು ಕೊಟ್ಟಿದ್ದೀವಿ. ಅದರಲ್ಲಿ ಫೋಟೊ ತೆಗೆದು ದಂಡ ಹಾಕಿ. ಅದು ಬಿಟ್ಟು ಇಂತಹ ವರ್ತನೆಯನ್ನು ಯಾರೂ ಕ್ಷಮಿಸಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ರಕ್ಷಣೆಗೆ ಪ್ರಧಾನಿ ಮೊರೆ ಹೋಗಿ'

ಒಂದನೇ ಪುಟದಿಂದ

'ಯುವತಿ ಹಾಗೂ ಅವರ ಕುಟುಂಬದವರಿಗೆ ರಕ್ಷಣೆ ನೀಡುವುದು ಸರ್ಕಾರದ ಜವಾಬ್ದಾರಿ. ಯುವತಿಯನ್ನು ಅಜ್ಞಾತ ಸ್ಥಳದಲ್ಲಿ ಬಿಜೆಪಿಯವರು ಇಟ್ಟುಕೊಂಡಿದ್ದಾರೋ ಅಥವಾ ಕಾಂಗ್ರೆಸ್‌ನವರು ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಒಟ್ಟಾರೆ ಆ ಹೆಣ್ಣುಮಗಳು ಯಾರದೋ ಕುತಂತ್ರಕ್ಕೆ ಒಳಗಾಗಿದ್ದಾಳೆ' ಎಂದು ಬಸವಕಲ್ಯಾಣದಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ನಡವಳಿಕೆಯಿಂದ ರಾಜ್ಯ ರಾಜಕಾರಣ ನಗೆಪಾಟಲಿಗೆ ಗುರಿಯಾಗಿದೆ. ಸಿ.ಡಿ ಪ್ರಕರಣದ ಬಗ್ಗೆ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ಕೊಳಚೆಯಲ್ಲಿ ಬಿದ್ದಿದ್ದೇವೆ. ಅದನ್ನು ಸರಿಪಡಿಸಬೇಕಿದೆ' ಎಂದರು.

'ಎಸ್‌ಐಟಿ ರಾಜ್ಯ ಸರ್ಕಾರದ ಸಂಸ್ಥೆಯಾಗಿದೆ. ಬಿಜೆಪಿ ಸರ್ಕಾರ ಅದನ್ನು ಹೇಗೆ ಬಳಕೆ ಮಾಡಿಕೊಳ್ಳುತ್ತಿದೆ. ಹಿಂದೆ ಸಿದ್ದರಾಮಯ್ಯ ಸರ್ಕಾರ ಯಾವ ರೀತಿ ಬಳಕೆ ಮಾಡಿಕೊಂಡಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಯುವತಿ ರಕ್ಷಣೆಗಾಗಿ ಪ್ರಧಾನಿಯ ಮೊರೆ ಹೋಗುವುದು ಸೂಕ್ತ' ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಕಲಬುರ್ಗಿಯಲ್ಲಿ ಮಾತನಾಡಿದ ಅವರು, 'ಸಂತ್ರಸ್ತ ಯುವತಿಗೆ ರಕ್ಷಣೆ ಬೇಕಿದ್ದರೆ ಸಭಾಧ್ಯಕ್ಷರ ಮುಂದೆ ಬಂದು ಮನವಿ ಮಾಡಿಕೊಳ್ಳಲಿ. ಅದನ್ನು ಬಿಟ್ಟು ಎಲ್ಲೆಲ್ಲಿಂದಲೋ ವಿಡಿಯೊ ಮಾಡಿ ಹೇಳಿಕೆ ಕೊಟ್ಟರೆ ಹೇಗೆ' ಎಂದು ಪ್ರಶ್ನಿಸಿದರು.

ಸಿ.ಡಿ: ಮತ್ತೊಂದು 'ಮಹಾ' ತಿರುವು

ಒಂದನೇ ಪುಟದಿಂದ

'ನನ್ನನ್ನು ಅಪಹರಣ ಮಾಡಲಾಗಿದೆ ಎಂದು ಅಪ್ಪ-ಅಮ್ಮ ಸ್ವ-ಇಚ್ಛೆಯಿಂದ ದೂರು ಕೊಟ್ಟಿರುವುದಕ್ಕೆ ಸಾಧ್ಯವೇ ಇಲ್ಲ. ಅವರಿಗೆ, ಮಗಳು ಯಾವುದೇ ತಪ್ಪು ಮಾಡಿಲ್ಲವೆಂಬುದು ಗೊತ್ತು. ಅಪ್ಪ-ಅಮ್ಮನಿಗೆ ರಕ್ಷಣೆ ನೀಡಬೇಕು. ಅವರು ಸುರಕ್ಷಿತವಾಗಿದ್ದಾರೆ ಎಂಬುದು ಯಾವಾಗ ಗೊತ್ತಾಗುತ್ತದೆಯೋ ಅವಾಗಲೇ ಎಸ್‌ಐಟಿ ಮುಂದೆ ಹಾಜರಾಗುವೆ' ಎಂದೂ ಯುವತಿ ಹೇಳಿದ್ದಾರೆ.

'ಅಪ್ಪ-ಅಮ್ಮನಿಗೆ ಭದ್ರತೆ ಕೊಡಿ ಎಂದು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ರಮೇಶ್ ಕುಮಾರ್ ಅವರಿಗೆ ಹಾಗೂ ಇನ್ನಿತರ ಮಹಿಳಾ ಸಂಘಟನೆಗಳಿಗೆ ಕೇಳಿಕೊಳ್ಳುತ್ತೇನೆ' ಎಂದಿದ್ದಾರೆ.

ಮೂಲ ವಿಡಿಯೊ ಪತ್ತೆ: 'ವ್ಯಾನಿಟಿ ಬ್ಯಾಗ್‌ನಲ್ಲಿ ಕ್ಯಾಮೆರಾ ಇಟ್ಟು ವಿಡಿಯೊ ಚಿತ್ರೀಕರಣ ಮಾಡಲಾಗಿದ್ದು, ಎಲ್ಲರ ಮುಖ ಸ್ಪಷ್ಟವಾಗಿ ದಾಖಲಾಗಿದೆ. ಈ ಮೂಲ ವಿಡಿಯೊ ಸಿಕ್ಕಿದ್ದು, ಮೇಲ್ನೋಟಕ್ಕೆ ಅಸಲಿಯಂತೆ ಕಾಣುತ್ತಿದೆ. ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಮೊಬೈಲ್ ಸಹ ಜಪ್ತಿ: 'ಯುವತಿ ಯಾರು ಎಂಬುದು ಗೊತ್ತಿಲ್ಲ. ಆಕೆಯ ಜೊತೆ ವಾಟ್ಸ್‌ಆ್ಯಪ್ ಚಾಟಿಂಗ್ ಸಹ ಮಾಡಿಲ್ಲ' ಎಂದು ರಮೇಶ ಜಾರಕಿಹೊಳಿ ಹೇಳಿಕೆ ನೀಡಿದ್ದರು.

ಅಧಿಕಾರಿಗಳು ಪರ್ಯಾಯ ಪ್ರಶ್ನೆ ಕೇಳಿದಾಗ, 'ನನ್ನ ವಕೀಲರನ್ನು ಕೇಳಿ ತಿಳಿಸುವೆ' ಎಂದಷ್ಟೇ ರಮೇಶ ಹೇಳಿದ್ದರು. ಆದರೆ, ವಾಟ್ಸ್‌ಆ್ಯಪ್ ಚಾಟಿಂಗ್ ಚಿತ್ರ ಹಾಗೂ ವಿಡಿಯೊ ಕರೆಗಳ ದೃಶ್ಯ ಎಲ್ಲೆಡೆ ಹರಿದಾಡುತ್ತಿವೆ. ಹೀಗಾಗಿ, ರಮೇಶ್ ಅವರ ಮೊಬೈಲ್ ವಶಕ್ಕೆ ಪಡೆದಿರುವ ಎಸ್‌ಐಟಿ ಅಧಿಕಾರಿಗಳು, ಪರೀಕ್ಷೆಗಾಗಿ ಅದನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಎಸ್‌ಐಟಿ ಯಾರ ಪರ–ವಿರುದ್ಧವೂ ಅಲ್ಲ: ಬೊಮ್ಮಾಯಿ

ಬೆಂಗಳೂರು: 'ಸಿ.ಡಿ ಪ್ರಕರಣದಲ್ಲಿ ಎಸ್‌ಐಟಿ ತನಿಖೆ ಯಾರ ಪರವೂ ಅಲ್ಲ. ಯಾರ ವಿರುದ್ಧವೂ ಇಲ್ಲ. ಸತ್ಯ ಹೊರಗೆ ಬರಬೇಕಿದೆ. ತನಿಖೆಯಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

'ತನಿಖೆಯ ಸಂದರ್ಭದಲ್ಲಿ ಹಲವು ಬೆಳವಣಿಗೆಗಳು, ತಿರುವುಗಳು ನಡೆಯುತ್ತವೆ. ಅವನ್ನೆಲ್ಲ ಸಕಾರಾತ್ಮಕವಾಗಿ ತೆಗೆದುಕೊಂಡು ನಿಷ್ಪಕ್ಷಪಾತವಾಗಿ ಎಸ್‌ಐಟಿ ತನಿಖೆ ನಡೆಸಲಿದೆ' ಎಂದರು.

'ನಿಷ್ಪಕ್ಷಪಾತ ತನಿಖೆ ನಡೆಯಬೇಕೆಂಬ ಕಾರಣಕ್ಕೆ ರಮೇಶ ಜಾರಕಿಹೊಳಿ ಅವರನ್ನೂ ವಿಚಾರಣೆ ನಡೆಸಲಾಗಿದೆ. ಆ ಯುವತಿಯ ಹೇಳಿಕೆ ಪಡೆಯಲು ಸಿದ್ಧರಿದ್ದೇವೆ ಎಂದು ಎಸ್‌ಐಟಿ ಅಧಿಕಾರಿಗಳು ಹೇಳಿದ್ದಾರೆ. ಯುವತಿ ಎಲ್ಲಿದ್ದಾರೆ ಎಂದು ಹೇಳಿದರೆ ಅಲ್ಲಿಗೇ ಮಹಿಳಾ ಪೊಲೀಸರ ಕಳುಹಿಸಿ ರಕ್ಷಣೆ ಕೊಡುತ್ತೇವೆ. ಪೊಲೀಸರ ರಕ್ಷಣೆಯಲ್ಲಿ ಆಕೆ ಹೇಳಿಕೆ ಕೊಡಬಹುದು' ಎಂದರು.

ಎಸ್‌ಐಟಿ ಅಧಿಕಾರಿಗಳ ಸಭೆ

ಯುವತಿ ವಿಡಿಯೊ ಬಿಡುಗಡೆ ಮಾಡುತ್ತಿದ್ದಂತೆ ಎಸ್‌ಐಟಿ ಅಧಿಕಾರಿಗಳು ನಗರ ಕಮಿಷನರ್ ಕಚೇರಿಯಲ್ಲಿ ಗುರುವಾರ ಸಭೆ ನಡೆಸಿದರು.

ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿ, 'ಪ್ರಕರಣ ಗಮನಕ್ಕೆ ಬಂದು 23 ದಿನವಾದರೂ ಯುವತಿಯನ್ನು ಪತ್ತೆ ಹಚ್ಚಲು ಆಗಿಲ್ಲವೇಕೆ ? ಪ್ರಕರಣದ ಹಿಂದೆ ಯಾರಿದ್ದಾರೆ ಎಂಬುದನ್ನು ತಿಳಿಯಲು ಕಷ್ಟವೇ? ಯುವತಿ ಎರಡನೇ ವಿಡಿಯೊ ಹರಿಬಿಟ್ಟಿದ್ದು, ಅದು ಬಂದಿದ್ದು ಎಲ್ಲಿಂದ' ಎಂಬುದಾಗಿ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆಂದು ಗೊತ್ತಾಗಿದೆ.

ಯುವತಿಗೆ ರಕ್ಷಣೆ ನಮ್ಮ ಹೊಣೆ: ಸಚಿವೆ ಶಶಿಕಲಾ ಜೊಲ್ಲೆ

ಬೆಂಗಳೂರು: 'ಸಿ.ಡಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಯುವತಿಗೆ ರಕ್ಷಣೆ ನೀಡಲು ನಾವು ಹಿಂದೇಟು ಹಾಕುವುದಿಲ್ಲ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

'ಆ ಯುವತಿ ಹೊಸ ವಿಡಿಯೊದಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ನೋಡಿಲ್ಲ. ನಮ್ಮ ಸರ್ಕಾರ ಆ ಯುವತಿಗೆ ರಕ್ಷಣೆ ನೀಡಲಿದೆ ಎಂದು ಸದನದಲ್ಲಿ ಸ್ವತಃ ಮುಖ್ಯಮಂತ್ರಿ ಮತ್ತು ಗೃಹ ಸಚಿವ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ' ಎಂದರು.

'ಆಕೆಗೆ ಅನ್ಯಾಯ ಆಗಿದೆಯೇ, ಇಲ್ಲವೇ ಎನ್ನುವುದು ಎಸ್‌ಐಟಿ ತನಿಖೆ ಬಳಿಕ ಗೊತ್ತಾಗುತ್ತದೆ. ತನಿಖೆಯ ವರದಿ ಏನೇ ಬರಲಿ, ನನ್ನ ಇಲಾಖೆಯಿಂದ ಆಕೆ ರಕ್ಷಣೆ ಕೇಳಿದರೆ, ಕೊಡಲು ಸಿದ್ಧ' ಎಂದು ಅವರು ಹೇಳಿದರು.

ಬೊಕ್ಕಸಕ್ಕೆ ನಷ್ಟ: ಬೆಳಗಾವಿ ಉಪ ನೋಂದಣಾಧಿಕಾರಿ ಅಮಾನತು

ಬೆಳಗಾವಿ: ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟು ಮಾಡಿರುವುದರಿಂದ ಇಲ್ಲಿನ ಉಪ ನೋಂದಣಿ ಕಚೇರಿಯ ಉಪ ನೋಂದಣಾಧಿಕಾರಿ ವಿಷ್ಣುತೀರ್ಥ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಈ ಆದೇಶ ಹೊರಡಿಸಿದ್ದಾರೆ.

ಮಹಾಲೇಖಪಾಲರು 2018–19ರಲ್ಲಿ ನೀಡಿದ ವರದಿಯಲ್ಲಿ 2015ರಿಂದ 2018ರ 9 ದಸ್ತಾವೇಜುಗಳಿಂದ ₹ 12 ಕೋಟಿಗೂ ಹೆಚ್ಚಿನ ಶುಲ್ಕದ ಕೊರತೆ ಕಂಡುಬಂದಿದೆ ಎಂದು ಆಕ್ಷೇಪಿಸಿದ್ದರು. ಆಸ್ತಿ ನೋಂದಣಿ ವೇಳೆ ನಿಗದಿಗಿಂತ ಕಡಿಮೆ ದರಕ್ಕೆ ನೋಂದಣಿ ಮಾಡಲಾಗಿದೆ. ಮುದ್ರಾಂಕ ಶುಲ್ಕ ₹12.78 ಕೋಟಿ ಹಾಗೂ ನೋಂದಣಿ ಶುಲ್ಕ ₹12.91 ಲಕ್ಷ ಕಡಿಮೆ ಆಕರಿಸಿದ್ದನ್ನು ಪತ್ತೆ ಹಚ್ಚಲಾಗಿತ್ತು. 'ಕೊರತೆ ಮೊತ್ತವನ್ನು ನಿಮ್ಮಿಂದ ವಸೂಲಿ ಮಾಡಬಾರದೇಕೆ? ಅಮಾನತಿನಲ್ಲಿ ಇಡಬಾರದೇಕೆ' ಎಂದು ವಿಷ್ಣುತೀರ್ಥ ಅವರಿಗೆ ನೋಟಿಸ್ ಜಾರಿಗೊಳಿಸಿ, ಸಮಜಾಯಿಷಿ ಕೇಳಲಾಗಿತ್ತು.

'2015-16ನೇ ಸಾಲಿನಲ್ಲಿ ಜಾರಿಯಲ್ಲಿದ್ದ ಮಾರ್ಗಸೂಚಿ ದರ ಅಳವಡಿಸಿ ದಸ್ತಾವೇಜು ನೋಂದಾಯಿಸಲಾಗಿದೆ. ಬೆಳಗಾವಿ ನಗರದಲ್ಲಿ ಕೃಷಿ ಜಮೀನಿನ ಮೌಲ್ಯ ಪ್ರತಿ ಎಕರೆಗೆ ₹ 26.84 ಲಕ್ಷ ಇದ್ದುದ್ದನ್ನು ವಾಣಿಜ್ಯ ಉದ್ದೇಶಕ್ಕಾಗಿ ಶೇ 75ರಷ್ಟು ಹೆಚ್ಚಿಸಿ ₹ 46.97 ಲಕ್ಷ ನಿಗದಿಪಡಿಸಲಾಗಿತ್ತು' ಎಂದು ಅಧಿಕಾರಿ ಲಿಖಿತ ಹೇಳಿಕೆ ನೀಡಿದ್ದರು.

'ಅವರ ಹೇಳಿಕೆ ಒಪ್ಪಲು ಸಾಧ್ಯವಿಲ್ಲ. ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ. ಹೀಗಾಗಿ, ಇಲಾಖಾ ವಿಚಾರಣೆ ಕಾಯ್ದಿರಿಸಿ ಅವರನ್ನು ಅಮಾನತು ಮಾಡಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ. ಉಪ ನೋಂದಣಾಧಿಕಾರಿಗಳಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿರುವ ಬಗ್ಗೆ ಕಂದಾಯ ಸಚಿವ ಆರ್. ಅಶೋಕ ಅವರು ಗುರುವಾರ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದರು.

ಜಾತಿ ಗಣತಿ ವರದಿ ಬಿಡುಗಡೆಗೆ ಒತ್ತಾಯ

'ಕೆಲ ಮಠಾಧೀಶರಿಂದಲೇ ವಿರೋಧ'

ಪ್ರಜಾವಾಣಿ ವಾರ್ತೆ

ಮೈಸೂರು: 'ಹಿಂದುಳಿದ ವರ್ಗಗಳ ಆಯೋಗದ ಈ ಹಿಂದಿನ ಅಧ್ಯಕ್ಷ ಎಚ್. ಕಾಂತರಾಜು ನೇತೃತ್ವದ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ–ಶೈಕ್ಷಣಿಕ ಸಮೀಕ್ಷಾ (ಜಾತಿ ಗಣತಿ) ವರದಿ ಬಿಡುಗಡೆಗೆ, ಕೆಲವು ಪ್ರಭಾವಿ ಮಠಾಧೀಶರೇ ವಿರೋಧ ವ್ಯಕ್ತಪಡಿಸುತ್ತಿದ್ದು, ಇದು ಸಲ್ಲದು' ಎಂದು ಕಾಗಿನೆಲೆ ಮಹಾಸಂಸ್ಥಾನದ ತಿಂಥಿಣಿ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಿಡಿಕಾರಿದರು.

ಜಾತಿ ಗಣತಿಯ ವರದಿ ಬಿಡುಗಡೆಗೆ ಅಡ್ಡಿಪಡಿಸುತ್ತಿರುವವರು ಮಾನವೀಯತೆಯ ವಿರೋಧಿಗಳು ಎಂದು ಹರಿಹಾಯ್ದ ಅವರು, 'ವರದಿ ಜಾರಿಯಾದರೆ 2 ಎ, ಎಸ್‌ಸಿ/ಎಸ್‌ಟಿ ಮೀಸಲಾತಿಯ ಸಮಸ್ಯೆ ಪರಿಹಾರವಾಗಲಿದೆ. ಸಣ್ಣ ಸಮುದಾಯಗಳಿಗೆ ಧ್ವನಿ ಸಿಗಲಿದೆ. ಆದರೆ, ಆಡಳಿತಾರೂಢರು ಉಳ್ಳವರ ಪರವಾದ ಕಾನೂನು ರಚಿಸುವಲ್ಲೇ ನಿರತರಾಗಿದ್ದಾರೆ. ಇವರ ವರ್ತನೆ ಈಗಾಗಲೇ ಜಗಜ್ಜಾಹೀರಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಅಧ್ಯಯನ ಸಂಸ್ಥೆಯು ತಾರತಮ್ಯ ಎಸಗುವ ಕೇಂದ್ರವಾಗಿದೆ. ಕೆಎಎಸ್ ಅಧಿಕಾರಿ ಕಾರ್ಯ ನಿರ್ವಹಿಸಬೇಕಾದ ಸ್ಥಳದಲ್ಲಿ ನಿಯೋಜನೆಗೊಂಡ ಪ್ರೊಫೆಸರ್ ಕೆಲಸ ಮಾಡುತ್ತಿದ್ದಾರೆ. ಆದಿವಾಸಿಗಳಿಗೆ ನ್ಯಾಯ ದೊರಕಬೇಕು ಎಂದರೆ, ಮೊದಲು ಅಲ್ಲಿ ಕೆಎಎಸ್ ಅಧಿಕಾರಿಯನ್ನು ನೇಮಿಸಬೇಕು' ಎಂದು ಆಗ್ರಹಿಸಿದ ಸ್ವಾಮೀಜಿ, ವಾಲ್ಮೀಕಿ ನಿಗಮವೂ ಜಾತಿಗಷ್ಟೇ ಸೀಮಿತವಾಗಿದ್ದಾಗಿ ದೂರಿದರು.

ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮದ್ಯ ನಿಷೇಧ ಆಂದೋಲನದ ರಾಜ್ಯ ಸಂಚಾಲಕಿ ಸ್ವರ್ಣಾ ಭಟ್ ನೇತೃತ್ವದ ನಿಯೋಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಗುರುವಾರ ಮನವಿ ಸಲ್ಲಿಸಿತು

ಅಕ್ರಮ ಮದ್ಯ ಮಾರಾಟ ತಡೆಗೆ ಕ್ರಮ: ಸಿ.ಎಂ ಭರವಸೆ

ಬೆಂಗಳೂರು: ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗೆ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದಾರೆ ಎಂದು ಮದ್ಯ ನಿಷೇಧ ಆಂದೋಲನದ ರಾಜ್ಯ ಸಂಚಾಲಕಿ ಸ್ವರ್ಣಾ ಭಟ್ ತಿಳಿಸಿದ್ದಾರೆ.

ಮುಖ್ಯಮಂತ್ರಿಯವರನ್ನು ಗುರುವಾರ ಭೇಟಿ ಮಾಡಿದ ಮದ್ಯ ನಿಷೇಧ ಆಂದೋಲನದ ಸದಸ್ಯರು, ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗೆ ಆಗ್ರಹಿಸಿ ಮನವಿಪತ್ರ ಸಲ್ಲಿಸಿದರು.

ಬಳಿಕ ಮಾತನಾಡಿದ ಸ್ವರ್ಣಾ ಭಟ್, 'ಅಕ್ರಮ ಮದ್ಯ ಮಾರಾಟ ತಡೆಯುವ ಸಂಬಂಧ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಗೃಹ, ಕಂದಾಯ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಮತ್ತು ಮದ್ಯ ನಿಷೇಧ ಆಂದೋಲನದ ಐದರಿಂದ ಆರು ಪ್ರತಿನಿಧಿಗಳನ್ನು ಒಳಗೊಂಡಂತೆ ಉನ್ನತಮಟ್ಟದ ಸಭೆ ನಡೆಸಬೇಕೆಂಬ ನಮ್ಮ ಬೇಡಿಕೆಗೆ ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ' ಎಂದರು.

ಸಭೆಯ ದಿನಾಂಕ ನಿಗದಿಯಾಗಿ ಸಂಘಟನೆಯ ಪ್ರತಿನಿಧಿಗಳಿಗೆ ಮುಖ್ಯಮಂತ್ರಿ ಅಥವಾ ಮುಖ್ಯ ಕಾರ್ಯದರ್ಶಿಯವರ ಕಚೇರಿಯಿಂದ ಪತ್ರ ಬರುವವರೆಗೂ ರಾಯಚೂರಿನಲ್ಲಿ ನಡೆಸುತ್ತಿರುವ ಹೋರಾಟವನ್ನು ಮುಂದುವರಿಸಲಾಗುವುದು ಎಂದು ತಿಳಿಸಿದರು.

ಅಕ್ರಮ ಮದ್ಯ ಮಾರಾಟ ತಡೆಗೆ ಅರೆ ನ್ಯಾಯಾಂಗ ಅಧಿಕಾರವುಳ್ಳ ಮಹಿಳಾ ಕಾವಲು ಸಮಿತಿಗಳ ರಚನೆ, ಮಹಾರಾಷ್ಟ್ರ ಮಾದರಿಯಲ್ಲಿ ಶೇಕಡ 10ರಷ್ಟು ಜನರು ವಿರೋಧ ದಾಖಲಿಸುವ ಸ್ಥಳಗಳಲ್ಲಿ ಮದ್ಯದಂಗಡಿ ಪರವಾನಗಿ ನೀಡದಿರುವುದು, ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಅಪಾಯಕಾರಿ ಚಟುವಟಿಕೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕೆಂಬ ಬೇಡಿಕೆಗಳನ್ನು ಸಂಘಟನೆಯು ಮುಂದಿಟ್ಟಿದೆ.

ಸಂಘಟನೆಯ ಪ್ರತಿನಿಧಿಗಳಾದ ಮೋಕ್ಷಮ್ಮ, ನಿಂಗಮ್ಮ, ಸ್ವಪ್ನಾ, ಸುಶೀಲಾ, ಕೊಟ್ರಮ್ಮ, ಗಂಗಮ್ಮ, ವಿದ್ಯಾ ಪಾಟೀಲ ಅವರು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ನಿಯೋಗದಲ್ಲಿದ್ದರು.

ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ ಆದಿಜಾಂಬವ ಸಮುದಾಯ

ಒಳಮೀಸಲಾತಿ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾ.ಸದಾಶಿವ ಆಯೋಗದ ವರದಿ ಜಾರಿ ಮಾಡುವುದರ ಜತೆಗೆ ಒಳಮೀಸಲಾತಿ ನೀಡಬೇಕು ಎಂದು ಆದಿ ಜಾಂಬವ ಸಮುದಾಯದ ಸ್ವಾಮೀಜಿಗಳು ಮತ್ತು ಜನಪ್ರತಿನಿಧಿಗಳು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಹಿರಿಯೂರು ಆದಿಜಾಂಬವ ಮಠದ ಷಡಕ್ಷರಮುನಿ ದೇಶೀಕೇಂದ್ರ ಸ್ವಾಮೀಜಿ, ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ಮತ್ತು ಹರಳಯ್ಯ ಸ್ವಾಮೀಜಿ ಅವರು ಆದಷ್ಟು ಬೇಗ ಈ ಸಂಬಂಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

'ಸಮುದಾಯವು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರ ಮಾತಿಗೆ ಗೌರವ ಕೊಡುತ್ತಲೇ ಬಂದಿದೆ. ಸರ್ಕಾರ ಸದಾಶಿವ ಆಯೋಗದ ವರದಿ ಮಂಡನೆಗೆ ಸ್ಪಷ್ಟ ನಿಲುವು ತಳೆಯುತ್ತದೆ ಎಂದು ನಂಬಿದ್ದೇವೆ. ಒಂದು ವೇಳೆ ಬೇಡಿಕೆ ಈಡೇರಿಸಲು ಹಿಂದೇಟು ಹಾಕಿದರೆ, ಮುಂದಿನ ದಿನಗಳಲ್ಲಿ ಸಮುದಾಯದ ಎಲ್ಲರನ್ನು ಒಳಗೊಂಡಂತೆ ಸದಾಶಿವ ಆಯೋಗದ ವರದಿ ಜಾರಿಗೆ ಹೋರಾಟ ರೂಪಿಸಲಾಗುವುದು' ಎಂದು ಮಠಾಧೀಶರು ಎಚ್ಚರಿಕೆ ನೀಡಿದರು.

ಈ ವಿಷಯವಾಗಿ ಸಮುದಾಯದ ಎಲ್ಲ ಸ್ವಾಮೀಜಿಗಳು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಷಡಕ್ಷರಮುನಿ ಸ್ವಾಮೀಜಿ ಹೇಳಿದರು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಚಿತ್ರದುರ್ಗ ಸಂಸದ ಎ.ನಾರಾಯಣಸ್ವಾಮಿ, ನಿಗಮ–ಮಂಡಳಿಗಳ ಅಧ್ಯಕ್ಷರು, ಜನಪ್ರತಿನಿಧಿಗಳು ಇದ್ದರು.

ಆದಿಜಾಂಬವ ಸಮುದಾಯದ ಮಠಾಧೀಶರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ನೀಡಿದರು. ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಂಸದ ನಾರಾಯಣಸ್ವಾಮಿ ಇದ್ದರು

ನಾಪತ್ತೆಯಾಗಿದ್ದ ಚಿನ್ನದ ಕರಡಿಗೆ ಕಸದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ: ವಾರದ ಹಿಂದೆ ಕಾಣೆಯಾಗಿದ್ದ ಇಲ್ಲಿನ ಮಲೆ ಮಹದೇಶ್ವರ ಸ್ವಾಮಿ ದೇವಾಲಯದ ಪಾರ್ವತಿ ಅಮ್ಮನವರ ಉತ್ಸವ ಮೂರ್ತಿಯ ಚಿನ್ನದ ಕರಡಿಗೆ, ಕಸ ಹಾಕುವ ಜಾಗದಲ್ಲಿ ಗುರುವಾರ ಪತ್ತೆಯಾಗಿದೆ.

30 ಗ್ರಾಂ ತೂಕದ ಕರಡಿಗೆಯು ಕಳೆದ ಗುರುವಾರದಿಂದ (ಮಾರ್ಚ್ 18) ನಾಪತ್ತೆಯಾಗಿತ್ತು. ವಾರದ ಬಳಿಕ ಅಂದರೆ ಮಾರ್ಚ್ 25ರಂದು ಪ್ರಕರಣ ಗಮನಕ್ಕೆ ಬಂದಿತ್ತು. ಈ ಸಂಬಂಧ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವಸ್ವಾಮಿ ಅವರು, ಬುಧವಾರ ಬೆಟ್ಟದ ಠಾಣೆಗೆ ದೂರು ನೀಡಿದ್ದರು. ಅಲ್ಲದೇ ಅರ್ಚಕರಿಗೆ ಷೋಕಾಸ್ ನೋಟಿಸ್ ಕೂಡ ಜಾರಿಮಾಡಿದ್ದರು.

ಕರಡಿಗೆ ಕಳೆದುಹೋಗಿರುವ ಸುದ್ದಿಯು ಗುರುವಾರ ವೆಬ್‌ಸೈಟ್‌ಗಳಲ್ಲಿ, ಸುದ್ದಿ ವಾಹಿನಿಗಳಲ್ಲಿ ಬಿತ್ತರಗೊಂಡ ಕೆಲವೇ ಗಂಟೆಗಳಲ್ಲಿ, ದೇವಾಲಯದ ರಾಜಗೋಪುರದ ಬಳಿ ಕಸ ಹಾಕುವ ಜಾಗದಲ್ಲಿ ಅದು ಪತ್ತೆಯಾಗಿದೆ.

ಕರಡಿಗೆಯನ್ನು ವಶಕ್ಕೆ ಪಡೆದಿದ್ದ ಪೊಲೀಸರು, ನಂತರ ಪ್ರಾಧಿಕಾರದ ಅಧಿಕಾರಿಗಳಿಗೆ ಹಸ್ತಾಂತರ ಮಾಡಿದರು.

ಕರಡಿಗೆ ಸೇರಿದಂತೆ ದೇವಾಲಯಕ್ಕೆ ಸೇರಿದ ಕೆಲವು ಆಭರಣಗಳು ಅರ್ಚಕರ ಸುಪರ್ದಿಯಲ್ಲಿರುತ್ತವೆ. ಬೆಟ್ಟದಲ್ಲಿ ಅರ್ಚಕರ ಮೂರು ತಂಡಗಳಿದ್ದು, ತಿಂಗಳಿಗೊಮ್ಮೆ ಸರತಿ ಆಧಾರದಲ್ಲಿ ಅರ್ಚಕರು ಬದಲಾಗುತ್ತಿರುತ್ತಾರೆ.

'ಪ್ರಕರಣ ಸುಖಾಂತ್ಯ ಕಂಡಿದ್ದರೂ, ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನದ ಬಗ್ಗೆ ಪೊಲೀಸರು ತನಿಖೆ ನಡೆಸಲಿದ್ದಾರೆ' ಎಂದು ಜಯವಿಭವಸ್ವಾಮಿ ತಿಳಿಸಿದ್ದಾರೆ.

ನಾಪತ್ತೆಯಾಗಿದ್ದ ಚಿನ್ನದ ಕರಡಿಗೆ

ಎಸ್ಸೆಸ್ಸೆಲ್ಸಿ ಅರ್ಹತೆ ಹುದ್ದೆಗೆ ಆಯ್ಕೆಯಾದ ಸ್ನಾತಕೋತ್ತರ ಪದವೀಧರರು

'ಕಾರಾಗೃಹ ವೀಕ್ಷಕ'ನಾದ ಎಂ.ಟೆಕ್ ಪದವೀಧರ!

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಎಸ್ಸೆಸ್ಸೆಲ್ಸಿ ಅರ್ಹತೆಯ ಹುದ್ದೆಯಾದ 'ಕಾರಾಗೃಹ ವೀಕ್ಷಕ' ನೌಕರಿಗೆ ಎಂ.ಟೆಕ್ ಪದವೀಧರ ಸೇರಿದಂತೆ ಸ್ನಾತಕೋತ್ತರ ಪದವೀಧರರು ಆಯ್ಕೆಯಾಗಿದ್ದಾರೆ.

ತಾಲ್ಲೂಕಿನ ಕೆರಿಮತ್ತಿಹಳ್ಳಿಯಲ್ಲಿರುವ 'ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ'ಯಲ್ಲಿ 9 ತಿಂಗಳು ಬುನಾದಿ ತರಬೇತಿ ಪೂರ್ಣಗೊಳಿಸಿದ 61 'ಕಾರಾಗೃಹ ವೀಕ್ಷಕ' ಪ್ರಶಿಕ್ಷಣಾರ್ಥಿಗಳಲ್ಲಿ 40ಕ್ಕೂ ಅಧಿಕ ಮಂದಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರಿದ್ದಾರೆ. ಅಷ್ಟೇ ಅಲ್ಲ, ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗೆ ತರಬೇತಿ ಪಡೆದವರೂ ಇದ್ದಾರೆ.

ಎಂಎಸ್ಸಿ–1, ಎಂಕಾಂ–1, ಎಂಎ–2, ಬಿಇ–15, ಬಿಸಿಎ–1, ಬಿಕಾಂ–4, ಬಿಎಸ್ಸಿ–7, ಬಿಎ–9, ಬಿಎಸ್ಸಿ ಮತ್ತು ಬಿಇಡಿ–1, ಡಿಇಡಿ–1 ಹಾಗೂ ಒಬ್ಬ ಡಿಪ್ಲೊಮಾ ಪದವೀಧರ ಇದ್ದಾರೆ. ಉಳಿದವರಲ್ಲಿ 13 ಮಂದಿ ಪಿಯು ಮುಗಿಸಿದ್ದು, 4 ಮಂದಿ ಮಾತ್ರ ಎಸ್ಸೆಸ್ಸೆಲ್ಸಿ ಓದಿದ್ದಾರೆ. ಇವರೆಲ್ಲರೂ ರಾಜ್ಯದ 18 ಜಿಲ್ಲೆಗಳಿಗೆ ಸೇರಿದವರಾಗಿದ್ದು, ವಿವಿಧ ಕಾರಾಗೃಹಗಳಲ್ಲಿ ಕರ್ತವ್ಯ ನಿರ್ವಹಿಸಲು ಸಜ್ಜಾಗಿದ್ದಾರೆ.

ಖಾಸಗಿ ಕಂಪನಿಗಳಿಗೆ ಗುಡ್‌ಬೈ: ಬಿಇ ಪದವಿ ಪಡೆದಿರುವ ಬಹುತೇಕರು ಪ್ರತಿಷ್ಠಿತ ಖಾಸಗಿ ಕಂಪನಿಗಳಲ್ಲಿ ಒಂದರಿಂದ ಎರಡು ವರ್ಷಗಳವರೆಗೆ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ದೀರ್ಘಾವಧಿ ಕೆಲಸ, ಕಡಿಮೆ ವೇತನ, ಮಾನಸಿಕ ಒತ್ತಡ, ಹಿರಿಯ ಸಹೋದ್ಯೋಗಿಗಳ ಕಿರುಕುಳ, ಕೆಲಸದ ಅಭದ್ರತೆ ಮುಂತಾದ ಕಾರಣಗಳಿಂದ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕಂಪನಿಗಳಿಗೆ ಗುಡ್‌ಬೈ ಹೇಳಿ, ಸರ್ಕಾರಿ ಕೆಲಸಕ್ಕೆ ಸೇರಿದ್ದೇವೆ ಎಂಬುದು ಬಿಇ ಪದವೀಧರರ ಅನಿಸಿಕೆ.

'2018ರಲ್ಲಿ ಎಂ.ಎಸ್ಸಿ ಪೂರ್ಣಗೊಳಿಸಿ, ಬೆಂಗಳೂರಿನ ಫಾರ್ಮಾ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದೆ. 12 ಗಂಟೆ ದುಡಿಮೆಗೆ ಸಿಗುತ್ತಿದ್ದ ಸಂಬಳ ಕೇವಲ ₹14 ಸಾವಿರ. ಇದರಿಂದ ಬೇಸತ್ತು ಕೆಲಸ ತೊರೆದೆ. 'ಕಾರಾಗೃಹ ವೀಕ್ಷಕ' ನೌಕರಿಯಲ್ಲಿ 6 ತಾಸು ದುಡಿಮೆಗೆ ₹30 ಸಾವಿರ ಸಂಬಳ ಕೊಡುತ್ತಾರೆ' ಎನ್ನುತ್ತಾರೆ ಬೆಂಗಳೂರಿನ ಜನಾರ್ದನ.

ಐಎಎಸ್ ಕನಸು: '2017ರಲ್ಲಿ ಎಂ.ಟೆಕ್ ಪದವಿ ಪಡೆದೆ. ನಂತರ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಂಪನಿಯೊಂದರಲ್ಲಿ ಒಂದು ವರ್ಷ ಕೆಲಸ ಮಾಡಿದೆ. ನಮ್ಮ ಪರಿಶ್ರಮ ಮತ್ತು ಕೌಶಲಕ್ಕೆ ತಕ್ಕ ಗೌರವ ಸಿಗಲಿಲ್ಲ. ಹೀಗಾಗಿ ನೌಕರಿ ತೊರೆದು, ಐಎಎಸ್ ಮಾಡಬೇಕು ಎಂದು ಅಧ್ಯಯನದಲ್ಲಿ ನಿರತನಾದೆ. ಈ ಮಧ್ಯೆ ಕೆಪಿಟಿಸಿಎಲ್, ಕೆಪಿಎಸ್‌ಸಿ, ಪಿಎಸ್‌ಐ ಪರೀಕ್ಷೆಗಳನ್ನೂ ಬರೆದಿದ್ದೆ. 'ಕಾರಾಗೃಹ ವೀಕ್ಷಕ' ಹುದ್ದೆ ಒಲಿಯಿತು. ಕೆಲಸ ಸಿಕ್ಕ ಖುಷಿ ಇದೆ. ಐಎಎಸ್ ಕನಸು ಕೂಡ ಜೀವಂತವಾಗಿದೆ' ಎನ್ನುತ್ತಾರೆ ಕಲಬುರ್ಗಿಯ ಸಂತೋಷ್ ಮೋದಿ.

'ಹೆಣ್ಣು ಕೊಡುವವರು ಹುಡುಗ ಹೇಗಿದ್ದಾನೆ, ಅವನ ನಡವಳಿಕೆ ಹೇಗಿದೆ, ಏನು ಓದಿದ್ದಾನೆ ಎಂಬುದಕ್ಕಿಂತ ಸರ್ಕಾರಿ ನೌಕರಿ ಇದೆಯಾ? ಎಂದು ಕೇಳುತ್ತಾರೆ. ಹೀಗಾಗಿ ನಮಗಿಲ್ಲದಿದ್ದರೂ 'ಮದುವೆಗಾಗಿ ಸರ್ಕಾರಿ ನೌಕರಿ' ಹಿಡಿಯಬೇಕಿದೆ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಬೆಳಗಾವಿಯ ಬಿ.ಇ ಪದವೀಧರ ಬೇಸರ ವ್ಯಕ್ತಪಡಿಸಿದರು.

ಹಾವೇರಿ ತಾಲ್ಲೂಕಿನ ಕೆರಿಮತ್ತಿಹಳ್ಳಿಯ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ ಮೈದಾನದಲ್ಲಿ ನಿರ್ಗಮನ ಪಥ ಸಂಚಲನ ನಡೆಸಿದ 'ಕಾರಾಗೃಹ ವೀಕ್ಷಕ' ಪ್ರಶಿಕ್ಷಣಾರ್ಥಿಗಳು —ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಉನ್ನತ ಶಿಕ್ಷಣ ಪಡೆದವರು ಕಾರಾಗೃಹ ಇಲಾಖೆಗೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಇಲಾಖೆ ಆಧುನೀಕರಣಗೊಳಿಸಲು ಅನುಕೂಲ

ಎಂ.ಸೋಮಶೇಖರ
ಕಾರಾಗೃಹಗಳ ಉಪ ಮಹಾನಿರೀಕ್ಷಕ, ಬೆಳಗಾವಿ ಉತ್ತರ ವಲಯ

ಜಾರಕಿಹೊಳಿ ಸಹೋದರರಿಗೆ ಪ್ರತಿಷ್ಠೆಯ ಕಣ

ಸತೀಶ ನಾಮಪತ್ರ 29ರಂದು

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಯಮಕನಮರಡಿ ಶಾಸಕ ಸತೀಶ ಜಾರಕಿಹೊಳಿ ಮಾರ್ಚ್ 29ರಂದು ಬೆಳಿಗ್ಗೆ 11ಕ್ಕೆ ನಾಮಪತ್ರ ಸಲ್ಲಿಸಲಿದ್ದಾರೆ.

ಅವರೇ ಅಭ್ಯರ್ಥಿ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಬುಧವಾರ ತಿಳಿಸಿದ್ದರು. ಇದೀಗ, ನಾಮಪತ್ರ ಸಲ್ಲಿಕೆಗೂ ಮುಹೂರ್ತ ನಿಗದಿಯಾಗಿದೆ. ಮಾರ್ಚ್ 28ರಂದು ಸಂಜೆಯೇ ನಗರಕ್ಕೆ ಬಂದು ಪಕ್ಷದ ಮುಖಂಡರ ಸಭೆ ನಡೆಸಿ ವಾಸ್ತವ್ಯ ಹೂಡಲಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ನಾಮಪತ್ರ ಸಲ್ಲಿಕೆ ವೇಳೆ ಸತೀಶ ಜಾರಕಿಹೊಳಿ ಜೊತೆಗೆ ಇರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

• ಎಂ. ಮಹೇಶ

ಬೆಳಗಾವಿ: ಬಿಜೆಪಿಯ ಸುರೇಶ ಅಂಗಡಿ ಅವರ ಅಕಾಲಿಕ ನಿಧನದಿಂದ ತೆರವಾಗಿರುವ ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಎದುರಾಗಿರುವ ಉಪ ಚುನಾವಣೆಯು ಜಾರಕಿಹೊಳಿ ಸಹೋದರರ ಸವಾಲು–ಜವಾಬ್ದಾರಿಗಳಿಗೆ ವೇದಿಕೆಯಾಗುವ ಸಾಧ್ಯತೆಗಳಿವೆ.

ನಾಲ್ವರಲ್ಲಿ ತಲಾ ಇಬ್ಬರು ಸಹೋದರರು ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿ ಇದ್ದಾರೆ. ತಮಗೆ ಬೇಕಾದವರ ಗೆಲುವಿಗೆ ಈ ಸೋದರರು ಟೊಂಕಕಟ್ಟಿ ನಿಲ್ಲುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. 'ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಸತೀಶ ಜಾರಕಿಹೊಳಿ ಅವರೇ ಕಾಂಗ್ರೆಸ್ ಅಭ್ಯರ್ಥಿ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ಪ್ರಕಟಿಸಿದ್ದಾರೆ.

'ಗೋಕಾಕದ ಶಾಸಕ ರಮೇಶ ಜಾರಕಿಹೊಳಿ ಕೂಡ ಪಕ್ಷದ ಪರವಾಗಿ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಇದನ್ನು ಗಮನಿಸಿದರೆ, ಈ ಚುನಾವಣೆಯಲ್ಲಿ ಜಾರಕಿಹೊಳಿ ಸಹೋದರರಿಗೆ ಹೆಚ್ಚಿನ ಜವಾಬ್ದಾರಿಯನ್ನು ಆ ಪಕ್ಷಗಳು ನೀಡಿರುವುದು ಸ್ಪಷ್ಟವಾಗಿದೆ.

ರಮೇಶ ಜಾರಕಿಹೊಳಿ

ಬಾಲಚಂದ್ರ ಜಾರಕಿಹೊಳಿ

ಲಖನ್ ಜಾರಕಿಹೊಳಿ

ರಮೇಶ ಪ್ರಭಾವ ಬಳಕೆಗೆ ಪಕ್ಷದ ಯೋಜನೆ: ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿದ್ದಾಗ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್‌ನಿಂದ ಹೊರ ಬಂದು ಬಿಜೆಪಿ ಸೇರಿರುವ ರಮೇಶ ಜಾರಕಿಹೊಳಿ ಅವರು ಪ್ರಭಾವಿಯಾಗಿ ಗುರುತಿಸಿಕೊಂಡಿದ್ದರು. ಅವರಿಗೆ ಮಹತ್ವದ ಜಲಸಂಪನ್ಮೂಲ ಸಚಿವ ಸ್ಥಾನದೊಂದಿಗೆ ಜಿಲ್ಲಾ ಉಸ್ತುವಾರಿಯ ಜವಾಬ್ದಾರಿಯನ್ನೂ ನೀಡಲಾಗಿತ್ತು. ಆದರೆ, ತಮ್ಮ ವಿರುದ್ಧದ ಸಿ.ಡಿ. ಪ್ರಕರಣದಿಂದಾಗಿ ಅವರು ಸಚಿವ ಸ್ಥಾನ ಕಳೆದುಕೊಂಡಿದ್ದಾರೆ.

ಆದಾಗ್ಯೂ, ಬಿಜೆಪಿ ನೇಮಿಸಿರುವ ಚುನಾವಣಾ ಉಸ್ತುವಾರಿಗಳ ಪೈಕಿ ಅವರ ಹೆಸರಿದೆ. ಈ ಭಾಗದಲ್ಲಿ ಸಾಕಷ್ಟು ಪ್ರಭಾವಿಯಾಗಿರುವ ಅವರ ಶಕ್ತಿ ಬಳಸಿಕೊಳ್ಳಲು ಆ ಪಕ್ಷ ಯೋಜಿಸಿದೆ. ಅವರೊಂದಿಗೆ ಅರಭಾವಿ ಶಾಸಕರೂ ಆಗಿರುವ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಇದ್ದಾರೆ. ಗೋಕಾಕ ಮತ್ತು ಅರಭಾವಿ ಕ್ಷೇತ್ರಗಳಲ್ಲಿ ಅಭ್ಯರ್ಥಿಯು ಅತಿ ಹೆಚ್ಚು ಮತ ಪಡೆಯುವಂತೆ ಮಾಡುವುದು ಬಿಜೆಪಿ ವರಿಷ್ಠರ ಗುರಿಯಾಗಿದೆ. ಹೀಗಾಗಿ, ಚುನಾವಣೆಯು ಈ ಸಹೋದರರಿಗೆ ಪ್ರತಿಷ್ಠೆಯ ವಿಷಯವೂ ಆಗಿದೆ.

ಯಾರ ಕೈ ಮೇಲಾಗುವುದು?: ಈ ಭಾಗದಲ್ಲಿ ಪಕ್ಷ ಸಂಘಟನೆಯ ನೊಗ ಹೊತ್ತಿರುವ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಜೊತೆಗೆ ಗೋಕಾಕ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಲಖನ್ ಜಾರಕಿಹೊಳಿ ಇದ್ದಾರೆ.

'ಹೋದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಲ್ಲಿದ್ದ, ಆದರೂ ಆಗ ಬಿಜೆಪಿಯ ಸುರೇಶ ಅಂಗಡಿ ಅವರಿಗೆ ಪರೋಕ್ಷವಾಗಿ ಬೆಂಬಲ ನೀಡಿದ್ದ' ಎಂದು ರಮೇಶ ಜಾರಕಿಹೊಳಿ ವಿರುದ್ಧ ಸತೀಶ ಹೇಳಿಕೆ ನೀಡಿದ್ದರು. ಒಂದೇ ಪಕ್ಷದಲ್ಲಿ (ಕಾಂಗ್ರೆಸ್) ಇದ್ದಾಗಲೂ ಸಹೋದರರಾದ ರಮೇಶ–ಸತೀಶ ನಡುವಿನ ಬಾಂಧವ್ಯ ಅಷ್ಟೇನೂ ಚೆನ್ನಾಗಿರಲಿಲ್ಲ. ಗೋಕಾಕ ಉಪ ಚುನಾವಣೆ ವೇಳೆ ಸಹೋದರರ ಸವಾಲು ತಾರಕಕ್ಕೇರಿತ್ತು. ಕಾಂಗ್ರೆಸ್‌ನ ಲಖನ್‌ಗೆ ಸತೀಶ ಬೆಂಬಲವಾಗಿ ನಿಂತಿದ್ದರು. ಬಿಜೆಪಿ ಅಭ್ಯರ್ಥಿಯಾಗಿದ್ದ ರಮೇಶಗೆ ಬಾಲಚಂದ್ರ ಸಾಥ್ ಕೊಟ್ಟಿದ್ದರು. ಆಗ, ರಮೇಶ–ಬಾಲಚಂದ್ರ ಕೈ ಮೇಲಾಗಿತ್ತು. ಈ ಚುನಾವಣೆಯಲ್ಲಿ ಜಾರಕಿಹೊಳಿ ಸಹೋದರರ ನಡೆ ಹೇಗಿರಲಿದೆ ಎನ್ನುವುದು ಕುತೂಹಲ ಮೂಡಿಸಿದೆ.

ಚುನಾವಣಾ ಕಣದಲ್ಲಿ

- ಮೊದಲ ಹಂತದಲ್ಲಿ ವಿಧಾನಸಭಾ ಚುನಾವಣೆ ಎದುರಿಸುತ್ತಿರುವ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಹಿರಂಗ ಪ್ರಚಾರ ಗುರುವಾರ ಅಂತ್ಯವಾಗಿದೆ. ಮೊದಲ ಹಂತದಲ್ಲಿ ಪಶ್ಚಿಮ ಬಂಗಾಳದ 30 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಈ ಕ್ಷೇತ್ರಗಳಲ್ಲಿ ಟಿಎಂಸಿ, ಬಿಜೆಪಿ, ಕಾಂಗ್ರೆಸ್ ಮತ್ತು ಎಡಪಕ್ಷಗಳ ನಾಯಕರು ಬಿರುಸಿನ ಪ್ರಚಾರ ನಡೆಸಿದ್ದಾರೆ. ಬಿಜೆಪಿಯ ರಾಜನಾಥ್ ಸಿಂಗ್, ಅಮಿತ್ ಶಾ, ಜೆ.ಪಿ.ನಡ್ಡಾ, ಸ್ಮೃತಿ ಇರಾನಿ, ಯೋಗಿ ಆದಿತ್ಯನಾಥ ಅವರು ಹಲವು ಪ್ರಚಾರ ಸಭೆಗಳನ್ನು ನಡೆಸಿದ್ದಾರೆ. ಮಮತಾ ಬ್ಯಾನರ್ಜಿ ಸಹ ಒಂದೇ ದಿನ ಹಲವು ಪ್ರಚಾರ ಸಭೆಗಳನ್ನು ನಡೆಸಿದ್ದಾರೆ.
- 'ಮಮತಾ ಬ್ಯಾನರ್ಜಿ ಬರ್ಮುಡಾ ಧರಿಸಲಿ' ಎಂದು ತಾವು ನೀಡಿದ್ದ ಹೇಳಿಕೆಯನ್ನು ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಸಮರ್ಥಿಸಿಕೊಂಡಿದ್ದಾರೆ. ಸೀರೆ ಉಟ್ಟ ಮಹಿಳೆಯು ತನ್ನ ಕಾಲುಗಳನ್ನು ತೋರಿಸುವುದು ಬಂಗಾಳದ ಸಂಸ್ಕೃತಿ ಅಲ್ಲ ಎಂದು ಅವರು ಹೇಳಿದ್ದಾರೆ. 'ಬರ್ಮುಡಾ ಧರಿಸಲಿ' ಎಂಬ ಹೇಳಿಕೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

'ಸ್ಕೀಮ್ ಬೇಕಿದ್ದರೆ ಬಿಜೆಪಿಗೆ, ಸ್ಕ್ಯಾಮ್ ಬೇಕಿದ್ದರೆ ಟಿಎಂಸಿಗೆ ಮತ ನೀಡಿ'

ಬಾಘಮುಂಡಿ (ಪಶ್ಚಿಮ ಬಂಗಾಳ) (ಪಿಟಿಐ): 'ಪಶ್ಚಿಮ ಬಂಗಾಳದ ಜನರಿಗೆ ಸ್ಕೀಮ್ (ಯೋಜನೆಗಳು) ಬೇಕಿದ್ದರೆ ಬಿಜೆಪಿಗೆ ಮತಹಾಕಿ, ಸ್ಕ್ಯಾಮ್ (ಹಗರಣಗಳು) ಬೇಕಿದ್ದರೆ ಟಿಎಂಸಿಗೆ ಮತ ನೀಡಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ ನೀಡಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅಮಿತ್ ಶಾ ಅವರು, ಮಮತಾ ಬ್ಯಾನರ್ಜಿ ವಿರುದ್ಧ ಹರಿಹಾಯ್ದಿದ್ದಾರೆ. 'ಎಡಪಕ್ಷಗಳು ಇಲ್ಲಿನ ಕಾರ್ಖಾನೆಗಳನ್ನು ಓಡಿಸಿದವು. ಮಮತಾ ಬ್ಯಾನರ್ಜಿ ಅವರು ಇಲ್ಲಿಂದ ಆಟೊಮೊಬೈಲ್ ಕಂಪನಿಗಳನ್ನು ಓಡಿಸಿದರು. ಆದರೆ ಉದ್ಯೋಗ ಸೃಷ್ಟಿಸುವಲ್ಲಿ ವಿಫಲರಾದರು' ಎಂದು ಅಮಿತ್ ಶಾ ಅವರು ಆರೋಪಿಸಿದ್ದಾರೆ.

'ಟಿಎಂಸಿ ಸರ್ಕಾರವು ಎಲ್ಲಾ ಯೋಜನೆಗಳಲ್ಲೂ ಕಮಿಷನ್ ಪಡೆಯುತ್ತದೆ. ಕೇಂದ್ರದ ಯೋಜನೆಗಳಲ್ಲಿ ಜನರಿಗೆ ತಲುಪುವುದಕ್ಕಿಂತ, ಟಿಎಂಸಿ ನಾಯಕರ ಕಮಿಷನ್ ಪ್ರಮಾಣವೇ ಅಧಿಕ' ಎಂದು ಅವರು ಹೇಳಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಡೆಂಘಿ ಮತ್ತು ಮಲೇರಿಯಾ ಅತ್ಯಧಿಕ ಪ್ರಮಾಣದಲ್ಲಿ ಇವೆ. ಮಮತಾ ದೀದಿಗೆ ಈ ರೋಗಗಳ ಬಗ್ಗೆ ಅಪಾರವಾದ ಪ್ರೀತಿ ಇದೆ. ಹೀಗಾಗಿ ಈ ರೋಗಗಳನ್ನು ಹೋಗಲಾಡಿಸಲು ಯಾವುದೇ ಕ್ರಮ ತೆಗದುಕೊಂಡಿಲ್ಲ. ನಾವು ಅಧಿಕಾರಕ್ಕೆ ಬಂದರೆ ಈ ರೋಗಗಳನ್ನು ಓಡಿಸುತ್ತೇವೆ' ಎಂದು ಅಮಿತ್ ಶಾ ಭರವಸೆ ನೀಡಿದ್ದಾರೆ.

ಪೂರ್ವ ಮೇದಿನಿಪುರದಲ್ಲಿ ಅಮಿತ್ ಶಾ ಭಾಷಣ ಪಿಟಿಐ ಚಿತ್ರ

'ಅಲ್ಪಸಂಖ್ಯಾತರ ಮತ ಒಡೆಯಲು ಬಿಜೆಪಿ ತಂತ್ರ'

ಪಥಾರ್‌ಪ್ರತಿಮಾ (ಪಶ್ಚಿಮ ಬಂಗಾಳ) (ಪಿಟಿಐ): 'ಈಚೆಗಷ್ಟೇ ಆರಂಭವಾಗಿರುವ ರಾಜಕೀಯ ಪಕ್ಷವೊಂದಕ್ಕೆ ಬಿಜೆಪಿ ಬೆಂಬಲ ನೀಡುತ್ತಿದೆ. ಈ ಮೂಲಕ, ಅಲ್ಪಸಂಖ್ಯಾತರ ಮತಗಳನ್ನು ಒಡೆಯಲು ಬಿಜೆಪಿ ಸಂಚು ರೂಪಿಸಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಮತಾ ಈ ಆರೋಪ ಮಾಡಿದ್ದಾರೆ. ಆ ಪಕ್ಷ ಯಾವುದು ಎಂಬುದನ್ನು ಮಮತಾ ಬಹಿರಂಗಪಡಿಸಿಲ್ಲ. ಆದರೆ, ಅಬ್ಬಾಸ್ ಸಿದ್ದಿಕಿ ಮುಂದಾಳತ್ವದ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಅನ್ನು ಗುರಿಯಾಗಿಸಿಕೊಂಡು ಮಮತಾ ಈ ಆರೋಪ ಮಾಡಿದ್ದಾರೆ. ಅಬ್ಬಾಸ್ ಸಿದ್ಧಿಕಿ ಅವರು ಈಚೆಗೆ, ಅಸಾದುದ್ದೀನ್ ಒವೈಸಿ ಅವರನ್ನು ಭೇಟಿ ಮಾಡಿದ್ದರು. ಒವೈಸಿ ಅವರು ಬಿಜೆಪಿ ಜತೆ ಕೈಜೋಡಿಸಿದ್ದಾರೆ ಎಂದು ಟಿಎಂಸಿಯ ಕೆಲವು ನಾಯಕರು ಹೇಳಿದ್ದಾರೆ.

ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಅನುವು

ಸಂಸತ್ ಅಧಿವೇಶನ ಮುಕ್ತಾಯ

ನವದೆಹಲಿ: ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಪುದುಚೇರಿ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಸಂಸತ್‌ನ ಬಜೆಟ್ ಅಧಿವೇಶನವು ನಿಗದಿಪಡಿಸಿದ ಅವಧಿಗೆ ಮುನ್ನವೇ ಗುರುವಾರ ಮುಕ್ತಾಯಗೊಂಡಿತು.

ರಾಜಕೀಯ ಮುಖಂಡರಿಗೆ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ, ಏಪ್ರಿಲ್ 8ರವರೆಗೆ ನಿಗದಿಯಾಗಿದ್ದ ಅಧಿವೇಶನವನ್ನು ನಿರೀಕ್ಷೆಯಂತೆಯೇ ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು.

ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮತ್ತಿತರ ಪ್ರಮುಖರು ಅಧಿವೇಶನದ ಕೊನೆಯ ದಿನದ ಕಲಾಪದಲ್ಲಿ ಪಾಲ್ಗೊಂಡಿದ್ದರು.

ಜನವರಿ 23ರಂದು ಪ್ರಾರಂಭವಾದ ಬಜೆಟ್ ಅಧಿವೇಶನ 24 ದಿನ ನಡೆ ದಿದ್ದರೂ, ವಿವಿಧ ವಿಷಯಗಳ ಕುರಿತ ಚರ್ಚೆಗೆ ಅವಕಾಶ ದೊರೆಯದ ಕಾರಣ ಆಡಳಿತಾರೂಢ ಎನ್‌ಡಿಎ ಸರ್ಕಾರ ವಿರೋಧ ಪಕ್ಷಗಳ ಟೀಕೆ ಎದುರಿಸಬೇಕಾಯಿತು.

ತೈಲ ಮತ್ತು ಅಡುಗೆ ಅನಿಲದ ಬೆಲೆ ಹೆಚ್ಚಳ ಹಾಗೂ ಕೃಷಿ ಕಾಯ್ದೆ ತಿದ್ದುಪಡಿ ಕುರಿತಂತೆ ವಿಪಕ್ಷಗಳಿಗೆ ಸಮಗ್ರ ಚರ್ಚೆಗೆ ಅವಕಾಶ ನೀಡದ್ದರಿಂದ ಮಾರ್ಚ್ 8ರಂದು ಪ್ರಾರಂಭವಾದ ಬಜೆಟ್ ಅಧಿವೇಶನದ ದ್ವಿತಿಯ ಭಾಗದ ಮೊದಲ ಮೂರು ದಿನಗಳ ಕಲಾಪವು ಪ್ರತಿಭಟನೆಗಳಿಗೆ ಸಾಕ್ಷಿಯಾಯಿತು.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಕೊರೊನಾ ಪೀಡಿತರಾಗಿರುವ ಕಾರಣ ಅಧಿವೇಶನದ ಕೊನೆಯ ದಿನ ಸ್ಪೀಕರ್ ಸ್ಥಾನದಲ್ಲಿ ಆಸೀನರಾಗಿದ್ದ ಬಿಜು ಜನತಾದಳದ (ಬಿಜೆಡಿ) ಹಿರಿಯ ಸದಸ್ಯ ಭರ್ತೃಹರಿ ಮೆಹತಾಬ್ ಸಮಾರೋಪ ಭಾಷಣ ಮಾಡಿದರು.

'ಬಜೆಟ್ ಅಧಿವೇಶನದ ಸಂದರ್ಭ ಲೋಕಸಭೆಯಲ್ಲಿ 24 ದಿನ, 134 ಗಂಟೆಗಳ ಕಾಲ ಕಲಾಪ ನಡೆದಿದ್ದು, ವಿವಿಧ ವಿಷಯಗಳ ಮೇಲೆ ಚರ್ಚೆ ನಡೆಸಿ, ಮಹತ್ವದ 18 ಮಸೂದೆಗಳನ್ನು ಅಂಗೀಕರಿಸಲಾಗಿದೆ. ರಾಜ್ಯಸಭೆಯಲ್ಲಿ 23 ದಿನ, 104 ಗಂಟೆ 23 ನಿಮಿಷ ಕಲಾಪ ನಡೆದಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸುದ್ದಿಗಾರರಿಗೆ ತಿಳಿಸಿದರು.

'ಸಂಸತ್ ಸದಸ್ಯತ್ವದ 17 ವರ್ಷಗಳ ನನ್ನ ಅನುಭವದಲ್ಲಿ ಇದೇ ಮೊದಲ ಬಾರಿಗೆ ವಿರೋಧ ಪಕ್ಷಗಳ ಒಂದೂ ಬೇಡಿಕೆಯತ್ತ ಅಧ್ಯಕ್ಷರು ಗಮನ ಹರಿಸಲಿಲ್ಲ. ಯಾವುದೇ ಚರ್ಚೆಗೂ ನಮಗೆ ಅವಕಾಶ ದೊರೆಯಲಿಲ್ಲ' ಎಂದು ರಾಜ್ಯಸಭೆ ಸದಸ್ಯ, ಕಾಂಗ್ರೆಸ್‌ನ ಜೈರಾಮ್ ರಮೇಶ್ ಸುದ್ದಿಗಾರರೆದುರು ದೂರಿದರು.

ಎಐಎಂಐಎಂ ಅಭ್ಯರ್ಥಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣ ವಿಧಾನಸಭಾ ಉಪ ಚುನಾವಣೆಗೆ ಅಸಾದುದ್ದೀನ್ ಒವೈಸಿ ನೇತೃತ್ವದ ಆಲ್ ಇಂಡಿಯಾ ಮಜ್ಲೀಸ್ ಇತ್ತೇಹಾದುಲ್ ಮುಸ್ಲಿಮೀನ್ (ಎಐಎಂಐಎಂ) ತನ್ನ ಅಭ್ಯರ್ಥಿಯನ್ನು ಘೋಷಿಸಿದೆ.

ಬಸವಕಲ್ಯಾಣ ನಗರಸಭೆ ಮಾಜಿ ಸದಸ್ಯ ಅಬ್ದುಲ್ ರಜಾಕ್ ಸಲೀಂ ಉರ್ಫ್ ಬಾಬಾ ಚೌಧರಿ ಅವರಿಗೆ ಪಕ್ಷದ ಬಿ ಫಾರಂ ನೀಡಲಾಗಿದೆ. ಅಬ್ದುಲ್ ರಜಾಕ್ ಒಮ್ಮೆ ವಿಧಾನಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದಾರೆ.

ಅಬ್ದುಲ್ ರಜಾಕ್ ಸಲೀಂ ಉರ್ಫ್ ಬಾಬಾ ಚೌಧರಿ

ರಜಾಕ್ ಶನಿವಾರ ನಾಮಪತ್ರ ಸಲ್ಲಿಸಲಿದ್ದಾರೆ. ಎಐಎಂಐಎಂ ಪ್ರಮುಖ ಅಸಾದುದ್ದೀನ್ ಒವೈಸಿ ಏಪ್ರಿಲ್ ಮೊದಲ ವಾರ ಪ್ರಚಾರಕ್ಕೆ ಬರಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮಸ್ಕಿ: ಮಸ್ಕಿ ವಿಧಾನಸಭಾ ಕ್ಷೇತ್ರಕ್ಕೆ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಅಣ್ಣೂರು ಗೌರಮ್ಮ ಕ್ಯಾಂಪ್‌ನ 82 ವಯೋಮಾನದ ಚಕ್ರವರ್ತಿ ನಾಯಕ ಟಿ. ಅವರು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರು.

ಪಾಲಕ್ಕಾಡ್: ಹಳೆ ಬೇರು–ಹೊಸ ಚಿಗುರು ಹಣಾಹಣಿ

ಪಾಲಕ್ಕಾಡ್ (ಪಿಟಿಐ): ಇತ್ತೀಚೆಗೆ ಬಿಜೆಪಿಗೆ ಸೇರ್ಪಡೆಯಾದ 'ಮೆಟ್ರೋಮ್ಯಾನ್' ಇ. ಶ್ರೀಧರನ್ ಸ್ಪರ್ಧೆಯಿಂದಾಗಿ ಪಾಲಕ್ಕಾಡ್ ಕ್ಷೇತ್ರವು ಪ್ರತಿಷ್ಠಿತ ಎನಿಸಿಕೊಂಡಿದೆ. ಹೊಸ ಚಿಗುರು–ಹಳೆ ಬೇರಿನ ನಡುವೆ ಹಣಾಹಣಿ ಈ ಪ್ರತಿಷ್ಠಿತ ಕ್ಷೇತ್ರದ ಇನ್ನೊಂದು ವಿಶೇಷ. ಮೂರನೇ ಅವಧಿಗೆ ಮರು ಆಯ್ಕೆ ಬಯಸಿರುವ ಕಾಂಗ್ರೆಸ್‌ನ ಶಫಿ ಪರಂಬಿಲ್‌ಗೆ ಈಗ ವಯಸ್ಸು 38 ವರ್ಷವಾದರೆ, ಶ್ರೀಧರನ್‌ಗೆ 88 ವರ್ಷ.

ಶಫಿ


ಶ್ರೀಧರನ್

ಗಮನ ಸೆಳೆದ ಕ್ಷೇತ್ರ

2011ರಿಂದಲೂ ಈ ಕ್ಷೇತ್ರವು ಕಾಂಗ್ರೆಸ್ ವಶದಲ್ಲಿದೆ. ಎಲ್‌ಡಿಎಫ್ ಇಲ್ಲಿ ಹೊಸ ಮುಖವೊಂದನ್ನು ಕಣಕ್ಕಿಳಿಸಿದೆ. ತೀವ್ರವಾದ ತ್ರಿಕೋನ ಸ್ಪರ್ಧೆಗೆ ಈ ಬಾರಿ ಕ್ಷೇತ್ರವು ಸಾಕ್ಷಿಯಾಗಬಹುದು.

ಯುವ ಮುಖಂಡ ಶಫಿ ಅವರು ಕ್ಷೇತ್ರದಲ್ಲಿ ಹೊಂದಿರುವ ಜನಪ್ರಿಯತೆ ಮತ್ತು ಅವರು ಜಾರಿಗೆ ತಂದಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನೇ ಯುಡಿಎಫ್ ನೆಚ್ಚಿಕೊಂಡಿದೆ. ಕಳೆದ ಚುನಾವಣೆಯಲ್ಲಿ ಶಫಿ ಅವರಿಗೆ 57,559 ಮತಗಳು ಸಿಕ್ಕಿದ್ದವು. 17 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಅವರು ಗೆದ್ದಿದ್ದರು.

ಶಫಿ ಅವರು ಕ್ಷೇತ್ರದ ಜನರ ಕೈಗೆ ಸಿಗುವ ವ್ಯಕ್ತಿ. ಉತ್ತಮ ವಾಗ್ಮಿಯೂ ಆಗಿರುವ ಅವರು ಕಳೆದ ಹತ್ತು ವರ್ಷಗಳಲ್ಲಿ ಕ್ಷೇತ್ರದ ಎಲ್ಲ ಜಾತಿ–ಧರ್ಮಗಳ ಜನರ ಜತೆಗೆ ವೈಯಕ್ತಿಕ ಎನ್ನುವಂತಹ ಸಂಬಂಧ ಇರಿಸಿಕೊಂಡಿದ್ದಾರೆ. ತಮ್ಮ ಕಾರ್ಯಕ್ಷಮತೆಯ ಬಗ್ಗೆ ಕ್ಷೇತ್ರದ ಜನರಲ್ಲಿ ಮೆಚ್ಚುಗೆ ಇದೆ. ಹಾಗಾಗಿ ಇನ್ನೊಂದು ಅವಧಿಗೆ ಗೆಲುವು ನಿಶ್ಚಿತ ಎಂಬ ವಿಶ್ವಾಸದಲ್ಲಿ ಶಫಿ ಇದ್ದಾರೆ. ಶಫಿ ಅವರು ರಾಜ್ಯ ಯುವ ಕಾಂಗ್ರೆಸ್‌ನ ಅಧ್ಯಕ್ಷರೂ ಹೌದು.

ಈ ಯುವ ಮುಖಂಡನ ಜನಪ್ರಿಯತೆಯಿಂದ ಶ್ರೀಧರನ್ ಅವರು ಎದೆಗುಂದಿಲ್ಲ. ಸೀಮಿತ ಸಮಯದಲ್ಲಿ ಸಾಧ್ಯವಾದಷ್ಟು ಜನರನ್ನು ತಲುಪಲು ಅವರು ಯತ್ನಿಸುತ್ತಿದ್ದಾರೆ.

ಕೇರಳದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಎರಡು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾಲಕ್ಕಾಡ್ ಕೂಡ ಒಂದು. ಅದಲ್ಲದೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಾಲಕ್ಕಾಡ್‌ನಿಂದ ಸ್ಪರ್ಧಿಸಿದ್ದ ಶೋಭಾ ಸುರೇಂದ್ರನ್ ಅವರು 40,076 ಮತಗಳೊಂದಿಗೆ ಎರಡನೇ ಸ್ಥಾನ ಪಡೆದಿದ್ದರು. 2011ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಇಲ್ಲಿ ಶೇ 19.86ರಷ್ಟು ಮತಗಳು ಸಿಕ್ಕಿದ್ದರೆ 2016ರಲ್ಲಿ ಇದು ಶೇ 29.08ಕ್ಕೆ ಏರಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಶೇ 29.76ರಷ್ಟು ಮತ ಸಿಕ್ಕಿತ್ತು. ಈ ಎಲ್ಲ ಕಾರಣಗಳಿಂದಾಗಿಯೇ ಶ್ರೀಧರನ್ ಅವರನ್ನು ಬಿಜೆಪಿ ಇಲ್ಲಿ ಕಣಕ್ಕೆ ಇಳಿಸಿದೆ.

ಶ್ರೀಧರನ್ ಅವರ ದೊಡ್ಡ ಹಿನ್ನೆಲೆ ಮತ್ತು ಶುದ್ಧ ಚಾರಿತ್ರ್ಯವು ಚುನಾವಣೆಯಲ್ಲಿ ನೆರವಾಗಲಿದೆ ಎಂಬುದು ಬಿಜೆಪಿಯ ಲೆಕ್ಕಾಚಾರ. ಆದರೆ, ಕೆಲವರು ಶ್ರೀಧರನ್ ಅವರ ಕಾಲು ತೊಳೆಯುವ ಮತ್ತು ಕಾಲಿಗೆ ಬೀಳುವ ವಿಡಿಯೊಗಳು ವೈರಲ್ ಆಗಿ ಇತ್ತೀಚೆಗೆ ವಿವಾದವಾಗಿತ್ತು. ಇದು ಅವರ 'ಊಳಿಗಮಾನ್ಯ ಮನಸ್ಥಿತಿ'ಯ ಪ್ರತಿಬಿಂಬ ಎಂದು ಪ್ರತಿಸ್ಪರ್ಧಿಗಳು ಹೇಳಿದ್ದಾರೆ. ಆದರೆ, ಹಿರಿಯರಿಗೆ ನಮಸ್ಕರಿಸುವುದು ಭಾರತೀಯ ಸಂಸ್ಕೃತಿ ಎಂದು ಶ್ರೀಧರನ್ ತಿರುಗೇಟು ಕೊಟ್ಟಿದ್ದಾರೆ.

ಗೆದ್ದರೆ ಹೆಲಿಕಾಪ್ಟರ್, ಕೋಟಿ ಹಣ ಭರವಸೆ!

ಚೆನ್ನೈ: ಪ್ರತೀ ಕುಟುಂಬಕ್ಕೆ ಒಂದು ಮಿನಿ ಹೆಲಿಕಾಪ್ಟರ್, ಪ್ರತಿ ಮನೆಗೆ ₹1 ಕೋಟಿ ಹಣ ಠೇವಣಿ, ಮದುವೆ ಸಮಾರಂಭಗಳಿಗೆ ಚಿನ್ನಾಭರಣ ಉಡುಗೊರೆ ಹಾಗೂ ಮೂರು ಅಂತಸ್ತಿನ ಮನೆ ನಿರ್ಮಾಣ – ಇವು ಅಭ್ಯರ್ಥಿಯೊಬ್ಬರು ನೀಡಿರುವ ಭರವಸೆಗಳು.

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಮದುರೈ ದಕ್ಷಿಣ ಕ್ಷೇತ್ರದಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿರುವ ಟಿ. ಶರವಣನ್ ಅವರು ಚಂದ್ರನಲ್ಲಿಗೆ ಪ್ರವಾಸ ಕರೆದೊಯ್ಯುವ ವಾಗ್ದಾನವನ್ನೂ ತಮ್ಮ ಪ್ರಣಾಳಿಕೆಯಲ್ಲಿ ನೀಡಿ ಅಚ್ಚರಿ ಮೂಡಿಸಿದ್ದಾರೆ.

'ರಾಜಕೀಯ ಪಕ್ಷಗಳು ನೀಡುವ ಭಾರಿ ಭರವಸೆಗಳ ವಿರುದ್ಧ ಜಾಗೃತಿ ಮೂಡಿಸುವುದು ನನ್ನ ಉದ್ದೇಶ. ಉಚಿತ ಕೊಡುಗೆ ಭರವಸೆಗಳಿಗೆ ಜನರು ಮರುಳಾಗಬಾರದು. ಸಾಮಾನ್ಯರೂ, ವಿನಮ್ರರೂ ಆಗಿರುವ ವ್ಯಕ್ತಿಗಳನ್ನು ಆಯ್ಕೆ ಮಾಡಿ' ಎಂದು ಅವರು ಕರೆ ನೀಡಿದ್ದಾರೆ.

ಬಡ ಕುಟುಂಬದಲ್ಲಿ ಜನಿಸಿರುವ ಶರವಣನ್, ಚುನಾವಣೆಯಲ್ಲಿ ಸ್ಪರ್ಧಿಸುವ ಠೇವಣಿ ಹಣಕ್ಕಾಗಿ ₹20,000 ಸಾಲ ಮಾಡಿರುವುದಾಗಿ ತಿಳಿಸಿದ್ದಾರೆ.

'ಗಡಿ ವಿಚಾರ ಮುಂದಿಟ್ಟುಕೊಂಡು ಬೆಳಗಾವಿಯಲ್ಲಿ ಎಂಇಎಸ್ ಸ್ಪರ್ಧೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ, ಗಡಿ ವಿಚಾರವನ್ನೇ ಮುಂದಿಟ್ಟುಕೊಂಡು ಬೆಂಬಲಿತ ಅಭ್ಯರ್ಥಿ ಕಣಕ್ಕಿಳಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿರ್ಧರಿಸಿದೆ.

ಇಲ್ಲಿನ ಮರಾಠಾ ಮಂದಿರದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಮುಖಂಡ ಮನೋಹರ ಕಿಣೇಕರ ಮಾತನಾಡಿ, 'ಬೆಳಗಾವಿ ಉತ್ತರ, ದಕ್ಷಿಣ ಹಾಗೂ ಗ್ರಾಮೀಣ ಕ್ಷೇತ್ರದಲ್ಲಿ ಮರಾಠಿ ಭಾಷಿಗರ ಸಂಖ್ಯೆ ಹೆಚ್ಚಿದೆ. ಎಲ್ಲ ತಾಲ್ಲೂಕುಗಳಲ್ಲೂ ನಮ್ಮವರಿದ್ದಾರೆ. ಹೀಗಾಗಿ, ಗಡಿ ವಿಚಾರವನ್ನು ಮುಖ್ಯವಾಗಿ ಮುಂದಿಟ್ಟುಕೊಂಡು ಚುನಾವಣೆ ಎದುರಿಸಲಾಗುವುದು. ಮರಾಠಿ ಭಾಷಿಗರಿರುವ ಪ್ರದೇಶಗಳೆಲ್ಲವನ್ನೂ ಮಹಾರಾಷ್ಟ್ರಕ್ಕೆ ಸೇರಿಸಬೇಕು ಎನ್ನುವುದೇ ಪ್ರಮುಖ ವಿಷಯವಾಗಿರಲಿದೆ' ಎಂದು ತಿಳಿಸಿದರು.

ಅಭ್ಯರ್ಥಿ ಆಯ್ಕೆ ಜವಾಬ್ದಾರಿಯನ್ನು ಆಯ್ಕೆ ಸಮಿತಿಗೆ ವಹಿಸಲು ನಿರ್ಧರಿಸಲಾಯಿತು.

ಎನ್‌ಸಿಪಿಯಿಂದ ಸ್ಪರ್ಧೆ ಮಾಜಿ ಶಾಸಕ ಮುಳೆ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣ ಉಪ ಚುನಾವಣೆಯ ಬಿಜೆಪಿ ಟಿಕೆಟ್ ಶರಣು ಸಲಗರ ಅವರಿಗೆ ಘೋಷಣೆಯಾದ ನಂತರ ಮಾಜಿ ಶಾಸಕ ಎಂ.ಜಿ.ಮುಳೆ ಅವರು ಶರದ್ ಪವಾರ ನೇತೃತ್ವದ ಎನ್‌ಸಿಪಿಯಿಂದ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ಸೋಮವಾರ ಅಧಿಕೃತವಾಗಿ ಬಸವಕಲ್ಯಾಣದಲ್ಲಿ ಎನ್ಸಿಪಿ ರಾಜ್ಯ ಘಟಕದ ಅಧ್ಯಕ್ಷ ನಲಿನ್ ಸಮ್ಮುಖದಲ್ಲಿ ಪಕ್ಷಕ್ಕೆ ಸೇರಲಿದ್ದಾರೆ.

ಅದೇ ದಿನ ಅಥವಾ ಮಂಗಳವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಎಂ.ಜಿ. ಮುಳೆ

'ಎನ್ಸಿಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಿದ್ದೇನೆ. ಏಪ್ರಿಲ್ ಮೊದಲ ವಾರದಲ್ಲಿ ಪ್ರಚಾರಕ್ಕೆ ಬರುವಂತೆ ಸಂಸದೆ ಸುಪ್ರಿಯಾ ಸುಳೆ ಹಾಗೂ ಶರದ್ ಪವಾರ್ ಅವರಿಗೆ ಮನವಿ ಮಾಡಲಿದ್ದೇನೆ' ಎಂದು ಎಂ.ಜಿ. ಮುಳೆ ತಿಳಿಸಿದ್ದಾರೆ.

ಮುಳೆ ಜೆಡಿಎಸ್ ಟಿಕೆಟ್ ಆಕಾಂಕ್ಷಿಯೂ ಆಗಿದ್ದರು. ಟಿಕೆಟ್ ಕೊಡುವ ಭರವಸೆ ನೀಡಿ ಪಕ್ಷಕ್ಕೆ ಸೇರಿಸಿಕೊಂಡು ಬೇರೊಬ್ಬರಿಗೆ ಟಿಕೆಟ್ ಕೊಟ್ಟಿದ್ದಾರೆ ಎಂದು ಜೆಡಿಎಸ್ ವಿರುದ್ಧ ಮುನಿಸಿಕೊಂಡಿದ್ದರು. ಬಿಜೆಪಿ ಟಿಕೆಟ್ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದರು.

ಕರ್ನಾಟಕ ಸರ್ಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

ದೂರವಾಣಿ: 08384–226381 ಇ–ಮೇಲ್: ee_zpedsirsi@yahoo.co.in

ಕ್ರಸಂ: ಪಂ.ರಾ.ಇಂ/ವಿಶಿ/ಪಿ.ಬಿ–2/2515ನೇ ತಾಪಂಕ/ಟೆಂಡರ್–28/202–21/4120 ದಿ: 22.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆ–28/2020–21 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಶಿರಸಿ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನವಿಕೃತ ನೊಂದಾಯಿತ ಹಾಗೂ ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ಎನ್‌ರೋಲ್‌ಮೆಂಟ್ ಆದ 2019–20ನೇ ಸಾಲಿನ ನವಿಕೃತ ನೋಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ **2515–00–197–1–07–300 ತಾಲೂಕು ಪಂಚಾಯತ ಕಟ್ಟಡ ಯೋಜನೆ** ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನಂತೆ **KW-IV** ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. **ಮುಂಗಡ ಠೇವಣಿ/ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ಬೆಂಗಳೂರು, ದಿನಾಂಕ:22.12.2020ರಂತೆ (Annexure (EMD Declaration)** ಕಡ್ಡಾಯವಾಗಿ **Upload** ಮಾಡಬೇಕು ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿ ಹೆಸರು: ಶಿರಸಿ ತಾಲೂಕಿನ ಶಿರಸಿಯಲ್ಲಿ ತಾಲೂಕು ಪಂಚಾಯತ ಕಟ್ಟಡ ನಿರ್ಮಾಣ (Indent No–81195) ಟೆಂಡರಿಗಿಟ್ಟ **ಮೊತ್ತ ರೂ.171.84 ಲಕ್ಷ, ಕಾಲಮಿತಿ: 9 ತಿಂಗಳು(ಮಳೆಗಾಲ ಸಹಿತ), ಗುತ್ತಿಗೆದಾರರ ದರ್ಜೆ: ಅರ್ಹ ಗುತ್ತಿಗೆದಾರರು (ದ್ವಿ ಲಕೋಟಿ ಪದ್ಧತಿ) (KW-IV).**

(1) ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು **Technical Bid** ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ **ದಿನಾಂಕ: 12.04.2021 ರ ಸಂಜೆ 16.00 ಗಂಟೆಯವರೆಗೆ.**

(2) Technical Bid ಗಳನ್ನು ತೆರೆಯುವ **ದಿನಾಂಕ: 15.04.2021 ಸಂಜೆ 16.30 ಗಂಟೆಗೆ** ಹಾಗೂ Financial Bid ಗಳನ್ನು ತೆರೆಯುವ **ದಿನಾಂಕ: 17.04.2021 ಬೆಳಿಗ್ಗೆ 11.00 ಗಂಟೆಗೆ** (ಸಾಧ್ಯವಾದಲ್ಲಿ).

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ

DIPR/ADK/MCA/888/20-21 dt.24.3.2021

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾಹಿತಿ ತಂತ್ರಜ್ಞಾನ ಸಲಹೆಗಾರರ ಕಛೇರಿ, 16ನೇ ಕ್ರಾಸ್, ಮಲ್ಲೇಶ್ವರಂ, ಐಪಿಪಿ ಡಾಟಾ ಸೆಂಟರ್, ಬೆಂಗಳೂರು–560003

ನಂ: ಬಿ12(ಪಿ1)/ಪಿಆರ್/13/2019–20 ದಿನಾಂಕ: 25.03.2021

ಟೆಂಡರ್ ಅಧಿಸೂಚನೆ

(ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **(https://eproc.karnataka.gov.in)** ಮೂಲಕ ಪೂರೈಕೆ ಮತ್ತು ಸ್ಥಾಪನೆಗೆ ಅರ್ಹ ಬಿಡ್ಡುದಾರರಿಂದ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿ ಮತ್ತು ವಲಯ ಜಂಟಿ ಆಯುಕ್ತರ ಕಚೇರಿಗಳಿಗೆ ಡೇಟಾ ಎಂಟ್ರಿ ಆಪರೇಟರ್‌ನ್ನು ಒದಗಿಸುವುದಕ್ಕಾಗಿ **(Supply of Data Entry Operator)** ಟೆಂಡರ್ ಆಹ್ವಾನಿಸಲಾಗಿರುತ್ತದೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ಆಸಕ್ತ ತಯಾರಕರು ಮೇಲೆ ತಿಳಿಸಿದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್ಡುದಾರರು ಎರಡು ಪ್ರತ್ಯೇಕ ಮೊಹರು ಕವರ್‌ಗಳನ್ನು ಸಲ್ಲಿಸಬೇಕಾಗುತ್ತದೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ), ಒಂದು ಅರ್ನೆಸ್ಟ್ ಹಣ ಠೇವಣಿ ಘೋಷಣೆ ಮತ್ತು ಟೆಂಡರ್ ಕೈಗೊಳ್ಳುವ ಸಾಮರ್ಥ್ಯದ ವಿವರಗಳನ್ನು ಒಳಗೊಂಡಿರುತ್ತದೆ, ಇದು ಮೊದಲು ತೆರೆಯಲ್ಪಡುತ್ತದೆ ಮತ್ತು ಬೆಲೆ ಬಿಡ್ ಹೊಂದಿರುವ ಎರಡನೇ ಲಕೋಟೆಯನ್ನು ಬಿಡ್ಡುದಾರರು ತಾಂತ್ರಿಕವಾಗಿ ಅರ್ಹತೆ ಪಡೆದರೆ ಮಾತ್ರ ತೆರೆಯಲಾಗುತ್ತದೆ. (1) ಟೆಂಡರ್‌ಗಳು ಶ್ರದ್ಧೆಯಿಂದ ಹಣ ಠೇವಣಿ ಘೋಷಣೆಯೊಂದಿಗೆ ಇರಬೇಕು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಿದ ದಿನಾಂಕ ಮತ್ತು ಸಮಯದೊಂದಿಗೆ ವಿದ್ಯುನ್ಮಾನವಾಗಿ (ಇಂಟರ್ನೆಟ್ ಮೂಲಕ ಆನ್‌ಲೈನ್‌ನಲ್ಲಿ) ಸಲ್ಲಿಸಬೇಕು. ಐಟಿ ಸಲಹೆಗಾರರ ಕಚೇರಿಯಲ್ಲಿ ಹಾಜರಾಗಲು ಬಯಸುವ ಟೆಂಡರ್‌ಗಳ ಉಪಸ್ಥಿತಿಯಲ್ಲಿ, ಐಟಿ ಸಲಹೆಗಾರರು, 16ನೇ ಕ್ರಾಸ್, ಮಲ್ಲೇಶ್ವರಂ, ಐಪಿಪಿ ಡಾಟಾ ಸೆಂಟರ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು–560003 ಕಚೇರಿಯಲ್ಲಿ ಹಾಜರಾಗಲು ಬಯಸುವ ಟೆಂಡರ್‌ಗಳ ಉಪಸ್ಥಿತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಿಗದಿತ ಸಮಯ ಮತ್ತು ದಿನಾಂಕದಂದು ಟೆಂಡರ್‌ಗಳನ್ನು ತೆರೆಯಲಾಗುತ್ತದೆ. (3) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದಾದ **ದಿನಾಂಕ : 29.03.2021 ರಿಂದ, (4)** ಪೂರ್ವಭಾವಿ ವಿಚಾರಣೆಗಳನ್ನು ಅಥವಾ **ದಿನಾಂಕ 02.04.2021 ರೊಳಗೆ** ಈ ಕಚೇರಿ, ಇಮೇಲ್ **itadv@bbmp.gov.in** ಮೂಲಕ ಸಲ್ಲಿಸಬೇಕು. (5) ಪ್ರೀಬಿಡ್ ಸಭೆ **ದಿನಾಂಕ 05.04.2021 ರಂದು 15.00 ಗಂಟೆಗೆ** ಐಟಿ ಸಲಹೆಗಾರರು, ಐಪಿಪಿ ಕೇಂದ್ರ, 16ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು –560003 ಕಚೇರಿಯಲ್ಲಿ ನಡೆಯಲಿದೆ. 6) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ **ದಿನಾಂಕ : 15.04.2021 ರಂದು 16.00 ಗಂಟೆಗೆ.** ಮತ್ತು ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ : 17.04.2021 ರಂದು 16.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು	ಇಎಂಡಿ (ರೂಗಳಲ್ಲಿ)
1	"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿಗೆ ಡೇಟಾ ಎಂಟ್ರಿ ಆಪರೇಟರ್ ಒದಗಿಸುವುದು, ವಲಯ ಜಂಟಿ ಆಯುಕ್ತರ ಕಚೇರಿಗಳು ಮತ್ತು ಇತರ ಬಿಬಿಎಂಪಿ ಅಧಿಕಾರಿಗಳು".	ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಆಇ675ವೆಚ್ಚ–12/2020 ರ ಪ್ರಕಾರ, ದಿನಾಂಕ : 22.12.2020, ಇ.ಎಂ.ಡಿ ಪಾವತಿಯನ್ನು ಸಡಿಲಿಸಲಾಗಿದೆ. ಆದರೆ ಸರಿಯಾಗಿ ಸೂಚಿಸಲಾಗಿರುವ ರೂ.20 ಸ್ಟ್ಯಾಂಪ್ ಪೇಪರ್‌ನಲ್ಲಿ ಅನುಬಂಧ–ಎ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿದೆ.

(1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸದ ಮಹತ್ವಾಕಾಂಕ್ಷಿ ಬಿಡ್ದಾರರು ವೆಬ್‌ಸೈಟ್ **https://eproc.karnataka.gov.in** ಮೂಲಕ ಭಾಗವಹಿಸುವ ಮೊದಲು ನೋಂದಾಯಿಸಿಕೊಳ್ಳಬೇಕು. (2) ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಅಗತ್ಯವಿರುವ ಎಲ್ಲ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬಿಡ್‌ನೊಂದಿಗೆ ಲಗತ್ತಿಸಲಾಗಿದೆ ಎಂದು ಬಿಡ್ದಾರರು ಖಚಿತಪಡಿಸಿಕೊಳ್ಳಬೇಕು. (3) ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಬೇಕು ಮತ್ತು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. (4) ಹೆಚ್ಚಿನ ಮಾಹಿತಿಗಾಗಿ, ನೋಂದಣಿ ಮತ್ತು ಇ–ಪಾವತಿ GOK ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ಗೆ ಭೇಟಿ ನೀಡಿ, (5) ಈ ಟೆಂಡರ್ ನೋಟಿಸ್ ಅನ್ನು ಬಿಬಿಎಂಪಿ ಅಧಿಕೃತ ವೆಬ್‌ಸೈಟ್ www.bbmp.gov.in ನಲ್ಲಿ ಪ್ರಕಟಿಸಲಾಗುವುದು.

ಸಹಿ/–
ಮಾಹಿತಿ ತಂತ್ರಜ್ಞಾನ ಸಲಹೆಗಾರರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಹಾರಾಷ್ಟ್ರ ಪ್ರಕರಣ: ಹೈಕೋರ್ಟ್‌ಗೆ ಪರಮ್ ವೀರ್ ಸಿಂಗ್ ಅರ್ಜಿ

ಸಿಬಿಐ ತನಿಖೆಗೆ ಒತ್ತಾಯ

ಮುಂಬೈ (ಪಿಟಿಐ): ಗೃಹ ಸಚಿವರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ವೀರ್ ಸಿಂಗ್ ಅವರು ಪ್ರಕರಣ ಕುರಿತು ಸಿಬಿಐನಿಂದ 'ತ್ವರಿತ ಮತ್ತು ನಿಷ್ಪಕ್ಷಪಾತ' ತನಿಖೆಗೆ ನಿರ್ದೇಶನ ನೀಡಬೇಕು ಎಂದು ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ಸಿಂಗ್ ಈ ಮೊದಲು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಗೃಹ ಸಚಿವ ಅನಿಲ್ ದೇಶ್‌ಮುಖ್ ವಿರುದ್ಧ ಆರೋಪಿಸಿರುವ ಇದೊಂದು ಗಂಭೀರ ಪ್ರಕರಣ ಎಂದಿದ್ದ ಸುಪ್ರೀಂ, ಈ ಸಂಬಂಧ ಬಾಂಬೆ ಹೈಕೋರ್ಟ್‌ಗೆ ಅರ್ಜಿಯನ್ನು ಸಲ್ಲಿಸಬಹುದು ಎಂದು ಅಭಿಪ್ರಾಯಪಟ್ಟಿತ್ತು.

'ಅನಿಲ್ ದೇಶ್‌ಮುಖ್ ಫೆಬ್ರುವರಿ ತಿಂಗಳಲ್ಲಿ ತಮ್ಮ ನಿವಾಸದಲ್ಲಿ ಮುಂಬೈನ ಹಲವು ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದರು. ಆ ಸಭೆಯಲ್ಲಿ ಅಧಿಕಾರಿ ವಾಜೆ ಕೂಡಾ ಇದ್ದರು. ಆ ಸಭೆಯಲ್ಲಿಯೇ, ವಿವಿಧ ವಾಣಿಜ್ಯ, ವ್ಯಾಪಾರ ಸಂಸ್ಥೆಗಳಿಂದ ಪ್ರತಿ ತಿಂಗಳು ₹ 100 ಕೋಟಿ ಸಂಗ್ರಹಿಸಿಕೊಡಬೇಕು ಎಂದು ಗೃಹಸಚಿವರು ಸೂಚಿಸಿದ್ದರು' ಎಂದು ಸಿಂಗ್ ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

'ಗೃಹ ಸಚಿವರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಕುರಿತು ನಿಷ್ಪಕ್ಷಪಾತ, ನ್ಯಾಯಸಮ್ಮತ ತನಿಖೆಯನ್ನು ತ್ವರಿತಗತಿಯಲ್ಲಿ ನಡೆಸುವುದು ಅಗತ್ಯ. ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಕೋರಿದ್ದಾರೆ.

> **ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಪರಮ್ ವೀರ್ ಸಿಂಗ್ ಮಾಡಿರುವ ಭ್ರಷ್ಟಾಚಾರದ ಆರೋಪ ಮುಗಿದ ಅಧ್ಯಾಯ. ಮೈತ್ರಿ ಸರ್ಕಾರಕ್ಕೆ ಯಾವುದೇ ತೊಂದರೆ ಇಲ್ಲ**
> **ಸಂಜಯ್ ರಾವತ್,** ಶಿವಸೇನೆ ಮುಖಂಡ

ಶಿವಸೇನೆಗೆ ಬಿಜೆಪಿ ತರಾಟೆ: ಗಂಭೀರ ಆರೋಪದ ನಂತರವೂ ಶಿವಸೇನೆಯು ಗೃಹ ಸಚಿವರ ರಾಜೀನಾಮೆಗೆ ಒತ್ತಾಯಿಸದೇ ಸಮರ್ಥನೆಗೆ ನಿಂತಿದೆ ಎಂದು ಬಿಜೆಪಿ ಮುಖಂಡ ಪ್ರವೀಣ್ ದಾರೇಕರ್ ಹರಿಹಾಯ್ದಿದ್ದಾರೆ.

ಮಹಿಳೆಯ ಶಂಕಾಸ್ಪದ ಸಾವಿನ ಪ್ರಕರಣ ಸಂಬಂಧ ಕಳೆದ ತಿಂಗಳು ಶಿವಸೇನೆ ಪಕ್ಷದವರೇ ಆದ ಸಚಿವ ಸಂಜಯ್ ರಾಥೋಡ್ ರಾಜೀನಾಮೆ ಪಡೆಯಲು ಮುಖಂಡ ಸಂಜಯ್ ರಾವುತ್ ಯಾವುದೇ ಆಕ್ಷೇಪ ಎತ್ತಿರಲಿಲ್ಲ. ಈಗ ಗಂಭೀರ ಆರೋಪವಿದ್ದರೂ ಗೃಹ-ಸಚಿವರನ್ನು ಅವರು ಸಮರ್ಥಿಸಿಕೊಳ್ಳು-ತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ರಾಷ್ಟ್ರಪತಿ ಆಡಳಿತಕ್ಕೆ ಒತ್ತಾಯ: ಕೇಂದ್ರ ಸಚಿವ ರಾಮದಾಸ್ ಅತವಳೆ ಗುರುವಾರ ನವದೆಹಲಿಯಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಭೇಟಿಯಾಗಿದ್ದು, ಮಹಾರಾಷ್ಟ್ರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು ಎಂದು ಕೋರಿದ್ದಾರೆ.

ರಾಷ್ಟ್ರಪತಿ ಭೇಟಿ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಬೇಡಿಕೆಯನ್ನು ಪರಿಶೀಲಿಸುವುದಾಗಿ ರಾಷ್ಟ್ರಪತಿ ಭರವಸೆ ನೀಡಿದ್ದಾರೆ. ಗೃಹ ಸಚಿವರ ವಿರುದ್ಧವೇ ಭಾರಿ ಭ್ರಷ್ಟಾಚಾರ ಆರೋಪ ಬಂದಿರುವ ಕಾರಣ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಇದೆ' ಎಂದು ಹೇಳಿದರು.

ಎನ್‌ಐಎ ವಶದಲ್ಲಿ ವಾಜೆ, ಅವಧಿ ವಿಸ್ತರಣೆ: ಬಂಧಿತ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ವಿಚಾರಣೆಗೆ ಎನ್‌ಐಎ ವಶಕ್ಕೆ ಒಪ್ಪಿಸಿರುವ ಅವಧಿಯನ್ನು ಏ.3ರವರೆಗೂ ವಿಶೇಷ ನ್ಯಾಯಾಲಯ ಗುರುವಾರ ವಿಸ್ತರಿಸಿತು. 'ಅಪರಾಧ ಕೃತ್ಯವು ಭಯೋತ್ಪಾದಕ ಕೃತ್ಯಕ್ಕೆ ಸಮನಾದುದು' ಎಂದು ತನಿಖಾ ಸಂಸ್ಥೆ ಹೇಳಿತು.

ಮನ್‌ಸುಖ್ ಹಿರೇನ್ ಕೊಲೆ ಪ್ರಕರಣದಲ್ಲಿ ಬಂಧಿತನಾದ ಇನ್ನೊಬ್ಬ ಆರೋಪಿ ಜೊತೆ ವಾಜೆ ಅವರನ್ನು ಮುಖಾಮುಖಿ ಆಗಿಸಬೇಕಿದೆ. ದಾಖಲೆಯಿಲ್ಲದ 62 ಗುಂಡು ಪತ್ತೆ ಪ್ರಕರಣ ಕುರಿತೂ ತನಿಖೆ ನಡೆಸಬೇಕಾಗಿದೆ ಎಂದು ಎನ್‌ಐಎ ಕೋರ್ಟ್‌ಗೆ ತಿಳಿಸಿತು. 'ಈ ಪ್ರಕರಣದಲ್ಲಿ ತಮ್ಮನ್ನು ಬಲಿಪಶು ಮಾಡಲಾಗಿದೆ' ಎಂದು ವಾಜೆ ವಾದಿಸಿದರು.

ರಾಜ್ಯ ಬಿಜೆಪಿ ಪುನರ್‌ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಬಿಜೆಪಿಯ ಪ್ರಮುಖರ ಸಮಿತಿಯನ್ನು ಪಕ್ಷದ ಹೈಕಮಾಂಡ್ ಇತ್ತೀಚೆಗೆ ಪುನರ್‌ರಚಿಸಿ ಆದೇಶಿಸಿದ್ದು, ಸಮಿತಿಯಲ್ಲಿದ್ದ ಇಬ್ಬರು ಪ್ರಮುಖರನ್ನು ಕೈಬಿಟ್ಟು, ನಾಲ್ವರನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ.

ಸಚಿವ ಅರವಿಂದ ಲಿಂಬಾವಳಿ, ಶಾಸಕ ಸಿ.ಎಂ. ಉದಾಸಿ ಅವರನ್ನು ಸಮಿತಿಯಿಂದ ಕೈಬಿಡಲಾಗಿದೆ.

ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ, ಅಶ್ವತ್ಥನಾರಾಯಣ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲಕುಮಾರ್ ಸುರಾನಾ, ಸಮಾಜ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಅವರು ಸಮಿತಿಗೆ ಹೊಸದಾಗಿ ಸೇರ್ಪ-ಡೆಯಾಗಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಇತ್ತೀಚೆಗಷ್ಟೇ ಬಡ್ತಿ ಹೊಂದಿರುವ ಸಿ.ಟಿ. ರವಿ ಹಾಗೂ ರಾಜ್ಯ ಸಹ ಉಸ್ತುವಾರಿ ಡಿ.ಕೆ. ಅರುಣಾ ಅವರು ಸಮಿತಿಯ ವಿಶೇಷ ಆಹ್ವಾನಿತ-ರಾಗಿದ್ದಾರೆ.

ಪ್ರತಿ ತಿಂಗಳೂ ಸಮಿತಿ ಕನಿಷ್ಠ ಒಂದು ಬಾರಿಯಾದರೂ ಸಭೆ ಸೇರಬೇಕು. ಅಗತ್ಯವಿದ್ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಭೆ ನಡೆಸಬಹುದು ಎಂದು ಸಮಿತಿ ಪುನರ್ ರಚಿಸಿ ಆದೇಶ ಹೊರಡಿಸಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ತಿಳಿಸಿದ್ದಾರೆ.

ಬಿಜೆಪಿ ಪ್ರಮುಖರ ಸಮಿತಿ

- **ನಳಿನ್‌ಕುಮಾರ್ ಕಟೀಲ್**– ರಾಜ್ಯ ಘಟಕದ ಅಧ್ಯಕ್ಷ
- **ಬಿ.ಎಸ್. ಯಡಿಯೂರಪ್ಪ**– ಮುಖ್ಯಮಂತ್ರಿ
- **ಪ್ರಲ್ಹಾದ ಜೋಶಿ**– ಕೇಂದ್ರ ಸಚಿವ, ಮಾಜಿ ರಾಜ್ಯಾಧ್ಯಕ್ಷ
- **ಡಿ.ವಿ. ಸದಾನಂದಗೌಡ**– ಕೇಂದ್ರ ಸಚಿವ, ಮಾಜಿ ರಾಜ್ಯಾಧ್ಯಕ್ಷ
- **ಜಗದೀಶ ಶೆಟ್ಟರ**– ಸಚಿವ, ಮಾಜಿ ಮುಖ್ಯಮಂತ್ರಿ
- **ಕೆ.ಎಸ್. ಈಶ್ವರಪ್ಪ**– ಮಾಜಿ ರಾಜ್ಯಾಧ್ಯಕ್ಷ, ಮಾಜಿ ಉಪಮುಖ್ಯಮಂತ್ರಿ
- **ಗೋವಿಂದ್ ಕಾರಜೋಳ**– ಉಪ ಮುಖ್ಯಮಂತ್ರಿ
- **ಸಿ.ಎನ್. ಅಶ್ವತ್ಥನಾರಾಯಣ**– ಉಪ ಮುಖ್ಯಮಂತ್ರಿ
- **ಲಕ್ಷ್ಮಣ ಸವದಿ**– ಉಪ ಮುಖ್ಯಮಂತ್ರಿ
- **ಆರ್.ಅಶೋಕ್**– ಸಚಿವ
- **ಬಿ.ಶ್ರೀರಾಮುಲು**– ಸಚಿವ
- **ನಿರ್ಮಲಕುಮಾರ್ ಸುರಾನಾ**– ಉಪಾಧ್ಯಕ್ಷ
- **ಬಿ.ಪಿ. ಅರುಣಕುಮಾರ್**– ರಾಜ್ಯ ಪ್ರಧಾನ ಕಾರ್ಯದರ್ಶಿ (ಸಂಘಟನೆ)

ವಿಶೇಷ ಆಹ್ವಾನಿತರು

- **ಅರುಣ್ ಸಿಂಗ್**– ಪಕ್ಷದ ರಾಜ್ಯ ಉಸ್ತುವಾರಿ
- **ಸಿ.ಟಿ. ರವಿ**– ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ
- **ಡಿ.ಕೆ. ಅರುಣಾ**– ರಾಷ್ಟ್ರೀಯ ಉಪಾಧ್ಯಕ್ಷೆ, ರಾಜ್ಯ ಸಹ ಉಸ್ತುವಾರಿ

ಸೇನೆಯಲ್ಲಿ ಮಹಿಳಾ ಅಧಿಕಾರಿಗಳ ಸಾಧನೆ ಕಡೆಗಣನೆ: 'ಸುಪ್ರೀಂ'

ನವದೆಹಲಿ (ಪಿಟಿಐ): ಸೇನೆಯಲ್ಲಿ ವಾರ್ಷಿಕ ರಹಸ್ಯ ವರದಿ ಸಿದ್ಧಪಡಿ-ಸುವಾಗ ಮಹಿಳಾ ಅಧಿಕಾರಿಗಳ ಸಾಧನೆಯನ್ನು ಕಡೆಗಣಿಸಲಾಗುತ್ತಿದೆ ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಸೇನೆಯಲ್ಲಿ ಕಾಯಂ ಸೇವೆಯ ಹುದ್ದೆಗಳನ್ನು ಕಲ್ಪಿಸಬೇಕು ಎಂದು 'ಶಾರ್ಟ್ ಸರ್ವಿಸ್ ಕಮಿಷನ್ (ಎಸ್‌ಎಸ್‌ಸಿ) ಮಹಿಳಾ ಅಧಿಕಾರಿಗಳು ಸಲ್ಲಿಸಿರುವ ಅರ್ಜಿಗಳನ್ನು ಗುರುವಾರ ಅಂಗೀಕರಿಸಿದ ಸುಪ್ರೀಂ ಕೋರ್ಟ್, ಈ ಅಭಿಪ್ರಾಯವ-ನ್ನು ವ್ಯಕ್ತಪಡಿಸಿದೆ.

'ವಾರ್ಷಿಕ ರಹಸ್ಯ ವರದಿಯ (ಎಸಿಆರ್) ಮೌಲ್ಯಮಾಪನ ಪ್ರಕ್ರಿಯೆಗಳು ಲೋಪ ಮತ್ತು ತಾರತಮ್ಯದಿಂದ ಕೂಡಿವೆ. ನ್ಯಾಯಯುತವಾಗಿ ಈ ವರದಿ ಸಿದ್ಧಪಡಿಸುತ್ತಿಲ್ಲ ಎನ್ನುವುದು ಮನವರಿ-ಕೆಯಾಗಿದೆ' ಎಂದು ಹೇಳಿದೆ.

'ಸಮಾಜದ ವ್ಯವಸ್ಥೆಯಲ್ಲಿ ಸಮಾನತೆ ಎನ್ನುವುದು ಸೋಗಲಾಡಿತನವಾಗಿ-ದೆ. ಸ್ವಾತಂತ್ರ್ಯಪಡೆದ ಬಳಿಕ, ತಾರ-ತಮ್ಯವನ್ನು ಹೋಗಲಾಡಿಸಿ ಸಮಾನ ಅವಕಾಶ ಕಲ್ಪಿಸುವ ಪ್ರಯತ್ನಗಳು ಇನ್ನೂ ನಡೆಯುತ್ತಿವೆ' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಅಭಿಪ್ರಾಯಪಟ್ಟಿದೆ.

ಸಂಕ್ಷಿಪ್ತ ಸುದ್ದಿ

ನ್ಯಾಯಮೂರ್ತಿಗಳ ನೇಮಕ ವಿಳಂಬ 'ಸುಪ್ರೀಂ' ಕಳವಳ

ನವದೆಹಲಿ: ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕ ಕುರಿತ ಕೊಲಿಜಿಯಂನ ಶಿಫಾರಸು ಕೇಂದ್ರ ಸರ್ಕಾರದಲ್ಲಿ ಆರು ತಿಂಗಳಿಗೂ ಹೆಚ್ಚು ಕಾಲದಿಂದ ನನೆಗುದಿಯಲ್ಲಿದೆ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಶಿಫಾರಸು ಒಪ್ಪಿ, ಹೆಸರು ಅಂತಿಮಗೊಳಿಸಲು ಕಾಲಮಿತಿ ನಿಗದಿಪಡಿಸುವುದು ಅಗತ್ಯ ಎಂದೂ ಅಭಿಪ್ರಾಯಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸೂರ್ಯ ಕಾಂತ್ ಅವರಿದ್ದ ಪೀಠವು, ಕಾನೂನು ಸಚಿವಾಲಯವು ನಿರ್ದಿಷ್ಟ ಕಾಲಮಿತಿಯೊಳಗೆ ಕೊಲಿಜಿಯಂ ಶಿಫಾರಸುಗಳಿಗೆ ಪ್ರತಿಕ್ರಿಯಿಸುವುದು ಅಗತ್ಯ ಎಂದು ಹೇಳಿತು.

ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಿಸಲು ವಿವಿಧ 45 ಹೆಸರುಗಳನ್ನು ಕೊಲಿಜಿಯಂ ಅಂತಿಮಗೊಳಿಸಿದೆ. ಆದರೆ, ಆರು ತಿಂಗಳು ಕಳೆದರೂ ಕಾನೂನು ಸಚಿವಾಲಯ ಅನುಮೋದನೆ ನೀಡಿಲ್ಲ ಎಂದು ಪೀಠ ಹೇಳಿತು. ಈ ಬಗ್ಗೆ ಚರ್ಚಿಸಿ ಪ್ರತಿಕ್ರಿಯಿಸ-ಬೇಕು ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರಿಗೆ ಸೂಚಿಸಿತು.

ಸುಪ್ರೀಂ ಕೋರ್ಟ್‌ನ ವಕೀಲರ ಸಂಘದ ಅಧ್ಯಕ್ಷ ವಿಕಾಸ್ ಸಿಂಗ್, ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಶಿಫಾರಸು ಮಾಡುವಾಗ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರ ಹೆಸರು ಪರಿಗಣಿಸಬೇಕು ಎಂದು ಕೋರಿತ್ತು. ಇದಕ್ಕೆ ಪೀಠವು, ಕೊಲಿಜಿಯಂ ಹೀಗೆ ಶಿಫಾರಸು ಮಾಡಿತ್ತು. ಇದಕ್ಕೆ ಹೈಕೋರ್ಟ್‌ಗಳ ವಕೀಲರ ಸಂಘ ವಿರೋಧ ವ್ಯಕ್ತಪಡಿಸಿದ್ದವು ಎಂದಿತು.

ಸೇವಾಸಂಸ್ಥೆ 'ಲೋಕ್ ಪ್ರಹಾರಿ' ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು. ಅರ್ಜಿಯಲ್ಲಿ ಸೇವಾ ಸಂಸ್ಥೆಯು, '24 ಹೈಕೋರ್ಟ್‌ಗಳಲ್ಲಿ 419 ನ್ಯಾಯಮೂರ್ತಿಗಳ ಸ್ಥಾನ ಖಾಲಿ ಇವೆ. ಸಂವಿಧಾನದ 128ನೇ ವಿಧಿಯಂತೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ಹೆಸರನ್ನು ನೇಮಕಕ್ಕೆ ಪರಿಶೀಲಿಸಲು ಕೋರಿತ್ತು.

ಕುಂಭ ಮೇಳದ ಅವಧಿ ಮೊಟಕು

ಡೆಹ್ರಾಡೂನ್ (ಪಿಟಿಐ): ಕೋವಿಡ್ ಹೆಚ್ಚುತ್ತಿರುವ ಕಾರಣ ಹರಿದ್ವಾರ-ದಲ್ಲಿ ನಡೆಯುವ ಕುಂಭ ಮೇಳದ ಅವಧಿಯನ್ನು ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಒಂದು ತಿಂಗಳ ಅವಧಿಗೆ ಮೊಟಕುಗೊಳಿಸಲಾಗಿದೆ.

ಈ ಅತಿ ದೊಡ್ಡ ಧಾರ್ಮಿಕ ಸಮಾವೇಶದಲ್ಲಿ ಪಾಲ್ಗೊಳ್ಳುವ ಭಕ್ತರು ಕೋವಿಡ್ ನೆಗೆಟಿವ್ ವರದಿ ತೋರಿಸುವುದು ಕಡ್ಡಾಯ. ಏಪ್ರಿಲ್ 1 ರಿಂದ 30 ರವರೆಗೆ ಉತ್ತರಾಖಂಡದ ಹರಿದ್ವಾರದ ಗಂಗಾ ನದಿಯ ತೀರದಲ್ಲಿ ಕುಂಭ ಮೇಳ ನಡೆಯಲಿದೆ. ಏ.12, 14 ಮತ್ತು 27ರಂದು ಪುಣ್ಯ ಸ್ನಾನಕ್ಕೆ ದಿನಾಂಕ ನಿಗದಿಪಡಿಸಲಾಗಿದೆ.

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಫ್ಯಾಕ್ಸ್: 080–25536105
Email: purchase@kmf.coop
ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–287/2020–21/Call-2 ದಿನಾಂಕ: 26.03.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಮಾನವ ಸಂಪನ್ಮೂಲ ಒದಗಿಸುವ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://eproc.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

Sl No.	Name of the Item	EMD (Rs.)
1	Providing MBA/BBM qualified and technically qualified Graphic Designer man power on contract basis to KMF for a period of Two years.	4,00,000/-

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ದಿನಾಂಕ 01.04.2021 ರಂದು ಮಧ್ಯಾಹ್ನ 3.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102 ದೂರವಾಣಿ: 0816–2278190 ಇ–ಮೇಲ್: smartcitytumakuru@gmail.com
CIN:U74999KA2017PLC099774
No:TSCL/Tender/CR/45/2020-21 ದಿನಾಂಕ: 23.03.2021
EXPRESSION OF INTEREST (EOI)
ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಯೋಜನೆಗಳಿಗೆ EXPRESSION OF INTEREST (EOI) ಮರು ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಯವರು EOI ನಲ್ಲಿ ಭಾಗವಹಿಸಲು ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in ಮುಖಾಂತರ ಪಡೆಯಬಹುದಾಗಿದೆ.
ತುಮಕೂರು ನಗರದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆ (PPP) ಯಲ್ಲಿ ಸ್ಮಾರ್ಟ್ ಬಸ್ ಶೆಲ್ಟರ್‌ಗಳ ವಿನ್ಯಾಸ, ಅಳವಡಿಕೆ, ನಿರ್ಮಾಣ ಮತ್ತು ಕಾರ್ಯಾಚರಣೆ. ಆಸಕ್ತ ಸಂಸ್ಥೆಯವರು EOI ಸಲ್ಲಿಸಲು ಕೊನೆಯ ದಿನಾಂಕ: 31.03.2021; 16:00ಗಂಟೆ ಮತ್ತು EOI ಗಳನ್ನು ದಿನಾಂಕ: 01.04.2021; 16:00ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಅನ್ನು ಸಂಪರ್ಕಿಸಬಹುದು.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/501/MCA/2020-21
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ
ಸಂಖ್ಯೆ:ಕಾಪಾಇಂ/ಗ್ರಾಕುನೀ&ನೈವಿ/ಹ.ಹಳ್ಳಿ/ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/ಜೆಇ/2020–21/1029 ದಿನಾಂಕ:24–03–2021.
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–19/ 2020–21 (2ನೇ ಕರೆ).
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ Standard Bid Document KW-II & KW-IV ರ ನಿಯಮಗಳ ನಿಬಂದನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ:25.03.2021 ರಿಂದ 01.04.2021 ರ ಸಾಯಂಕಾಲ 5.00 ಗಂಟೆಯವರೆಗೆ ಹಾಗೂ ದಿನಾಂಕ: 29.03.2021 ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿಯಲ್ಲಿ ಕರೆಯಲಾಗಿದೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:03.04.2021 ರಂದು ಬೆಳಗ್ಗೆ 11.00 ಗಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್, ಗ್ರಾಕುನೀ&ನೀ. ವಿಭಾಗ, ಹರಪನಹಳ್ಳಿ
ಡಿಐಪಿಆರ್/ಬಳ್ಳಾರಿ/504/ಎಂಸಿಎ/2020–21

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಬಿ–15, ಸೆಕ್ಟರ್–62, ನೋಯ್ಡ. ಜಿಲ್ಲೆ ಜಿ.ಬಿ.ನಗರ. ಉತ್ತರ ಪ್ರದೇಶ, ಪಿನ್–201309
ಅಧಿಸೂಚನೆ
ಜವಾಹರ ನವೋದಯ ವಿದ್ಯಾಲಯಗಳಲ್ಲಿ 2021–22 ನೇ ಸಾಲಿಗೆ 6ನೇ ತರಗತಿಯ ಆಯ್ಕೆ ಪರೀಕ್ಷೆಯ ದಿನಾಂಕವನ್ನು (ಜೆ.ಎನ್.ವಿ.ಎಸ್.ಟಿ.)–2021 ಈ ಮೊದಲು 10ನೇ ಏಪ್ರಿಲ್ 2021 ಎಂದು ನಿಗದಿಪಡಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದಾಗಿ ಈ ದಿನಾಂಕವನ್ನು 16ನೇ ಮೇ 2021 (ರವಿವಾರ)ಕ್ಕೆ ಮರು ನಿಗದಿಪಡಿಸಲಾಗಿದೆ. ಅಂದು ಮಿಜೋರಾಮ್, ಮೇಘಾಲಯ ಮತ್ತು ನಾಗಾಲ್ಯಾಂಡ್‌ಗಳನ್ನು ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪರೀಕ್ಷೆ ನಡೆಯಲಿದೆ. ಮಿಜೋರಾಮ್, ಮೇಘಾಲಯ ಮತ್ತು ನಾಗಾಲ್ಯಾಂಡ್‌ಗಳಲ್ಲಿ 19ನೇ ಜೂನ್ 2021 ರಂದು(ಶನಿವಾರ) ಈ ಪರೀಕ್ಷೆ ನಡೆಯಲಿದೆ.
ಉಪ ಆಯುಕ್ತರು (ಪರೀಕ್ಷಾ)

ಪಟ್ಟಣ ಪಂಚಾಯತ ಕಾರ್ಯಾಲಯ, ನರೇಗಲ್ಲ
ನಂ.:ಪಪಂನ/ಸಿಬ್ಬಂದಿ/ವಹಿ/2020–21 ದಿನಾಂಕ : 23–03–2021
ಪ್ರಕಟಣೆ
ಅನಧೀಕೃತ ಗೈರು ಹಾಜರಿ ಬಗ್ಗೆ ಅಂತಿಮ ತಿಳುವಳಿಕೆ ಪತ್ರ
ವಿಷಯ : ಶ್ರೀ ಇಮ್ತಿಯಾಜ ಎಮ್. ದಂಡಿನ. ದ್ವಿತೀಯ ದರ್ಜೆ ಸಹಾಯಕರು ಪಟ್ಟಣ ಪಂಚಾಯತ ನರೇಗಲ್ಲ ಇವರ ಅನಧಿಕೃತ ಗೈರು ಹಾಜರಿ ಬಗ್ಗೆ
ಉಲ್ಲೇಖ : ಈ ಕಾರ್ಯಾಲಯದ ನೋಟೀಸು ಪತ್ರ ಸಂ. ದಿನಾಂಕ : 22–03–2017, 16–12–2017, 07–01–2020, 17–03–2020
ಶ್ರೀ ಇಮ್ತಿಯಾಜ ಎಮ್. ದಂಡಿನ. ದ್ವಿತೀಯ ದರ್ಜೆ ಸಹಾಯಕರಾದ ನೀವು ದಿನಾಂಕ : 16–12–2019 ರಿಂದ ಕರ್ತವ್ಯಕ್ಕೆ ಹಾಜರ ಆಗದೇ ರಜೆಯನ್ನು ಪಡೆಯದೇ ಅನಧೀಕೃತ ಗೈರು ಆಗಿರುತ್ತೀರಿ. ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ನಿಮಗೆ ಉಲ್ಲೇಖದಲ್ಲಿರುವಂತೆ ನೋಟೀಸನ್ನು ನೀಡಲಾಗಿದೆ. ಸದರ ಪತ್ರಗಳಿಗೆ ಯಾವೂದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲಾ, ಹಾಗೂ ನಿಮ್ಮ ಮೇಲೆ ಆಪಾದನೆ ಪಟ್ಟಿ ಅನುಬಂದ 1 ರಿಂದ 4 ಜಾರಿಯಾಗಿದ್ದು ಇಲಾಖಾ ವಿಚಾರಣೆ ಸಹ ಮುಗಿದಿರುತ್ತದೆ.
ಆದ್ದರಿಂದ ಶ್ರೀ ಇಮ್ತಿಯಾಜ ಎಮ್. ದಂಡಿನ. ದ್ವಿತೀಯ ದರ್ಜೆ ಸಹಾಯಕರಾದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ಈ ತಿಳುವಳಿಕೆ ಪತ್ರವು ವಾರ್ತಾ ಪತ್ರಿಕೆಯಲ್ಲಿ ಪ್ರಕಟಗೊಂಡ 7 ದಿನದೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ)ನಿಯಮ 1957 ಹಾಗೂ ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮಗಳು 1996 ರ ಪ್ರಕಾರ ಸೂಕ್ತ ಕ್ರಮ ಕೈಕೊಂಡು ಸರಕಾರಿ ಸೇವೆಯಿಂದ ವಜಾಗೊಳಿಸಲಾಗುವುದು.
ಸಹಿ/–(ಮಹೇಶ ಬಿ. ನಿಡಶೇಶಿ)
ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ನರೇಗಲ್ಲ
ವಾಸಾಸಂಇ/ಗದಗ/ಎಂ.ಸಿ.ಎ/597/20–21

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ. ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯ ರಸ್ತೆ, ಹೆಬ್ಬಾಳ, ಬೆಂಗಳೂರು–560 024.
Phone: 080-23412767, E-mail: commissionerahvs@gmail.com
ಸಂಖ್ಯೆ: CAH:LAPF:E-TENDER:2020-21 ದಿನಾಂಕ: 25–03–2021
ಟೆಂಡರ್ ನೋಟಿಫಿಕೇಷನ್
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2020–21ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಾನುವಾರು ಹಾಗೂ ಕುಕ್ಕುಟ ಕ್ಷೇತ್ರಗಳಿಗೆ ಜಾನುವಾರು ಮತ್ತು ಕುಕ್ಕುಟ ಆಹಾರದ ಸರಬರಾಜಿಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಲಭ್ಯವಿರುವ ವಂಟನಕ್ಕನುಗುಣವಾಗಿ ಒಂದು ವರ್ಷದ ಅವಧಿಗೆ, ಟೆಂಡರ್‌ನ್ನು ಕರೆಯಲಾಗಿದೆ. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಅಂತರ್ಜಾಲ ವಿಳಾಸ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಆಯುಕ್ತರ ಕಛೇರಿ, ಕ್ಯೂ.ಸಿ.ಪಿ.ಎಫ್, ಪಶುಪಾಲನಾ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು–560 024 ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 24–03–2021 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು ಅವಶ್ಯಕತೆಯಿರುವ ಪ್ರಮಾಣ ಪತ್ರಗಳನ್ನು e-procurment Platform ನಲ್ಲಿ ದಿನಾಂಕ: 24–03–2021 ರಿಂದ 23–04–2021 ರವರೆಗೆ ಸಾಯಂಕಾಲ 5:30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ದಾರರ ಅಥವಾ ಟೆಂಡರ್‌ದಾರರಿಂದ ನಾಮನಿರ್ದೇಶನ ಹೊಂದಿದವರ ಸಮ್ಮುಖದಲ್ಲಿ ದಿನಾಂಕ: 28–04–2021 ರಂದು ಬೆಳಿಗ್ಗೆ 11:00 ಘಂಟೆಯ ತರುವಾಯ ಆಯುಕ್ತರವರ ಕಾರ್ಯಾಲಯ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಪಶುಪಾಲನಾ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು–560 024, ಇಲ್ಲಿ ಟೆಕ್ನಿಕಲ್ ಬಿಡ್‌ಗಳನ್ನು ತೆರೆಯಲಾಗುವುದು.
ಸಹಿ/–
ಅಪರ ನಿರ್ದೇಶಕರು (ಜಾ.ಸಂ)
DIPR/DDU/RO3230/AAPL/2020-21
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/877 Email: purchase@kmf.coop
ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–294/2020–21 ದಿನಾಂಕ: 25.03.2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಹಾಲು ಮಹಾಮಂಡಳಿಯು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಮೇವು ಕತ್ತರಿಸುವ ಯಂತ್ರೋಪಕರಣಗಳನ್ನು ಕಹಾಮ ಹಾಲು ಒಕ್ಕೂಟಗಳಿಗೆ ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ದಾಸ್ತಾವೇಜುಗಳನ್ನು eProcurement website http://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಕ್ರ.ಸಂ	ಸಾಮಗ್ರಿಗಳ ವಿವರ	ಅಂದಾಜು ಪರಿಮಾಣ (ಸಂಖ್ಯೆಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
01	ಮೇವು ಕತ್ತರಿಸುವ ಯಂತ್ರೋಪಕರಣಗಳು (Compact Model 3 Hp)	600	2,25,000/–
02	ಮೇವು ಕತ್ತರಿಸುವ ಯಂತ್ರೋಪಕರಣಗಳು (Vertical Model 3 Hp)	600	2,25,000/–
03	ಮೇವು ಕತ್ತರಿಸುವ ಯಂತ್ರೋಪಕರಣಗಳು (Compact Model 2 Hp)	600	2,25,000/–
04	ಮೇವು ಕತ್ತರಿಸುವ ಯಂತ್ರೋಪಕರಣಗಳು (Vertical Model 2 Hp)	600	2,25,000/–

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ದಿನಾಂಕ 16.04.2021 ರಂದು ಸಂಜೆ 5.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ರಸ್ತೆ ಮೂಲಸೌಕರ್ಯ – ಯಲಹಂಕ ವಿಭಾಗ, ಎನ್. ಆರ್ ವೃತ್ತ, ಬೆಂಗಳೂರು–560002
ಸಂ: ಕಾಪಾಅ/ರಮೂಸೌ/ಯಲಹಂಕ/ಟೆಂಡರ್/09/2ನೆ ಕರೆ/2020–21 ದಿನಾಂಕ: 25.03.2021
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಟಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ–ಯಲಹಂಕ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಯಲಹಂಕ ಪೊಲೀಸ್ ಸ್ಟೇಷನ್ ಜಂಕ್ಷನ್‌ನಿಂದ ಯಲಹಂಕ ನ್ಯೂ ಟೌನ್ ಬಿಡಬ್ಲ್ಯೂಎಸ್‌ಎಸ್‌ಬಿ ಜಂಕ್ಷನ್‌ವರೆಗೆ ಸಂಯೋಜಿತ ಎತ್ತರಿಸಿದ ಕಾರಿಡಾರ್ ನಿರ್ಮಾಣ ಕಾಮಗಾರಿ.	14,950.71

ಇಎಂಡಿ ಘೋಷಣೆ: ಹಣಕಾಸು ಇಲಾಖೆಯ ಆದೇಶ ಸಂಖ್ಯೆ : FD 675 EXP-12/2020. ದಿನಾಂಕ:22.12.2020 ರಂತೆ. 1) ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 25.03.2021ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಈ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ : 05.04.2021 ರ ಸಂಜೆ 3.00 ಗಂಟೆಯವರೆಗೆ. 3)ಪ್ರಿ–ಬಿಡ್ ಮೀಟಿಂಗ್: 05.04.2021ರ ಸಂಜೆ 4.00 ಗಂಟೆಗೆ. 4) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09.04.2021 ರ ಸಂಜೆ 5.30 ಗಂಟೆಯವರೆಗೆ 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.04.2021 ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್:_ www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22441076ನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ–ಯಲಹಂಕ ವಿಭಾಗ.
"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮುಖ್ಯ ಇಂಜನೀಯರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
ನಂ:ಮು.ಇಂ/ಬಾ.ಪ.ಅ.ಪ್ರಾ/ಟೆಂಡರ್–18/2020-21/4843 ದಿನಾಂಕ: 24-03-2021
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮುಖಾಂತರ)
ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಕಾಮಗಾರಿಗಳಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಟೆಂಡರನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತವು ರೂ. 935.75 ಲಕ್ಷಗಳು ಇರುತ್ತದೆ.
ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: 24.05.2021 ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್‌ಗಳ ಪೂರ್ವಬಾವಿ ಸಭೆಯನ್ನು ದಿನಾಂಕ: 11.05.2021 ರಂದು ಬೆಳಿಗ್ಗೆ 11.00 ಘಂಟೆಗೆ ಜರುಗಿಸಲಾಗುವುದು. ದಿನಾಂಕ: 27.05.2021 ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 29.05.2021 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–233353 ಸಂಪರ್ಕಿಸಬಹುದಾಗಿದೆ.
ಸಹಿ/– ಮುಖ್ಯ ಇಂಜನೀಯರು, ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ.
ವಾ.ಸಾ.ಇ/ಬಾಗಲಕೋಟೆ/621/2020–21/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831)2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/JE/2020-21/ 1433 Date:23-03-2021
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ–4) (2ನೇ ಕರೆ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ ಪ್ರೋಕ್ಯೂರ್‌ಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. 2019–20 ಸಾಲಿನ 4702 ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡ ಒಟ್ಟು 1 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಕನಿಷ್ಠ ಹಾಗೂ ಗರಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ.471.00 ಲಕ್ಷಗಳು. ಸದರಿ ಕಾಮಗಾರಿಗಾಗಿ ಗುತ್ತಿಗೆದಾರರು (ವಿದ್ಯುತ್ತೀಕರಣ ಹಾಗೂ 5 ವರ್ಷಗಳ ನಿರ್ವಹಣೆಯ ಸಿಲ್ಟ್ ಐಟಂನ್ನು ಹೊರತು ಪಡಿಸಿ) ದರವನ್ನು GST ರಹಿತ ನಮೂದಿಸುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ GST ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ಹೆಚ್ಚುವರಿ ಗುತ್ತಿಗೆ ಅವಧಿಯಲ್ಲಿ GST ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಸದರಿ ಕಾಮಗಾರಿಗಳ ವಿವರಗಳನ್ನು "ಇ ಪ್ರೋಕ್ಯೂರಮೆಂ ಟ್"ನಲ್ಲಿ ದಿನಾಂಕ:24–03–2021 ರಿಂದ ದಿನಾಂಕ:31–03–2021 ಸಾಯಂಕಾಲ 4–00 ಗಂಟೆಯ ಅವಧಿಯಲ್ಲಿ ಪಡೆಯಬಹುದು.
1.ಪೂರ್ವ ಟೆಂಡರ ಸಭೆ ದಿನಾಂಕ: 30–03–2021 ಬೆಳಿಗ್ಗೆ 11.00 ಗಂಟೆ, 2.ಟೆಂಡರ ಕ್ಲಾರಿಫಿಕೇಷನ್ ದಿನಾಂಕ:31–03–2021 ಸಾಯಂಕಾಲ 5.30 ಗಂಟೆಯವರೆಗೆ, 3.ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:01–04–2021 ಸಾಯಂಕಾಲ 4.00 ಗಂಟೆಯವರೆಗೆ, 4.ಟೆಂಡರ ತೆರೆಯುವ ದಿನಾಂಕ:02–04–2021 ಸಾಯಂಕಾಲ 4.30 ಗಂಟೆ (ಸಾಧ್ಯವಾದಲ್ಲಿ), 5.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.6.ಅಂತರಜಾಲ ತಾಣದ ವಿಳಾಸ:www.e-proc.karnataka.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1594/MCA/2020-21

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ತೋಟಗಾರಿಕೆ ಅಧೀಕ್ಷಕರ ಕಚೇರಿ, (ಪಶ್ಚಿಮ), 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.
ಸಂಖ್ಯೆ: ತೋಅ(ಪಶ್ಚಿಮ)/ಟೆಂಡರ್/ಪಿಆರ್/02/2020–21 ದಿನಾಂಕ: 26.03.2021
ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ತೋಟಗಾರಿಕೆ ಅಧೀಕ್ಷಕರು (ಪಶ್ಚಿಮ) (ಈ ದಾಖಲಾತಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಕಾರ್ಮಿಕ ಇಲಾಖೆ–ಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು/ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಗಳಲ್ಲಿ)
1	ವಾರ್ಡ್ ಸಂಖ್ಯೆ–35, ಅರಮನೆನಗರದ ಉದ್ಯಾನವನಗಳಲ್ಲಿ ನಿರ್ವಹಣೆ ಮತ್ತು ಮೀಡಿಯನ್ಸ್, ವೃತ್ತಗಳು ಮತ್ತು ಐಲ್ಯಾಂಡ್ಸ್‌ಗಳಿಗೆ ನೀರಿನ ಸರಬರಾಜು ಹಾಗೂ ಹುಲ್ಲು ಕತ್ತರಿಸುವ ಯಂತ್ರಗಳಿಗೆ ಕಾರ್ಮಿಕರನ್ನು ನಿಯೋಜಿಸುವುದು.	12302000
2	ವಾರ್ಡ್ ಸಂಖ್ಯೆ–94, ಗಾಂಧಿನಗರದ ಉದ್ಯಾನವನಗಳಲ್ಲಿ ನಿರ್ವಹಣೆ ಮತ್ತು ಮೀಡಿಯನ್ಸ್, ವೃತ್ತಗಳು ಮತ್ತು ಐಲ್ಯಾಂಡ್ಸ್‌ಗಳಿಗೆ ನೀರಿನ ಸರಬರಾಜು ಹಾಗೂ ಹುಲ್ಲು ಕತ್ತರಿಸುವ ಯಂತ್ರಗಳಿಗೆ ಕಾರ್ಮಿಕರನ್ನು ನಿಯೋಜಿಸುವುದು.	14822500

ಸರ್ಕಾರದ ಆದೇಶದಂತೆ ಈ ಟೆಂಡರ್‌ಗೆ ಇಎಂಡಿಯಿಂದ ವಿನಾಯಿತಿ ನೀಡಲಾಗಿದೆ (ಆದೇಶ ಸಂ: ಸರ್ಕಾರ ಆದೇಶ ಸಂಖ್ಯೆ: ಆಇ 675, ವೆಚ್ಚ–12/2020, ಬೆಂಗಳೂರು, ದಿನಾಂಕ: 22–12–2020ರಂತೆ) ಹಾಗೂ ಇಎಂಡಿ ಘೋಷಣಾ ಪತ್ರವನ್ನು ವೆಬ್‌ಸೈಟ್ https://eproc.karnataka.gov.in ಮೂಲಕ ಸಲ್ಲಿಸತಕ್ಕದ್ದು.
ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ: 26.03.2021. (2) ಟೆಂಡರ್ ದಾಖಲೆಗಳನ್ನು ದಿನಾಂಕ: 31.03.2021ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಟೆಂಡರ್ ಮುಕ್ತಾಯದ ದಿನಾಂಕ 16.04.2021. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 19.04.2021 (ಬೆಳಿಗ್ಗೆ 11:00 ಗಂಟೆಯಿಂದ). (5) ಆರ್ಥಿಕ ಬಿಡ್ ತೆರೆಯುವ ದಿನಾಂಕ 22.04.2021 (ಸಾಧ್ಯವಾದಲ್ಲಿ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ತೋಟಗಾರಿಕೆ ಅಧೀಕ್ಷಕರು (ಪಶ್ಚಿಮ)
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ, ವಿಶೇಷ ವಿಭಾಗ, ಶಿವಮೊಗ್ಗ.
ಫೋನ್‌ನಂ.:08182–222942 ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ. ಸಂಖ್ಯೆ: 66/2020–21 ದಿ: 24.03.2021
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ–4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರಿಗೆ Construction of NGO Quarters Annex-I & Annex-II Building in Shivamogga City (Indent No. 136164) ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 1123.90 ಲಕ್ಷ ಹಾಗೂ ಇ.ಎಂ.ಡಿ, ಮೊತ್ತ ರೂ. 11.24 ಲಕ್ಷ ಸದರಿ ಕಾಮಗಾರಿಯ ಟೆಂಡರ್ ಅವಧಿ 21 ತಿಂಗಳು ಮಳೆಗಾಲ ಸೇರಿ, ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 24–03–2021 ರಿಂದ 08–04–2021 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 08–04–2021 ರ ಸಂಜೆ 5:00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ದಿನಾಂಕ: 09–04–2021 ರಂದು ಸಂಜೆ 05:30 ಕ್ಕೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 12–04–2021 ರ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–178/03/ಎಂಸಿಎ/20–21

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ(KRRDA)
ಕಾರ್ಯಪಾಲಕ ಇಂಜಿನಿಯರ್‌ರವವ ಕಚೇರಿ, ಯೋಜನಾ ವಿಭಾಗ ತುಮಕೂರು.
ದೂರವಾಣಿ:0816–2273773 E-mail:kn-tum-1@pmgsy.nic.in
ಟೆಂಡರ್ ಪ್ರಕಟಣೆ ಸಂಖ್ಯೆ–02/2020–21 ದಿನಾಂಕ:20.03.20201
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ತುಮಕೂರು ರವರಿಂದ ತುಮಕೂರು ಗ್ರಾಮಾಂತರ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ವ್ಯಾಪ್ತಿಯ ಇಂಡೆಂಟ್ ಸಂಖ್ಯೆ KRRDA/2020-21/RD/WORK_INDENT5123 ಮತ್ತು KRRDA/2020-21/RD/WORK_INDENT5125 ನ ರಸ್ತೆ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ (ಇ–ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್) https://eproc.karnataka.gov.in ವೆಬ್‌ಸೈಟ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿಕೊಂಡ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಮರುನೋಂದಣಿ ಮಾಡಿಕೊಂಡಿರುವ ಅರ್ಹ ಟೆಂಡರ್‌ದಾರರಿಂದ Two Tender Document System ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರಕ್ರಿಯೆ ವಿವರಗಳು ಕೆಳಕಂಡಂತಿವೆ: (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ: 24.03.2021 ರಿಂದ (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 07.04.2021 ಸಂಜೆ 4.00 ಗಂಟೆ ವರೆಗೆ (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 09.04.2021 ಸಂಜೆ 4.30 ಗಂಟೆ ನಂತರ (4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ. ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ತುಮಕೂರು, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್ ಯೋಜನಾ ವಿಭಾಗ, ತುಮಕೂರು
DIPR/TUM/499/MCA/2020-21
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದುರ್ಗಾಶ್ರೀ

ಕಲೆ ಕೇವಲ ಮನರಂಜನೆಗಲ್ಲ

ದಿವಂಗತ ನಟ ಚಿರಂಜೀವಿ ಸರ್ಜಾ, 'ಆ ದಿನಗಳು' ಖ್ಯಾತಿಯ ಚೇತನ್ ಅವರು ಅಭಿನಯಿಸಿರುವ 'ರಣಂ' ಇಂದು ತೆರೆ ಕಾಣುತ್ತಿದ್ದು, ರೈತರ ಸಮಸ್ಯೆ ಹಾಗೂ ಸಂಕಷ್ಟಗಳ ಸುತ್ತ ಈ ಚಿತ್ರದ ಕಥಾಹಂದರವಿದೆ. ತಮ್ಮ ಪಾತ್ರ ಹಾಗೂ ಚಿತ್ರದ ಕುರಿತು ಚೇತನ್ 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದರು...

ಸಂದರ್ಶನ

ಅಭಿಲಾಷ್ ಪಿ.ಎಸ್.

- **'ರಣಂ' ಚಿತ್ರ ಮೇಲ್ನೋಟಕ್ಕೆ ಸಾಮಾಜಿಕ ಕಳಕಳಿಯ ಸಿನಿಮಾದಂತಿದೆ**

ಚಿತ್ರದಲ್ಲಿ ಆ್ಯಕ್ಷನ್, ಕಾಮಿಡಿ, ಸಾಮಾಜಿಕ ಕಳಕಳಿ ಇದೆ. ಇದೊಂದು ಸಂಪೂರ್ಣ ಕಮರ್ಷಿಯಲ್ ಚಿತ್ರ. ನನ್ನ ಪಾತ್ರಕ್ಕೆ ಬಂದಾಗ, ಹೀರೋಯಿಸಂ ಇಲ್ಲ. ಹಿಂಸಾತ್ಮಕ ರೀತಿಯಲ್ಲಿ ಆತ ಶಕ್ತಿ ಪ್ರದರ್ಶನ ಮಾಡುವುದಿಲ್ಲ. ಇದೊಂದು ಕ್ರಾಂತಿಕಾರಿ ಪಾತ್ರ. ಈ ಪಾತ್ರವೇ ನಿಜ ಜೀವನದ ಹೀರೋ. ಸಿನಿಮಾದಲ್ಲಿ ರಾಜಕೀಯ, ಯುವಕರ ಪ್ರೀತಿ, ಮೋಜು ಮಸ್ತಿ, ಪೊಲೀಸರ ದಬ್ಬಾಳಿಕೆ ಹೀಗೆ ಹಲವು ವಿಷಯಗಳಿವೆ. ರೈತರ ಹಿತಾಸಕ್ತಿಯಿಂದ ದೇಶದಾದ್ಯಂತ ಚಳವಳಿ ನಡೆಯುತ್ತಿದೆ. ಹಿಂದೆಂದೂ ಇಂತಹ ರೈತರ ಹೋರಾಟ ನಡೆದಿಲ್ಲ. ಇಂತಹ ಸಂದರ್ಭದಲ್ಲೇ ರೈತರ ಪರವಾದ, ಅವರ ಸಂಕಷ್ಟಗಳನ್ನು ಹೇಳುವ 'ರಣಂ' ಚಿತ್ರವು ಬಿಡುಗಡೆಯಾಗುತ್ತಿದೆ. ಭಾವನಾತ್ಮಕವಾಗಿ ಇದು ರೈತರ ಬಗ್ಗೆಯೇ ಇರುವ ಸಿನಿಮಾ, ಯುವಕರಿಗೂ ಈ ಚಿತ್ರ ಪ್ರಸ್ತುತ.

- **ನಿಮ್ಮ ವಿಚಾರಧಾರೆಗೂ ಸಿನಿಮಾದ ಕಥೆಗೂ ಸಾಮ್ಯತೆ ಇದೆ ಎಂದೆನಿಸುತ್ತಿದೆ...**

ಆ ದಿನಗಳು, ಮೈನಾ ಚಿತ್ರದಲ್ಲಿ ಸಾಮಾಜಿಕ ಕಳಕಳಿ ಅಷ್ಟು ಇರಲಿಲ್ಲ. ಎಲ್ಲ ಸಿನಿಮಾದಲ್ಲೂ ನಾನು ನಿರ್ದೇಶಕರ ಕೈಗೊಂಬೆ. ರಣಂ ಚಿತ್ರದಲ್ಲಿರುವ ವಿಚಾರಗಳು ನನ್ನ ವಿಚಾರಗಳಲ್ಲ. ಆದರೆ ಆ ವಿಚಾರಕ್ಕೆ ನನ್ನ ವಿಚಾರಗಳು ಹತ್ತಿರವಿರಬಹುದು. ನಿರ್ದೇಶಕರಾದ ವಿ.ಸಮುದ್ರ ಅವರ ದೃಷ್ಟಿಕೋನ, ರೈತರ ಬಗೆಗಿನ ಕಳಕಳಿಯನ್ನು, ಸಂಭಾಷಣೆ ಬರೆಯುವವರ ಕ್ರಾಂತಿಕಾರಿ ವಿಚಾರಗಳನ್ನು ನನ್ನ ಪಾತ್ರದ ಮುಖಾಂತರ ಹೊರಹಾಕಿದ್ದಾರೆ. ನನ್ನ ವಿಚಾರಧಾರೆಗೆ ಸಿನಿಮಾದ ಕಥೆ ಹತ್ತಿರವಾಗಿಲ್ಲ ಎಂಬ ಮಾತ್ರಕ್ಕೆ ನಾನು ಪಾತ್ರ ಮಾಡುವುದಿಲ್ಲ ಎಂದರ್ಥವಲ್ಲ. ನಟ ಎಂದಮೇಲೆ ನಾವೆಲ್ಲರೂ ನಿರ್ದೇಶಕರ ಕೈಗೊಂಬೆ. ಪಾತ್ರದಲ್ಲಿರುವ ಕ್ರಾಂತಿ, ಕಿಚ್ಚು, ಧೈರ್ಯ, ಯುಕ್ತಿ, ಹೋರಾಟ ಬದಲಾವಣೆಯನ್ನು ನಾನು ಮೆಚ್ಚಿಕೊಳ್ಳುತ್ತೇನೆ.

- **ಚಿತ್ರದಲ್ಲಿ ಯುವಜನತೆಗೆ ನೀಡಿರುವ ಸಂದೇಶ ಏನು?**

ಯುವಜನತೆಗೆ ಒಂದು ಉತ್ತಮ ಸಂದೇಶ ಹಾಗೂ ಮನರಂಜನೆ ಈ ಚಿತ್ರದಲ್ಲಿದೆ. ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕು ಎನ್ನುವ ಯೋಚನೆ ಯುವಜನತೆಯಲ್ಲಿದೆ. ಒಮ್ಮೆ ಗದ್ದೆಯಲ್ಲಿ ಕೆಲಸ ಮಾಡಿದರೆ ರೈತರ ಸಂಕಷ್ಟ ಅರ್ಥ ಆಗುವುದಿಲ್ಲ. ಸಮಾಜದಲ್ಲಿ ರೈತರ ಪರವಾಗಿ ನಿಲ್ಲಬೇಕು. ಸರ್ಕಾರವೂ ರೈತರ ಪರವಾಗಿ ಕೆಲಸ ಮಾಡುವಂತೆ ಮಾಡಬೇಕು. ರೈತ ಹೋರಾಟದಲ್ಲಿ ಯುವಕರು ಪಾಲ್ಗೊಳ್ಳಬೇಕು.

- **ಚಿತ್ರದಲ್ಲಿನ ನಿಮ್ಮ ಪಾತ್ರದ ಬಗ್ಗೆ**

ಚಿತ್ರದಲ್ಲಿ ನಾನು ಕೃಷಿಕನಲ್ಲ. ಆದರೆ ನಾನು ನನ್ನ ರೀತಿಯಲ್ಲಿ ರೈತರಿಗೆ ಸಹಾಯ ಮಾಡುತ್ತೇನೆ. ಬುದ್ಧಿಶಕ್ತಿ, ತಂತ್ರಜ್ಞಾನದ ಶಕ್ತಿಯಿಂದ ರೈತರಿಗೆ ಹೇಗೆ ಸಹಾಯ ಮಾಡುತ್ತೇನೆ ಎನ್ನುವುದು ಕಥೆಯ ಸಾರಾಂಶ. ಇವತ್ತಿನ ದಿನ ಬೀದಿಗಿಳಿದು ಹೋರಾಟ ಒಂದು ಮಾರ್ಗ, ಅಧಿಕಾರ ಪಡೆದು ಬದಲಾವಣೆ ತರುವುದು ಇನ್ನೊಂದು ಮಾರ್ಗ. ಜೊತೆಗೆ ತಂತ್ರಜ್ಞಾನದ ಮುಖಾಂತರ ಜನರಿಗೆ ಅರಿವು ಮೂಡಿಸುವುದರ ಜೊತೆಗೆ ಒಂದು ವ್ಯವಸ್ಥೆಯೂ ನಮ್ಮ ಪರ ಕಾರ್ಯನಿರ್ವಹಿಸುವಂತೆ ಮಾಡಬಹುದು ಎನ್ನುವುದನ್ನು ನನ್ನ ಪಾತ್ರದ ಮುಖಾಂತರ ನಿರ್ದೇಶಕರು ಜನರಿಗೆ ತಿಳಿಸಿದ್ದಾರೆ.

- **ಸಿನಿಮಾ ಮುಖಾಂತರ ಸಮಾಜದ ಬದಲಾವಣೆ ಸಾಧ್ಯವೇ?**

ಸಿನಿಮಾದಿಂದ ಸಮಾಜದಲ್ಲಿ ಬದಲಾವಣೆ ಆಗುವುದು ಬಹಳ ಕಷ್ಟ. ಜನರ ಯೋಚನೆ ಬದಲಾಗಬಹುದು ಅಷ್ಟೇ. ಕಲೆಯ ಮುಖಾಂತರ ರಚನಾತ್ಮಕ ಬದಲಾವಣೆ ತರಬೇಕು ಎಂದು 16 ವರ್ಷದ ಹಿಂದೆ ಅಮೆರಿಕ ಬಿಟ್ಟುಬಂದೆ. 'ರಂಗಭೂಮಿಯಿಂದ ಸಾಮಾಜಿಕ ಬದಲಾವಣೆ' ಎಂಬ ವಿಷಯ ಇಟ್ಟುಕೊಂಡೇ ನಾನು ಡಿಗ್ರಿ ಮಾಡುವಾಗ ಪ್ರಬಂಧ ಮಂಡಿಸಿದ್ದೆ. ಒಳ್ಳೆಯ ಪಾತ್ರ ಮಾಡಿದಾಕ್ಷಣ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ. ಸಿನಿಮಾದೊಳಗೆ ಉತ್ತಮ ಪಾತ್ರದ ಮುಖಾಂತರ ಹಾಗೂ ಸಿನಿಮಾ ರಂಗದ ಹೊರಗೆ ನಿಂತು ಹೋರಾಟ ಮಾಡಿ ಬದಲಾವಣೆ ತರಬೇಕು. ಕಲೆ ಕೇವಲ ಮನರಂಜನೆಗಷ್ಟೇ ಅಲ್ಲ. ಬದಲಾವಣೆಗೋಸ್ಕರ ಕಲೆ ಇರಬೇಕು.

- **ನಿಮ್ಮ ಮುಂದಿನ ಹೆಜ್ಜೆಗಳು**

100 ಕೋಟಿ ಚಿತ್ರವು ಡಬ್ಬಿಂಗ್ ಹಂತದಲ್ಲಿದೆ. ಇದರಲ್ಲಿ ವಿಭಿನ್ನ ಪಾತ್ರ ನನ್ನದು. ರಣಂನಲ್ಲಿನ ಪಾತ್ರ ನನ್ನ ನಿಜಜೀವನಕ್ಕೆ ಹತ್ತಿರವಾಗಿದೆ. ಈ ಹೊಸ ಚಿತ್ರದಲ್ಲಿ ಭ್ರಷ್ಟ ಅಧಿಕಾರಿ ಪಾತ್ರ ಮಾಡಿದ್ದೇನೆ. ಮೊದಲ ಬಾರಿಗೆ ಪೊಲೀಸ್ ಅಧಿಕಾರಿಯಾಗಿ ಬಣ್ಣ ಹಚ್ಚಿದ್ದೇನೆ. ಮೂರು ತಿಂಗಳಲ್ಲಿ ಇದು ತೆರೆ ಮೇಲೆ ಬರಲಿದೆ. ಪ್ರಸ್ತುತ ತೆಲುಗು, ಕನ್ನಡದಲ್ಲಿ 'ಡಿಟಿಎಸ್' ಎಂಬ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಅಂತರರಾಷ್ಟ್ರೀಯ ಡ್ರಗ್ ಮಾಫಿಯಾ ಬಗ್ಗೆ ಇರುವ ಸಿನಿಮಾ ಇದು. ಇದೊಂದು ಹೈಬಜೆಟ್ ಸಿನಿಮಾ. ವಿದೇಶದಲ್ಲೂ ಇದರ ಚಿತ್ರೀಕರಣ ನಡೆಯಲಿದೆ.

ಚೇತನ್

ಅಮ್ಮನ ಕನಸು ನನಸಾದ ಕ್ಷಣ

ಕಿರುತೆರೆ

ಕನ್ನಡ ಚಿತ್ರರಂಗದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ, ಡಾ.ರಾಜ್‌ಕುಮಾರ್ ಕುಟುಂಬದ ಪೂರ್ಣಿಮಾ ಪ್ರೊಡಕ್ಷನ್ಸ್ ಲಾಂಛನದಡಿ ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿರುವ 'ನೇತ್ರಾವತಿ' ಧಾರಾವಾಹಿ ಮುಖಾಂತರ ಕನ್ನಡ ಕಿರುತೆರೆಗೆ ದುರ್ಗಾಶ್ರೀ ಕಾಲಿಟ್ಟಿದ್ದಾರೆ. ಪ್ರಸ್ತುತ ಬಿಕಾಂ ಮೊದಲ ಸೆಮಿಸ್ಟರ್‌ನಲ್ಲಿ ಓದುತ್ತಿರುವ ಇವರು ಸಣ್ಣವಯಸ್ಸಿನಲ್ಲೇ ಧಾರಾವಾಹಿಯ ಮುಖ್ಯಭೂಮಿಕೆಯ ಜವಾಬ್ದಾರಿ ಹೊತ್ತಿದ್ದಾರೆ. ಈ ಪಯಣದ ಕುರಿತು ಅವರು 'ಸಿನಿಮಾ ಪುರವಣಿ' ಜೊತೆಗೆ ಅನುಭವ ಹಂಚಿಕೊಂಡಿದ್ದಾರೆ.

ಸಣ್ಣ ಪ್ರಾಯದಲ್ಲೇ ದೊಡ್ಡ ಜವಾಬ್ದಾರಿ

ನಾನು ಹುಟ್ಟಿದ್ದು ಬೆಳೆದಿದ್ದು ಬೆಂಗಳೂರಿನಲ್ಲೇ. ಜಕ್ಕೂರು ನಮ್ಮ ಊರು. ಸಹಕಾರ ನಗರದಲ್ಲಿರುವ ಕಾವೇರಿ ಪಬ್ಲಿಕ್ ಸ್ಕೂಲ್‌ನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮುಗಿಸಿ, ಯಲಹಂಕ ನಾಗಾರ್ಜುನ ಪಿಯು ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ ಮುಗಿಸಿದೆ. ಪ್ರಸ್ತುತ ಹೆಸರಘಟ್ಟದ ಆಚಾರ್ಯ ಇನ್‌ಸ್ಟಿಟ್ಯೂಟ್‌ನಲ್ಲಿ ಮೊದಲನೇ ವರ್ಷದ ಬಿಕಾಂ ಓದುತ್ತಿದ್ದೇನೆ. ಈ ಸಂದರ್ಭದಲ್ಲೇ ಒದಗಿ ಬಂದ ಅವಕಾಶ 'ನೇತ್ರಾವತಿ'.

ಮೂಲತಃ ನಾನು ನೃತ್ಯಗಾರ್ತಿ. ಕಳೆದ 9 ವರ್ಷದಿಂದ ಅನುರಾಧ ವೆಂಕಟರಮಣ ಅವರ ಬಳಿ ಭರತನಾಟ್ಯವನ್ನು ಕಲಿಯುತ್ತಿದ್ದೇನೆ. ನೃತ್ಯದಲ್ಲೇ ಏನಾದರೂ ಸಾಧನೆ ಮಾಡಬೇಕು ಎನ್ನುವ ಕನಸಿತ್ತು. ಅಮ್ಮನ ಕನಸೂ ಇದೇ ಆಗಿತ್ತು. ಜೊತೆಗೆ ನನ್ನನ್ನು ನಟಿಯಾಗಿ ನೋಡಬೇಕು ಎನ್ನುವ ಆಸೆಯೂ ಅಮ್ಮನಿಗಿತ್ತು. ಇದನ್ನು ಸವಾಲಾಗಿ ನಾನೂ ಸ್ವೀಕರಿಸಿದ್ದೆ. ಹಲವು ಬಾರಿ ಆಡಿಷನ್ ನೀಡಿದ್ದೆ. ಇತ್ತೀಚೆಗೆ ತಂಗಿ ಪಾತ್ರವೊಂದಕ್ಕೆ ಆಡಿಷನ್ ಇದೆ ಎಂದು ಒಬ್ಬರು ತಿಳಿಸಿದ್ದರು. ಆ ಪಾತ್ರಕ್ಕೆ ಸಿದ್ಧತೆ ನಡೆಸಿ ತೆರಳಿದ್ದೆ. ನನ್ನ ನಟನೆಯನ್ನು ಗುರುತಿಸಿ ಆಡಿಷನ್ ಬಳಿಕ ಮತ್ತೆ ಕರೆದರು. ಎರಡನೇ ಆಡಿಷನ್ ನಡೆಸಿ, ತಂಗಿ ಪಾತ್ರದ ಬದಲು ಧಾರಾವಾಹಿಯಲ್ಲಿನ ಮುಖ್ಯಪಾತ್ರವನ್ನೇ ನನಗೆ ನೀಡಿದರು.

ನಟನೆಯ ಸವಾಲು

ನೃತ್ಯದಲ್ಲಷ್ಟೇ ನನಗೆ ಆಸಕ್ತಿ ಇತ್ತು. ನಟನೆಯ ಗಂಧಗಾಳಿ ನನಗಿರಲಿಲ್ಲ. ಮೊದಲ ಬಾರಿ ಕ್ಯಾಮೆರಾ ಮುಂದೆ ಬಂದಾಗ ಹೆದರಿಕೆ ಆಗಿತ್ತು. ಈಗಾಗಲೇ ಕಲಿತ ನೃತ್ಯವನ್ನು ಬಹಳ ಸುಲಭವಾಗಿ ವೇದಿಕೆ ಮೇಲೆ ಮಾಡಬಹುದು. ಆದರೆ ಪಾತ್ರಕ್ಕೆ ಜೀವ ತುಂಬುವುದು ಕಷ್ಟವಾಗಿತ್ತು. ಈ ಸಂದರ್ಭದಲ್ಲಿ ನಿರ್ದೇಶಕರಾದ ಸಂತೋಷ್ ಗೌಡ ಅವರು ಪ್ರತಿಹೆಜ್ಜೆಯಲ್ಲೂ ನನಗೆ ಮಾರ್ಗದರ್ಶನ ನೀಡಿದರು.

ಮೊದಲ ಬಾರಿ ಆಡಿಷನ್ ನೀಡಲು ತೆರಳುವಾಗ ಯಾವ ಪ್ರೊಡಕ್ಷನ್ಸ್ ಎಂದು ನನಗೆ ತಿಳಿದಿರಲಿಲ್ಲ. ವಿಷಯ ತಿಳಿದಾಗ ನನ್ನಷ್ಟು ಖುಷಿಪಟ್ಟವರು ಯಾರೂ ಇಲ್ಲ. ಪುನೀತ್ ರಾಜ್‌ಕುಮಾರ್ ಅವರ ಅಭಿಮಾನಿ ನಾನು. ಅವರ ಡ್ಯಾನ್ಸ್‌ಗೆ ನಾನು ಫ್ಯಾನ್. ಅವರ ಪ್ರೊಡಕ್ಷನ್ಸ್‌ನಲ್ಲಿ ಕಾರ್ಯನಿರ್ವಹಿಸಿದಕ್ಕೆ ಜೀವನ ಸಾರ್ಥಕ ಎನಿಸಿತು. ಪುನೀತ್ ರಾಜ್‌ಕುಮಾರ್ ಅವರು ಪ್ರೊಮೊದಲ್ಲಿ ನಮ್ಮ ಧಾರಾವಾಹಿ ಹೆಸರು ಹೇಳಿದಾಗ, ನನ್ನ ಪಾತ್ರದ ಬಗ್ಗೆ ವಿವರಿಸಿದಾಗ ಆದ ಖುಷಿಗೆ ಪಾರವೇ ಇಲ್ಲ.

ಪಾತ್ರದ ಬಗ್ಗೆ

ನೇತ್ರಾವತಿ ಮಂಜುನಾಥನ ಪರಮಭಕ್ತೆ. ಆಶಾ ಕಾರ್ಯಕರ್ತೆಯ ಪಾತ್ರ ನನ್ನದು. ಅವಳಿಗೆ ಅಪ್ಪ ಇಲ್ಲ. ಆದರೆ ಅಪ್ಪ ಇದ್ದಾರೆ ಎನ್ನುವ ನಂಬಿಕೆ ಇದೆ. ಬೇರೆಯವರ ಕಷ್ಟಕ್ಕೆ ಸ್ಪಂದಿಸುತ್ತಾ, ತನ್ನೊಳಗೆ ನೋವಿದ್ದರೂ ತೋರಿಸಿಕೊಳ್ಳದೇ ಇತರರಿಗೆ ನಗು ಹಂಚುವ ಪಾತ್ರ ಇದು. ಚಿತ್ರೀಕರಣದ ಸಂದರ್ಭದಲ್ಲಿ ನಟನೆ ನನಗೆ ಹೊಸತಾದರೂ, ಸಹಕಲಾವಿದರು ನನಗೆ ಬಹಳ ಹುಮ್ಮಸ್ಸು ಹಾಗೂ ಧೈರ್ಯ ನೀಡಿದರು. ಈ ಧಾರಾವಾಹಿಗಾಗಿ ನಾನು 'ನದಿ'ಯ ಟ್ಯಾಟೂ ಹಾಕಿಸಿಕೊಂಡೆ. ಕಥೆಯಲ್ಲಿ ಮುಖ್ಯ ತಿರುವು ಇರುವುದೇ ಇದರಿಂದ.

ಮುಂದಿನ ಪಯಣ

ನೇತ್ರಾವತಿ ನನ್ನ ಮೊದಲ ಹೆಜ್ಜೆ. ಮುಂದೆ ಓದನ್ನು ಮುಂದುವರಿಸಿಕೊಂಡು ಅದರ ಜೊತೆಗೆ ನಟನೆಯತ್ತ ಹೆಚ್ಚಿನ ಗಮನಹರಿಸುತ್ತೇನೆ. ಈಗಷ್ಟೇ ಕಿರುತೆರೆಗೆ ಕಾಲಿರಿಸಿದ್ದೇನೆ, ಚಂದನವನಕ್ಕೆ ಬರುವ ಕನಸು ಇನ್ನಷ್ಟೇ ಹುಟ್ಟಿಕೊಳ್ಳಬೇಕಿದೆ. ಮುಂದೆ ಮತ್ತಷ್ಟು ಧಾರಾವಾಹಿಗಳಲ್ಲಿ ನಟಿಸುವ ಕನಸಿದೆ.

ಪ್ರಶಸ್ತಿಗಳ ಹೊನಲಿನಲ್ಲಿ ಕನ್ನಡದ ಕೋಲ್ಮಿಂಚು!

ಶರತ್ ಹೆಗ್ಡೆ

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಸಾಲಿನಲ್ಲಿ ಕನ್ನಡ, ತುಳು ಹಾಗೂ ಕನ್ನಡಿಗರು ನಿರ್ಮಿಸಿದ ಸಾಕ್ಷ್ಯಚಿತ್ರ, ಕೃತಿಗಳಿಗೆ ಪ್ರಶಸ್ತಿ ಬಂದಿರುವುದು ಚಂದನವನಕ್ಕೆ ಹೊಸ ಗರಿ ಮೂಡಿಸಿದೆ.

'ಅಕ್ಷಿ', ತುಳುಚಿತ್ರ ಪಿಂಗಾರ, ಅಮೋಘವರ್ಷ ಜೆ.ಎಸ್ ಅವರ 'ವೈಲ್ಡ್‌ಲೈಫ್ ಕರ್ನಾಟಕ', ಪಿ.ಆರ್.ರಾಮದಾಸ ನಾಯ್ಡು ಅವರ 'ಕನ್ನಡ ಸಿನಿಮಾ: ಜಾಗತಿಕ ಸಿನಿಮಾ ವಿಕಾಸ, ಪ್ರೇರಣೆ, ಪ್ರಭಾವ' ಕೃತಿಗಳು 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಪಾತ್ರವಾಗಿವೆ.

ಪ್ರಶಸ್ತಿ ಬಂದ ಖುಷಿಯಲ್ಲಿ 'ಅಕ್ಷಿ'ಯ ನಿರ್ಮಾಪಕ ಶ್ರೀನಿವಾಸ ಪ್ರತಿಕ್ರಿಯಿಸಿ, 'ನಾವು ಪ್ರಶಸ್ತಿಗಾಗಿ ಅಥವಾ ಇನ್ನ್ಯಾವುದೋ ಉದ್ದೇಶ ಇಟ್ಟುಕೊಂಡು ಮಾಡಿದ್ದೇ ಅಲ್ಲ. ರಾಜ್‌ಕುಮಾರ್ ಅವರು ನೇತ್ರದಾನ ಮಾಡಿದ್ದನ್ನೇ ಪ್ರೇರಣೆಯಾಗಿ ತೆಗೆದುಕೊಂಡು ಈ ಸಂಬಂಧಿಸಿ ಜಾಗೃತಿ ಮೂಡಿಸಬೇಕು. ಈ ಸಂಬಂಧಿಸಿದ ಮೂಢನಂಬಿಕೆಗಳನ್ನು ತೊಡೆದುಹಾಕಬೇಕು. ಅದೊಂದೇ ಉದ್ದೇಶ ನಮಗಿತ್ತು. ನಿರ್ದೇಶಕರು ತುಂಬಾ ಬದ್ಧತೆಯಿಂದ ಕೆಲಸ ಮಾಡಿದ್ದಾರೆ. ಈಗ ಜವಾಬ್ದಾರಿ ಹೆಚ್ಚಿದೆ' ಎಂದರು. ನಿರ್ದೇಶಕ ಮನೋಜ್ ಕುಮಾರ್ ಅವರು ಕೂಡಾ ಪ್ರಶಸ್ತಿ ಸಂಬಂಧಿಸಿದಂತೆ ಖುಷಿ ಹಂಚಿಕೊಂಡರು. ಈ ಕ್ರೆಡಿಟ್ ಇಡೀ ಚಿತ್ರ ತಂಡಕ್ಕೆ ಸಲ್ಲಬೇಕು. ಅದರಲ್ಲೂ ವಿ. ಶ್ರೀನಿವಾಸ್, ಎನ್. ರಮೇಶ್, ರವಿ ಎಚ್.ಎಸ್. ಅವರ ಶ್ರಮ ತುಂಬಾ ಇದೆ ಎಂದರು.


ಶ್ರೀನಿವಾಸ್

ಮನೋಜ್ ಕುಮಾರ್

ವಿಕ್ರಂ ಮೋರ್

ಇನ್ನು 'ಅವನೇ ಶ್ರೀಮನ್ನಾರಾಯಣ'ದ ಸಾಹಸ ನಿರ್ದೇಶಕ ವಿಕ್ರಂ ಮೋರ್ ಅವರಿಗೆ ಪ್ರಶಸ್ತಿ ಒಲಿದಿದೆ. ಕೆಜಿಎಫ್ ಚಾಪ್ಟರ್-1 ಚಿತ್ರಕ್ಕೂ ಅವರಿಗೆ ಇದೇ ಪ್ರಶಸ್ತಿ ಒಲಿದಿತ್ತು. ಶ್ರೀಮನ್ನಾರಾಯಣ ಅವರಿಗೆ 50ನೇ ಚಿತ್ರ. ವಿಕ್ರಂ ಅವರ ಮೂಲ ನೇಪಾಳ. ಅವರು ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ. 10ನೇ ತರಗತಿ ಓದು ಮುಗಿಸಿ ಗೆಳೆಯನ ಸೈಬರ್ ಸೆಂಟರ್‌ನಲ್ಲಿ ಕೆಲಸಕ್ಕೆ ಸೇರಿದರು. ಹಂತಹಂತವಾಗಿ ಸಾಹಸ, ಸಿನಿಮಾ ತಂತ್ರಜ್ಞಾನವನ್ನು ಅರಿತರು. ಕನ್ನಡದ ಜೊತೆಗೆ ಹತ್ತಾರು ಭಾಷೆಗಳನ್ನು ಬಲ್ಲವರು ವಿಕ್ರಂ. ಸಾಹಸ ಶಾಲೆ ತೆರೆಯುವ ಕನಸು ಇದೆ. ಒಳ್ಳೆಯ ಚಿತ್ರಗಳಲ್ಲಿ ಕೆಲಸ ಮಾಡಬೇಕಿದೆ ಎಂದರು ವಿಕ್ರಂ.


ಅಮೋಘವರ್ಷ ಜೆ.ಎಸ್.

ವೈಲ್ಡ್‌ಲೈಫ್ ಕರ್ನಾಟಕ ಸಾಕ್ಷ್ಯಚಿತ್ರಕ್ಕೆ ನಿರ್ದೇಶಕ ಅಮೋಘವರ್ಷ ಅವರಿಗೆ ರಾಷ್ಟ್ರ ಪ್ರಶಸ್ತಿ ಒಲಿದಿದೆ. ಕರ್ನಾಟಕದ ವಿವಿಧ ಅರಣ್ಯ ಪ್ರದೇಶಗಳು, ಅದರಲ್ಲೂ ಪಶ್ಚಿಮ ಘಟ್ಟದ ವನ್ಯಜೀವಿಗಳ ಸುಂದರ ದೃಶ್ಯಾವಳಿಗಳನ್ನು ಅಮೋಘವರ್ಷ ತಂಡದ ಕ್ಯಾಮೆರಾಗಳು ಸೆರೆ ಹಿಡಿದಿವೆ. 4 ವರ್ಷ ಶ್ರಮಿಸಿ ಈ ಸಾಕ್ಷ್ಯಚಿತ್ರ ತಯಾರಾಗಿದೆ.

ಪ್ರೀತಂ ಶೆಟ್ಟಿ

'ಸರ್ಕಾರ ನಮ್ಮ ಶ್ರಮವನ್ನು ಗುರುತಿಸಿ ಮೌಲ್ಯ ನೀಡಿದೆ. ಈ ಗೌರವವನ್ನು ನಮ್ಮ ರಾಜ್ಯಕ್ಕೆ ಅರ್ಪಿಸುತ್ತೇವೆ. ಈ ಪ್ರಶಸ್ತಿ, ಗೌರವ ಏನಿದ್ದರೂ ಕಾಡನ್ನು ರಕ್ಷಿಸುತ್ತಿರುವ ಕರ್ನಾಟಕ ಅರಣ್ಯ ಇಲಾಖೆಗೆ ಸಲ್ಲಬೇಕು. ನಾವೇನಿದ್ದರೂ ನಮ್ಮ ಅರಣ್ಯದ ಸೌಂದರ್ಯವನ್ನಷ್ಟೇ ಚಿತ್ರಿಸಿಕೊಟ್ಟಿದ್ದೇವೆ' ಎಂದು ನುಡಿದರು ಅಮೋಘವರ್ಷ ಮತ್ತು ಸಹ ನಿರ್ದೇಶಕ ಕಲ್ಯಾಣ್ ವರ್ಮಾ. ಪ್ರಕೃತಿ ಇತಿಹಾಸ ತಜ್ಞ ಸರ್ ಡೇವಿಡ್ ಅಟೆನ್‌ಬರ್ಗ್ ಅವರನ್ನು ಈ ಸಾಕ್ಷ್ಯಚಿತ್ರದ ಉತ್ತಮ ನಿರೂಪಕ ಎಂದು ಘೋಷಿಸಲಾಗಿದೆ.

ತುಳು ಚಿತ್ರ 'ಪಿಂಗಾರ'ಕ್ಕೆ ರಾಷ್ಟ್ರಪ್ರಶಸ್ತಿ ಒಲಿದಿದೆ. 'ಈ ಪ್ರಶಸ್ತಿಯನ್ನು ತುಳು ಚಿತ್ರರಂಗಕ್ಕೆ ಅರ್ಪಿಸುತ್ತೇವೆ' ಎಂದರು ಚಿತ್ರದ ನಿರ್ದೇಶಕ ಆರ್. ಪ್ರೀತಮ್ ಶೆಟ್ಟಿ. ಕನ್ನಡ ಮತ್ತು ತುಳು ಭಾಷೆಯಲ್ಲಿ 'ಪಿಂಗಾರ' ಇನ್ನಷ್ಟೇ ಚಿತ್ರಮಂದಿರಕ್ಕೆ ಬರಬೇಕಿದೆ.

'ಕಲಾತ್ಮಕ ವಿಷಯವನ್ನು ಆಯ್ಕೆ ಮಾಡಿಕೊಂಡು 'ಪಿಂಗಾರ' ನಿರ್ದೇಶನ ಮಾಡಿದ್ದೇನೆ. ಅದೇ ನನ್ನ ಸ್ವತಂತ್ರ ನಿರ್ದೇಶನದ ಮೊದಲ ಚಿತ್ರವೂ ಆಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಬಂದಿರುವುದು ಖುಷಿ ತಂದಿದೆ' ಎಂದು ಹೇಳಿದರು.

'ಮಡಿ' ಮುಡಿಗೆ ಪ್ರಶಸ್ತಿ

ಸುಧೀರ್ ಅತ್ತಾವರ ನಿರ್ದೇಶನದ 'ಮಡಿ' ಚಿತ್ರವು ರಾಜಸ್ಥಾನ 7ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಸಾಮಾಜಿಕ ಜಾಗೃತಿಯ ಚಲನಚಿತ್ರ ಪ್ರಶಸ್ತಿಗೆ ಪಾತ್ರವಾಗಿದೆ. ಇದೇ ಚಿತ್ರದ ನಿರ್ದೇಶಕ ಸುಧೀರ್ ಅತ್ತಾವರ ಅವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಸಿಕ್ಕಿದೆ.

ಚಿತ್ರೋತ್ಸವದಲ್ಲಿ ಅಮೆರಿಕದ ಚಿತ್ರ 'ಫಲಾಫೆಲ್', ಫ್ರೆಂಚ್ ಸಿನಿಮಾ 'ಸೋಲೇ ಮಿಯೋ' ತೀವ್ರ ಸ್ಪರ್ಧೆ ಒಡ್ಡಿದ್ದವು. ಆದರೆ 'ಮಡಿ' ತೀರ್ಪುಗಾರರ ಮೆಚ್ಚುಗೆಗೆ ಪಾತ್ರವಾಯಿತು.

ಸಕ್ಸಸ್ ಫಿಲ್ಮ್ಸ್ ಬ್ಯಾನರ್ ಅಡಿ ವಿದ್ಯಾಧರ್ ಶೆಟ್ಟಿ ಮತ್ತು ಸೂರಜ್ ನ್ಯೂನ್ಸ್ ಈ ಚಿತ್ರ ನಿರ್ಮಿಸಿದ್ದಾರೆ. ಕರಾವಳಿಯ ಭಾಗದ ಜನಪದ ಕಲೆ 'ಆಟಿ ಕಳಂಜ'ದ ಹಿನ್ನೆಲೆಯ ಕಥೆಯುಳ್ಳ ಚಿತ್ರ 'ಮಡಿ'. ಜೋಧ್‌ಪುರದ ಮಹ್ರಂಗಾಹ್ರ್ ಅರಮನೆಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ನಡೆದಿದೆ. ಚಿತ್ರೋತ್ಸವದಲ್ಲಿ ದೇಶ ವಿದೇಶಗಳ 40ಕ್ಕೂ ಅಧಿಕ ಕಿರು ಚಿತ್ರಗಳು ಭಾಗವಹಿಸಿದ್ದವು.

ಹೊನ್ನಾವರದಲ್ಲಿ 'ದಂಡಿ' ಸತ್ಯಾಗ್ರಹ

ಸ್ವಾತಂತ್ರ್ಯಪೂರ್ವದಲ್ಲಿ ನಡೆದ ದಂಡಿ(ಉಪ್ಪಿನ) ಸತ್ಯಾಗ್ರಹದ ಬಗ್ಗೆ ಸಿನಿಮಾವೊಂದು ಮೂಡಿಬರುತ್ತಿದೆ.

ದಂಡಿ ಸತ್ಯಾಗ್ರಹ ಘಟನೆ ಆಧರಿತ ಚಿತ್ರವೊಂದು ಸೆಟ್ಟೇರಿದ್ದು ಹೊನ್ನಾವರ ಸುತ್ತಮುತ್ತ ಚಿತ್ರೀಕರಣ ನಡೆದಿದೆ. ತಾರಾ-ಸುಚೇಂದ್ರಪ್ರಸಾದ್ ನಟನೆಯ ಈ ಚಿತ್ರದ ಹೆಸರು 'ದಂಡಿ'. ಇದು ಡಾ.ರಾಜಶೇಖರ್ ಮಠಪತಿ ಅವರ ಕಾದಂಬರಿ ಆಧರಿತ ಚಿತ್ರ. ಹೊನ್ನಾವರದ ಮೂಡುಗಣಪತಿ ದೇವಸ್ಥಾನದಲ್ಲಿ ಇತ್ತೀಚೆಗೆ ಮುಹೂರ್ತ ನಡೆದಿದೆ. ಸುಕ್ರಿ ಗೌಡ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

ಕಲ್ಯಾಣಿ ಪ್ರೊಡಕ್ಷನ್ಸ್ ಲಾಂಛನದಲ್ಲಿ ಉಷಾರಾಣಿ ಅವರು ನಿರ್ಮಿಸುತ್ತಿರುವ ಈ ಚಿತ್ರವನ್ನು ವಿಶಾಲ್ ರಾಜ್ ನಿರ್ದೇಶಿಸುತ್ತಿದ್ದಾರೆ. ಚಿತ್ರಕಥೆಯೂ ಅವರದ್ದೇ. ಸಾಹಿತ್ಯ ಹಾಗೂ ಸಂಭಾಷಣೆಯನ್ನು ರಾಗಂ ಅವರು ಬರೆದಿದ್ದಾರೆ. ರಾಮ್ ಕ್ರಿಶ್ ಸಂಗೀತ ನೀಡುತ್ತಿದ್ದಾರೆ. ಹೊನ್ನಾವರ, ಸಿದ್ದಾಪುರ, ಅಂಕೋಲ ಸುತ್ತಮುತ್ತ ಮೂವತ್ತು ದಿನಗಳ ಕಾಲ ಒಂದೇ ಹಂತದ ಚಿತ್ರೀಕರಣ ನಡೆಯಲಿದೆ. ಹೊಸ ಪ್ರತಿಭೆಗಳಾದ ಯುವಾನ್ ದೇವ್(ನಿರ್ಮಾಪಕರ ಪುತ್ರ) ಹಾಗೂ ಶಾಲಿನಿ ಭಟ್ ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ದಾಮೋದರ್ ನಾಯ್ಡು ಕೂಡ ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ದಂಡಿ
ತಾರಾ



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦
ಹೃದಯವನ್ನು ಅರಳಿಸದೆ ಕೇವಲ ಬುದ್ಧಿಮತ್ತೆಯನ್ನಷ್ಟೇ ಹೆಚ್ಚಿಸುವ ಶಿಕ್ಷಣವು ಶಿಕ್ಷಣವೇ ಅಲ್ಲ.
-ಅರಿಸ್ಟಾಟಲ್

ವಾಟ್ಸ್‌ಆ್ಯಪ್‌ನ ಪಾರಮ್ಯದ ಧೋರಣೆ ಕಲಿಯಬಹುದಾದ ಪಾಠಗಳು ಹಲವು

ಭಾರತದಲ್ಲಿ ಸ್ಮಾರ್ಟ್‌ಫೋನ್ ಯುಗ ಆರಂಭವಾದಾಗ ಆ್ಯಂಡ್ರಾಯ್ಡ್ ಮಾರ್ಕೆಟ್ (ಇಂದಿನ ಗೂಗಲ್ ಪ್ಲೇಸ್ಟೋರ್‌ನ ಹಿಂದಿನ ಹೆಸರು) ಮೂಲಕ ಜನರ ಕಿಸೆಯಲ್ಲಿ ಬಂದು ಕುಳಿತಿದ್ದು ವಾಟ್ಸ್‌ಆ್ಯಪ್ ಎಂಬ ಸಂದೇಶ ವಾಹಕ. ಪಠ್ಯ ರೂಪದ ಸಂದೇಶಗಳನ್ನು ಕಳುಹಿಸಲು ಎಸ್‌ಎಂಎಸ್‌ಗಳನ್ನು ಹೆಚ್ಚಾಗಿ ನೆಚ್ಚಿಕೊಂಡಿದ್ದ ಸಂದರ್ಭ ಅದು. ಆಗ ವಾಟ್ಸ್‌ಆ್ಯಪ್ ಕೂಡ ಇದೇ ಬಗೆಯ ಸಂದೇಶಗಳನ್ನು ರವಾನಿಸಲು ಬಳಕೆಯಾಯಿತು. ಜಾಗತಿಕ ಮಟ್ಟದಲ್ಲಿ ‘ವಾಟ್ಸ್‌ಆ್ಯಪ್ ಹಾಗೂ ಖಾಸಗಿತನ’ ವಿಚಾರವು ಆರಂಭದಿಂದಲೂ ಚರ್ಚೆಯಲ್ಲಿದ್ದರೂ, ಭಾರತದಲ್ಲಿ ಅದರ ಬಗ್ಗೆ ವಿಸ್ತೃತ ಚರ್ಚೆಗಳು ದೊಡ್ಡ ಮಟ್ಟದಲ್ಲಿ ನಡೆದಂತಿಲ್ಲ. 2010–20ರ ನಡುವಿನ ಅವಧಿಯಲ್ಲಿ ಭಾರತದಲ್ಲಿ ಕೂಡ ‘ಖಾಸಗಿತನ’ದ ಸುತ್ತ ಸಾರ್ವಜನಿಕ ಚರ್ಚೆಗಳು ನಡೆದವು. 2018ರಲ್ಲಿ ನ್ಯಾಯಮೂರ್ತಿ ಕೆ.ಎಸ್. ಪುಟ್ಟಸ್ವಾಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘ಖಾಸಗಿತನ ಮೂಲಭೂತ ಹಕ್ಕು’ ಎಂದು ಸ್ಪಷ್ಟಪಡಿಸಿತು. ತನ್ನ ಮೂಲಕ ರವಾನೆ ಆಗುವ ಸಂದೇಶಗಳು, ಸಂದೇಶ ಹುಟ್ಟುವ ಸ್ಮಾರ್ಟ್ ಫೋನ್‌ನಿಂದ ಸಂದೇಶ ತಲುಪುವ ಸ್ಮಾರ್ಟ್ ಫೋನ್‌ವರೆಗೂ ಭದ್ರವಾಗಿ, ಎನ್‌ಕ್ರಿಪ್ಟೆಡ್ ಆಗಿ (ಅಂದರೆ, ಸಂದೇಶ ಕಳುಹಿಸಿದವ ಹಾಗೂ ಸಂದೇಶ ಸ್ವೀಕರಿಸುವವ ಹೊರತುಪಡಿಸಿ ಬೇರೆ ಯಾರೂ ಆ ಸಂದೇಶ ಓದಲು ಆಗದು) ಇರಲಿದೆ ಎಂದು ವಾಟ್ಸ್‌ಆ್ಯಪ್ 2016ರ ಸುಮಾರಿಗೆ ಪ್ರಕಟಿಸಿತು. ಇದು ವಾಟ್ಸ್‌ಆ್ಯಪ್‌ನ ಜನಪ್ರಿಯತೆಯನ್ನು ಇನ್ನಷ್ಟು ಎತ್ತರಕ್ಕೆ ಒಯ್ದಿತು. ನಂತರದ ವರ್ಷಗಳಲ್ಲಿ ವಾಟ್ಸ್‌ಆ್ಯಪ್ ಎಂಬುದು ಎಸ್‌ಎಂಎಸ್ ರವಾನಿಸುವ ಮಾಧ್ಯಮವಾಗಿ ಮಾತ್ರವೇ ಉಳಿಯಲಿಲ್ಲ – ಅದರ ಮೂಲಕ ದೃಶ್ಯ, ಧ್ವನಿ, ಪಠ್ಯ, ವೆಬ್ ಕೊಂಡಿಗಳನ್ನು ಹಂಚಿಕೊಳ್ಳಬಹುದು, ಹಣ ಪಾವತಿಸಬಹುದು, ಕಡತ ರವಾನಿಸಬಹುದು. ಹೀಗೆ ಬಹುಉಪಯೋಗಿಯಾಗಿ, ಜನರ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆದ ವಾಟ್ಸ್‌ಆ್ಯಪ್ ಈಗ ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ತನಿಖೆಗೆ ಗುರಿಯಾಗಬೇಕಾದ ಸ್ಥಿತಿಗೆ ಬಂದುನಿಂತಿದೆ.

ವಾಣಿಜ್ಯ ವಹಿವಾಟುಗಳಿಗೆ ಸಂಬಂಧಿಸಿದಂತೆ ಇತರ ಕಂಪನಿಗಳ ಜೊತೆ ಹಂಚಿಕೊಳ್ಳುವುದಾಗಿ ವಾಟ್ಸ್‌ಆ್ಯಪ್ ಹೇಳಿರುವ ಕೆಲವು ಮಾಹಿತಿಗಳಲ್ಲಿ, ‘ಖಾಸಗಿ’ ಯಾವುವು, ಖಾಸಗಿ ಅಲ್ಲದ್ದು ಯಾವುವು ಎಂಬ ಬಗ್ಗೆ ಪ್ರಶ್ನೆಗಳು ಇವೆ

ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸಿದ ವಾಟ್ಸ್‌ಆ್ಯಪ್, ತನ್ನ ಬಳಕೆದಾರರಿಗೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಫೇಸ್‌ಬುಕ್ ಹಾಗೂ ಅದರ ಮಾಲೀಕತ್ವದ ಇತರ ಕೆಲವು ಕಂಪನಿಗಳ ಜೊತೆ ಹಂಚಿಕೊಳ್ಳಲಾಗುತ್ತದೆ ಎಂದು ತನ್ನ ಖಾಸಗಿತನದ ನೀತಿಯಲ್ಲಿ ಬದಲಾವಣೆ ತಂದಿತು. ಈ ನೀತಿಯನ್ನು ಬಳಕೆದಾರರು ಒಪ್ಪಿಕೊಳ್ಳಲೇಬೇಕು. ಇಲ್ಲವಾದರೆ ಅವರ ವಾಟ್ಸ್‌ಆ್ಯಪ್ ಖಾತೆ ನಿಷ್ಕ್ರಿಯಗೊಳ್ಳುತ್ತದೆ. ಉಚಿತವಾಗಿ ಸೇವೆ ನೀಡಲು ಆರಂಭಿಸಿ, ಮಾರುಕಟ್ಟೆಯ ಮೇಲೆ ಪ್ರಾಬಲ್ಯ ಸಾಧಿಸಿ, ಜನ ತನ್ನ ಸೇವೆಗಳಿಗೆ ಒಗ್ಗಿಕೊಳ್ಳುವಂತೆ ಮಾಡಿ, ನಂತರ ಒಂದು ದಿನ ‘ನಾವು ರೂಪಿಸಿದ ಹೊಸ ನಿಯಮ ಒಪ್ಪಿಕೊಳ್ಳಿ, ಇಲ್ಲವಾದರೆ ನಿಮ್ಮನ್ನು ಹೊರಹಾಕಲಾಗುತ್ತದೆ’ ಎಂಬ ಧಾಟಿಯಲ್ಲಿ ವಾಟ್ಸ್‌ಆ್ಯಪ್ ಮಾತನಾಡುತ್ತಿರುವಂತೆ ಕಾಣುತ್ತಿದೆ. ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದ ಹೊಸ ನೀತಿಯನ್ನು ತಿರಸ್ಕರಿಸಲು ಬಳಕೆದಾರರಿಗೆ ಅವಕಾಶವೇ ಇಲ್ಲ. ವಾಟ್ಸ್‌ಆ್ಯಪ್‌ನ ಈ ಕ್ರಮವು ನ್ಯಾಯಸಮ್ಮತವಾಗಿಲ್ಲ ಎಂದು ಸಿಸಿಐಗೆ ಅನಿಸಿದೆ. ಆ ಕಾರಣಕ್ಕೆ ಅದು, ವಾಟ್ಸ್‌ಆ್ಯಪ್‌ನ ಧೋರಣೆ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ ತನಿಖೆಗೆ ಸ್ವಯಂಪ್ರೇರಿತವಾಗಿ ಆದೇಶಿಸಿದೆ. ಖಾಸಗಿ ಸಂದೇಶಗಳ ಮೇಲೆ ತಾನು ಕಳ್ಳಗಣ್ಣು ಇರಿಸುವುದಿಲ್ಲ ಎಂದು ವಾಟ್ಸ್‌ಆ್ಯಪ್ ಹೇಳಿದೆ. ವಾಣಿಜ್ಯ ವಹಿವಾಟುಗಳಿಗೆ ಸಂಬಂಧಿಸಿದಂತೆ ಇತರ ಕಂಪನಿಗಳ ಜೊತೆ ಹಂಚಿಕೊಳ್ಳುವುದಾಗಿ ವಾಟ್ಸ್‌ಆ್ಯಪ್ ಹೇಳಿರುವ ಕೆಲವು ಮಾಹಿತಿಗಳಲ್ಲಿ, ‘ಖಾಸಗಿ’ ಯಾವುವು, ಖಾಸಗಿ ಅಲ್ಲದ್ದು ಯಾವುವು ಎಂಬ ಬಗ್ಗೆ ಪ್ರಶ್ನೆಗಳು ಇವೆ. ಭಾರತದ ಬಳಕೆದಾರರಿಗೆ ತಂದಂತಹ ಪರಿಷ್ಕರಣೆಯನ್ನು ವಾಟ್ಸ್‌ಆ್ಯಪ್ ಯುರೋಪಿನ ತನ್ನ ಬಳಕೆದಾರರಿಗೆ ತಂದಿಲ್ಲ ಎಂದು ಕೇಂದ್ರ ಸರ್ಕಾರವು ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ದೆಹಲಿ ಹೈಕೋರ್ಟ್‌ಗೆ ವಿವರಿಸಿದೆ. ವೈಯಕ್ತಿಕ ಮಾಹಿತಿಯನ್ನು ರಕ್ಷಿಸಲು ಐರೋಪ್ಯ ಒಕ್ಕೂಟದಲ್ಲಿ ಇರುವ ಕಠಿಣ ಕಾನೂನುಗಳಿಗೆ ಅಂಜಿ ವಾಟ್ಸ್‌ಆ್ಯಪ್ ಹೀಗೆ ಮಾಡಿರಬಹುದು. ಭಾರತದಲ್ಲಿ ಕೂಡ ಇಂತಹ ಕಠಿಣ ಕಾನೂನುಗಳು ಈಗಾಗಲೇ ಇದ್ದಿದ್ದರೆ ವಾಟ್ಸ್‌ಆ್ಯಪ್‌ನ ನಡೆ ಬಹುಶಃ ಈಗಿನಂತೆ ಇರುತ್ತಿರಲಿಲ್ಲ. ಹಾಗೆಯೇ, ಮಾರುಕಟ್ಟೆಯಲ್ಲಿ ಈ ಪರಿಯ ಪಾರಮ್ಯವನ್ನು ವಾಟ್ಸ್‌ಆ್ಯಪ್ ಹೊಂದಿರದೆ ಇದ್ದಿದ್ದರೆ, ಆಗ ಅದು ಇನ್ನಷ್ಟು ಮೃದುವಾಗಿ ವರ್ತಿಸುತ್ತಿತ್ತೇನೋ... ಮಾಹಿತಿಯ ರಕ್ಷಣೆ ಹಾಗೂ ಒಂದು ಕಂಪನಿಗೆ ಮಾರುಕಟ್ಟೆಯಲ್ಲಿ ಪಾರಮ್ಯ ಸಾಧಿಸಲು ಬಿಡುವುದರ ವಿಚಾರವಾಗಿ ವಾಟ್ಸ್‌ಆ್ಯಪ್ ಪ್ರಸಂಗದಿಂದ ಕಲಿಯಬಹುದಾಗಿದ್ದು ಬಹಳಷ್ಟಿದೆ.

ದಿನದ ಟ್ವೀಟ್

ಅಪಮಾನ ಆಗಬಾರದು

ನಾವು ರಾಜಕೀಯದಲ್ಲಿರುವವರು. ಬಡಿದಾಡುತ್ತೇವೆ, ಬೈದಾಡಿಕೊಳ್ಳುತ್ತೇವೆ. ಆದರೆ, ನಮ್ಮ ಬಡಿದಾಟಗಳಲ್ಲಿ ಹೆಂಡತಿ, ಮಕ್ಕಳನ್ನು ತರುವುದು ನಮ್ಮ ನಮ್ಮ ಕುಟುಂಬಗಳಿಗೆ ನಾವೇ ಮಾಡಿಕೊಂಡ ಅಪಮಾನ. ನಮ್ಮನ್ನು ನಾವು ರಕ್ಷಿಸಿಕೊಳ್ಳಲು ನಮ್ಮ ಕುಟುಂಬಗಳನ್ನು ಅಡ್ಡತರುವುದು ವಂಚನೆಯೇ ಸರಿ. ನಮ್ಮನ್ನೇ ನಂಬಿದ ಕುಟುಂಬಸ್ಥರಿಗೆ ಎಂದಿಗೂ ಅಪಮಾನ ಆಗಬಾರದು.

ಸಾ.ರಾ.ಮಹೇಶ್, ಶಾಸಕ, ಜೆಡಿಎಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 26-3-1996

• **ಹಜರತ್‌ಬಾಲ್ ಮುಕ್ತಿ ಯತ್ನ ವಿಫಲ**

ಶ್ರೀನಗರ, ಮಾರ್ಚ್ 25 (ಯುಎನ್‌ಐ, ಪಿಟಿಐ)– ಹಜರತ್‌ಬಾಲ್ ಮಸೀದಿಯನ್ನು ಜಮ್ಮು ಮತ್ತು ಕಾಶ್ಮೀರ ವಿಮೋಚನಾ ರಂಗದ (ಷಬ್ಬೀರ್ ಸಿದ್ದೀಖ್ ಗುಂಪು) ಹಿಡಿತದಿಂದ ತಪ್ಪಿಸಲು ಬೆಳಿಗ್ಗೆಯಿಂದ ನಡೆಸಿದ ಯತ್ನ ವಿಫಲವಾಗಿದೆ.

ಮಸೀದಿಯಿಂದ ಹೊರಬರುವಂತೆ ಅಧಿಕಾರಿಗಳು ಮಾಡಿದ ಮನವಿಯನ್ನು ಭಯೋತ್ಪಾದಕರು ತಿರಸ್ಕರಿಸಿದ್ದಾರೆ. ಮಸೀದಿಯ ಆವರಣದಲ್ಲಿ ವಿಧಿಸಲಾಗಿರುವ ಅನಿರ್ದಿಷ್ಟ ಅವಧಿಯ ಕರ್ಫ್ಯೂ ಮುಂದುವರಿದಿದೆ.

ಈ ನಡುವೆ, ಮಸೀದಿ ಆವರಣದಲ್ಲಿ ನಿನ್ನೆ ನಡೆದ ಕಾಳಗದಲ್ಲಿ ಭದ್ರತಾ ಪಡೆಯ 16 ಮಂದಿ ಮತ್ತು 14 ಮಂದಿ ಭಯೋತ್ಪಾದಕರು ಸತ್ತಿದ್ದಾರೆ ಎಂದು ಜೆಕೆಎಲ್‌ಎಫ್ ವಕ್ತಾರರು ಹೇಳಿದ್ದಾರೆ. ಈ ಹೇಳಿಕೆಯನ್ನು ಅಧಿಕಾರಿಗಳು ದೃಢಪಡಿಸಿಲ್ಲ. ಕಾಳಗದಲ್ಲಿ ಮೃತರಾದವರ ದೇಹಗಳನ್ನು ತೆಗೆಯಲು ಉಗ್ರಗಾಮಿಗಳು ಅವಕಾಶ ನೀಡಲಿಲ್ಲ.

• **ಬಿಜೆಪಿ ಮೊದಲ ಪಟ್ಟಿಯಲ್ಲಿ 272 ಮಂದಿಗೆ ಟಿಕೆಟ್**

ನವದೆಹಲಿ, ಮಾರ್ಚ್ 25– ಲೋಕಸಭೆಯ ಚುನಾವಣೆಗೆ 475 ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿರುವ ಭಾರತೀಯ ಜನತಾ ಪಕ್ಷವು ಕರ್ನಾಟಕದ 22 ಹಾಗೂ 17 ರಾಜ್ಯಗಳ 272 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಇಂದು ಇಲ್ಲಿ ಬಿಡುಗಡೆ ಮಾಡಿದೆ.

ಪ್ರಧಾನಿ ಪಟ್ಟಕ್ಕೆ ಹೆಸರಿಸಲಾಗಿರುವ ಅಟಲ್ ಬಿಹಾರಿ ವಾಜಪೇಯಿ, ರಾಷ್ಟ್ರೀಯ ಕಾರ್ಯದರ್ಶಿ ಅನಂತ ಕುಮಾರ್, ಲೋಕಸಭೆಯ ಉಪಸಭಾಪತಿ ಎಸ್. ಮಲ್ಲಿಕಾರ್ಜುನಯ್ಯ, ಪಕ್ಷದ ಮಾಜಿ ಅಧ್ಯಕ್ಷ ಡಾ. ಮುರಳಿ ಮನೋಹರ ಜೋಷಿ, ರಾಜಮಾತಾ ವಿಜಯರಾಜೇ ಸಿಂಧಿಯಾ, ಸಿಕಂದರ್ ಬಖ್ತ್ ಅವರ ಹೆಸರುಗಳು ಈ ಪಟ್ಟಿಯಲ್ಲಿ ಸೇರಿವೆ.

50 ವರ್ಷಗಳ ಹಿಂದೆ

ಶುಕ್ರವಾರ, 26-3-1971

• **ಚಂಡೀಗಡದ ಉಗ್ರಾಣದಲ್ಲಿ ಗುರುತಿಸಿದ ಮತಚೀಟಿಗಳು: ನ್ಯಾಯಾಂಗ ತನಿಖೆಗೆ ಒತ್ತಾಯ**

ನವದೆಹಲಿ, ಮಾರ್ಚ್ 25– ಸಂಸತ್ತಿನ ಉಭಯ ಸದನಗಳಲ್ಲೂ ವಿರೋಧ ಪಕ್ಷ ಇಂದು ಆಡಳಿತ ಪಕ್ಷದ ಮೇಲೆ ತನ್ನ ಪ್ರಪ್ರಥಮ ಅಸ್ತ್ರವನ್ನು ಪ್ರಯೋಗಿಸಿತು.

ಈಚಿನ ಚುನಾವಣೆಗಳ ನಂತರ ಚಂಡೀಗಡದ ಖಾಸಗಿ ಉಗ್ರಾಣವೊಂದರಲ್ಲಿ ಗುರುತಿಸಿದ ಸಾವಿರಾರು ಮತಚೀಟಿಗಳು ಕಂಡುಬಂದಿವೆ. ಅದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂಬುದು ವಿರೋಧ ಪಕ್ಷದ ಒತ್ತಾಯವಾಗಿತ್ತು. ಜನಸಂಘದ ಸದಸ್ಯರು ಕೈಯಲ್ಲಿ ಒಂದು ಹಿಡಿ ಮತಪತ್ರಗಳನ್ನು ಹಿಡಿದು ಕೈಬೀಸುತ್ತಾ ಸರ್ಕಾರದಿಂದ ತೃಪ್ತಿಕರ ವಿವರಣೆ ಬಯಸಿದರು.

• **ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸಂಪುಟ ರಚನೆ ಯತ್ನ**

ಬೆಂಗಳೂರು, ಮಾರ್ಚ್ 25– ವಿಧಾನ ಸಭೆಯ ಕಾಂಗ್ರೆಸ್ಸೇತರ ಪಕ್ಷಗಳ ಪರವಾಗಿ ಮಂತ್ರಿಮಂಡಲ ರಚಿಸಲು ತಮಗೆ ಬಹುಮತದ ಬೆಂಬಲವಿದೆ ಎಂದು ತಿಳಿಸುವ ಪತ್ರವನ್ನು ನಾಳೆ ರಾಜ್ಯಪಾಲರಿಗೆ ಅರ್ಪಿಸುವ ಸಂಭವವಿದೆ.

ಮಾನನಷ್ಟ: ಅರ್ಥ ಮಾಡಿಕೊಳ್ಳುವುದು ಸುಲಭ, ವ್ಯಾಖ್ಯಾನಿಸುವುದು ಕಷ್ಟ

ಯಾವುದು ಮಾನನಷ್ಟ? ಯಾವುದು ಲೋಕಹಿತ?

ವಿಶ್ಲೇಷಣೆ

ಕೆ.ವಿ.ಧನಂಜಯ

ರಾಜ್ಯ ಸರ್ಕಾರದಲ್ಲಿ ಸಚಿವರಾಗಿದ್ದ ಒಬ್ಬರಿಗೆ ಸಂಬಂಧಿಸಿದ್ದು ಎನ್ನಲಾದ ಲೈಂಗಿಕ ಪ್ರಕರಣದ ದೃಶ್ಯಗಳು ಮಾಧ್ಯಮಗಳಲ್ಲಿ ಪ್ರಸಾರವಾದ ನಂತರ, ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಇದನ್ನು ಆಧಾರವಾಗಿ ಇಟ್ಟುಕೊಂಡು ಸಿವಿಲ್ ನ್ಯಾಯಾಲಯದ ಮೊರೆಹೋದ ಆರು ಜನ ಸಚಿವರು ತಮ್ಮನ್ನು ಕೂಡ ಇದೇ ಬಗೆಯಲ್ಲಿ ಚಾರಿತ್ರ್ಯವಧೆಗೆ ಗುರಿಪಡಿಸಬಹುದು ಎಂಬ ಆತಂಕ ವ್ಯಕ್ತಪಡಿಸಿದರು. ತಮ್ಮ ವಿರುದ್ಧ ಇಂತಹ ದೃಶ್ಯಾವಳಿಗಳನ್ನು ಪ್ರಸಾರ ಮಾಡದಂತೆ ಮಾಧ್ಯಮಗಳಿಗೆ ಸೂಚಿಸಬೇಕು ಎಂದು ನ್ಯಾಯಾಲಯವನ್ನು ಕೋರಿದರು. ನ್ಯಾಯಾಲಯದ ಎದುರು ಈ ಸಚಿವರ ಅಂತಹ ದೃಶ್ಯಗಳ ಸಿ.ಡಿ. ಇರಲಿಲ್ಲ. ಈ ಆರು ಸಚಿವರ ವಿರುದ್ಧ ಮಾಧ್ಯಮಗಳು ಮಾನಹಾನಿಕರವಾದ ಏನನ್ನೂ ಪ್ರಸಾರ ಮಾಡಬಾರದು ಎಂದು ನ್ಯಾಯಾಲಯ ತಾತ್ಕಾಲಿಕ ಆದೇಶ ನೀಡಿದೆ. ಆದರೆ, ಈ ಸಚಿವರ ವಿರುದ್ಧ ಪರಿಶೀಲಿಸಿದ ಸುದ್ದಿಗಳನ್ನು ಪ್ರಸಾರ ಮಾಡಬಹುದು ಎಂದು ಕೋರ್ಟ್ ಹೇಳಿದೆ. ಹಾಗಾದರೆ, ‘ಮಾನಹಾನಿಕರ’ ಅಂದರೇನು?

ಸಾರ್ವಜನಿಕ ಸೇವಕನಿಗೆ ಸಂಬಂಧಿಸಿದಂತೆ ಮಾನಹಾನಿಕರವಾದ ಏನನ್ನೂ ಪ್ರಸಾರ ಮಾಡಬಾರದು ಎಂದು ಕೋರ್ಟ್ ತಾತ್ಕಾಲಿಕ ತಡೆಯಾಜ್ಞೆ ನೀಡಿದ ನಂತರವೂ, ತಮ್ಮ ಅಭಿಪ್ರಾಯದಲ್ಲಿ ಮಾನಹಾನಿಕರವಲ್ಲ ಎಂದು ಅನ್ನಿಸಿದ ವಸ್ತು–ವಿಷಯಗಳನ್ನು ಪ್ರಸಾರ ಮಾಡುವ ಅವಕಾಶ ಮಾಧ್ಯಮಗಳಿಗೆ ಇದ್ದೇ ಇರುತ್ತದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಸ್ಥೆಯ ಪ್ರಕರಣದಲ್ಲಿ 2019ರಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ ಆದೇಶ ಇದನ್ನೇ ಹೇಳುತ್ತದೆ.

ಒಂದು ಉದಾಹರಣೆಯನ್ನು ಗಮನಿಸೋಣ. ನಾನು ಒಂದು ಖಾಲಿ ನಿವೇಶನದ ಮಾಲೀಕತ್ವ ಹೊಂದಿದ್ದೇನೆ ಎಂದು ಭಾವಿಸಿ. ‘ಅ’ ಎಂಬ ವ್ಯಕ್ತಿ ರಾತ್ರೋರಾತ್ರಿ ಅದನ್ನು ವಶಕ್ಕೆ ಪಡೆದು, ಅಲ್ಲಿ ಕಟ್ಟಡ ನಿರ್ಮಾಣ ಆರಂಭಿಸುತ್ತಾನೆ. ನಾನು ತಕ್ಷಣ ಸಿವಿಲ್ ನ್ಯಾಯಾಲಯದ ಮೊರೆಹೋಗಿ, ‘ಅ’ನ ವಾದ ಆಲಿಸದೆಯೇ ಆತನಿಗೆ ಕಟ್ಟಡ ನಿರ್ಮಿಸುವುದಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರುತ್ತೇನೆ. ಆಗ ನ್ಯಾಯಾಧೀಶರು, ‘ಪ್ರತಿವಾದಿಗೆ ನಿವೇಶನದ ಮೇಲೆ ಹಕ್ಕು ಇಲ್ಲದಿದ್ದಲ್ಲಿ, ಆತ ಅಲ್ಲಿ ಕಟ್ಟಡ ನಿರ್ಮಿಸುವಂತಿಲ್ಲ’ ಎಂದು ಆದೇಶಿಸುತ್ತಾರೆ.

ಅದಾದ ನಂತರವೂ, ಪ್ರತಿವಾದಿಯು ಅಲ್ಲಿ ಕಟ್ಟಡ ನಿರ್ಮಾಣ ಮುಂದುವರಿಸುತ್ತಾನೆ ಎಂದು ಭಾವಿಸಿ. ಆಗ ನಾನು ಅವನ ವಿರುದ್ಧ ನ್ಯಾಯಾಂಗ ನಿಂದನೆಯ ಅರ್ಜಿ ಸಲ್ಲಿಸುತ್ತೇನೆ. ಆಗ ನಾನು ನ್ಯಾಯಾಲಯದಲ್ಲಿ, ‘ಪ್ರತಿವಾದಿಗೆ ಅಲ್ಲಿ ಕಟ್ಟಡ ನಿರ್ಮಿಸುವ ಹಕ್ಕು ಇರಲಿಲ್ಲ, ಹಕ್ಕು ಇರಲಿಲ್ಲ ಎಂಬುದನ್ನು ಆತ ಅರಿತಿದ್ದ, ತಡೆಯಾಜ್ಞೆಯ ಬಗ್ಗೆ ಆತನಿಗೆ ಗೊತ್ತಿತ್ತು, ಹೀಗಿದ್ದರೂ ಆತ ಅದನ್ನು ಧಿಕ್ಕರಿಸಿ ಮುಂದುವರಿದ’ ಎಂಬುದನ್ನು ಸಾಬೀತು ಮಾಡಬೇಕಾಗುತ್ತದೆ.

ಇಂತಹ ಪ್ರಕರಣಗಳಲ್ಲಿ ನ್ಯಾಯಾಂಗ ನಿಂದನೆಯನ್ನು ಸಾಬೀತು ಮಾಡುವುದು, ಆ ವ್ಯಕ್ತಿಗೆ ಆ ನಿವೇಶನದ ಮೇಲೆ ಹಕ್ಕಿಲ್ಲ ಎಂದು ಸಾಬೀತು ಮಾಡುವುದಕ್ಕಿಂತ ಹೆಚ್ಚು ಕಷ್ಟವಾಗಬಹುದು. ‘ಆ ನಿವೇಶನದಲ್ಲಿ ಪ್ರತಿವಾದಿಯು ಕಟ್ಟಡ ನಿರ್ಮಾಣ ಮಾಡಬಾರದು’ ಎಂದಷ್ಟೇ ಆದೇಶ ಇದ್ದರೆ, ಅಂತಹ ಆದೇಶವನ್ನು ಅನುಷ್ಠಾನಕ್ಕೆ ತರುವುದು ಹೆಚ್ಚು ಸುಲಭವಾಗುತ್ತದೆ.

ಮಾನನಷ್ಟ ಎಂದರೇನು ಎಂಬ ಪ್ರಶ್ನೆಯನ್ನು ಮತ್ತೆ ಕೇಳಿಕೊಳ್ಳೋಣ. ಇದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಲ್ಲದಿದ್ದರೂ, ವ್ಯಾಖ್ಯಾನಿಸುವುದು ಕಷ್ಟ. ಸಮಾಜದಲ್ಲಿನ ಋಜು ಮಾರ್ಗದ ವ್ಯಕ್ತಿಗಳ ಕಣ್ಣಿನಲ್ಲಿ ಇನ್ನೊಬ್ಬ ವ್ಯಕ್ತಿಯ ಘನತೆಯನ್ನು ತಗ್ಗಿಸುವಂತಹ ಹೇಳಿಕೆಯು ‘ಮಾನಹಾನಿಕರ’ ಎಂದು ಹಿಂದಿನಿಂದಲೂ ಭಾವಿಸಲಾಗಿದೆ. ಈ ರೀತಿಯ ಹೇಳಿಕೆಗೆ ಗುರಿಯಾದ ವ್ಯಕ್ತಿ, ಹಾಗೆ ಹೇಳಿದವನನ್ನು ಕಟಕಟೆಗೆ ಎಳೆದು, ಅವನಿಂದ ಹಣದ ರೂಪದಲ್ಲಿ ಪರಿಹಾರ ಕೇಳಬಹುದು. ಆದರೆ, ಹಾಗೆ ಹೇಳಿದ ವ್ಯಕ್ತಿಯು ತಾನು ಹೇಳಿದ್ದು ಸತ್ಯ ಅಥವಾ ಅದರಲ್ಲಿ ಬಹಳಷ್ಟು ಸತ್ಯವಿದೆ ಎಂದು ಸಾಬೀತು ಮಾಡಿದರೆ, ಮಾನನಷ್ಟದ ದೂರು ಬಿದ್ದುಹೋಗುತ್ತದೆ. ಮಾನನಷ್ಟ ಪ್ರಕರಣಗಳಲ್ಲಿ, ‘ಹೇಳಿಕೆ’ಯ ಉದ್ದೇಶ ಏನಿತ್ತು ಎಂಬುದು ಮುಖ್ಯವಲ್ಲ.

‘ಎ’ ಎಂಬ ವ್ಯಕ್ತಿಗೆ ‘ಬಿ’ ಎಂಬುವವ ಸಾರ್ವಜನಿಕವಾಗಿ ‘ಕಳ್ಳ’ ಎಂದು ಕರೆದರೆ, ಅದು ಸಾಂಪ್ರದಾಯಿಕ ದೃಷ್ಟಿಕೋನದ ಪ್ರಕಾರ ಮಾನನಷ್ಟಕ್ಕೆ ಸಮ. ಖಾಸಗಿ ವ್ಯಕ್ತಿಗಳ ಪಾಲಿಗೆ ಒಳ್ಳೆಯ ಹೆಸರು ಹೊಂದಿರುವುದು ಸಂಪತ್ತು ಹೊಂದಿರುವುದಕ್ಕೆ ಸಮ. ಆದರೆ ಆಧುನಿಕ ಕಾನೂನಿನ ಪ್ರಕಾರ, ಹೇಳಿಕೆಗಳು ಸಂದರ್ಭವನ್ನು ಆಧರಿಸಿ ವ್ಯಕ್ತಿಯ ಘನತೆಯನ್ನು ಋಜು ಮಾರ್ಗದ ಜನರ ಕಣ್ಣಿನಲ್ಲಿ ಕುಗ್ಗಿಸುವಂತಿದ್ದರೆ ಮಾತ್ರ ಅವು ಮಾನನಷ್ಟವೆಂದು ಪರಿಗಣಿತವಾಗುತ್ತವೆ.

ಹಿಂದಿನ ಉದಾಹರಣೆಯನ್ನು ಗಮನಿಸುವುದಾದರೆ, ‘ಎ’ ವ್ಯಕ್ತಿ ಕಳ್ಳ ಎಂದು ಕರೆಸಿಕೊಂಡ ತಕ್ಷಣ, ಅದು ಮಾನನಷ್ಟಕ್ಕೆ ಸಮ ಎನ್ನಲಾಗದು. ತಾನು ಈ ಹಿಂದೆ ಸಾರ್ವಜನಿಕವಾಗಿ ಕಳ್ಳನೆಂದು ಗುರುತಿಸಿಕೊಂಡಿಲ್ಲ, ‘ಬಿ’ ನೀಡಿದ ಹೇಳಿಕೆ ಸುಳ್ಳು ಎಂದು ‘ಎ’ ಪ್ರಮಾಣಪತ್ರದ ಮೂಲಕ ನ್ಯಾಯಾಲಯಕ್ಕೆ ಹೇಳಬೇಕು. ಅಷ್ಟು ಮಾಡದೆಯೇ ಸಿವಿಲ್ ಮಾನನಷ್ಟ ಮೊಕದ್ದಮೆ ನಡೆಸಲಾಗದು. ‘ಬಿ’ ಹೇಳಿಕೆ ಸುಳ್ಳು ಎಂದು ‘ಎ’ ತನ್ನ ಅರ್ಜಿಯಲ್ಲಿ ಹೇಳದಿದ್ದರೆ, ಆ ಮಾನನಷ್ಟ ಅರ್ಜಿ ತಿರಸ್ಕೃತವಾಗುತ್ತದೆ.

ಸಾರ್ವಜನಿಕ ಕಳಕಳಿ ಹಾಗೂ ಸಾರ್ವಜನಿಕ ಕರ್ತವ್ಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ನಿಭಾಯಿಸುವಾಗ ಮಾನನಷ್ಟಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಕಾನೂನುಗಳು ಸುಧಾರಣೆ ಕಂಡಿವೆ. ‘ಎ’ ಎಂಬ ಸಾರ್ವಜನಿಕ ಸೇವಕ ಅಕ್ರಮ ಸಂಬಂಧ ಹೊಂದಿ, ಅದನ್ನು ತನ್ನ ಕುಟುಂಬದಿಂದ ಮುಚ್ಚಿಟ್ಟು, ಮಾಧ್ಯಮಗಳು ಅದನ್ನು ಸಾರ್ವಜನಿಕರಿಗೆ ತಿಳಿಸಿದರೆ ಅದು ಮಾನನಷ್ಟಕ್ಕೆ ಸಮನಾಗುತ್ತದೆಯೇ? ಇಲ್ಲ. ‘ಎ’ ವ್ಯಕ್ತಿಗೆ ಅಕ್ರಮ ಸಂಬಂಧ ಇರುವ ಕಾರಣ, ಅದನ್ನು ಆತ ಸಾರ್ವಜನಿಕವಾಗಿ ಒಪ್ಪಿಕೊಳ್ಳಲು ಹಿಂದೇಟು ಹಾಕುವ ಕಾರಣ, ಆತನನ್ನು ಬ್ಲ್ಯಾಕ್‌ಮೇಲ್‌ಗೆ ಒಳಪಡಿಸಬಹುದು, ಆತ ಸಾರ್ವಜನಿಕ ಸೇವೆಯನ್ನು ಸರಿಯಾಗಿ ಮಾಡುವುದಕ್ಕೆ ಅಡ್ಡಿ ಉಂಟುಮಾಡಬಹುದು ಎಂದು ಮಾಧ್ಯಮಗಳು ವಾದ ಮಂಡಿಸಿದರೆ, ಅಂತಹ ವರದಿ ಮಾನಹಾನಿಕರ ಎಂದು ಕೋರ್ಟ್‌ಗಳು ಹೇಳಲಾರವು.

ಸಾರ್ವಜನಿಕ ರಂಗದಲ್ಲಿರುವ ವ್ಯಕ್ತಿಯ ಸಾರ್ವಜನಿಕ ಕರ್ತವ್ಯಗಳ ವಿಚಾರದಲ್ಲಿ ಆಧುನಿಕ ಕಾನೂನುಗಳು ಖಾಸಗಿ ವ್ಯಕ್ತಿಗಳಿಗೆ ಅನ್ವಯವಾಗುವುದಕ್ಕಿಂತ ಭಿನ್ನವಾಗಿ ಅನ್ವಯವಾಗುತ್ತವೆ. 1994ರಲ್ಲಿ ರಾಜಗೋಪಾಲ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘ಸರ್ಕಾರಗಳು ಸಿವಿಲ್ ಮಾನನಷ್ಟ ಮೊಕದ್ದಮೆ ದಾಖಲಿಸುವಂತಿಲ್ಲ’ ಎಂದು ಆದೇಶಿಸಿದೆ.

ಸಚಿವರೊಬ್ಬರು ವಿವಾಹೇತರ ಲೈಂಗಿಕ ಸಂಬಂಧ ಹೊಂದಿದ್ದು, ಅದನ್ನು ಮಾಧ್ಯಮಗಳು ಪ್ರಸಾರ ಮಾಡಿದಾಗ, ‘ಸಾರ್ವಜನಿಕರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಇದನ್ನು ಪ್ರಸಾರ ಮಾಡಲಾಗಿದೆ, ವಿವಾಹೇತರ ಸಂಬಂಧ ಹೊಂದಿರುವ ಸಚಿವರು ಅದನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿದ್ದಾರೆ, ಅದರಿಂದಾಗಿ ಅವರನ್ನು ಬೆದರಿಸುವ ಸಾಧ್ಯತೆ ಇದೆ, ಬೆದರಿಕೆಗೆ ಒಳಗಾಗಿ ಆ ಸಚಿವರು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಸಾಧ್ಯತೆಯೂ ಇದೆ’ ಎಂಬ ನಿಲುವು ಸಮರ್ಥನೀಯ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಯಾವ ಸರ್ಕಾರದ ಅವಧಿಯಲ್ಲಿಯೂ ಆರು ಜನ ಸಚಿವರು ನ್ಯಾಯಾಲಯದ ಕದ ತಟ್ಟಿ, ತಮ್ಮ ಕುರಿತ ಲೈಂಗಿಕ ದೃಶ್ಯಾವಳಿಗಳನ್ನು ಪ್ರಸಾರ ಮಾಡದಂತೆ ಮಾಧ್ಯಮಗಳಿಗೆ ಆದೇಶಿಸಬೇಕು ಎಂದು ಕೋರಿದ ಉದಾಹರಣೆ ಇಲ್ಲ. ಸಚಿವರು ಅಂತಹ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ, ಅದರ ಬಗ್ಗೆ ತಿಳಿಯುವ ಸಾರ್ವಜನಿಕ ಕುತೂಹಲವನ್ನು ಕಾನೂನು ಗುರುತಿಸುತ್ತದೆ.

ಲೇಖಕ: ಸುಪ್ರೀಂ ಕೋರ್ಟ್ ವಕೀಲ

ಚುರುಮುರಿ

ಸಿಂಗಲ್ ಹೆಂಡ್ತಿ ಚಾಲೆಂಜ್!

• ಬಿ.ಎನ್.ಮಲ್ಲೇಶ್

‘ಹಲೋ... ಎಮ್ಮೆಲ್ಲೆ ಸಾಹೇಬ್ರಾ? ನಾನಾ ಬ್ರೇಕಿಂಗ್ ನ್ಯೂಸ್ ಟೀವಿ ರಿಪೋಟ್ರು ತೆಪರೇಸಿ... ಸಿಂಗಲ್ ಹೆಂಡ್ತಿ ಚಾಲೆಂಜ್ ಬಗ್ಗೆ ಏನು ಹೇಳ್ತೀರಿ?’

‘ರೀ ನನಗಿರೋದು ಒಂದು ಮನೆ, ಒಬ್ಳೇ ಹೆಂಡ್ತಿ. ನಾನು ಏಕ ಪತ್ನಿ ವ್ರತಸ್ಥ ಕಣ್ರೀ...’

‘ಅಲ್ಲ ಸಾ, ಎಲ್ಲರ ಮನೆ ದೋಸೇನೂ ತೂತೇ ಅಂತಿದ್ರು... ತನಿಖೆಗೆ ನೀವು ರೆಡಿನಾ?’

‘ಏನ್ ತನಿಖೆ ಮಾಡ್ತಾರಪ್ಪ ಅವರು? ಇಲ್ಲದ್ದನ್ನ ಎಲ್ಲಿಂದ ತರ್ತಾರೆ? ಬೋಳು ತಲೆಗೆ ಗಂಟು ಹಾಕೋ ಕೆಲ್ಸ ಆಗುತ್ತೆ ಅಷ್ಟೆ...’

‘ಅಲ್ಲ ಎಲ್ರೂ ಅವರವರ ಆತ್ಮ ಮುಟ್ಟಿ ನೋಡ್ಕಂಡ್ರೆ ಗೊತ್ತಾಗುತ್ತಂತೆ?’

‘ನಿಮ್ ತಲೆ, ಕೆಲವರಿಗೆ ಆತ್ಮಾನೇ ಇರಲ್ಲಪ್ಪ, ಅವರಿಗೇನ್ ಮಾಡ್ತೀರಿ?’

‘ಮತ್ತೆ ನೀವು ಶೀಲವಂತರು, ಏಕ ಪತ್ನಿ ವ್ರತಸ್ಥರು ಅಂತ ಹೆಂಗೆ ಪ್ರೂವ್ ಮಾಡ್ತೀರಾ?’

‘ಹೆಂಗ್ ಮಾಡಬೇಕು? ದೇವರ ಮೇಲೆ ಆಣೆ ಇಡ್ಲಾ? ಒದ್ದೆ ಬಟ್ಟೇಲಿ ಬಂದು ಗಂಟೆ ಹೊಡೀಲಾ?’

‘ಅದೆಲ್ಲ ಮಾಮೂಲಿ ಸಾ, ಹಿಂದಿನ ಕಾಲದಲ್ಲಿ ಅಗ್ನಿ ಪರೀಕ್ಷೆ, ನಾಗಪರೀಕ್ಷೆ ಎಲ್ಲ ಮಾಡ್ತಿದ್ರಂತೆ...’

‘ಓ... ಅಂದ್ರೆ ನಾನೀಗ ಬೆಂಕಿ ಹಿಡ್ಕಾಬೇಕು, ಹುತ್ತಕ್ಕೆ ಕೈ ಹಾಕಿ ಹಾವು ಕಚ್ಚಲಿಲ್ಲ ಅಂತ ಪ್ರೂವ್ ಮಾಡ್ಬೇಕು ಅಲ್ವ? ನಿಮಗೆ ಮಾಡೋಕೆ ಕೆಲ್ಸ ಇಲ್ವ? ಇಡ್ರೀ ಫೋನು...’

ಎಮ್ಮೆಲ್ಲೆ ರೋಫ್‌ಗೆ ಬೆವರೊರೆಸಿಕೊಂಡ ತೆಪರೇಸಿ ಸೀದಾ ಮನೆಗೆ ಬಂದ. ಬಾಗಿಲಲ್ಲೇ ನಿಂತಿದ್ದ ಹೆಂಡ್ತಿ ಪಮ್ಮಿ ಕೇಳಿದಳು ‘ಏನ್ರಿ ಅದು ಸಿಂಗಲ್ ಹೆಂಡ್ತಿ ಚಾಲೆಂಜು?’

‘ಅಯ್ಯೋ ಸುಮ್ನಿರು ಮಾರಾಯ್ತಿ, ಅದ್ನೇ ಕೇಳಿ ಈಗಿನ್ನು ಬೈಸ್ಕಂಡ್ ಬಂದಿದೀನಿ’ ಎಂದ ತೆಪರೇಸಿ ಎಲ್ಲ ಡೀಟೇಲ್ಸ್ ಒಪ್ಪಿಸಿದ.

ಪಮ್ಮಿಗೆ ಆಶ್ಚರ್ಯ! ‘ಹೌದಾ? ಬೆಂಕಿ ಹಿಡ್ಕಂಡ್ರೆ ಏಕ ಪತ್ನಿ ವ್ರತಸ್ಥ ಅಂತ ಪ್ರೂವ್ ಆಗುತ್ತಾ? ಒಂದ್ನಿಮಿಷ ಇರಿ, ಕೆಂಪಗೆ ಕಬ್ಬಿಣ ಕಾಯಿಸ್ಕಂಡ್ ಬರ್ತೀನಿ...’

‘ಯಾರಿಗೆ? ಎಮ್ಮೆಲ್ಲೆ ಸಾಹೇಬ್ರಿಗಾ?’

‘ಅಲ್ಲ ನಿಮಗೆ... ಸಿಂಗಲ್ ಹೆಂಡ್ತಿ ಅಂತ ನೀವೂ ಪ್ರೂವ್ ಮಾಡಿ...’

ಸಂಗತ

ಉನ್ನತ ಶಿಕ್ಷಣ ಮತ್ತು ಸ್ವತಂತ್ರ ಚಿಂತನೆ

ಉದಾರ ಶಿಕ್ಷಣ ನೀಡುವ ಹೆಬ್ಬಯಕೆಯಿಂದ ಆರಂಭವಾದ ಖಾಸಗಿ ಸಂಸ್ಥೆಗಳ ಪ್ರಾಧ್ಯಾಪಕರು ಅಭಿಪ್ರಾಯ ಹತ್ತಿಕ್ಕಿಕೊಳ್ಳಬೇಕಾದ ಸ್ಥಿತಿ ಬಂದಿರುವುದು ಶೋಚನೀಯ

• ಡಾ. ಜ್ಯೋತಿ

ಯಾವುದೇ ರಾಜಕೀಯ ವ್ಯವಸ್ಥೆಗೆ ತನ್ನ ನಾಗರಿಕರು ಸ್ವಂತ ಆಲೋಚನೆಯನ್ನು ಬೆಳೆಸಿಕೊಂಡು, ಪ್ರಜ್ಞೆ ಮತ್ತು ಸ್ವಅರಿವಿನ ಮೂಲಕ ಪ್ರಶ್ನೆ ಮಾಡಲು ಆರಂಭಿಸಿ, ಈ ಧೋರಣೆಯನ್ನು ತನ್ನ ಸುತ್ತಲಿನ ಸಮಾಜಕ್ಕೆ ಹರಡಿದರೆ, ಕಳವಳವಾಗುವುದು ಸಹಜ. ಅದಕ್ಕಾಗಿಯೇ, ವ್ಯವಸ್ಥೆ ತನ್ನ ಸಿದ್ಧಾಂತಕ್ಕೆ ಅನುಗುಣವಾದ ಏಕಮುಖ ಚಿಂತನೆಯನ್ನು ಬೆಳೆಸಲು ಬಯಸುತ್ತದೆ. ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಪ್ರೇರಣೆಯಾದ ಗ್ರೀಕ್ ಸಮಾಜವೂ ಇದಕ್ಕೆ ಹೊರತಾಗಿರಲಿಲ್ಲ. ಅದಕ್ಕಾಗಿಯೇ, ಪ್ರಶ್ನೆ ಮಾಡಿದ ಮತ್ತು ಅದನ್ನು ಯುವಜನತೆಗೆ ಹೇಳಿಕೊಟ್ಟ ಸಾಕ್ರಟೀಸ್‌ಗೆ ವಿಷ ಕುಡಿದು ಸಾಯುವ ಶಿಕ್ಷೆ ನೀಡಿತು.

ವೈಯಕ್ತಿಕ ನೆಲೆಯನ್ನು ಮೀರಿ ಉನ್ನತ ಶಿಕ್ಷಣದ ವೇದಿಕೆಗೆ ಬಂದರೆ, ಅಲ್ಲಿ ಮೂಲತಃ ನಡೆಯಬೇಕಾದುದು, ವಿಭಿನ್ನ ಅಭಿಪ್ರಾಯಗಳ ಮಂಡನೆ, ಅವುಗಳ ನಡುವಿನ ಸೌಹಾರ್ದಯುತ ಚರ್ಚೆ ಹಾಗೂ ಇವುಗಳಿಂದ ಉತ್ಪನ್ನವಾಗುವ ಹೊಸ ಅರಿವು. ವಿಷಾದವೆಂದರೆ, ನಮ್ಮ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಅದು ನಡೆಯುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ, ಉನ್ನತ ಶಿಕ್ಷಣ ಇನ್ನೂ ಸಂಪೂರ್ಣವಾಗಿ ವ್ಯವಸ್ಥೆಯ ಹಿಡಿತದಲ್ಲಿರುವುದು. ಈ ಸಮಸ್ಯೆಗೆ ಅಮೆರಿಕ ತಕ್ಕಮಟ್ಟಿಗೆ ಪರಿಹಾರ ಕಂಡುಕೊಂಡಿದೆ. ಸರ್ಕಾರದ ಹಿಡಿತದಿಂದ ಅಲ್ಲಿನ ಬಹುಪಾಲು ವಿಶ್ವವಿದ್ಯಾಲಯಗಳು ಬಿಡಿಸಿಕೊಂಡಿವೆ. ಉದ್ಯಮಗಳ ಬಂಡವಾಳದ ಸಹಾಯದಿಂದ ಸ್ವಾಯತ್ತ ಸಂಸ್ಥೆಗಳಾಗಿ ಬೆಳೆದಿವೆ. ಇಲ್ಲಿನ ವಿಶೇಷವೆಂದರೆ, ಉದ್ಯಮಿಗಳು ಬಂಡವಾಳ ಹಾಕಿದರೂ ವಿಶ್ವವಿದ್ಯಾಲಯಗಳ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಬೇಲಿ ಹಾಕುವುದಿಲ್ಲ. ಹಾಗಾಗಿಯೇ, 91 ವರ್ಷದ ಭಾಷಾಶಾಸ್ತ್ರಜ್ಞ ನೋಮ್ ಚೋಮ್‌ಸ್ಕಿ ಸೇರಿದಂತೆ, ಹೆಚ್ಚಿನ ಪ್ರಾಧ್ಯಾಪಕರು ಕೆಲಸ ಕಳೆದುಕೊಳ್ಳುವ ಭಯವಿಲ್ಲದೆ ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಮುಕ್ತವಾಗಿ ಸಾರ್ವಜನಿಕವಾಗಿ ಹಂಚಿಕೊಳ್ಳುತ್ತಾರೆ. ಈ ಮೂಲಕ ನಿಜಾರ್ಥದ ‘ಉದಾರ ಶಿಕ್ಷಣ’ವನ್ನು, ಅಂದರೆ, ಪ್ರಶ್ನಿಸುವ ಮತ್ತು ಅಭಿಪ್ರಾಯ ಸ್ವಾತಂತ್ರ್ಯ ಹೊಂದಿದ ಶಿಕ್ಷಣವನ್ನು ಈ ಸಂಸ್ಥೆಗಳು ನೀಡುವ ಮೂಲಕ, ಜಗತ್ತಿನಾದ್ಯಂತ ಆಸಕ್ತ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರನ್ನು ಸೆಳೆಯುತ್ತಿವೆ.

ಇಂತಹ ಹೆಬ್ಬಯಕೆಯಿಂದ, 2014ರಲ್ಲಿ ಹರಿಯಾಣದ ಸೋನಿಪತ್‌ನಲ್ಲಿ ಸುಮಾರು 150 ಉದ್ಯಮಿಗಳ ಬಂಡವಾಳದಿಂದ ಸ್ಥಾಪನೆಯಾದ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆ, ಅಶೋಕ ವಿಶ್ವವಿದ್ಯಾಲಯ. ಈ ರೀತಿ ಸ್ವತಂತ್ರ ಚಿಂತನೆ ಮತ್ತು ಪ್ರಶ್ನಿಸುವ ಅರಿವನ್ನು ಜಾಗೃತಗೊಳಿಸುವ ಉದ್ದೇಶದಿಂದ ಸ್ಥಾಪಿತವಾದ ಅಲ್ಪಾವಧಿಯಲ್ಲಿಯೇ ಅಶೋಕ ವಿಶ್ವವಿದ್ಯಾಲಯ ದೇಶದಾದ್ಯಂತ ಮೆಚ್ಚುಗೆ ಗಳಿಸಿತ್ತು. ಮೂಲತಃ, ಶಿಕ್ಷಣ ಸಂಸ್ಥೆಗಳು ಹೆಸರು ಗಳಿಸುವುದು ಅಲ್ಲಿ ಸಿಗುವ ಶ್ರೇಷ್ಠ ಮಟ್ಟದ ಶಿಕ್ಷಣದಿಂದ ಮತ್ತು ಅದನ್ನು ಕೊಡುವ ಶಿಕ್ಷಕರಿಂದ. ಈ ದಿಸೆಯಲ್ಲಿ ಅಶೋಕ ವಿಶ್ವವಿದ್ಯಾಲಯಕ್ಕೆ ಹೆಸರು ತಂದುಕೊಟ್ಟವರಲ್ಲಿ ಮುಂಚೂಣಿಯಲ್ಲಿರುವ ಹೆಸರು ಪ್ರೊಫೆಸರ್ ಪ್ರತಾಪ್ ಬಾನು ಮೆಹ್ತಾ.

ಮೆಹ್ತಾ ಅವರ ಶೈಕ್ಷಣಿಕ ಹಿನ್ನೆಲೆಯ ಬಗ್ಗೆ ಹೇಳುವುದಾದರೆ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪದವಿ ಮತ್ತು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪಡೆದ ಮೆಹ್ತಾ, ಅಶೋಕ ವಿಶ್ವವಿದ್ಯಾಲಯ ಸೇರುವ ಮೊದಲು ನ್ಯೂಯಾರ್ಕ್ ವಿಶ್ವವಿದ್ಯಾಲಯ, ಹಾರ್ವರ್ಡ್ ವಿಶ್ವವಿದ್ಯಾಲಯ ಮತ್ತು ಭಾರತದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ಇವರ ಶೈಕ್ಷಣಿಕ ಸಾಧನೆಯಿಂದಾಗಿಯೇ ಅಶೋಕ ವಿಶ್ವವಿದ್ಯಾಲಯ ಅವರನ್ನು 2017ರಲ್ಲಿ ಕುಲಪತಿಯನ್ನಾಗಿ ನೇಮಿಸಿತು. ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ, ತಾತ್ವಿಕವಾಗಿ ಮತ್ತು ಸ್ಪಷ್ಟವಾಗಿ ಇಂಗ್ಲಿಷ್ ದೈನಿಕಗಳಲ್ಲಿ ನಿರಂತರವಾಗಿ ಪ್ರಕಟಿಸುತ್ತಾ ಬಂದ ಮೆಹ್ತಾ, ವ್ಯವಸ್ಥೆಯ ಕೆಂಗಣ್ಣಿಗೆ ಗುರಿಯಾಗಿದ್ದಂತೂ ನಿಜ. ಆದ್ದರಿಂದಲೇ 2019ರಲ್ಲಿ, ತಮ್ಮಿಂದಾಗಿ ಸಂಸ್ಥೆಗೆ ಇರುಸುಮುರುಸಾಗಬಾರದು ಆದರೆ, ತಮ್ಮ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಬಾರದು ಎನ್ನುವ ಉದ್ದೇಶದಿಂದ ಕುಲಪತಿ ಹುದ್ದೆಗೆ ರಾಜೀನಾಮೆ ಕೊಟ್ಟು ಪ್ರಾಧ್ಯಾಪಕರಾಗಿ ಮುಂದುವರಿದಿದ್ದರು.



ಆದರೆ, ಕಳೆದ ವಾರ, ಸಂಸ್ಥೆಯ ಸಂಸ್ಥಾಪಕರೊಂದಿಗೆ ನಡೆದ ಮಾತುಕತೆಯ ನಂತರ ಪ್ರಾಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳಿಗೆ ಕೊಟ್ಟ ಸಂಕ್ಷಿಪ್ತ ಹೇಳಿಕೆಯೆಂದರೆ, ‘ನನ್ನ ರಾಜಕೀಯ ಅಭಿಪ್ರಾಯಗಳು ಸಂಸ್ಥೆಗೆ ಭಾರವಾಗಿವೆ’. ಆದರೆ, ಅವರ ಮೌನವೇ ಹೆಚ್ಚು ಸಂಗತಿಗಳನ್ನು ಹೇಳುತ್ತಿದೆ. ಹಾಗಂತ, ರಾಜ್ಯಶಾಸ್ತ್ರ ವಿದ್ವಾಂಸರಾದ ಮೆಹ್ತಾ ಅವರ ರಾಜಕೀಯ ವಿಶ್ಲೇಷಣೆಗಳು ಸದಾ ಪಕ್ಷಾತೀತವಾಗಿದ್ದವು. ಈ ಹಿಂದೆ, ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ನೇಮಕಗೊಂಡ ನ್ಯಾಷನಲ್ ನಾಲೆಜ್ ಕಮಿಷನ್ ಸದಸ್ಯತ್ವದಿಂದ ಅಭಿಪ್ರಾಯ ಭಿನ್ನತೆಯಿಂದಾಗಿಯೇ ಹೊರನಡೆದಿದ್ದರು. ಈ ರೀತಿ, ಅವರು ಪಕ್ಷಗಳಿಂದ ಸದಾ ಅಂತರ ಕಾಯ್ದುಕೊಂಡೇ ತಮ್ಮ ಅಭಿಪ್ರಾಯ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದರು.

ಉದಾರ ಶಿಕ್ಷಣ ನೀಡುವ ಹೆಬ್ಬಯಕೆಯಿಂದ ಆರಂಭವಾದ ಖಾಸಗಿ ಸಂಸ್ಥೆಗಳ ಪ್ರಾಧ್ಯಾಪಕರು ಅಭಿಪ್ರಾಯ ಹತ್ತಿಕ್ಕಿಕೊಳ್ಳಬೇಕಾದ ಸ್ಥಿತಿ ಬಂದಿರುವುದು ಶೋಚನೀಯ. ಕೊನೆಯದಾಗಿ, ಯಾವುದೇ ಸಮಾಜದಲ್ಲಿ ಪ್ರಶ್ನಿಸುವ ಪ್ರಜ್ಞೆ ಬೆಳೆಸಿಕೊಂಡ ಬುದ್ಧಿಜೀವಿಗಳ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಕೊಡಲಿಯೇಟು ಬಿದ್ದರೆ, ಇನ್ನು ಯಾರ ಅಥವಾ ಯಾವ ವಿಚಾರಗಳಿಗೆ ಬೆಲೆಯಿದೆ ಎನ್ನುವುದು ಇಲ್ಲಿ ಚಿಂತಿಸಬೇಕಾದ ಪ್ರಶ್ನೆ.

ವಾಚಕರ ವಾಣಿ

ಕಾಳಸಂತೆಯಲ್ಲಿ ಮಾರಾಟ: ಹೊಸ ಸಂಗತಿಯಲ್ಲ

ಪಡಿತರ ಅಕ್ಕಿಯು ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು (ಪ್ರ.ವಾ., ಮಾರ್ಚ್ 25) ಸರ್ವೇ ಸಾಧಾರಣ ವಿಚಾರ. ಅಕ್ಕಿ ಮೂಟೆಗಳು ಕರ್ನಾಟಕ ಆಹಾರ ಪೂರೈಕೆ ನಿಗಮದ ಉಗ್ರಾಣಗಳಿಂದ ಪಾಲಿಶ್ ನೆಪದಲ್ಲಿ ಬಂಗಾರಪೇಟೆಯ ಅಕ್ಕಿ ಗಿರಣಿಗಳ ಮೂಲಕ ನೇರವಾಗಿ ಕಾಳಸಂತೆಗೆ ತಲುಪುತ್ತಿದ್ದುದು ಪತ್ತೆಯಾಗಿದೆ. ಚಾಲಕನ ಸಮೇತ ಲಾರಿಯನ್ನು ವಶಕ್ಕೆ ಪಡೆದಿದ್ದರೂ ಲಾರಿ ಮಾಲೀಕ ಮತ್ತು ಬೆಂಗಳೂರಿನ ಅಕ್ಕಿ ವರ್ತಕರೊಬ್ಬರು ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದ್ದರೂ ಅನಾಮಿಕರ ಮೇಲೆ ಎಫ್‌ಐಆರ್ ದಾಖಲಿಸಿರುವುದು ಸರಿಯಲ್ಲ. ಲಾರಿ ಚಾಲಕನನ್ನು ಪೊಲೀಸರು ಸರಿಯಾಗಿ ವಿಚಾರಿಸಿದರೆ ಎಲ್ಲಾ ಬಯಲಾಗುತ್ತದೆ. ಸೊಸೈಟಿಗಳಲ್ಲಿಯ ಪಡಿತರದಲ್ಲೂ ಅರ್ಧಭಾಗ ಕಾಳಸಂತೆಯಲ್ಲಿ ಹೋಟೆಲ್‌ಗಳಿಗೆ ಸರಬರಾಜು ಆಗುವುದು ಅರಿಯದ ಸಂಗತಿಯಲ್ಲ.

ಬಾಲಕೃಷ್ಣ, ಬೆಂಗಳೂರು

ಭಾಷೆ, ಸಂಸ್ಕೃತಿ: ದಿಟ್ಟ ಹೆಜ್ಜೆ ಇಡಬೇಕು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹರಾಗಿ ಕನ್ನಡಿಗರಾದ ದತ್ತಾತ್ರೇಯ ಹೊಸಬಾಳೆ ಅವರು ಆಯ್ಕೆ ಆಗಿರುವುದು ಸರಿಯಷ್ಟೆ. ಜನಸಂಘದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಶ್ಯಾಮ್ ಪ್ರಸಾದ್ ಮುಖರ್ಜಿ ಅವರು ಭಾರತೀಯ ಭಾಷೆಗಳೇ ಭಾರತದ ಶಕ್ತಿ ಎಂದು ಪ್ರತಿಪಾದಿಸಿದ್ದರು. ದುರಂತ ಎಂದರೆ, ಒಕ್ಕೂಟ ಭಾರತದ ಸಂವಿಧಾನ ಜಾರಿಯಾದ ದಿನದಿಂದ ಹಿಡಿದು ಇಂದಿನವರೆಗೂ ಅವ್ಯಾಹತವಾಗಿ ಹಿಂದಿಯೊಂದನ್ನು ಮೆರೆಸಿ, ಉಳಿದ ಭಾರತೀಯ ಭಾಷೆಗಳನ್ನು ಕಡೆಗಣಿಸಲಾಗಿದೆ.

ಭಾರತ ಸರ್ಕಾರದ ಸೇವೆಗಳು ಆಯಾ ರಾಜ್ಯ ಭಾಷೆಗಳಲ್ಲಿ ಸಿಗಬೇಕು, ಒಕ್ಕೂಟ ಸರ್ಕಾರ ನಡೆಸುವ ಕೇಂದ್ರೀಯ ನೇಮಕಾತಿಯ ಎಲ್ಲಾ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಅವಕಾಶ ಇರಬೇಕು. ಎಲ್ಲಾ ಬಗೆಯ ಉನ್ನತ ಶಿಕ್ಷಣವು ಆಯಾ ರಾಜ್ಯ ಭಾಷೆಗಳಲ್ಲಿ ಸಾಕಾರ ಆಗಬೇಕು. ಈ ದಿಸೆಯಲ್ಲಿ ದತ್ತಾತ್ರೇಯ ಹೊಸಬಾಳೆ ಅವರು ಗಂಭೀರ ಪ್ರಯತ್ನ ಮಾಡಬೇಕಿದೆ. ಕೇಂದ್ರದಲ್ಲಿನ ಈಗಿನ ಸರ್ಕಾರದ ಮೇಲೆ ಈ ದಿಸೆಯಲ್ಲಿ ಅವರು ಪ್ರಭಾವ ಬೀರಬೇಕು. ಭಾರತೀಯ ಸಂಸ್ಕೃತಿಯ ಚೆಲುವು ಇರುವುದೇ ಭಾರತೀಯ ಭಾಷೆಗಳಲ್ಲಿ. ಭಾಷೆ, ಸಂಸ್ಕೃತಿ ಎಂದು ಬರೀ ಭಾವನಾತ್ಮಕವಾಗಿ ಮಾತನಾಡಿದರೆ ಸಾಲದು. ಬದಲಾಗಿ ದಿಟ್ಟ ಹೆಜ್ಜೆಗಳನ್ನು ಇಡಬೇಕು. ಭಾಷೆಗಳ ಅಳಿವು ಎಂದರೆ ಭಾರತದ ಅಳಿವು ಎಂದೇ ಅರ್ಥ.

ಗಿರೀಶ್ ಮತ್ತೇರ, ಹನುಮಂತ ದೇವರ ಕಣಿವೆ, ಹೊಳಲ್ಕೆರೆ

ಪ್ರಜಾಪ್ರಭುತ್ವದ ಮೌಲ್ಯ ಉಳಿಸಿ

ವಿಧಾನಮಂಡಲ ಎಂದರೆ ದೇಗುಲ ಇದ್ದಂತೆ. ಅದು ಅತ್ಯಂತ ಪವಿತ್ರವಾದ ಸ್ಥಾನವೂ ಹೌದು ಎಂದು ನಂಬಿರುವ ರಾಜ್ಯದ ಪ್ರಜೆಗಳ ಮುಂದೆ ಈಗಿನ ಶಾಸಕರ, ಸಚಿವರ ವೈಯಕ್ತಿಕ ಚಾರಿತ್ರ್ಯಹರಣದ ಹೇಳಿಕೆಗಳು, ಪರಸ್ಪರ ತಿಕ್ಕಾಟಗಳು ಬಯಲಾಗುತ್ತಿವೆ. ಕಳೆದ ಒಂದು ವರ್ಷದಿಂದ ರಾಜ್ಯದ ಆರ್ಥಿಕ ವ್ಯವಸ್ಥೆ ನೆಲಕಚ್ಚಿದೆ, ಉದ್ಯೋಗ ಕಳೆದುಕೊಂಡು ಕುಳಿತಿದ್ದ ಅದೆಷ್ಟೋ ಕುಟುಂಬಗಳ ಪರಿಸ್ಥಿತಿ ಶೋಚನೀಯವಾಗಿದೆ.

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯ ಕುರಿತು ಸದನದಲ್ಲಿ ಗಂಭೀರವಾದ ಚರ್ಚೆ ಆಗಬೇಕಿತ್ತು. ಆದರೆ, ನಮ್ಮ ಜನಪ್ರತಿನಿಧಿಗಳು ಕೆಲವರು ಜನಹಿತದ ನೆಲೆಯಲ್ಲಿ ಅಸಂಬದ್ಧವೆನಿಸುವ ವಿಚಾರಗಳ ಬಗೆಗಿನ ಚರ್ಚೆಗೆ ಸದನದ ಸಮಯವನ್ನು ಬಳಸಿರುವುದು ಸರಿಯಲ್ಲ.

ಬಾಲಾಜಿ ಕುಂಬಾರ ಚಟ್ನಾಳ, ಔರಾದ

ಪಾಠ ಕಲಿಯುವ ಪ್ರಶ್ನೆಯೇ ಇಲ್ಲ

‘ಚೀನಾದಲ್ಲಿ ಗರೀಬಿ ಹಟಾವೊ’ ಕುರಿತು ವಸ್ತುನಿಷ್ಠವಾಗಿ ವಿವರಿಸಿರುವ (ಪ್ರ.ವಾ., ಮಾರ್ಚ್ 25) ಸುಧೀಂದ್ರ ಕುಲಕರ್ಣಿ, ಬಡತನದ ವಿರುದ್ಧದ ಹೋರಾಟದಲ್ಲಿ ಚೀನಾದಿಂದ ಸೂಕ್ತ ಪಾಠಗಳನ್ನು ಕಲಿತುಕೊಳ್ಳಬೇಕು ಎಂದು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರಗಳ ಮುಖ್ಯ ಕಾಳಜಿ ಬಡತನ ನಿವಾರಣೆ ಅಲ್ಲ.

ಕೆಲವು ರಾಜ್ಯಗಳ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ರಾಜಕೀಯ ನೇತಾರರು ಮತದಾರರಿಗೆ ಕೊಡುತ್ತಿರುವ ಭರವಸೆಗಳನ್ನು ಈ ಮಾತಿಗೆ ಸಮರ್ಥನೆಯಾಗಿ ನೋಡಬಹುದು. ನಮ್ಮ ಪಕ್ಷಗಳಿಗೆ ಆದ್ಯತೆಗಳು ಬೇರೆಯೇ ಇವೆ. ದೇವರು, ಧರ್ಮ, ದೇವಸ್ಥಾನ, ಪೂಜೆ ಪುನಸ್ಕಾರಗಳಂಥ ಭಾವನಾತ್ಮಕ ಸಂಗತಿಗಳೇ ಅವುಗಳಿಗೆ ಹೆಚ್ಚು ಪ್ರಿಯ. ಕಲರ್ ಟಿ.ವಿ., ಫ್ರಿಜ್, ವಾಷಿಂಗ್ ಮಷೀನ್, ಲ್ಯಾಪ್‌ಟಾಪ್‌ನಂತಹ ಉಡುಗೊರೆಗಳ ಪೂರೈಕೆಯ ಘೋಷಣೆಗಳೇ ಅವುಗಳಿಗೆ ಹೆಚ್ಚು ಲಾಭದಾಯಕ. ಬಡತನ ನಿವಾರಣೆಯಂತಹ ದೀರ್ಘಾವಧಿ ಯೋಜನೆಗಳು ಬೇಕಾಗಿಲ್ಲ. ಆದ್ದರಿಂದ ಲೇಖಕರ ಆಶಯದಂತೆ ಬಡತನ ನಿವಾರಣೆಗೆ ಚೀನಾದಿಂದ ಪಾಠ ಕಲಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಲಂಪಟತೆ ಚರ್ಚೆಗಿರುವುದೇ ಕಲಾಪ?

ತೀವ್ರ ಆರ್ಥಿಕ ಸಂಕಷ್ಟ, ಅವಶ್ಯಕ ಸಾಮಗ್ರಿಗಳ ವಿಪರೀತ ಬೆಲೆ ಹೆಚ್ಚಳ, ಕಾಡುತ್ತಿರುವ ನಿರುದ್ಯೋಗ, ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಹೆಚ್ಚಳ, ಕೋವಿಡ್ ಹಾವಳಿ... ಹೀಗೆ ಅತ್ಯಂತ ತುರ್ತಿನ ನೂರಾರು ವಿಷಯಗಳು ರಾಜ್ಯವನ್ನು ದಹಿಸುತ್ತಿವೆ. ಇಂತಹ ಹೊತ್ತಲ್ಲಿ ಜನರ ಕಡು ಸಂಕಷ್ಟಗಳನ್ನು ವಿಧಾನಸಭೆ ಕಲಾಪಗಳಲ್ಲಿ ಚರ್ಚಿಸಿ ಪರಿಹಾರವನ್ನು ಕಂಡುಕೊಳ್ಳಬೇಕಿತ್ತು. ಆದರದು ಲಂಪಟತೆ, ಲಜ್ಜೆಗೇಡಿ ನಡವಳಿಕೆ ಕುರಿತ ಚರ್ಚೆಯಿಂದಲೇ ಮಣ್ಣುಪಾಲಾಯ್ತು! ಜನರ ಕೋಟ್ಯಂತರ ರೂಪಾಯಿ ತೆರಿಗೆ ಹಣ ಈ ಮೂಲಕ ನೀರುಪಾಲಾಯ್ತು. ಇಂತಹವರನ್ನು ವಿಧಾನಸಭೆಗೆ ಆರಿಸಿ ಕಳಿಸಿದ್ದಕ್ಕೆ ಮತ್ತೊಮ್ಮೆ ಸಾರ್ವಜನಿಕರು, ಅದರಲ್ಲೂ ಮಹಿಳೆಯರು ತಮ್ಮ ಬಗ್ಗೆಯೇ ನಾಚುವಂತಾಯ್ತು.

ಅಸಹ್ಯದ ಪರಮಾವಧಿ ತಲುಪಿರುವ ರಾಜಕಾರಣಕ್ಕೆ ಇದು ಇನ್ನೊಂದು ಉದಾಹರಣೆ. ಲಂಗುಲಗಾಮಿಲ್ಲದ ಲಂಪಟತೆಯ ಚರ್ಚೆಗಳು ಮಹಿಳೆಯರ ಬಗ್ಗೆ ಕನಿಷ್ಠ ಗೌರವವೂ ಇಲ್ಲದಂತಹ ಲಜ್ಜೆಗೇಡಿತನದ್ದಾಗಿರುವುದಂತೂ ಅಕ್ಷಮ್ಯ. ತಮ್ಮ ನುಡಿಮುತ್ತುಗಳನ್ನು ನಾಡ ಜನರು ಎಚ್ಚರಿಕೆಯಿಂದ ಗಮನಿಸುತ್ತಿದ್ದಾರೆ, ತಮ್ಮ ನಡೆಗೆ ಹೇಸುತ್ತಿದ್ದಾರೆಂಬ ಕನಿಷ್ಠ ತಿಳಿವಳಿಕೆಯೂ ಇಲ್ಲದ, ತಮ್ಮ ನಿಜ ಕರ್ತವ್ಯ ಮರೆತ ಇಂತಹ ಜನಪ್ರತಿನಿಧಿಗಳಿಗೆ ನಮ್ಮ ಧಿಕ್ಕಾರವಿದೆ.

ರೂಪ ಹಾಸನ, ಹಾಸನ, **ಪ್ರೊ. ಸ.ಉಷಾ,** ಶಿವಮೊಗ್ಗ, **ನಂದಿನಿ ಜಯರಾಂ,** ಮಂಡ್ಯ, **ಶಾರದಾ ಗೋಪಾಲ,** ಧಾರವಾಡ, **ಸ್ವರ್ಣ ಭಟ್,** ಮಂಗಳೂರು, **ಡಿ.ನಾಗಲಕ್ಷ್ಮಿ,** ಬಳ್ಳಾರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಸಿಕೆ ಪೋಲು ಕಡಿವಾಣ ಬೇಕು

ಲಸಿಕೆ ಪೋಲು ಎಂದರೇನು?

ಯಾವುದೇ ಲಸಿಕೆ ನೀಡಿಕೆ ಕಾರ್ಯಕ್ರಮದಲ್ಲಿ, ಲಸಿಕೆ ನೀಡುವಲ್ಲಿ ಹಲವು ಡೋಸ್‌ಗಳು ಪೋಲಾಗುತ್ತವೆ. ಲಸಿಕಾ ಕೇಂದ್ರಗಳಿಗೆ ಪೂರೈಕೆಯಾದ ಡೋಸ್‌ಗಳು ಮತ್ತು ಜನರಿಗೆ ನೀಡಲಾದ ಡೋಸ್‌ಗಳ ನಡುವಣ ವ್ಯತ್ಯಾಸವೇ ವ್ಯಾಕ್ಸಿನ್ ವೇಸ್ಟೇಜ್ ಅಥವಾ ಲಸಿಕೆ ಪೋಲು. ಕೋವಿಡ್‌-19 ಲಸಿಕೆ ಕಾರ್ಯಕ್ರಮದಲ್ಲಿ ವಿಪರೀತ ಪ್ರಮಾಣದಲ್ಲಿ ಲಸಿಕೆ ಪೋಲಾಗುತ್ತಿದೆ.

ಯಾವುದೇ ಲಸಿಕೆ ಕಾರ್ಯಕ್ರಮದಲ್ಲೂ ಅಗತ್ಯವಿರುವಷ್ಟು ಡೋಸ್‌ಗಳಿಗಿಂತ, ಹೆಚ್ಚು ಡೋಸ್‌ಗಳನ್ನು ಒದಗಿಸಲಾಗುತ್ತದೆ. ಡೋಸ್‌ಗಳು ವ್ಯರ್ಥವಾದರೆ, ಅಗತ್ಯವಿರುವಷ್ಟು ಮಂದಿಗೆ ಲಸಿಕೆ ನೀಡಲು ಸಾಧ್ಯವಾಗುವುದಿಲ್ಲ. ಹೀಗೆ ಪೋಲಾಗುವ ಡೋಸ್ ಪ್ರಮಾಣವನ್ನು ಮೊದಲೇ ಅಂದಾಜು ಮಾಡಲಾಗುತ್ತದೆ. ಇದನ್ನು ಲಸಿಕೆ ಪೋಲು ಅಂದಾಜು ಎಂದು ಕರೆಯಲಾಗುತ್ತದೆ. ಈ ಅಂದಾಜಿನಷ್ಟು ಡೋಸ್‌ಗಳನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ. ಎಲ್ಲಾ ಲಸಿಕೆ ಕಾರ್ಯಕ್ರಮದಲ್ಲಿ ಇದು ಸಾಮಾನ್ಯ. ಆದರೆ, ಈ ಅಂದಾಜನ್ನೂ ಮೀರಿ ಹೆಚ್ಚುವರಿ ಡೋಸ್‌ಗಳು ಪೋಲಾದರೆ ಅದು ಕಳವಳಕಾರಿ ವಿಷಯ. ಇದರಿಂದ ಹಣ, ಮಾನವ ಶ್ರಮ, ಸಮಯ ವ್ಯರ್ಥವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಲಸಿಕೆ ಕಾರ್ಯಕ್ರಮವು ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನಕ್ಕೆ ಬರುವುದಿಲ್ಲ.

23 ಲಕ್ಷ ಡೋಸ್ ಪೋಲು

ಭಾರತದಲ್ಲಿ ಕೋವಿಡ್‌-19 ತಡೆಗಟ್ಟಲು ಅತ್ಯಂತ ದೊಡ್ಡಮಟ್ಟದ ಲಸಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ. ಪ್ರತಿದಿನ 10 ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕುವ ಗುರಿ ಹಾಕಿಕೊಳ್ಳಲಾಗಿದೆ. ಈವರೆಗೆ ಪ್ರತಿದಿನ ಲಸಿಕೆ ಹಾಕಿಕೊಳ್ಳುತ್ತಿರುವವರ ಸರಾಸರಿ ಸಂಖ್ಯೆ 5.4 ಲಕ್ಷವಿದೆ. ದೊಡ್ಡ ಲಸಿಕೆ ಕಾರ್ಯಕ್ರಮವಾದ ಕಾರಣ ಪೋಲಾದ ಲಸಿಕೆಗಳ ಪ್ರಮಾಣವೂ ಹೆಚ್ಚು. ಅಗತ್ಯವಿರುವಷ್ಟು ಲಸಿಕೆಗಳನ್ನು ಲಸಿಕಾ ಕೇಂದ್ರಗಳಿಗೆ ಪೂರೈಕೆ ಮಾಡಲಾಗುತ್ತಿದೆ. ಮಾರ್ಚ್ ಮೂರನೇ ವಾರದವರೆಗೆ ದೇಶದ ಎಲ್ಲಾ ರಾಜ್ಯಗಳಿಗೆ 7 ಕೋಟಿ ಡೋಸ್ ಲಸಿಕೆಗಳನ್ನು ಪೂರೈಕೆ ಮಾಡಲಾಗಿದೆ. ಇದರಲ್ಲಿ 23 ಲಕ್ಷ ಡೋಸ್‌ಗಳಷ್ಟು ಲಸಿಕೆ ಪೋಲಾಗಿವೆ.

ನೋಂದಣಿ ಮಾಡಿಕೊಂಡವರಲ್ಲಿ ಶೇ 40ರಷ್ಟು ಜನರು ಲಸಿಕೆ ಹಾಕಿಸಿಕೊಳ್ಳಲು ಬರುತ್ತಿಲ್ಲ. ಈ ಕಾರಣದಿಂದಲೇ ಕೋವಿಡ್ ಲಸಿಕೆಗಳು ಪೋಲಾಗುತ್ತಿವೆ. ಈಗ ಭಾರತದಲ್ಲಿ ವ್ಯರ್ಥ ಲಸಿಕೆಯ ಪ್ರಮಾಣವು ಸ್ವೀಕಾರಾರ್ಹ ಮಟ್ಟಕ್ಕಿಂತ ಹೆಚ್ಚು ಇದೆ. ಹೀಗಾಗಿಯೇ ಈ ಬಗ್ಗೆ ತೀವ್ರ ಕಳವಳ ವ್ಯಕ್ತವಾಗಿದೆ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಈಚೆಗಷ್ಟೇ ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಪೋಲಾಗುತ್ತಿರುವ ಲಸಿಕೆಗಳ ಪ್ರಮಾಣವನ್ನು ಕಡಿಮೆ ಮಾಡಿ ಎಂದು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮೋದಿ ಅವರು ಕರೆ ನೀಡಿದ್ದರು.

ದೇಶದ ಕೆಲವು ರಾಜ್ಯಗಳಲ್ಲಿ ಲಸಿಕೆ ಪೋಲಿನ ಪ್ರಮಾಣವು, ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು ಇದೆ. ಹೀಗಾಗಿ, ತಜ್ಞರ ಶಿಫಾರಸಿನಂತೆ ಲಸಿಕೆ ಕಾರ್ಯಕ್ರಮದಲ್ಲಿ ತುಸು ಬದಲಾವಣೆಯಾಗಿದೆ.

ಕೆಲವೇ ರಾಜ್ಯಗಳಲ್ಲಿ ಪೋಲು ಪ್ರಮಾಣ ಅಧಿಕ

ತೆಲಂಗಾಣ, ಆಂಧ್ರಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಲಸಿಕೆಗಳ ಪೋಲಿನ ಪ್ರಮಾಣ ಹೆಚ್ಚು. ಅತಿಹೆಚ್ಚು ಲಸಿಕೆ ಪೋಲು ಪ್ರಮಾಣ ಇರುವ ರಾಜ್ಯಗಳಲ್ಲಿ ಪಟ್ಟಿಯಲ್ಲಿ ಕರ್ನಾಟಕವು ನಾಲ್ಕನೇ ಸ್ಥಾನದಲ್ಲಿ ಇದೆ. ಈ ರಾಜ್ಯಗಳಲ್ಲಿ ಲಸಿಕೆ ಪೋಲಿನ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು. ಈ ಎಲ್ಲಾ ರಾಜ್ಯಗಳು ಜನಸಂಖ್ಯೆ ಹೆಚ್ಚು ಇರುವ ರಾಜ್ಯಗಳಾಗಿವೆ.

ಈ ರಾಜ್ಯಗಳಲ್ಲಿ ಲಸಿಕೆ ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನ ಆಗುತ್ತಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ ಎಂದು ಐಸಿಎಂಆರ್‌ನ ಅಧ್ಯಯನ ವರದಿಗಳು ಹೇಳಿವೆ. ಪ್ರತಿ ಬಾಟಲಿಯಲ್ಲಿ ಇರುವ ಡೋಸ್‌ಗಳನ್ನು ನೀಡಬಹುದಾದಷ್ಟು ಜನರು ಬರುವುದನ್ನು ಕಾಯದೆಯೇ ಲಸಿಕೆ ಹಾಕಲಾಗುತ್ತಿದೆ. ಬಾಟಲಿಯಲ್ಲಿ ಉಳಿದ ಡೋಸ್‌ಗಳನ್ನು ನಿಗದಿತ ಅವಧಿಯೊಳಗೆ ಬಳಸಲಾಗುತ್ತಿಲ್ಲ. ಇದರಿಂದ ಡೋಸ್‌ಗಳು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಪ್ರತಿ ಬಾಟಲಿಯಲ್ಲಿ ಒಂದರಿಂದ ಒಂದೂವರೆ ಡೋಸ್‌ನಷ್ಟು ಲಸಿಕೆ ಪೋಲಾಗುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಲಸಿಕೆ ಹಾಕಿಸಿಕೊಳ್ಳುವವರ ಸಂಖ್ಯೆಯ ಗುರಿ ಮುಟ್ಟುವ ಸಲುವಾಗಿ ಈ ರಾಜ್ಯಗಳಲ್ಲಿ, ಕೇಂದ್ರಗಳಿಗೆ ಬಂದವರಿಗೆಲ್ಲಾ ಲಸಿಕೆ ನೀಡಲಾಗಿದೆ. ಹೀಗೆ ತರಾತುರಿಯಲ್ಲಿ ಲಸಿಕೆ ನೀಡಿದ್ದರಿಂದ ಪ್ರತಿ ಬಾಟಲಿಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಲು ಸಾಧ್ಯವಾಗಿಲ್ಲ. ಮೂರು ತಿಂಗಳಲ್ಲಿ 30 ಕೋಟಿಗೂ ಹೆಚ್ಚು ಜನರಿಗೆ ಲಸಿಕೆ ನೀಡುವ ಗುರಿ ಇತ್ತು. ಈ ಅವಧಿಯಲ್ಲಿ 60 ಕೋಟಿಗೂ ಹೆಚ್ಚು ಡೋಸ್‌ಗಳ ಅವಶ್ಯಕತೆ ಇತ್ತು. ಅದಕ್ಕೆ ಅನುಗುಣವಾಗಿ ಪ್ರತಿ ಲಸಿಕಾ ಕೇಂದ್ರಕ್ಕೆ ಅಗತ್ಯವಿದ್ದಷ್ಟು ಲಸಿಕೆಗಳನ್ನು ಪೂರೈಸಲಾಗಿದೆ. ಆದರೆ ನಿರೀಕ್ಷಿತ ಸಂಖ್ಯೆಯಲ್ಲಿ ಜನರು ಬಾರದ ಕಾರಣ ಲಸಿಕೆಗಳನ್ನು ಬಳಸಲು ಸಾಧ್ಯವಾಗಿಲ್ಲ. ಈ ಲಸಿಕೆಗಳ ಅವಧಿ ಮುಗಿದ ಕಾರಣ, ಅವನ್ನು ಬಿಸಾಡಲಾಗಿದೆ ಎಂದು ಐಸಿಎಂಆರ್ ಹೇಳಿದೆ.

ಲಸಿಕೆ ಪೋಲಾಗುವುದು ಹೇಗೆ?

ಎರಡು ರೀತಿಯಲ್ಲಿ ಲಸಿಕೆ ಪೋಲಾಗುತ್ತದೆ.

1. ತೆರೆಯದ ಬಾಟಲಿಯ ಲಸಿಕೆಯು ಪೋಲಾಗಲು ಹಲವು ಕಾರಣಗಳಿವೆ. ಲಸಿಕೆಯು ಎಕ್ಸ್‌ಪೈರಿ (ಮುಕ್ತಾಯ ದಿನ) ಆಗಿದ್ದರೆ; ಲಸಿಕೆಯು ಶಾಖಕ್ಕೆ ಒಡ್ಡಿಕೊಂಡಿದ್ದರೆ; ಲಸಿಕೆ ಹೆಪ್ಪುಗಟ್ಟಿದ್ದರೆ; ಲಸಿಕೆಯ ಬಾಟಲಿ ಒಡೆದಿದ್ದರೆ; ಲಸಿಕೆಯು ಕಳ್ಳತನವಾಗಿದ್ದರೆ ಲಸಿಕೆಯು ಪೋಲಾಗುತ್ತದೆ.

2. ಬಾಟಲಿ ಮುಚ್ಚಳ ತೆರೆದ ಲಸಿಕೆಯು ಪೋಲಾಗಲೂ ಕಾರಣಗಳಿವೆ. ಲಸಿಕೆ ನೀಡುವ ಅಂದಿನ ಅವಧಿಯು (ಸೆಷನ್) ಕೊನೆಯಾಗಿದ್ದಲ್ಲಿ; ಬಾಟಲಿಯಿಂದ ಪೂರ್ಣ ಪ್ರಮಾಣದ ಡೋಸ್ ಅನ್ನು ತೆಗೆಯಲು ಸಾಧ್ಯವಾಗದಿದ್ದಲ್ಲಿ; ತೆರೆದ ಬಾಟಲುಗಳು ನೀರಿನಲ್ಲಿ ಮುಳುಗಿದಾಗ; ಲಸಿಕೆಯು ಕಲಬೆರಕೆ ಆಗಿದೆ ಎಂಬ ಶಂಕೆ ಉಂಟಾದಲ್ಲಿ; ಲಸಿಕೆ ನೀಡುವ ಪ್ರಕ್ರಿಯೆಯಲ್ಲಿನ ಲೋಪಗಳಿಂದ ಲಸಿಕೆಯು ಪೋಲಾಗುವ ಸಾಧ್ಯತೆಯಿರುತ್ತದೆ.



ನಿಯಂತ್ರಣ ಕ್ರಮಗಳು

- ಅಗತ್ಯವಿರುವಷ್ಟು ಔಷಧ ತುಂಬಿಸಲು, ಲಸಿಕೆ ಬಾಟಲಿಯ ಗಾತ್ರವನ್ನು ಬದಲಿಸುವುದು
- ಮೊದಲು ಉತ್ಪಾದನೆಯಾದ ಲಸಿಕೆಯನ್ನು ಮೊದಲ ಹಂತದಲ್ಲಿ ಪೂರೈಸುವುದು
- ಅಗತ್ಯವಿರುವಷ್ಟು ಲಸಿಕೆಗಳಿಗೆ ಬೇಡಿಕೆ ಸಲ್ಲಿಸಿ, ಅವುಗಳನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳುವ ಕ್ರಮ
- ಒಂದು ಲಸಿಕಾ ಕೇಂದ್ರದಲ್ಲಿ ಒಂದು ಅವಧಿಯಲ್ಲಿ ಇಷ್ಟೇ ಲಸಿಕೆ ನೀಡಬೇಕು ಎಂಬ ನಿಯಮವನ್ನು ಬದಲಾಯಿಸುವುದು
- ಲಸಿಕೆಗಳ ಶೀತಲೀಕರಣಕ್ಕೆ ಆದ್ಯತೆ ನೀಡಿ, ಲಸಿಕೆಯು ಶಾಖಕ್ಕೆ ಒಡ್ಡಿಕೊಳ್ಳದಂತೆ ನೋಡಿಕೊಳ್ಳುವುದು
- ಲಸಿಕೆಯನ್ನು ನೀಡುವಾಗ, ಅದು ವ್ಯರ್ಥವಾಗದ ರೀತಿಯ ಅಭ್ಯಾಸಗಳನ್ನು ಸಿಬ್ಬಂದಿಯು ಬೆಳೆಸಿಕೊಳ್ಳಬೇಕು
- ಸಾಗಾಟದಲ್ಲಿ ಅವಘಡಗಳು ಸಂಭವಿಸದಂತೆ ತಡೆಯುವುದೂ ಸೇರಿದಂತೆ ಲಸಿಕೆ ನಿರ್ವಹಣೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು

ಆಧಾರ: ಪಿಟಿಐ, ಪಿಐಬಿ, ಡಬ್ಲ್ಯುಎಚ್‌ಒ

ಲಾಕ್‌ಡೌನ್ ಹಿನ್ನೋಟ

ಜಗತ್ತನ್ನೇ ತಲ್ಲಣಗೊಳಿಸಿದ ಕೊರೊನಾ ವೈರಾಣು ಹರಡುವಿಕೆ ತಡೆಯುವುದಕ್ಕಾಗಿ ಇಡೀ ದೇಶದ ಮೇಲೆ ಲಾಕ್‌ಡೌನ್ ಹೇರಿ ವರ್ಷ ಕಳೆದಿದೆ. 2020ರ ಮಾರ್ಚ್ 25ರಂದು ಲಾಕ್‌ಡೌನ್ ಆರಂಭವಾಗದಾಗ 525 ಪ್ರಕರಣಗಳಷ್ಟೇ ಇದ್ದವು. ಲಾಕ್‌ಡೌನ್, ಅನ್‌ಲಾಕ್ ಮತ್ತು ನಂತರದ ದಿನಗಳಲ್ಲಿಯೂ ಪ್ರಕರಣಗಳು ಏರುತ್ತಲೇ ಹೋದವು. ಒಂದೆರಡು ದಿನಗಳಲ್ಲಿ ಲಕ್ಷವನ್ನೂ ದಾಟಿತ್ತು ಈ ಸಂಖ್ಯೆ. ಕಳೆದ ವರ್ಷದ ಕೊನೆಯ ಹೊತ್ತಿಗೆ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಆರಂಭವಾಯಿತು. ಲಾಕ್‌ಡೌನ್‌ಗೆ ವರ್ಷ ಪೂರ್ತಿಯಾಗುವ ಹೊತ್ತಿಗೆ ಪ್ರಕರಣಗಳು ಮತ್ತೆ ಏರುತ್ತಿವೆ. ನಿಯಂತ್ರಣಕ್ಕೆ ಕಠಿಣ ಕ್ರಮಗಳ ಅನಿವಾರ್ಯ ಎದುರಾಗಿದೆ. ಆದರೆ, ಕಳೆದ ವರ್ಷದ ಲಾಕ್‌ಡೌನ್‌ನಿಂದಾದ ಕಷ್ಟ ನಷ್ಟಗಳು ಈಗಲೂ ಮುಂದುವರಿದಿವೆ:

ವರ್ಷದ ಹಿಂದೆ ಕಾಲ್ನಡಿಗೆಯಲ್ಲಿಯೇ ಊರಿನತ್ತ ಸಾಗಿದ ವಲಸೆ ಕಾರ್ಮಿಕರು

ಗ್ರಾಮೀಣ ಜನರ ಕಳವಳ

ಲಾಕ್‌ಡೌನ್ ಮತ್ತು ನಂತರದ ದಿನಗಳಲ್ಲಿ ಆದಾಯ ಮತ್ತು ಜೀವನೋಪಾಯವನ್ನು ಉಳಿಸಿಕೊಳ್ಳುವುದೇ ಗ್ರಾಮೀಣ ಪ್ರದೇಶದ ಜನರ ಬಹುದೊಡ್ಡ ಕಳವಳವಾಗಿತ್ತು ಎಂದು ಇಂಡಿಯನ್ ಸ್ಕೂಲ್ ಆಫ್ ಡೆವಲಪ್‌ಮೆಂಟ್ ಮ್ಯಾನೇಜ್‌ಮೆಂಟ್ (ಐಎಸ್‌ಡಿಎಂ) ಮತ್ತು ಐಇಂಪ್ಯಾಕ್ಟ್ ಎಂಬ ಎನ್‌ಜಿಒ ನಡೆಸಿದ ಸಮೀಕ್ಷೆಯಲ್ಲಿ ಜನರು ಹೇಳಿಕೊಂಡಿದ್ದಾರೆ. 10 ರಾಜ್ಯಗಳ 900 ಗ್ರಾಮಗಳಲ್ಲಿ ಈ ಸಮೀಕ್ಷೆ ನಡೆಸಲಾಗಿದೆ.

ಆಹಾರ ಮತ್ತು ಕುಡಿಯುವ ನೀರಿನ ಲಭ್ಯತೆ, ಮಕ್ಕಳ ಶಿಕ್ಷಣದ ಮೇಲೆ ಆದ ಪರಿಣಾಮ ಬಹುದೊಡ್ಡ ಸಮಸ್ಯೆಗಳಾಗಿದ್ದವು. ಸಮೀಕ್ಷೆಗೆ ಒಳಗಾದ ಶೇ 17ರಷ್ಟು ಮಂದಿಗೆ ಮಾತ್ರ ತಮ್ಮ ಪ್ರಾಥಮಿಕ ಆದಾಯ ಮೂಲವನ್ನು ಉಳಿಸಿಕೊಳ್ಳಲು ಸಾಧ್ಯವಾಗಿತ್ತು.

ದೌರ್ಜನ್ಯ ಹೆಚ್ಚಳ

ಲಾಕ್‌ಡೌನ್ ಅವಧಿಯಲ್ಲಿ ಮಹಿಳೆಯರ ಮೇಲೆ ಮನೆಯಲ್ಲಿ ನಡೆಯುತ್ತಿದ್ದ ದೌರ್ಜನ್ಯ ಹೆಚ್ಚಾಗಿದೆ. ಇದಕ್ಕೆ ಸಂಬಂಧಿಸಿ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಬಂದ ದೂರುಗಳ ಸಂಖ್ಯೆಯೂ ಏರಿಕೆಯಾಗಿದೆ. 2019ರಲ್ಲಿ 2,960 ದೂರುಗಳು ಬಂದಿದ್ದವು. ಲಾಕ್‌ಡೌನ್ ಹೇರಲಾದ 2020ರಲ್ಲಿ ಈ ದೂರುಗಳ ಸಂಖ್ಯೆ 5,297ಕ್ಕೆ ಏರಿದೆ. ಲಾಕ್‌ಡೌನ್ ತೆರವಾದ ಬಳಿಕವೂ ಇದೇ ಪ್ರವೃತ್ತಿ ಮುಂದುವರಿದಿದೆ.

ದೌರ್ಜನ್ಯದ 19,730 ಪ್ರಕರಣಗಳು 2019ರಲ್ಲಿ ದಾಖಲಾಗಿದ್ದವು. 2020ರಲ್ಲಿ ಇದು 23,722ಕ್ಕೆ ಏರಿದೆ. ಲಾಕ್‌ಡೌನ್ ನಂತರ ಪ್ರತಿ ತಿಂಗಳೂ 2,000ಕ್ಕಿಂತ ಹೆಚ್ಚು ದೂರುಗಳು ಬರುತ್ತಿವೆ. ಇದರಲ್ಲಿ ನಾಲ್ಕನೇ ಒಂದರಷ್ಟು ಮನೆಯಲ್ಲಿನ ಹಿಂಸೆಗೆ ಸಂಬಂಧಿಸಿದ್ದೇ ಆಗಿವೆ. ಈ ವರ್ಷ ಜನವರಿಯಿಂದ ಮಾರ್ಚ್ 25ರವರೆಗೆ ಆಯೋಗಕ್ಕೆ ಕೌಟುಂಬಿಕ ಹಿಂಸೆಯ 1,463 ದೂರುಗಳು ಬಂದಿವೆ.

ವಾಕ್ಸಮರವೂ ವರ್ಚುವಲ್

ಕಳೆದ ವರ್ಷದ ಮಾರ್ಚ್ 25ರ ನಂತರದ ದಿನಗಳಲ್ಲಿ ರಾಜಕೀಯ ಚಟುವಟಿಕೆಗಳು ಮತ್ತು ನಾಯಕರ ನಡುವಣ ವಾಕ್ಸಮರ ಬಹುತೇಕ ವರ್ಚುವಲ್ ಆಗಿಬಿಟ್ಟಿತ್ತು. ಭಾಷಣಗಳು, ಮಾಧ್ಯಮಗೋಷ್ಠಿಗಳು ಆನ್‌ಲೈನ್ ಆಗಿಬಿಟ್ಟವು. ಟ್ವಿಟರ್ ಮತ್ತು ಇತರ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಕಟವಾದ ಹೇಳಿಕೆಗಳು ಹೆಚ್ಚು ಹರಿತವಾಗಿದ್ದವು. ಲಾಕ್‌ಡೌನ್ ಹೇರುವ ಸರ್ಕಾರದ ನಿರ್ಧಾರವನ್ನು ಕಾಂಗ್ರೆಸ್ ಮತ್ತು ಎಡಪಕ್ಷಗಳು ತೀವ್ರವಾಗಿ ವಿರೋಧಿಸಿದ್ದವು. 'ಲಾಕ್‌ಡೌನ್‌ನ ಆರಂಭಿಕ ದಿನಗಳಲ್ಲಿ ಸರ್ಕಾರ ಏಕಪಕ್ಷೀಯವಾಗಿ ನಿರ್ಧಾರಗಳನ್ನು ಕೈಗೊಂಡಿದ್ದೇ ರಾಜಕೀಯ ಪಕ್ಷಗಳ ನಡುವಣ ಬಿರುಕು ಇನ್ನಷ್ಟು ಗಾಢವಾಗಲು ಕಾರಣ' ಎಂದು ರಾಜಕೀಯ ವಿಶ್ಲೇಷಕರಾದ ಸಂಜಯ ಕುಮಾರ್ ಮತ್ತು ರಶೀದ್ ಕಿದ್ವಾಯಿ ಹೇಳುತ್ತಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ ಮಾರ್ಚ್ 25ರಂದು ವಾಹನಗಳಿಂದ ತುಂಬಿದೆ. ಆದರೆ, ಕಳೆದ ವರ್ಷ ಲಾಕ್‌ಡೌನ್ ಹೇರಿಕೆಯಾದ ಆರಂಭಿಕ ದಿನಗಳಲ್ಲಿ ಈ ಮೇಲ್ಸೇತುವೆಯಲ್ಲಿ ವಾಹನಗಳೇ ಇರಲಿಲ್ಲ

ಚೇತರಿಕೆಯತ್ತ ಆರ್ಥಿಕತೆ

ಲಾಕ್‌ಡೌನ್‌ನಿಂದಾಗಿ ದೇಶದ ಅರ್ಥವ್ಯವಸ್ಥೆ ಮತ್ತು ಬಹುಪಾಲು ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಇದರಿಂದಾದ ಆರ್ಥಿಕ ಹಿಂಜರಿತದಿಂದ ದೇಶವು ತ್ವರಿತವಾಗಿ ಚೇತರಿಸಿಕೊಂಡಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಕಳೆದ ಜೂನ್‌ಗೆ ಕೊನೆಯಾದ ತ್ರೈಮಾಸಿಕದಲ್ಲಿ ಜಿಡಿಪಿ ಶೇ 24.4ರಷ್ಟು ಕುಗ್ಗಿತ್ತು ಮತ್ತು ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಈ ಕುಸಿತದ ಪ್ರಮಾಣವು ಶೇ 7.3ರಷ್ಟಿತ್ತು. ಆದರೆ, ಡಿಸೆಂಬರ್ ತ್ರೈಮಾಸಿಕದ ಹೊತ್ತಿಗೆ ಶೇ 0.4ರ ಪ್ರಗತಿ ದಾಖಲಾಗಿದೆ.

ವಲಸೆ ಕಾರ್ಮಿಕರ ಬವಣೆ

ಬಿಹಾರ, ಅಸ್ಸಾಂ, ಉತ್ತರ ಪ್ರದೇಶದಂತಹ ರಾಜ್ಯಗಳಿಂದ ಮಹಾನಗರಗಳಿಗೆ ವಲಸೆ ಹೋಗಿದ್ದ ಕಾರ್ಮಿಕರು ಲಾಕ್‌ಡೌನ್‌ನಿಂದ ಅತಿ ಹೆಚ್ಚು ಸಂಕಷ್ಟಕ್ಕೆ ಒಳಗಾದರು. ಪರಕೀಯ ಸ್ಥಳದಲ್ಲಿ ಕೆಲಸ, ಆಹಾರ, ವಸತಿ ಎಲ್ಲವನ್ನೂ ಕಳೆದುಕೊಂಡ ಇವರು ಹತಾಶರಾಗಿದ್ದರು. ಬಸ್, ರೈಲು ಸೇರಿ ಯಾವುದೇ ಸಂಚಾರ ಸೌಲಭ್ಯ ಇಲ್ಲದ ಕಾರಣ ನೂರಾರು ಕಿ.ಮೀ. ನಡೆದೇ ಊರು ಸೇರಿದರು. ತಮ್ಮ ಸರಂಜಾಮು ಮತ್ತು ಮಕ್ಕಳನ್ನು ಜತೆಗಿರಿಸಿಕೊಂಡು ಜನರು ನಡೆದು ಹೋಗುತ್ತಿದ್ದ ದೃಶ್ಯಗಳು ದೇಶವಿಭಜನೆಯ ದಿನಗಳನ್ನು ನೆನಪಿಗೆ ತಂದದ್ದು ಸುಳ್ಳಲ್ಲ.

ಮನೆಯೇ ಪಾಠಶಾಲೆ

ಕೋವಿಡ್ ತಡೆ ಕ್ರಮಗಳ ಭಾಗವಾಗಿ ದೇಶದ ಎಲ್ಲ ಶಿಕ್ಷಣ ಸಂಸ್ಥೆಗಳು ಮುಚ್ಚಿದವು. ಈ ಸಂಕಷ್ಟದಲ್ಲಿ ನೆರವಿಗೆ ಬಂದದ್ದು ಆನ್‌ಲೈನ್ ಕಲಿಕೆ. ನಗರ ಪ್ರದೇಶಗಳಲ್ಲಿ ಆನ್‌ಲೈನ್ ಮೂಲಕ ಒಂದಷ್ಟು ತರಗತಿಗಳು ನಡೆದವು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಕಲಿಕೆ ಸಾಧ್ಯವಾಗಲಿಲ್ಲ. ಈಗಲೂ ಶಾಲಾ ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ತೆರೆದಿಲ್ಲ. ಆದರೆ, ಆನ್‌ಲೈನ್ ಮೂಲಕ ಶಿಕ್ಷಣ ಸಾಧ್ಯ ಎಂಬ ಸಾಧ್ಯತೆಯನ್ನು ಲಾಕ್‌ಡೌನ್ ತೆರೆದಿಟ್ಟಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಾಕಿಸ್ತಾನ, ಬಾಂಗ್ಲಾದೇಶ, ಮ್ಯಾನ್ಮಾರ್‌ನ ಮುಸ್ಲಿಂ ಮಹಿಳೆಯರನ್ನು ಮದುವೆಯಾಗಬಾರದು ಎಂದು ಸೌದಿ ಅರೇಬಿಯಾ ಸರ್ಕಾರ ಆದೇಶ ಹೊರಡಿಸಿದೆ. ಈ ದೇಶಗಳ 5 ಲಕ್ಷ ಮುಸ್ಲಿಂ ಮಹಿಳೆಯರು ಸೌದಿ ಅರೇಬಿಯಾದಲ್ಲಿ ಇದ್ದಾರೆ. ಅವರು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಹೀಗಾಗಿಯೇ ಸೌದಿ ಸರ್ಕಾರ ಈ ನಿಷೇಧ ಹೇರಿದೆ ಎಂದು 'ಪೋಸ್ಟ್‌ಕಾರ್ಡ್ ಕನ್ನಡ' ತನ್ನ ಫೇಸ್‌ಬುಕ್ ಪುಟದಲ್ಲಿ ಪೋಸ್ಟ್ ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲೂ ಇಂತಹ ಪೋಸ್ಟ್‌ಗಳು ಸಾವಿರಾರು ಸಂಖ್ಯೆಯಲ್ಲಿ ಹಂಚಿಕೆಯಾಗಿವೆ.



ಪೋಸ್ಟ್‌ಕಾರ್ಡ್ ಹಂಚಿಕೊಂಡಿರುವ ವಿವಾಹ ನಿಷೇಧ ಪೋಸ್ಟ್

ಇದು ಸುಳ್ಳು ಸುದ್ದಿ. 2014ರ ಸುದ್ದಿಯನ್ನು ಈಗಿನದ್ದು ಎಂದು ಹಂಚಿಕೊಳ್ಳಲಾಗುತ್ತಿದೆ ಎಂದು ಆಲ್ಟ್‌ನ್ಯೂಸ್, ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಸೌದಿ ಅರೇಬಿಯಾದ ಸುದ್ದಿಪತ್ರಿಕೆ ಮಕ್ಕಾದಲ್ಲಿ ಇಂತಹ ವರದಿ ಪ್ರಕಟವಾಗಿತ್ತು. ಅದನ್ನು ಕೆಲವೇ ದಿನಗಳಲ್ಲಿ ಡಿಲೀಟ್ ಮಾಡಲಾಗಿತ್ತು. ಸೌದಿ ಅರೇಬಿಯಾದ ಕಾನೂನು ಸಚಿವಾಲಯದ ಜಾಲತಾಣದಲ್ಲೂ ವಿವಾಹ ನಿಷೇಧಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ಇಲ್ಲ ಎಂದು ಆಲ್ಟ್ ನ್ಯೂಸ್ ವಿವರಿಸಿದೆ. ಹಳೆಯ ಸುಳ್ಳು ಸುದ್ದಿಯನ್ನು ಈಗ ಹಂಚಿಕೊಳ್ಳಲಾಗುತ್ತಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದೃಶ್ಯದಿಂದ ಅದೃಶ್ಯದೆಡೆಗೆ

ದೃಶ್ಯವೆಲ್ಲವು ನಶ್ಯವಾದೊಡೇಂ ದೃಷ್ಟಿಗದು |
ವಶ್ಯವಿರುವನಕದನು ದೃಷ್ಟಿಪುದೆ ಕಾರ್ಯಂ ||
ವಿಶ್ವಾನುಭಾವವೆ ವಿಶ್ವಾತ್ಮಾನುಭಾವಕೆ ಪಥ |
ನಶ್ಯದಿಂದವಿನಶ್ಯ – ಮಂಕುತಿಮ್ಮ || 400 ||

ಪದ-ಅರ್ಥ: ದೃಶ್ಯ = ಕಣ್ಣಿಗೆ ಕಾಣುವಂಥದ್ದು, ನಶ್ಯ = ಮರೆಯಾದದ್ದು, ವಶ್ಯವಿರುವನಕದನು = ವಶ್ಯ (ವಶವಾದದ್ದು), ಇರುವನಕ + ಅದನು, ದೃಷ್ಟಿಪುದೆ = ನೋಡುವುದೆ, ವಿಶ್ವಾನುಭವವೆ = ವಿಶ್ವ + ಅನುಭವವೆ, ನಶ್ಯದಿಂದವಿನಶ್ಯ = ನಶ್ಯದಿಂದ (ನಾಶವಾಗುವದರಿಂದ) + ಅವಿನಶ್ಯ (ನಾಶವಾಗದಿರುವುದು)

ವಾಚ್ಯಾರ್ಥ: ನಾವು ಕಾಣುವುದೆಲ್ಲವೂ ನಾಶವಾದರೂ, ನಮ್ಮ ದೃಷ್ಟಿಗೆ ಕಾಣುವವರೆಗಾದರೂ ಅದನ್ನು ನೋಡುವುದೇ ನಮ್ಮ ಕಾರ್ಯ. ಪ್ರಪಂಚದ ಅನುಭವವೇ ವಿಶ್ವಾತ್ಮದ ತಿಳುವಳಿಕೆಗೆ ದಾರಿ. ನಶ್ವರವಾದದ್ದರಿಂದ ಅವಿನಾಶಿಯ ದರ್ಶನ.

ವಿವರಣೆ: ನಮ್ಮ ಅಧ್ಯಾತ್ಮ ತಿಳಿಸುತ್ತದೆ, ಈ ಪ್ರಪಂಚ ನಶ್ವರವಾದದ್ದು. ನಿನ್ನೆ ಇದ್ದದ್ದು ಇಂದಿಗಿಲ್ಲ, ಇಂದಿಗೆ ಇರುವುದು ನಾಳೆಗೆ ಇರಲಾರದು. ಅದು ಸತ್ಯವೂ ಹೌದು. ಆದರೆ ಈ ಸತತವಾಗಿ ಕಂಡು ಮರೆಯಾಗುವ ವಿಶ್ವದಲ್ಲಿ ನಮ್ಮ ಜವಾಬ್ದಾರಿ ಏನು? ನಾವೂ ನಾಳೆ ಮರೆಯಾಗಿ, ಕರಗಿ ಹೋಗುವವರೇ. ಆದರೆ ಇರುವತನಕ, ನಮ್ಮ ಕಣ್ಣಿಗೆ ಕಾಣುವ ಪ್ರಪಂಚವನ್ನು ನೋಡುತ್ತಿರುವುದೇ ನಮ್ಮ ಕೆಲಸ. ನಾವು ಹಿಂದೆ ಆಗಿ ಹೋಗಿ, ಈಗ ಕಾಣದೆ ಇರುವವರ ಬಗ್ಗೆ ಚಿಂತಿಸಬೇಕೋ, ಮುಂದೇನಾಗುತ್ತದೆಂಬುದು ತಿಳಿಯದೇ ಹೋದರೂ ಅನಾಗತದ ಬಗ್ಗೆ ಯೋಚನೆ ಮಾಡಬೇಕೋ? ಕಗ್ಗ ತುಂಬ ಸಮಾಧಾನದ ಮಾತನ್ನು ಹೇಳುತ್ತದೆ.

ನೀನು ಇರುವವರೆಗೆ, ಇರುವ ಪ್ರಪಂಚವನ್ನು ಪ್ರೀತಿಯಿಂದ ಕಾಣು, ಅದರ ಸಂಭ್ರಮದಲ್ಲಿ ಪಾಲುಗೊಳ್ಳು, ಅದರ ಬೆಳವಣಿಗೆಗೆ ನಿನ್ನ ಭುಜದ ಶಕ್ತಿ ಕುಂದುವವರೆಗೆ ದುಡಿದು ಕಾಣಿಕೆ ನೀಡು. ಇದು ಯಾಕೆಂದರೆ ವಿಶ್ವಾತ್ಮದ ಅನುಭವವಾಗಲು ನನಗೆ ಈ ವಿಶ್ವದ ಅನುಭವವಾಗಬೇಕು. ಈ ಪ್ರಪಂಚದ ಅನುಭವ ಹೆಚ್ಚಾದಂತೆ, ಅದರ ಬದಲಾವಣೆಯ ಗತಿಯನ್ನು ತಿಳಿದಂತೆ, ಇಂಥ ಬದಲಾವಣೆಯ ಹಿಂದಿನ ಶಕ್ತಿಯ ಹುಡುಕಾಟ ಪ್ರಾರಂಭವಾದೀತು. ಅದು ಕಣ್ಣಿಗೆ ಕಾಣಲಾಗದ, ಆದರೆ ಪ್ರಪಂಚಕ್ಕೆ ಕಾರಣವಾದ ಶಕ್ತಿ. ಅದು ಅನುಭವಕ್ಕೆ ಬರುವುದು ಅದರದೇ ಸೃಷ್ಟಿಯಾದ ಪ್ರಪಂಚದ ಮೂಲಕ. ಬೆಂಕಿಯನ್ನು ಕಂಡವನಿಗೇ ಅದರ ಶಾಖದ ಅರಿವು. ಮನೆಯಲ್ಲಿ ಕುಳಿತು, ಕಿಟಕಿಗಳನ್ನು ಮುಚ್ಚಿಕೊಂಡು, ಅವುಗಳಿಗೆಲ್ಲ ಕರಿಯ ಬಟ್ಟೆಯನ್ನು ಹಾಕಿ ಕತ್ತಲೆಯಲ್ಲಿ ಇದ್ದವನಿಗೆ ಸೂರ್ಯನ ಅರಿವು ಹೇಗಾದೀತು? ಕಣ್ಣಿಗೆ ಕಾಣುವ ಸೂರ್ಯನಿಂದ ಅದರ ಹಿಂದಿರುವ ಶಕ್ತಿಯ ತಿಳಿವು ನಮಗೆ. ಅದಕ್ಕೇ ಕಗ್ಗ ಹೇಳುತ್ತದೆ 'ವಿಶ್ವಾನುಭವವೆ ವಿಶ್ವಾತ್ಮಾನುಭವಕೆ ಪಥ'. ಈ ಜಗತ್ತನ್ನು ನಾನು ಎಷ್ಟು ಗಮನವಿಟ್ಟು ನೋಡಿ, ಅದರ ಚಟುವಟಿಕೆಗಳಲ್ಲಿ ಭಾಗಿಯಾಗಿ, ಎಷ್ಟು ಆಳವಾಗಿ ಅನುಭವಿಸುತ್ತೇವೋ, ಅಷ್ಟು ಹತ್ತಿರವಾಗಿ ವಿಶ್ವಾತ್ವದ ಅನುಭವವನ್ನು ಪಡೆಯುತ್ತೇನೆ. ಈ ಪ್ರಕ್ರಿಯೆಯೇ ಕಾಣುವುದರಿಂದ ಕಾಣದಿರುವುದರೆಡೆಗೆ ಸಾಗುವುದು. ಅದೇ ನಶ್ಯದಿಂದ ಅವಿನಶ್ಯದ ದಾರಿ. ❖

ಗುಂಡಣ್ಣ

ದಿನ ಭವಿಷ್ಯ

ಶುಕ್ರವಾರ 26 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ತ್ರಯೋದಶೀ ಗಂ. 54-3 (ರಾ. 4-04) ಶುಕ್ರವಾರ ನಿತ್ಯ ನಕ್ಷತ್ರ ಮಖೆ ಗಂ. 32-19 (ರಾ. 7-22) ಶೂಲ ನಾಮ ಯೋಗ ಗಂ51-56 ಕೌಲವ ಕರಣ ಗಂ. 25-19 ವಿಷ ಗಂ. 2-7 ಪುನರ್ವಿಷ ಗಂ. 51-55 ಅಮೃತ ಗಂ. 25-39 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 1 4

ಮೇಷ: ಗೃಹ ನವೀಕರಣ ಕಾರ್ಯಗಳು ಭರದಿಂದ ಸಾಗಲಿದೆ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರವನ್ನು ಮಾಡಲು ಸಕಾಲ. ಅತಿಯಾದ ಕೆಲಸದಿಂದಾಗಿ ದೇಹಾಲಾಸ್ಯ ಉಂಟಾದೀತು.

ವೃಷಭ: ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಟೆಗಳಿಗೆ ಚಾಲನೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ. ಸಾಹಿತಿ, ಬುದ್ಧಿಜೀವಿಗಳಿಗೆ ಗೌರವ ಪ್ರಾಪ್ತಿ.

ಮಿಥುನ: ಉನ್ನತ ಅಧ್ಯಯನಕ್ಕೆ ಬಂಧುಗಳ ಸಹಕಾರ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಗೃಹ ಕಲಹಗಳಿಗೆ ಬಂಧುಗಳ ಹಿರಿಯರ ಸಕಾಲಿಕ ಮಾರ್ಗದರ್ಶನ.

ಕರ್ಕಾಟಕ: ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದು. ಮಂಗಳ ಕಾರ್ಯಗಳ ವಿಚಾರದಲ್ಲಿ ನಿರ್ಧಾರ ಕೈಗೊಳ್ಳುವ ಸಾಧ್ಯತೆ. ಧೈರ್ಯ ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲ.

ಸಿಂಹ: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಸ್ವಲ್ಪಮಟ್ಟಿನ ತೊಂದರೆ.

ಕನ್ಯಾ: ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನಾನುಕೂಲತೆ. ಆರ್ಥಿಕ ಮುಗ್ಗಟ್ಟು ತಲೆದೋರೀತು. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳವಾಗಲಿದೆ. ರಾಜಕೀಯದಲ್ಲಿ ಸೂಕ್ತ ಸ್ಥಾನ ಸಾಧ್ಯತೆ.

ತುಲಾ: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆ. ಗಹನವಾದ ವಿಚಾರವಾಗಿ ಗೆಳೆಯರೊಂದಿಗೆ ಚರ್ಚಿಸಲಿದ್ದೀರಿ. ಶಾರೀರಿಕ ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ ಕಂಡುಬರಲಿದೆ.

ವೃಶ್ಚಿಕ: ಕಾರ್ಮಿಕ ವರ್ಗದವರಿಗೆ ಬಿಡುವಿಲ್ಲದ ಕೆಲಸ. ಕಟ್ಟೋಣ ಕೆಲಸದಲ್ಲಿ ತೊಡಗಿರುವವರು ಜಾಗರೂಕರಾಗಿರುವುದು ಅಗತ್ಯ. ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆ ಸಾಧ್ಯತೆ.

ಧನು: ಕೆಲಸ ಕಾರ್ಯಗಳಲ್ಲಿ ಅನುಕೂಲಕರವಾಗಿ ತೋರಿಬರಲಿದೆ. ಆತ್ಮವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಯಶಸ್ಸು. ಆಸ್ತಿ ಲಾಭದ ಲಕ್ಷಣಗಳು ಕಂಡು ಬರುವುದು. ಮಾನಸಿಕ ನೆಮ್ಮದಿ.

ಮಕರ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸದಿಂದಾಗಿ ವೈಯಕ್ತಿಕ ಕೆಲಸಗಳು ನಿಧಾನವಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ವೆಚ್ಚ ಭರಿಸಬೇಕಾದೀತು.

ಕುಂಭ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ.

ಮೀನ: ಹೊಗಳಿಕೆಯಿಂದಾಗಿ ನಷ್ಟ ಅನುಭವಿಸಬೇಕಾದ ಪ್ರಸಂಗ ಎದುರಾದೀತು. ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು.

ನಿಮ್ಮ ಜನ್ಮದಿನ 26-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸರ್ಕಾರಿ ಉದ್ಯೋಗವನ್ನು ತ್ಯಜಿಸುವ ಬಗೆಗಿನ ವಿಚಾರವನ್ನು ಮುಂದೂಡುವುದು ಉತ್ತಮ. ವ್ಯವಹಾರದಲ್ಲಿ ಹೆರವರ ಮೇಲೆ ಅವಲಂಬನೆ ಕಡಿಮೆ ಮಾಡಿಕೊಳ್ಳುವುದು ಉತ್ತಮ. ಸ್ವತಂತ್ರ ಉದ್ಯೋಗವನ್ನು ಆರಂಭಿಸಿ ಯಶಸ್ಸನ್ನು ಕಾಣಬಹುದು. ಬಹುವಾಗಿ ಅಪೇಕ್ಷಿತವಾದ ಸಂತಾನ ಪ್ರಾಪ್ತಿ.

ಪದಬಂಧ 4548

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಲಯ ಪರ್ವತದಲ್ಲಿ ಹುಟ್ಟಿದುದು (4)
3.ನಗುವಿನಿಂದ ಕೂಡಿದ ವದನ (4)
5.ಕನ್ನಡಿಗ ಹಿಡಿದಿರುವ ಕ್ಯಾರೆಟ್! (3)
6.ಕೊನೆಗೆ ವಿಕ್ರಯಿಸು ಎಂದಾಗಲೇ ಈ ಅವ್ಯವಸ್ಥೆ! (4)
7.ಯತಿಗೆ ದೊರೆತಿರುವ ಸೋಡಿ (4)
9.ಈ ತರ ಬಂದಿರುವ ಏರ್ಪಾಟು (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆಯಲ್ಲಾ? (4)
13.ಕೈಯನ್ನು ಕೊನೆಗಿರಿಸಿದ ಆಳು! (3)
14.ಜರಿ ಸೀರೆಯಲ್ಲಿರುವ ಬೆಲೆಯುಳ್ಳ ಮಣಿ (4)
15.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
2.ಲೋಕಕ್ಕೆಲ್ಲಾ ಪೂಜ್ಯನಾದವನು (4)
3.ಸುಮಾರು ಮೂರು ಮೈಲುಗಳ ಒಂದು ಅಳತೆ (4)
4.ಆಕಾಶದಲ್ಲಿ ಸಂಚರಿಸುವಂಥದ್ದು (2)
6.ಕೇಡಿನ ಬಾಧೆ ತಟ್ಟದಿರಲು ಧರಿಸುವ ಕಾಪು (3)
8.ತೀರದಲ್ಲಿ ಕವಿದ ಅಂಧಕಾರ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಗಂಡು ಕೋಳಿಯಿದು (2)



4547ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಿಷ್ಪಕ್ಷಪಾತ 4.ಆಮೋದ 5.ಮತಿ 7.ವಿಧ 10.ಕರಿ 13.ಪುರ 15.ಮಾರುತ 16.ವಿಮಾನಯಾನ

ಮೇಲಿಂದ ಕೆಳಕ್ಕೆ: 1.ಅಕ್ಷರಸ್ಥ 2.ನಿದರ್ಶನ 3.ತಮ 4.ಆರಾಧಕ 6.ತಿವಿ 8.ಧನವಂತ 9.ಅನುಮಾನ 11.ರಿಪು 12.ಬಡನಡು 14.ರವಿ

ಸುಡೊಕು 4934

3	2			8		9		1
	9	8						4
	4		9			3		8
6								9
	5		7	6	9		8	
8						6		
		4	2			7		6
				9	7			
						4		5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4933 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಷೇರುಪೇಟೆ ವಹಿವಾಟು

740



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,549
ಇಂದಿನ ಅಂತ್ಯ	14,325
▼	224
ದಿನದ ಕನಿಷ್ಠ	14,264

ವಿನಿಮಯ ದರ

$ ಡಾಲರ್	72.52
£ ಪೌಂಡ್	99.38
€ ಯುರೊ	85.73
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹385
12 ಮೊಟ್ಟೆಗೆ	₹52

ಮೈಸೂರು

100 ಮೊಟ್ಟೆಗೆ	₹388

ಮುಂಬೈ ಧಾರಣೆ

ಶೇಂಗಾ

25-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1565)
ಒಂದು ವಾರದ ಡೆಲಿವರಿ	1555 (1555)
ಸೋಯಾ ಕಚ್ಚಾ	1252 (1255)
ಪಾಮ್ ವಾರದ ಡೆಲಿವರಿ	1206 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,900 (44,650)
ಬೆಳ್ಳಿ ಕೆ.ಜಿ 64,400 (65,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ

FOR ADVERTISEMENT QUERIES
• OBITUARY
• REMEMBRANCES

Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

‘ಕೋವಿಡ್ ಹೆಚ್ಚಳ, ಬೆಳವಣಿಗೆಗೆ ಇಲ್ಲ ಅಡ್ಡಿ’

ಮುಂಬೈ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿದ್ದರೂ, ಆರ್ಥಿಕ ಪುನಶ್ಚೇತನ ಪ್ರಕ್ರಿಯೆಗೆ ಅದು ಅಡ್ಡಿಯಾಗುವುದಿಲ್ಲ ಎಂಬ ವಿಶ್ವಾಸವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ವ್ಯಕ್ತಪಡಿಸಿದರು.

‘ಮುಂಬರುವ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣದ ಕುರಿತು ಆರ್‌ಬಿಐನ ಮಾಡಿರುವ ಶೇಕಡ 10.5ರಷ್ಟರ ಅಂದಾಜನ್ನು ತಗ್ಗಿಸುವ ಯಾವುದೇ ಅಗತ್ಯ ಕಂಡುಬರುತ್ತಿಲ್ಲ’ ಎಂದಿದ್ದಾರೆ.

‘ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದು ಕಳವಳಕಾರಿ. ಆದರೆ, ಹಿಂದಿನ ವರ್ಷ ಜಾರಿಯಾಗಿದ್ದಂತಹ ರಾಷ್ಟ್ರವ್ಯಾಪಿ ಲಾಕ್‌ಡೌನ್ ಮತ್ತೆ ಆಗಲಾರದು’ ಎಂದು ದಾಸ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ಸ್ಥಿರವಾಗಿ ಇರುವಂತೆ ಮಾಡುವ ಹೊಣೆಯನ್ನು ಆರ್‌ಬಿಐ ನಿಭಾಯಿಸಲಿದೆ ಎಂದು ದಾಸ್ ಅವರು ಕಾರ್ಯಕ್ರಮವೊಂದರಲ್ಲಿ ಭರವಸೆ ನೀಡಿದರು.

ಕ್ರಿಪ್ಟೊ ಕರೆನ್ಸಿಗಳ ವಿಚಾರದಲ್ಲಿ ಆರ್‌ಬಿಐ ತನ್ನ ಪ್ರಮುಖ ಕಳವಳಗಳನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದರು. ‘ಕ್ರಿಪ್ಟೊ ಕರೆನ್ಸಿಗಳ ವಿಚಾರದಲ್ಲಿ ಆರ್‌ಬಿಐ ಹಾಗೂ ಸರ್ಕಾರದ ನಡುವೆ ಭಿನ್ನಾಭಿಪ್ರಾಯ ಇಲ್ಲ’ ಎಂದರು.

ಜನವರಿಯಲ್ಲಿ ಮಂಡಿಸಿದ್ದ ಮಸೂದೆಯೊಂದರಲ್ಲಿ ಕ್ರಿಪ್ಟೊಕರೆನ್ಸಿ ನಿಷೇಧ ಮಾಡುವ ಬಗ್ಗೆ ಸರ್ಕಾರ ಪ್ರಸ್ತಾಪಿಸಿತ್ತು. ಆದರೆ, ‘ಡಿಜಿಟಲ್ ಕರೆನ್ಸಿಯ ಕ್ಷೇತ್ರದಲ್ಲಿ ಪ್ರಯೋಗಗಳಿಗೆ ನಾವು ಉತ್ತೇಜನ ನೀಡುತ್ತೇವೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗಷ್ಟೇ ಹೇಳಿದ್ದಾರೆ. ‘ಇದು ಗೊಂದಲಕಾರಿ ಹೇಳಿಕೆ’ ಎಂದು ಕೆಲವು ವಲಯಗಳು ಹೇಳಿವೆ. ಈ ಹಿನ್ನೆಲೆಯಲ್ಲಿ ದಾಸ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಎರಡನೇ ದಿನವೂ ಪೆಟ್ರೋಲ್, ಡೀಸೆಲ್ ದರ ಇಳಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ ಆಗುತ್ತಿರುವುದರಿಂದ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸತತ ಎರಡನೇ ದಿನವೂ ಪೆಟ್ರೋಲ್, ಡೀಸೆಲ್ ದರ ಇಳಿಸಿವೆ.

ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ 22 ಪೈಸೆ ಇಳಿಕೆ ಆಗಿ, ₹ 93.82ರಂತೆ ಮಾರಾಟವಾಗಿದೆ. ಡೀಸೆಲ್ ದರ ಕೂಡ ಲೀಟರಿಗೆ 22 ಪೈಸೆ ಕಡಿಮೆಯಾಗಿ ₹ 85.99ರಂತೆ ಮಾರಾಟವಾಗಿದೆ. ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚುತ್ತಿದ್ದು, ಜನರ ಖರೀದಿ ಸಾಮರ್ಥ್ಯ ವೇಗವಾಗಿ ಚೇತರಿಸಿಕೊಳ್ಳಲಿದೆ ಎಂಬ ಆಶಾವಾದ ಮರೆಯಾಗಿದೆ. ಇದರಿಂದಾಗಿ ಕಚ್ಚಾ ತೈಲ ದರ ಇಳಿಕೆಯಾಗಿದೆ ಎಂದು ತಜ್ಞರು ಹೇಳಿದ್ದಾರೆ.

ಬೌನ್ಸ್–ಇ: ಸದ್ಯ ಬಾಡಿಗೆಗೆ ಲಭ್ಯ; ಶೀಘ್ರದಲ್ಲೇ ಮಾರುಕಟ್ಟೆಗೆ ನಿರೀಕ್ಷೆ

ವಿದ್ಯುತ್ ಚಾಲಿತ ವಾಹನ ತಯಾರಿಕೆಗೆ ‘ಬೌನ್ಸ್’ ಗಮನ

● ವಿಶ್ವನಾಥ ಎಸ್.

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಬಾಡಿಗೆ ಆಧಾರದಲ್ಲಿ ನೀಡುವ ‘ಬೌನ್ಸ್’ ನವೋದ್ಯಮವು ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ತಯಾರಿಕಾ ಕಂಪನಿಯಾಗುವತ್ತ ಹೆಜ್ಜೆ ಇರಿಸಿದೆ.

ವ್ಯಾಪಾರದ ದೃಷ್ಟಿಕೋನದಲ್ಲಿ ಆಗುತ್ತಿರುವ ಬದಲಾವಣೆಗಳು ಮತ್ತು ಗ್ರಾಹಕರ ಬೇಡಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ‘ಇ.ವಿ.’ ತಯಾರಿಕಾ ಕಂಪನಿಯಾಗಿ ಹೊರಹೊಮ್ಮಲು ಯೋಜನೆ ರೂಪಿಸಲಾಗಿದೆ. ಕೆಲವು ಕಂಪನಿಗಳೊಂದಿಗೆ ಒಪ್ಪಂದ, ಸ್ವಾಧೀನ ಪ್ರಕ್ರಿಯೆಯ ಆಯ್ಕೆಗಳನ್ನೂ ಪರಿಗಣಿಸಲಾಗುತ್ತಿದೆ ಎಂದು ‘ಬೌನ್ಸ್’ ಸಹ ಸ್ಥಾಪಕ ವಿವೇಕಾನಂದ ಹಳ್ಳೆಕೆರೆ ‘ಪ್ರಜಾವಾಣಿ’ಗೆ ತಿಳಿಸಿದರು.

ಬೌನ್ಸ್–ಇ: ಕಂಪನಿಯದ್ದೇ ಆದ ಎಲೆಕ್ಟ್ರಿಕ್ ಸ್ಕೂಟರ್ ‘ಬೌನ್ಸ್ –ಇ’ ಅನ್ನು ಶೀಘ್ರವೇ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು. ಸದ್ಯ ಬಾಡಿಗೆಗೆ ಈ ಸ್ಕೂಟರ್ ಲಭ್ಯವಿದೆ. ಬೌನ್ಸ್ ಆ್ಯಪ್ ಮೂಲಕ ಬಾಡಿಗೆ ಆಧಾರದಲ್ಲಿ ಬಳಸಬಹುದು ಎಂದು ಹಳ್ಳೆಕೆರೆ ಹೇಳಿದರು.

ಬೌನ್ಸ್–ಇ ಸ್ಕೂಟರ್‌ನೊಂದಿಗೆ ಬೌನ್ಸ್ ಸಹ ಸ್ಥಾಪಕರಾದ ಅನಿಲ್ ಗಿರಿ ಮತ್ತು ವಿವೇಕಾನಂದ

‘ಬೌನ್ಸ್ –ಇ’ ಸ್ಕೂಟರ್‌ಗೆ ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಆಟೊಮೊಟಿವ್ ಟೆಕ್ನಾಲಜಿಯು (ಐಸಿಎಟಿ) 2020ರ ಸೆಪ್ಟೆಂಬರ್‌ನಲ್ಲಿ ಪ್ರಮಾಣಪತ್ರ ನೀಡಿದೆ. ಭಾರತದಲ್ಲಿ ಈ ಪ್ರಮಾಣ ಪತ್ರ ಪಡೆದಿರುವ ಮೊದಲ ಗ್ರಾಹಕ ಕೇಂದ್ರಿತ ಬೈಕ್ ಷೇರಿಂಗ್ ಪ್ಲಾಟ್‌ಫಾರಂ ಎನ್ನುವ ಹೆಗ್ಗಳಿಕೆಗೆ ಬೌನ್ಸ್ ಪಾತ್ರವಾಗಿದೆ ಎಂದೂ ತಿಳಿಸಿದರು.

ಈ ಸ್ಕೂಟರ್ ಬೆಲೆ ಬ್ಯಾಟರಿಯನ್ನು ಹೊರತುಪಡಿಸಿ ₹ 45 ಸಾವಿರದಿಂದ ₹ 50 ಸಾವಿರ ಇರಲಿದೆ. ಬ್ಯಾಟರಿಯನ್ನೂ ಸೇರಿಸಿದರೆ ₹ 70 ಸಾವಿರದವರೆಗೆ ಆಗಲಿದೆ. ಆದರೆ, ಬ್ಯಾಟರಿ ಖರೀದಿಯಿಂದ ಆಗುವ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ಬ್ಯಾಟರಿಯನ್ನು ಬಾಡಿಗೆಗೆ ಕೊಡುವ ಆಯ್ಕೆ ಇದೆ. ಈ ಸಂಬಂಧ ಕೆಲವು ಕಿರಾಣಿ ಅಂಗಡಿಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಿಲೋ ಮೀಟರಿಗೆ ₹ 1.80ರಂತೆ ಬ್ಯಾಟರಿಯನ್ನು ಪಡೆದು ಬಳಸಬಹುದು. ಕಿರಾಣಿ ಅಂಗಡಿಗಳ ವಿವರ ಆ್ಯಪ್‌ನಲ್ಲಿ ಲಭ್ಯವಿದೆ ಎಂದು ಮಾಹಿತಿ ನೀಡಿದರು.

ರೆಟ್ರೊ ಫಿಟ್: ಸಾಂಪ್ರದಾಯಿಕ ಇಂಧನ ಬಳಸುವ ಸ್ಕೂಟರ್‌ಗಳನ್ನು ರೆಟ್ರೊ ಫಿಟ್ (ಎಲೆಕ್ಟ್ರಿಕ್) ಆಗಿ ಪರಿವರ್ತಿಸಬಹುದು. ಇದಕ್ಕೆ ₹ 10 ಸಾವಿರದಿಂದ ₹ 20 ಸಾವಿರದವರೆಗೆ ವೆಚ್ಚವಾಗಲಿದೆ. ಇದಕ್ಕೆ ಸಬ್ಸಿಡಿ ಇಲ್ಲ. ಸಬ್ಸಿಡಿ ಸಿಕ್ಕರೆ ಇನ್ನೂ ಕಡಿಮೆ ಆಗಲಿದೆ. ಈ ರೀತಿ ಪರಿವರ್ತಿತ ಸ್ಕೂಟರ್‌ಗಳಿಗೂ ಸಹ ಬ್ಯಾಟರಿಯನ್ನು ಕಿಲೋ ಮೀಟರಿಗೆ ಅನುಗುಣವಾಗಿ ಖರೀದಿಸಿ ಬಳಸಬಹುದು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9886275111

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಕಂಪನಿಗಳಿಗೆ ಬೇಕಾಗಿದ್ದಾರೆ. VIDEOCON, ಟಯೋಟ, TVS ಬ್ರಿಟಾನಿಯಾಗಳಿಗೆ SSLC, ITI ನವರು, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,800- 56,000/- ವಸತಿಯೂಟವಿದೆ. 9611715755

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ ಗಳು, ಹುಡುಗಿಯರು ಬೇಕಾಗಿದ್ದಾರೆ.ಊಟ ವಸತಿಯಿದೆ. 10,000-15,000. 8951315839, 9880545002

Office Boys/ Peon

ಆಫೀಸನಲ್ಲಿ ಕೆಲಸ ಮಾಡಲು Peon ಬೇಕಾಗಿದ್ದಾರೆ ಸಂಪರ್ಕಿಸಿ: ಮಧು ಸ್ಟೀಲ್ ಕಾರ್ಪೊರೇಶನ್ ಮಿನಿಯಾ ಬಿಲ್ಡಿಂಗ್, ಅಮಾನತ್ ಕೋ-ಆಪರೇಟೀವ್ ಬ್ಯಾಂಕ್ ಕೆಳಗೆ, N.R.ರಸ್ತೆ,2ನೇ ಕ್ರಾಸ್, ಬೆಂಗಳೂರು-2

Cook

ವಿಶ್ವಾಸಕ್ಕೆ ಅರ್ಹರಾದ ಮಹಿಳೆಯರು ಮನೆಯಲ್ಲಿಯೇ ಇದ್ದುಕೊಂಡು ಅಡುಗೆ ಕೆಲಸ ಮಾಡಲು ಬೇಕಾಗಿದ್ದಾರೆ ಆಕರ್ಷಕ ಸಂಬಳ ನೀಡಲಾಗುವುದು ಸಂಪರ್ಕಿಸಿ: 6366443134.

Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ! ನೀವು ಬೈಕ್ ಹೊಂದಿದ್ದೀರಾ ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಕೆಲಸ ಹುಡುಕುತ್ತಿದ್ದೀರಾ ಬೇಕಾದ ದಾಖಲೆಗಳು ಬೈಕ್.ಆರ್ ಸಿ. ಡಿಎಲ್.ಹಾಗೂ ಆಂಡ್ರಾಯ್ಡ್ ಮೊಬೈಲ್ ಹೊಂದಿರಬೇಕು. ಕೂಡಲೇ ಕರೆ ಮಾಡಿ 080-47096073

ಲಾರಿಡ್ರೈವರ್ ಬೇಕಾಗಿದ್ದಾರೆ, ಲಾಂಗ್ ರೂಟ್ ಉತ್ತಮ ಅನುಭವವಿರುವ ಡ್ರೈವರ್, ಸಂಬಳ 18000+ಬಾಟ Pondhan Scaffolding Pvt Ltd: 9663379150

Wanted

ತಕ್ಷಣ ಬೇಕಾಗಿದ್ದಾರೆ. ರಾಜ್ಯ ಮಟ್ಟದ ಸಂಸ್ಥೆಗೆ ಮಹಿಳಾ / ಪುರುಷರು, ಕನ್ನಡ ಹಾಗೂ ಇಂಗ್ಲೀಷ್ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ಸ್ ಹಾಗೂ ಮಹಿಳಾ /ಪುರುಷ ಸೇಲ್ಸ್ ಮ್ಯಾನ್‌ಗಳು ಹಾಗೂ ನಿವೃತ್ತ ಶಿಕ್ಷಕರುಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ: ತಮ್ಮ ಸ್ವ ವಿವರಗಳನ್ನು ಕಛೇರಿ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಿ.ಕಛೇರಿ ವಿಳಾಸ: ನಂ.327, 2ನೇ ಮಹಡಿ ಸನ್‌ರೈಸ್‌ಮ್ಯಾನ್ಷನ್, ರಾಜಾಜಿನಗರ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010 ದೂರವಾಣಿ ಸಂಖ್ಯೆ:9743387705, 9449087899

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ + OT 15,800-86,000 8884054160, 9739544856 .

ತಕ್ಷಣ ಬೇಕಾಗಿದ್ದಾರೆ VOLVO, TVS, TOYOTA, ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ಗಳಿಗೆ ಯುವಕಯುವತಿಯರು ವಸತಿಯೂಟದೊಂದಿಗೆ 15,800/- 55000/-. 8951036487, 8951036488

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಕೆಲಸ,ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ. 9108059956, 7338376317

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business Offers

Finance

ಮುದ್ರಾ ಯೋಜನೆಯಲ್ಲಿ ಕೃಷಿ ಸ್ತಿರಾಸ್ತಿ, ವೈಯುಕ್ತಿಕ ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ. 9172930942. 9449896870(ಕೋವಿಡ್-19 ಆನ್ಲೈನ್ ಪ್ರೋಸೆಸ್)

ಭವಿಷ್ಯ

Astrology

★॥ಶ್ರೀಚಾಮುಂಡೇಶ್ವರಿದೇವಿ ಆರಾಧಕರು॥★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ, ಸ್ತ್ರೀ-ಪುರುಷ ವಶೀಕರಣ ಇನ್ನಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ.ಶ್ರೀರಾಘವೇಂದ್ರ ಆಚಾರ್ಯರು. 8050061378

★॥ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ॥★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೆಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶಿನಾಥಭಟ್ 8050018724

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

ರಾವಣ ತಂತ್ರ, ಜ್ಯೋತಿಷ್ಯಂ ಪಂಡಿತ್ ಶ್ರೀ ಗಣೇಶ್ ಭಟ್ಟಾಚಾರ್ಯ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಬೇಟಿ ಕೊಡಿ ಯಾವುದೇ ವಶೀಕರಣಗಳಿಗೆ ಕೇವಲ 1665/-. 9845899127.

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ವಶೀಕರಣ ಮಾಂತ್ರಿಕರು, ಪಂಚವಟಿರುದ್ರಾ ದೇವಿಯ ಪವಾಡ ಶಕ್ತಿಗಳಿಂದ ಸ್ತ್ರೀ, ಪುರುಷ ವಶೀಕರಣ, ಶತ್ರುನಾಶ, ಸಾಲಬಾಧೆ, ವ್ಯವಹಾರ, ದಾಂಪತ್ಯ. ಕೇವಲ 1 ಗಂಟೆಯಲ್ಲಿ ಪರಿಹಾರ. 9148244231

★॥(ಉಚಿತ ಭವಿಷ್ಯ)॥★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 16.04.2021,18.05.2021 23ದಿನಗಳು ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಪ್ರವಾಸ.16.04.2021, 08.05.2021,18.05.2021 12ದಿನಗಳು ಗೌಹಾತಿ,ಕಾಜಿರಂಗ, ಶಿಲ್ಲಾಂಗ್,ಬೊಂಡಿಲಾ,ತವಾಂಗ್, ಚಿರಾಪುಂಜಿ.,26.04.2021, 30.05.2021 12ದಿನಗಳು ದೀಮಾಪುರಿ,ಕೊಹಿಮಾ, ಇಂಪಾಲ್,ಐಜಾಲ್, ಉನಕೋಟಿ,ಅಗರ್ತಲಾ, ಮಾತಬರಿ.,08.05.2021 8ದಿನಗಳು ಗ್ಯಾಂಗ್‌ಟಕ್, ಡಾರ್ಜಲಿಂಗ್,ಮಿರಿಕ್,ನಾಂಚಿ, ಲಾಚುಂಗ್,.05.06.2021 10ದಿನಗಳು ದೆಹಲಿ, ಸಿಮ್ಲಾ, ಕುಲುಮನಾಲಿ, 5ದೇವಿಯರು, ವೈಷ್ಣೋದೇವಿ,ಅಮೃತಸರ್, ವಾಘಗಡಿ,ಕುರುಕ್ಷೇತ್ರ. 9743351212/ 9902050065/ 9206979202

★20.04.2021 8 ದಿನಗಳು* ವಿಮಾನದಲ್ಲಿ ಗುಜರಾತ್, ಭಾವನಗರ್,ಸೋಮನಾಥ, 04.05.2021 12ದಿನಗಳು ವೈಷ್ಣೋದೇವಿ,ಸಿಮ್ಲಾ,ಮನಾಲಿ, ಸಪ್ತಶಕ್ತಿಪೀಠಗಳು ಆರ್.ಗಾಂಧಿ ಟೂರ್ಸ್.9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಸಂಕ್ಷಿಪ್ತ ಸುದ್ದಿ

ಸುಯೆಜ್ ಕಾಲುವೆ: ಹಡಗು ತೆರವಿಗೆ ಸಿಬ್ಬಂದಿ ಕಸರತ್ತು

ಲಂಡನ್ (ರಾಯಿಟರ್ಸ್): ಈಜಿಪ್ಟ್‌ನ ಸುಯೆಜ್ ಕಾಲುವೆಯಲ್ಲಿ ದೈತ್ಯ ಕಂಟೇನರ್ ಹಡಗು ಸಿಲುಕಿಕೊಂಡಿರುವ ಪರಿಣಾಮ ಹಡಗುಗಳ ಸಂಚಾರ ಬಿಕ್ಕಟ್ಟು ಎದುರಾಗಿದ್ದು, ಜಾಗತಿಕ ಸರಕು ಸಾಗಣೆ ವ್ಯವಸ್ಥೆಗೆ ಅಡ್ಡಿಯುಂಟಾಗಿದೆ. ಸಿಲುಕಿಕೊಂಡಿರುವ ಹಡಗು ತೆರವಿಗೆ ಈಜಿಪ್ಟ್‌ನ ಟಗ್ ಬೋಟ್‌ಗಳ ನೆರವು ಪಡೆದಿದ್ದು, ಹರಸಾಹಸವಾಗುತ್ತಿದೆ.

30ಕ್ಕೂ ಹೆಚ್ಚು ಸರಕುಸಾಗಣೆ ಹಡಗುಗಳ ಸಂಚಾರಕ್ಕೆ ಧಕ್ಕೆಯಾಗಿದೆ. 400 ಮೀಟರ್ ಉದ್ದದ ಕಾಲುವೆಯಲ್ಲಿ ಹಡಗು ಸಿಲುಕಿಕೊಂಡಿದೆ. ವಿವಿಧ ಸರಕುಗಳ ಸಾಗಣೆ ವಿಳಂಬವಾಗಲಿದೆ. ಕೊರೊನಾ ಸೋಂಕಿನ ಪರಿಣಾಮ ಈಗಾಗಲೇ ನಕಾರಾತ್ಮಕ ಪರಿಣಾಮ ಎದುರಾಗಿದ್ದು, ಈಗ ಇನ್ನಷ್ಟು ಸಮಸ್ಯೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಶ್ರೀಲಂಕಾ: 54 ಮಂದಿ ಭಾರತೀಯ ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ಅಕ್ರಮವಾಗಿ ತಮ್ಮ ದೇಶದ ಜಲ ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ತೊಡಗಿದ್ದ ಆರೋಪದ ಮೇಲೆ 54 ಮಂದಿ ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ಬಂಧಿಸಿದ್ದು, ಅವರಿಂದ ಐದು ದೋಣಿಗಳನ್ನು ವಶಕ್ಕೆ ಪಡೆದಿದೆ.

ರಾಮೇಶ್ವರಂ ಮತ್ತು ತಂಗಚಿಮಡಂ ಮೂಲದ ಮೀನುಗಾರರನ್ನು ಬುಧವಾರ ರಾತ್ರಿ ಕಚ್ಚತೀವು, ಜಾಫ್ನಾದ ಕೋವಿಲನ್, ಇರನೇತೀವು ದ್ವೀಪದ ಬಳಿ ಶ್ರೀಲಂಕಾ ನೌಕಾಪಡೆಯವರು ವಶಕ್ಕೆ ಪಡೆದಿದ್ದಾರೆ ಎಂದು ತಮಿಳುನಾಡಿನ ಮೀನುಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇಂತಹದೇ ಆರೋಪದ ಮೇರೆಗೆ ಜನವರಿಯಲ್ಲಿ ಭಾರತದ ದೋಣಿಯೊಂದನ್ನು ವಶಕ್ಕೆ ಪಡೆದಿದ್ದ ಲಂಕಾದ ನೌಕಾಪಡೆ, 9 ಮಂದಿಯನ್ನು ಬಂಧಿಸಿತ್ತು.

ಇಸ್ರೇಲ್: ಮತಎಣಿಕೆ ಪುನಾರಂಭ, ಸಿಗದ ಸ್ಪಷ್ಟ ಚಿತ್ರಣ

ಜೆರುಸಲೆಂ (ಎಪಿ): ಇಸ್ರೇಲ್‌ನಲ್ಲಿ ಮತಎಣಿಕೆ ಪ್ರಕ್ರಿಯೆ ಗುರುವಾರ ಪುನರಾರಂಭಗೊಂಡಿದೆ. ಆದರೆ, ಪ್ರಧಾನಿ ಬೆಂಜಮಿನ್ ನೆತನ್ಯಾಹು ಅಥವಾ ಅವರ ವಿರೋಧಿಬಣಕ್ಕೆ ಸ್ಪಷ್ಟ ಮುನ್ನಡೆ ಸಿಗದೆ ಅನಿಶ್ಚಿತತೆ ಮುಂದುವರಿದಿದೆ.

ಶೇ 93ರಷ್ಟು ಮತಎಣಿಕೆಯು ಮುಗಿದಿದೆ. ನೆತನ್ಯಾಹು ಬಣ 52 ಕ್ಷೇತ್ರಗಳಲ್ಲಿ, ವಿರೋಧಿ ಬಣ 57 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	345
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಚಿತ್ರದುರ್ಗ	
ಆಪಿ	42229-42669
ಬೆಟ್ಟೆ	33419-33859
ಕೆಂಪುಗೋಟು	29500-29900
ರಾಶಿ	41739-42189
ಕುಮಟ	
ಚಿಪ್ಪು	23199-31288
ಕೋಕ	14099-27869
ಹಳೆಚಾಲಿ	40099-41599
ಹೊಸಚಾಲಿ	34800-37599
ಸಿದ್ದಾಪುರ	
ಬಿಳಿಗೋಟು	23108-30309
ಚಾಲಿ	35200-36709
ಕೋಕ	17699-28899
ಕೆಂಪುಗೋಟು	24669-28899
ರಾಶಿ	38599-42099
ತಟ್ಟಿಬೆಟ್ಟೆ	33249-40389
ಯಲ್ಲಾಪುರ	
ಬಿಳಿಗೋಟು	23602-31591
ಚಾಲಿ	31832-40169
ಕೋಕ	19312-29899
ಕೆಂಪುಗೋಟು	27619-33699
ರಾಶಿ	39919-45998
ತಟ್ಟಿಬೆಟ್ಟೆ	33899-39669
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	41300-42872
ಗೊರಬಲು	14041-30779
ರಾಶಿ	39299-42209
ಸರಕು	51000-72096
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	243-381
ದ್ವಿತಳಿ (ಬಿ.ವಿ)	278-431

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9950	9800	9775	126.5 ಸೆಂಟ್ಸ್
ಎಸಿ	4060	3800	3775	
ಆರ್‌ಪಿ	5100	5100	5100	
ಆರ್‌ಸಿ	3000	3000	2875	1366 ಡಾಲರ್ಸ್

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ದೂರವಾಣಿ ಸಂಖ್ಯೆ: 08194–234488, E-Mail: eerdwsd.chd@gmail.com

ಸಂಖ್ಯೆ: ಗ್ರಾ.ನೀ.ಸ&ನೈ.ವಿ/ಚಿ/ಕಾಇಂ/ಪ್ರಶಾ/ಜೆ.ಜೆ.ಎಂ/1668/2020–21 ದಿನಾಂಕ: 19–03–2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು–4 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ದಾವಣಗೆರೆ/ಮುಖ್ಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವೀ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

ಕ್ರ. ಸಂ.	ಟೆಂಡರ್ ನಮೂನೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ	ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಮಿತಿ (ಮಳೆಗಾಲ ಸೇರಿ)
		ದ್ವಿ–ಲಕೋಟೆ ಪದ್ಧತಿ: 2020–21 ನೇ ಸಾಲಿನ ಜೆ.ಜೆ.ಎಂ ಯೋಜನೆ			
1	Kw-4	ಚಿತ್ರದುರ್ಗ ತಾಲ್ಲೂಕಿನ 4 ಗ್ರಾಮಗಳಲ್ಲಿ ಹಾಗೂ ಹೊಳಲ್ಕೆರೆ ತಾಲ್ಲೂಕಿನ 1 ಗ್ರಾಮದಲ್ಲಿ ಒಟ್ಟು 1280 ಕಾರ್ಯಾತ್ಮಕ ನಳಸಂಪರ್ಕಗಳನ್ನು ಕಲ್ಪಿಸುವ ಕಾಮಗಾರಿ	200.56	176.40	6 ತಿಂಗಳು
2	Kw-4	ಚಿತ್ರದುರ್ಗ ತಾಲ್ಲೂಕಿನ 4 ಗ್ರಾಮಗಳಲ್ಲಿ ಒಟ್ಟು 1471 ಕಾರ್ಯಾತ್ಮಕ ನಳಸಂಪರ್ಕಗಳನ್ನು ಕಲ್ಪಿಸುವ ಕಾಮಗಾರಿ	220.54	194.04	6 ತಿಂಗಳು
3	Kw-4	ಚಿತ್ರದುರ್ಗ ತಾಲ್ಲೂಕಿನ 5 ಗ್ರಾಮಗಳಲ್ಲಿ ಒಟ್ಟು 1186 ಕಾರ್ಯಾತ್ಮಕ ನಳಸಂಪರ್ಕಗಳನ್ನು ಕಲ್ಪಿಸುವ ಕಾಮಗಾರಿ	193.64	170.11	6 ತಿಂಗಳು
4	Kw-4	ಚಿತ್ರದುರ್ಗ ತಾಲ್ಲೂಕಿನ 2 ಗ್ರಾಮಗಳಲ್ಲಿ ಒಟ್ಟು 588 ಕಾರ್ಯಾತ್ಮಕ ನಳಸಂಪರ್ಕಗಳನ್ನು ಕಲ್ಪಿಸುವ ಕಾಮಗಾರಿ	113.70	100.15	6 ತಿಂಗಳು

(1) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 03–04–2021 ರ ಸಮಯ: 16.00 (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 05–04–2021 ರ ಸಮಯ: 11.00 (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 07–04–2021 ರ ಸಮಯ 11.00

ಕಾಮಗಾರಿಗಳ ವಿವರಗಳನ್ನು https://eproc.Karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ. ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/–
ವಾಸಾಸಂಇ/ಚಿತ್ರದುರ್ಗ/ಶಿರಡಿ ಸಾಯಿ/915/2020–21 ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ. ವಿಭಾಗ, ಚಿತ್ರದುರ್ಗ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೋವಿಡ್ ಎರಡನೇ ಅಲೆ: ಹಬ್ಬಗಳ ಆಚರಣೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಹೆಚ್ಚುತ್ತಿರುವ ಕಾರಣ ಮುಂಬರುವ ಯುಗಾದಿ, ಹೋಳಿ, ಷಬ್–ಎ–ಬರಾತ್, ಗುಡ್ ಫ್ರೈಡೇ ಹಬ್ಬಗಳ ಆಚರಣೆಗೆ ನಿರ್ಬಂಧ ವಿಧಿಸಿ ಸರ್ಕಾರ ಆದೇಶ ಹೊರಡಿಸಿದೆ.

ಯಾವುದೇ ಹಬ್ಬಗಳನ್ನು ಸಾರ್ವಜನಿಕ ಸ್ಥಳಗಳು, ಸಾರ್ವಜನಿಕ ಮೈದಾನಗಳು, ಉದ್ಯಾನ, ಮಾರುಕಟ್ಟೆ, ಧಾರ್ಮಿಕ ಪ್ರದೇಶಗಳಲ್ಲಿ ಆಚರಿಸುವಂತಿಲ್ಲ ಎಂದು ಆದೇಶ ತಿಳಿಸಿದೆ.

ಈ ಸಂಬಂಧ ಬಿಬಿಎಂಪಿ ಆಯುಕ್ತರು ಮತ್ತು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಹಿಸಬೇಕು. ಯಾರಾದರೂ ನಿಯಮ ಉಲ್ಲಂಘಿಸಿದರೆ ಅಂತಹವರ ವಿರುದ್ಧ ಸಾಂಕ್ರಾಮಿಕ ರೋಗಗಳ ಕಾಯ್ದೆ ಅಡಿ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

24 ಗಂಟೆಗಳಲ್ಲಿ ದಾಖಲೆಯ 53,476 ಪ್ರಕರಣ ದೃಢ

ನವದೆಹಲಿ ವರದಿ: ದೇಶದಾದ್ಯಂತ ಕಳೆದ 24ಗಂಟೆಗಳಲ್ಲಿ 53,476 ಕೋವಿಡ್ ಸೋಂಕು ಪ್ರಕರಣಗಳು ದೃಢಪಟ್ಟಿದ್ದು, ಇದು ಈ ವರ್ಷ ದಾಖಲಾಗಿರುವ ಗರಿಷ್ಠ ಪ್ರಕರಣಗಳಾಗಿವೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 1,17,87,534ಕ್ಕೆ ಏರಿದೆ ಎಂದು ವರದಿ ತಿಳಿಸಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ	12.56 ಕೋಟಿ ▲	1.183 ಕೋಟಿ ▲	9,78,478 ▲ (ಒಟ್ಟು ಸೋಂಕಿತರು)
ಸಕ್ರಿಯ ಪ್ರಕರಣ	2.13 ಕೋಟಿ ▲	4.21 ಲಕ್ಷ ▲	18,207 ▲
ಗುಣಮುಖ	10.04 ಕೋಟಿ ▲	1.12 ಕೋಟಿ	9,47,781 ▲
ಸಾವು	27.56 ಲಕ್ಷ ▲	1.60 ಲಕ್ಷ	12,471 ▲
ದಿನದ ವರದಿ			
ಹೊಸ ಪ್ರಕರಣ	5.06 ಲಕ್ಷ ▲	53,419 ▲	2,523 ▲
ಗುಣಮುಖ	4.44 ಲಕ್ಷ ▲	26,575 ▲	1,192 ▲
ಸಾವು	10,430 ▲	249 ▼	10 ▼

150 ಐಸಿಯುನಲ್ಲಿ ಇರುವವರು ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 90,564 ಬ್ರೆಜಿಲ್ ▲; 66,538 ಅಮೆರಿಕ ▲; 33,389 ಫ್ರಾನ್ಸ್ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 70.12 ಅಮೆರಿಕ ▼; 40.00 ಫ್ರಾನ್ಸ್ ▲; 12.36 ಬ್ರೆಜಿಲ್

ಎಲ್ಲಿ ಹೆಚ್ಚು ಸಾವು: 53,795 ಮಹಾರಾಷ್ಟ್ರ ▲; 12,641 ತಮಿಳುನಾಡು ▲; 10,978 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 26.00 ಮಹಾರಾಷ್ಟ್ರ ▲; 11.09 ಕೇರಳ ▲; 8.95 ಆಂಧ್ರಪ್ರದೇಶ ▲

ಪ್ರಜಾವಾಣಿ ಗ್ರಾಫಿಕ್ಸ್

‘ಭಾರತದ ಮೇಲೆ ಒತ್ತಡ ತಂತ್ರವೇ ಸಾಕು’

ವಾಷಿಂಗ್ಟನ್ (ಪಿಟಿಐ): ರಷ್ಯಾದಿಂದ ಮಹತ್ವದ ರಕ್ಷಣಾ ಸಾಮಗ್ರಿಗಳನ್ನು ಖರೀದಿಸದಂತೆ ಭಾರತದ ಮೇಲೆ ಒತ್ತಡ ಹೇರಬಹುದೇ ವಿನಾ ನಿರ್ಬಂಧಗಳನ್ನು ಹೇರುವ ಮಾರ್ಗ ಅನುಸರಿಸಬಾರದು ಎಂದು ಅಮೆರಿಕದ ಆಡ್ಮಿರಲ್ ಜಾನ್ ಅಕ್ವಿಲಿನೊ ಸೆನೆಟರ್‌ಗಳ ಸಭೆಯಲ್ಲಿ ತಿಳಿಸಿದ್ದಾರೆ.

ಮತ್ತೆ 740 ಅಂಶ ಕುಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಕೋವಿಡ್–19 ಪ್ರಕರಣಗಳು ದೇಶದಲ್ಲಿ ಮತ್ತೆ ಹೆಚ್ಚಾಗುತ್ತಿರುವುದು ಹಾಗೂ ಅಲ್ಲಲ್ಲಿ ಲಾಕ್‌ಡೌನ್ ಜಾರಿಯಾಗಿರುವುದು ಷೇರುಪೇಟೆಯಲ್ಲಿ ಆತಂಕಕ್ಕೆ ಕಾರಣವಾದವು. ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾದ ಪರಿಣಾಮವಾಗಿ ಸೂಚ್ಯಂಕಗಳು ಕುಸಿತ ಕಂಡವು.

ಜಾಗತಿಕ ಮಟ್ಟದಲ್ಲಿ ಕೂಡ ಷೇರು ಪೇಟೆಗಳ ವಹಿವಾಟು ಉತ್ಸಾಹದಾಯಕ ಆಗಿರಲಿಲ್ಲ. ಇದು ಕೂಡ ದೇಶಿ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿತು. ಬಿಎಸ್‌ಇ ಸೆನ್ಸೆಕ್ಸ್ 740 ಅಂಶ ಇಳಿಕೆ ಕಂಡಿತು. ನಿಫ್ಟಿ 224 ಅಂಶ ಕುಸಿಯಿತು.

‘ಸೋಂಕು ಹರಡುವಿಕೆ ಹೆಚ್ಚಾಗುತ್ತಿರುವುದು ಮಾರುಕಟ್ಟೆಯಲ್ಲಿ ನಿರಾಸೆಯ ವಾತಾವರಣ ಮೂಡಿಸಿದೆ. ಭಾರಿ ರ‍್ಯಾಲಿ ಕಂಡಿದ್ದ ಮಾರುಕಟ್ಟೆಯು ಒಂದು ತಿಂಗಳಿನಿಂದ ತುಸು ಇಳಿಕೆಯ ಹಾದಿಯಲ್ಲಿ ಇತ್ತು. ಕೋವಿಡ್ ಪ್ರಕರಣಗಳು ಜಾಸ್ತಿಯಾಗಿದ್ದು ಈ ಇಳಿಕೆಗೆ ವೇಗ ನೀಡಿದೆ’ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಗುರುವಾರ ಶೇಕಡ 1.35ರಷ್ಟು ಇಳಿಕೆ ಆಗಿದ್ದು, ತೈಲವು ಪ್ರತಿ ಬ್ಯಾರೆಲ್‌ಗೆ 63.54 ಅಮೆರಿಕನ್ ಡಾಲರ್‌ಗೆ ಮಾರಾಟವಾಗಿದೆ.

ಭಾರತ–ಇಂಗ್ಲೆಂಡ್ ಎರಡನೇ ಏಕದಿನ ಪಂದ್ಯ: ಬಟ್ಲರ್ ಬಳಗಕ್ಕೆ ಮಾಡು ಇಲ್ಲವೇ ಮಡಿ ಸ್ಥಿತಿ

ಸರಣಿ ಕೈವಶದತ್ತ ವಿರಾಟ್ ಪಡೆ ಚಿತ್ತ

ಪುಣೆ (ಪಿಟಿಐ): ಇಂಗ್ಲೆಂಡ್ ಎದುರಿನ ಟೆಸ್ಟ್ ಮತ್ತು ಚುಟುಕು ಕ್ರಿಕೆಟ್ ಸರಣಿಗಳನ್ನು ಗೆದ್ದು ಬೀಗುತ್ತಿರುವ ಭಾರತ ತಂಡವು ಈಗ ಏಕದಿನ ಸರಣಿ ಜಯದ ಹೊಸ್ತಿಲಲ್ಲಿ ನಿಂತಿದೆ.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂಸಿಎ) ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ಮತ್ತು ಜೋಸ್ ಬಟ್ಲರ್ ನೇತೃತ್ವದ ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ.

ಮೊದಲ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಮತ್ತು ಕನ್ನಡಿಗ ಪ್ರಸಿದ್ಧ ಕೃಷ್ಣ ಅವರ ಉತ್ತಮ ಬೌಲಿಂಗ್ ನೆರವಿನಿಂದ ಆತಿಥೇಯ ತಂಡವು ಜಯಿಸಿತ್ತು. ಆ ಪಂದ್ಯದಲ್ಲಿ ಗಾಯಗೊಂಡಿದ್ದ ಶ್ರೇಯಸ್ ಅಯ್ಯರ್ ಸರಣಿಯಿಂದಲೇ ಹೊರಬಿದ್ದಿದ್ದಾರೆ.

ಅದರಿಂದಾಗಿ ಮತ್ತೊಬ್ಬ 'ಮುಂಬೈಕರ್' ಸೂರ್ಯಕುಮಾರ್ ಯಾದವ್‌ಗೆ ಏಕದಿನ ಕ್ರಿಕೆಟ್ ಪದಾರ್ಪಣೆಯ ಅವಕಾಶ ಲಭಿಸುವ ಸಾಧ್ಯತೆ ನಿಚ್ಚಳವಾಗಿದೆ.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಸೂರ್ಯ ತಾವೆದುರಿಸಿದ ಮೊದಲ ಎಸೆತವನ್ನೇ ಸಿಕ್ಸರ್‌ಗೆ ಎತ್ತಿದ್ದರು. ಮಿಂಚಿನ ಅರ್ಧಶತಕ ಕೂಡ ಗಳಿಸಿದ್ದರು. ಇದರಿಂದಾಗಿ ಭಾರತದ ಬ್ಯಾಟಿಂಗ್ ಮತ್ತಷ್ಟು ಬಲಗೊಳ್ಳುವ ನಿರೀಕ್ಷೆ ಇದೆ.

ಪ್ರಥಮ ಪಂದ್ಯದಲ್ಲಿ ರೋಹಿತ್ ಜೊತೆ ಇನಿಂಗ್ಸ್‌ಗೆ ಉತ್ತಮ ಆರಂಭ ಕೊಟ್ಟಿದ್ದ ಶಿಖರ್ ಧವನ್ ಕೇವಲ ಎರಡು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡಿದ್ದರು. ನಾಯಕ ವಿರಾಟ್ ಕೊಹ್ಲಿ ಮತ್ತು ಕನ್ನಡಿಗ ಕೆ.ಎಲ್. ರಾಹುಲ್ ಅರ್ಧಶತಕಗಳನ್ನು ಹೊಡೆದಿದ್ದರು. ಕೃಣಾಲ್ ಪಾಂಡ್ಯ ತಮ್ಮ ಚೊಚ್ಚಲ ಏಕದಿನ ಪಂದ್ಯದಲ್ಲಿ ಶರವೇಗದ ಅರ್ಧ ಶತಕ ಗಳಿಸಿದ ದಾಖಲೆ ಬರೆದಿದ್ದರು. ಅದರಿಂದಾಗಿ ಬೃಹತ್ ಮೊತ್ತ ಪೇರಿಸಲು ಸಾಧ್ಯವಾಗಿತ್ತು.

ಅಭ್ಯಾಸದ ನಡುವೆ ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ಮಧ್ಯಮವೇಗಿ ಶಾರ್ದೂಲ್ ಠಾಕೂರ್, ಭುವನೇಶ್ವರ್ ಕುಮಾರ್ ಮತ್ತು ಪ್ರಸಿದ್ಧ ಕೃಷ್ಣ ಅವರು ಇಂಗ್ಲೆಂಡ್ ತಂಡದ ಜೊತೆಯಾಟಗಳನ್ನು ಮುರಿದಿದ್ದು ಫಲ ನೀಡಿತು. ಅದರಿಂದಾಗಿ ಜೇಸನ್ ರಾಯ್ ಮತ್ತು ಜಾನಿ ಬೆಸ್ಟೊ ಜೋಡಿಯು ನೀಡಿದ ಅಮೋಘ ಆರಂಭದ ಲಾಭ ಪಡೆಯುವಲ್ಲಿ ಪ್ರವಾಸಿ ಬಳಗವು ವಿಫಲವಾಯಿತು. ನಿಧಾನಗತಿಯ ಕಟರ್ ಮತ್ತು ಪರಿಣಾಮಕಾರಿ ಸ್ವಿಂಗ್‌ಗಳನ್ನು ಬಳಸಿದ ಬೌಲರ್‌ಗಳು ಯಶಸ್ವಿಯಾದರು.

ಬೆನ್ ಸ್ಟೋಕ್ಸ್ ಮತ್ತು ಸ್ಯಾಮ್ ಬಿಲಿಂಗ್ಸ್ ಅವರ ಬ್ಯಾಟಿಂಗ್ ವೈಫಲ್ಯವು ತಂಡದ ಹಿನ್ನಡೆಗೆ ಕಾರಣವಾಯಿತು. ಮಾರ್ಕ್ ವುಡ್, ಟಾಮ್ ಕರನ್ ಮತ್ತು ಸ್ಯಾಮ್ ಕರನ್ ಅವರ ಎಸೆತಗಳನ್ನು ಭಾರತದ ಬ್ಯಾಟಿಂಗ್ ಪಡೆಯು ದೂಳೀಪಟ ಮಾಡಿತ್ತು.

ಆದ್ದರಿಂದ ಇಂಗ್ಲೆಂಡ್ ಪಂದ್ಯದಲ್ಲಿ ಬೌಲಿಂಗ್ ವಿಭಾಗದಲ್ಲಿ ಬದಲಾವಣೆ ಮಾಡುವ ಸಾಧ್ಯತೆ ಇದೆ. ಪಿಚ್ ನಿಧಾನಗತಿಯ ಬೌಲಿಂಗ್‌ಗೆ ಹೆಚ್ಚು ನೆರವಾಗುವ ಸಾಧ್ಯತೆ ಇದೆ. ರಾತ್ರಿಯ ಇಬ್ಬನಿಯಲ್ಲಿ ಬೌಲಿಂಗ್ ಮಾಡುವುದು ಕೂಡ ಸವಾಲಾಗಲಿದೆ. ಆದ್ದರಿಂದ ಟಾಸ್ ಗೆದ್ದ ತಂಡವು ಮಾಡುವ ನಿರ್ಣಯವೂ ಪ್ರಮುಖವಾಗಲಿದೆ.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಶಿಖರ್ ಧವನ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಕೃಣಾಲ್ ಪಾಂಡ್ಯ, ವಾಷಿಂಗ್ಟನ್ ಸುಂದರ್, ಟಿ. ನಟರಾಜನ್, ಭುವನೇಶ್ವರ್ ಕುಮಾರ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್.

ಇಂಗ್ಲೆಂಡ್: ಜೊಸ್ ಬಟ್ಲರ್ (ನಾಯಕ), ಮೊಯಿನ್ ಅಲಿ, ಜಾನಿ ಬೆಸ್ಟೊ, ಸ್ಯಾಮ್ ಬಿಲಿಂಗ್ಸ್, ಸ್ಯಾಮ್ ಕರನ್, ಟಾಮ್ ಕರನ್, ಲಿಯಾಮ್ ಲಿವಿಂಗ್‌ಸ್ಟೋನ್, ಮ್ಯಾಟ್ ಪಾರ್ಕಿನ್ಸನ್, ಆದಿಲ್ ರಶೀದ್, ಜೇಸನ್ ರಾಯ್, ಬೆನ್ ಸ್ಟೋಕ್ಸ್, ರೀಸ್ ಟಾಪ್ಲಿ, ಮಾರ್ಕ್ ವುಡ್, ಜೇಕ್ ಬೆಲ್, ಕ್ರಿಸ್ ಜೋರ್ಡಾನ್, ಡೇವಿಡ್ ಮಲಾನ್.

ಮುಖ್ಯಾಂಶಗಳು

94 ಆರಂಭಿಕ ಬ್ಯಾಟ್ಸ್‌ಮನ್ ಶಿಖರ್ ಧವನ್ ಏಕದಿನ ಕ್ರಿಕೆಟ್‌ನಲ್ಲಿ ಆರು ಸಾವಿರ ರನ್‌ಗಳ ಮೈಲುಗಲ್ಲು ಮುಟ್ಟಲು ಬೇಕಿರುವ ರನ್‌ಗಳು

1 ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ ಕ್ರಿಕೆಟ್‌ನಲ್ಲಿ ಗಳಿಸಿರುವ ಒಟ್ಟು 71 ಶತಕಗಳ ದಾಖಲೆಯನ್ನು ಸರಿಗಟ್ಟಲು ವಿರಾಟ್ ಕೊಹ್ಲಿಗೆ ಅಗತ್ಯವಿರುವುದು ಒಂದೇ ಶತಕ

61 ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿರುವ ಅರ್ಧಶತಕಗಳು

ಅಕ್ರಮಣಕಾರಿ ಗುಣವು ವಿರಾಟ್ ಕೊಹ್ಲಿ ಮತ್ತು ಅವರ ತಂಡಕ್ಕೆ ಅನುಕೂಲವಾಗಿರಬಹುದು. ಅಂತಹ ಧೋರಣೆಯಿಂದ ನಮ್ಮ ತಂಡ ದೂರ ಇದೆ

ಬೆನ್ ಸ್ಟೋಕ್ಸ್, ಇಂಗ್ಲೆಂಡ್ ಆಟಗಾರ

ಸೂರ್ಯಕುಮಾರ್ –ಎಎಫ್‌ಪಿ ಚಿತ್ರ

ಚಿನ್ನ ಗೆದ್ದ ಚಿಂಕಿ, ಮನು, ರಾಹಿ

ಶೂಟಿಂಗ್ ವಿಶ್ವಕಪ್: ರೈಫಲ್ ತ್ರಿ ಪೊಸಿಷನ್‌ನಲ್ಲಿ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಚಿಂಕಿ ಯಾದವ್, ಮನು ಭಾಕರ್ ಮತ್ತು ರಾಹಿ ಸರ್ನೋಬತ್ ಅವರು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ ಮಹಿಳೆಯರ 25 ಮೀಟರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಗುರುವಾರ ಚಿನ್ನ ಗಳಿಸಿದರು.

ಭಾರತದ ಶೂಟರ್‌ಗಳು 17 ಸ್ಕೋರ್ ದಾಖಲಿಸಿ ಪೋಲೆಂಡ್‌ನ ಜೊನಾ ಇವೋನಾ ವಾರ್ಸೊನೊವ್‌ಸ್ಕ, ಜುಲಿತ ಬೊರೆಕ್ ಮತ್ತು ಅಗ್ನೀಸ್ಕ ಕೊರೆಜೊವೊ ಅವರನ್ನು ಹಿಂದಿಕ್ಕಿದರು. ಪೋಲೆಂಡ್ ಶೂಟರ್‌ಗಳಿಗೆ ಏಳು ಸ್ಕೋರ್ ಮಾಡಲಷ್ಟೆ ಸಾಧ್ಯವಾಯಿತು.

ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್‌ನಲ್ಲಿ ಬೆಳಿಗ್ಗೆ ನಡೆದ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್‌ನ ತಂಡ ವಿಭಾಗದಲ್ಲಿ ಭಾರತ ಬೆಳ್ಳಿ ಪದಕ ಗಳಿಸಿತು. ಅಂಜುಮ್ ಮೌದ್ಗಿಲ್, ಶ್ರೇಯಾ ಸಕ್ಸೇನಾ ಮತ್ತು ಗಾಯತ್ರಿ ನಿತ್ಯಾನಂದಂ ಈ ವಿಭಾಗದಲ್ಲಿ ಸ್ಪರ್ಧಿಸಿದ್ದರು.

ಫೈನಲ್‌ನಲ್ಲಿ ಭಾರತದ ಶೂಟರ್‌ಗಳು 43 ಸ್ಕೋರ್ ಗಳಿಸಿದರು. ಪೋಲೆಂಡ್ ತಂಡ 47 ಸ್ಕೋರ್‌ನೊಂದಿಗೆ ಚಿನ್ನ ಗೆದ್ದುಕೊಂಡಿತು. ಅರ್ಹತಾ ಸುತ್ತಿನಲ್ಲಿ ಭಾರತ 1304 ಸ್ಕೋರ್ ಮಾಡಿದ್ದರೆ ಅನೆತಾ ಸ್ಟ್ಯಾಂಕಿವಿಸ್ಕ್, ಅಲೆಕ್ಸಾಂಡ್ರ ಸುಟ್ಕೊ ಮತ್ತು ನತಾಲಿಯಾ ಕೊಚನ್‌ಸ್ಕ ಅವರನ್ನು ಒಳಗೊಂಡ ಪೋಲೆಂಡ್ ತಂಡ 864 ಮಾತ್ರ ಗಳಿಸಿತ್ತು.

ಇಂಡೊನೇಷ್ಯಾದ ವಿದ್ಯಾ ರಫಿಕಾ ತೊಯ್ಯಿಬ, ಮೋನಿಕಾ ದಾರ್ಯಂತಿ ಮತ್ತು ಔಡ್ರೆ ಜಹ್ರಾ ಧಿಯಾನಿಸಾ 47–43ರಲ್ಲಿ ಹಂಗರಿಯ ಶೂಟರ್‌ಗಳನ್ನು ಹಿಂದಿಕ್ಕಿ ಕಂಚಿನ ಪದಕ ಗೆದ್ದುಕೊಂಡರು.

ರಾಹಿ ಸರ್ನೋಬತ್ (ಎಡದಿಂದ ಮೊದಲನೆಯವರು), ಚಿಂಕಿ ಯಾದವ್ (ಮಧ್ಯ) ಮತ್ತು ಮನು ಭಾಕರ್ ಚಿನ್ನಕ್ಕೆ ಗುರಿ ಇಟ್ಟ ಸಂದರ್ಭ –ಎಎಫ್‌ಪಿ ಚಿತ್ರ

ಹಂಗರಿ ತಂಡದಲ್ಲಿ ಆಂತರಿಕ ಕಲಹ

ಹಂಗರಿ ತಂಡದಲ್ಲಿನ ಆಂತರಿಕ ಕಲಹದಿಂದಾಗಿ ಭಾರತದ ಎದುರಿನ ಪುರುಷರ 50 ಮೀಟರ್ ರೈಫಲ್ 3 ಪೊಸಿಷನ್‌ನ ಫೈನಲ್ ಮುಂದೂಡಲಾಯಿತು. ತಂಡದ ಪ್ರಮುಖ ಶೂಟರ್ ಪೀಟರ್ ಸಿದಿ ಸೃಷ್ಟಿಸಿರುವ ವಿವಾದದಿಂದಾಗಿ ಹಂಗರಿ ತಂಡ ಸ್ಪರ್ಧೆಯಿಂದ ಹಿಂದೆ ಸರಿಯಿತು.

ಅಶಿಸ್ತು ತೋರಿದ ತಂಡವನ್ನು ಆ ಸ್ಪರ್ಧೆಯಿಂದ ಅನರ್ಹಗೊಳಿಸಲಾಯಿತು. ಹೀಗಾಗಿ ಚಿನ್ನದ ಪದಕಕ್ಕಾಗಿ ಶುಕ್ರವಾರ ಭಾರತ ಮತ್ತು ಮೂರನೇ ಸ್ಥಾನದಲ್ಲಿರುವ ಅಮೆರಿಕ ನಡುವೆ ಪೈಪೋಟಿ ನಡೆಯಲಿದೆ. ಬುಧವಾರ ಅರ್ಹತಾ ಸುತ್ತಿನಲ್ಲಿ ಭಾರತ ಮತ್ತು ಹಂಗರಿ ಕ್ರಮವಾಗಿ ಮೊದಲೆರಡು ಸ್ಥಾನಗಳನ್ನು ಗಳಿಸಿದ್ದವು. ಗುರುವಾರ ಬೆಳಿಗ್ಗೆ 11 ಗಂಟೆಗೆ ಫೈನಲ್ ನಿಗದಿಯಾಗಿತ್ತು.

ಆದರೆ ಹಂಗರಿಯ ಇಸ್ತವಾನ್ ಪೇನಿ ಮತ್ತು ಜವಾನ್ ಪೆಕ್ಲರ್ ಸ್ಪರ್ಧೆಯಿಂದ ಹಿಂದೆ ಸರಿದರು. ಸಿದಿ ಜೊತೆ ಕಣಕ್ಕೆ ಇಳಿಯಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದರು. 42 ವರ್ಷದ ಸಿದಿ ಐದು ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಮಾಜಿ ವಿಶ್ವ ಚಾಂಪಿಯನ್.

ಬುಧವಾರದ ಎಲ್ಲ ಪದಕಗಳು ಭಾರತದ ಪಾಲಾಗಿದ್ದವು. ಚಿಂಕಿ ಯಾದವ್, ಮನು ಭಾಕರ್ ಮತ್ತು ಸರ್ನೋಬತ್ ಮಿಂಚಿದ್ದರು. ಸದ್ಯ ಭಾರತ 10 ಚಿನ್ನ ಮತ್ತು ಆರು ಬೆಳ್ಳಿಯೊಂದಿಗೆ 21 ಪದಕಗಳನ್ನು ಹೊಂದಿದ್ದು ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ.

ಕಿರ್ಮಾನಿ 'ಪಿಚ್ ಪರ್ಫೆಕ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು, ಯುವಸಮುದಾಯಕ್ಕೆ ಸ್ಫೂರ್ತಿದಾಯಕವಾದ ಯಶೋಗಾಥೆ ಪರಿಚಯಿಸಲು ಯೂಟ್ಯೂಬ್‌ನಲ್ಲಿ ವಾಹಿನಿಯನ್ನು ಆರಂಭಿಸಿದ್ದೇನೆ ಎಂದು ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ತಿಳಿಸಿದರು.

'ಲಾಕ್‌ಡೌನ್ ಆದಾಗ ಎಂಟು–ಒಂಬತ್ತು ತಿಂಗಳು ಬಹಳಷ್ಟು ಜನರು ಮನೆಯಲ್ಲಿ ಉಳಿದರು. ಪರಿಚಯದ ವಿಡಿಯೊಗ್ರಾಫರ್‌ಗಳು ಕೆಲಸ ಕಳೆದುಕೊಂಡಿದ್ದರು. ಅವರೊಂದಿಗೆ ಮಾತನಾಡುವಾಗ ಯುಟ್ಯೂಬ್ ವಾಹಿನಿ ಮಾಡುವ ಯೋಚನೆ ಬಂದಿತು. ಇದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಯಶಸ್ವಿಯಾಗಿರುವ ವ್ಯಕ್ತಿಗಳ ಕುರಿತ ಯಶೋಗಾಥೆಗಳನ್ನು ದಾಖಲಿಸುವ ವಾಹಿನಿಯಾಗಿದೆ. ಕಿರ್ಮಾನಿಸ್ ಪಿಚ್ ಪರ್ಫೆಕ್ಸ್ ಎಂಬ ಶೀರ್ಷಿಕೆ ನೀಡಲಾಗಿದೆ' ಎಂದು ಕಿರ್ಮಾನಿ ಸುದ್ದಿಗಾರರಿಗೆ ತಿಳಿಸಿದರು.

ಸೈಯದ್ ಕಿರ್ಮಾನಿ

'ನಾನು ಸಾಮಾಜಿಕ ಜಾಲತಾಣಗಳಿಂದ ಸದಾ ದೂರ. ಯಾವುದೇ ತಾಣದಲ್ಲೂ ನನ್ನ ಖಾತೆಯಿಲ್ಲ. ಆದರೆ, ಮೊದಲ ಬಾರಿಗೆ ಯುಟ್ಯೂಬ್‌ನಲ್ಲಿ ಕಾರ್ಯಾರಂಭ ಮಾಡಿದ್ದೇನೆ' ಎಂದರು. ಆತ್ಮಚರಿತ್ರೆ ಬರೆಯುತ್ತಿರುವುದಾಗಿಯೂ ತಿಳಿಸಿದರು.

ವಿಕೆಟ್‌ಕೀಪರ್ ರಿಷಭ್ ಪಂತ್ ಕುರಿತು ಪ್ರತಿಕ್ರಿಯಿಸಿದ ಕಿರ್ಮಾನಿ, 'ವಿಕೆಟ್ ಹಿಂದೆ ಮಾತನಾಡುವುದು ಅವರ ಶೈಲಿ. ಆದರೆ ಬ್ಯಾಟ್ಸ್‌ಮನ್‌ಗಳ ಏಕಾಗ್ರತೆಗೆ ಭಂಗ ತರುವಂತಹ ಚಾಟಿಂಗ್, ಸ್ಲೆಡ್ಜಿಂಗ್‌ಗಳು ಸಮ್ಮತವಲ್ಲ' ಎಂದರು. ಸಾಧಿಕ್ ಕಿರ್ಮಾನಿ ಇದ್ದರು.

ಮಾರ್ಗನ್‌ಗೆ ಗಾಯ: ಬಟ್ಲರ್‌ಗೆ ನಾಯಕತ್ವ

ಪುಣೆ (ಪಿಟಿಐ): ಇಂಗ್ಲೆಂಡ್ ತಂಡದ ನಾಯಕ ಏಯಾನ್ ಮಾರ್ಗನ್ ಅವರು ಏಕದಿನ ಕ್ರಿಕೆಟ್ ಸರಣಿಯ ಎರಡೂ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಜೋಸ್ ಬಟ್ಲರ್ ತಂಡವನ್ನು ಮುನ್ನಡೆಸುವರು.

ಸರಣಿಯ ಮೊದಲ ಪಂದ್ಯದಲ್ಲಿ ಚೆಂಡು ಬಡಿದ ಕಾರಣ ಮಾರ್ಗನ್ ಅವರ ಹೆಬ್ಬೆರಳು ಮತ್ತು ತೋರುಬೆರಳಿಗೆ ಪೆಟ್ಟು ಬಿದ್ದಿತ್ತು. ಗಾಯಕ್ಕೆ ನಾಲ್ಕು ಹೊಲಿಗೆಗಳನ್ನು ಹಾಕಲಾಗಿತ್ತು. ಅವರ ಬದಲಿಗೆ ಸ್ಥಾನ ಪಡೆದಿರುವ ಲಿಯಾಮ್ ಲಿವಿಂಗ್‌ಸ್ಟೋನ್ ಪದಾರ್ಪಣೆ ಮಾಡಲಿದ್ದಾರೆ.

ತಂಡದ ಮತ್ತೊಬ್ಬ ಆಟಗಾರ ಸ್ಯಾಮ್ ಬಿಲಿಂಗ್ಸ್ ಕೂಡ ಗಾಯಗೊಂಡಿದ್ದಾರೆ.

ಬಯೊಬಬಲ್‌ನಿಂದ ಹೊರಬಂದ ಶ್ರೇಯಸ್

ಪುಣೆ (ಪಿಟಿಐ): ಭುಜದ ನೋವಿನಿಂದ ಬಳಲುತ್ತಿರುವ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಭಾರತ ತಂಡದ ಜೀವಸುರಕ್ಷಾ ವಲಯದಿಂದ ಹೊರಬಂದಿದ್ದು ಇನ್ನಷ್ಟು ಬಲಶಾಲಿಯಾಗಿ ಕ್ರಿಕೆಟ್ ಕಣಕ್ಕೆ ಮರಳುವೆ ಎಂಬ ಭರವಸೆಯ ನುಡಿಗಳನ್ನಾಡಿದ್ದಾರೆ.

ಇಂಗ್ಲೆಂಡ್ ಎದುರಿನ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುತ್ತಿದ್ದಾಗ ಶ್ರೇಯಸ್ ಅವರ ಎಡ ಭುಜಕ್ಕೆ ಗಾಯವಾಗಿತ್ತು. ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿರುವುದರಿಂದ ನಾಲ್ಕು ತಿಂಗಳು ಕಣಕ್ಕೆ ಇಳಿಯಲು ಸಾಧ್ಯವಿಲ್ಲ. ಹೀಗಾಗಿ ಉಳಿದೆರಡು ಪಂದ್ಯಗಳಿಂದ ಮತ್ತು ಐಪಿಎಲ್ ಟೂರ್ನಿಯಿಂದ ಅನಿವಾರ್ಯವಾಗಿ ದೂರ ಉಳಿಯಬೇಕಾಗಿ ಬಂದಿದೆ.

'ಶ್ರೇಯಸ್ ಅಯ್ಯರ್ ಬಯೋ ಬಬಲ್‌ನಿಂದ ಗುರುವಾರ ಹೊರ ಹೋಗಿದ್ದಾರೆ' ಎಂದು ಬಿಸಿಸಿಐ ಹೇಳಿದೆ. ಇದೇ ವೇಳೆ ಶ್ರೇಯಸ್ ಅಯ್ಯರ್ ಟ್ವೀಟ್ ಮಾಡಿ 'ತಂಡ ತೊರೆಯುತ್ತಿರುವುದು ಬೇಸರದ ವಿಷಯ. ಆದರೆ ಚಿಕಿತ್ಸೆಯ ನಂತರ ಇನ್ನಷ್ಟು ಬಲಶಾಲಿಯಾಗಿ ಮರಳಲಿದ್ದೇನೆ' ಎಂದಿದ್ದಾರೆ. 'ನನ್ನ ಮೇಲೆ ಪ್ರೀತಿ–ವಿಶ್ವಾಸವಿರಿಸಿ ಕಾಳಜಿ ವಹಿಸಿರುವ ಎಲ್ಲರಿಗೂ ಧನ್ಯವಾದಗಳು' ಎಂದೂ ಅವರು ಬರೆದಿದ್ದಾರೆ.

ಇಂಗ್ಲಿಷ್ ಲೀಗ್‌ನಲ್ಲಿ ಆಡುವ ಲ್ಯಾಂಕಾಶೈರ್ ತಂಡವು ಜುಲೈ ತಿಂಗಳಲ್ಲಿ ನಡೆಯಲಿರುವ ಏಕದಿನ ಟೂರ್ನಿಯಲ್ಲಿ ಆಡಲು ಶ್ರೇಯಸ್ ಅವರನ್ನು ಕರೆಸಿಕೊಂಡಿತ್ತು. ಆ ಒಪ್ಪಂದದಿಂದಲೂ ಹೊರಬರಬೇಕಾಗಿದೆ.

ಭಾರತೀಯ ಶೈಲಿ ಕುಸ್ತಿ ಸಂಸ್ಥೆಗೆ ಮಾನ್ಯತೆ

ನವದೆಹಲಿ (ಪಿಟಿಐ): ಭಾರತೀಯ ಶೈಲಿಯ ಕುಸ್ತಿ ಸಂಸ್ಥೆಗೆ (ಐಎಸ್‌ಡಬ್ಲ್ಯುಎಐ) ಕೇಂದ್ರ ಕ್ರೀಡಾ ಸಚಿವಾಲಯವು ರಾಷ್ಟ್ರೀಯ ಕ್ರೀಡಾ ಫೆಡರೇಷನ್ (ಎನ್‌ಎಸ್‌ಎಫ್) ಮಾನ್ಯತೆ ನೀಡಿದೆ. ಇದರೊಂದಿಗೆ ಸರ್ಕಾರದಿಂದ ಅನುದಾನ ಹಾಗೂ ನೆರವನ್ನು ಪಡೆಯಲು ಸಂಸ್ಥೆಯು ಅರ್ಹತೆ ಗಳಿಸಿದೆ.

'ಇತರ ಫೆಡರೇಷನ್‌ಗಳಿಗೆ ದೊರೆಯುವ ಹಲವು ಸವಲತ್ತುಗಳು ನಮ್ಮ ಸಂಸ್ಥೆಗೂ ಸಿಗಲಿವೆ. ಈ ಶೈಲಿಯಲ್ಲಿ ಪ್ರಮುಖ ಅಂತರಾಷ್ಟ್ರೀಯ ಕುಸ್ತಿಪಟುಗಳು ಸೆಣಸಬಹುದಾಗಿದೆ' ಎಂದು ಐಎಸ್‌ಡಬ್ಲ್ಯುಎಐ ಹೇಳಿದೆ.

ಐಎಸ್‌ಡಬ್ಲ್ಯುಎಐ 1958ರಲ್ಲಿ ಸ್ಥಾಪನೆಯಾಗಿತ್ತು. ಭಾರತೀಯ ಶೈಲಿ ಕುಸ್ತಿಯು ಸಾಂಪ್ರದಾಯಿಕ ದೇಶಿ ಕ್ರೀಡೆ ಯಾಗಿದ್ದು, ಮಣ್ಣಿನ ಮೇಲೆ ಹಾಗೂ ಮ್ಯಾಟ್‌ಗಳ ಮೇಲೆ ಪೈಲ್ವಾನರು ಸೆಣಸುತ್ತಾರೆ.

ಸೈನಾ, ಶ್ರೀಕಾಂತ್‌ಗೆ ಜಯ

ಪ್ಯಾರಿಸ್ (ಪಿಟಿಐ): ಭಾರತದ ಸೈನಾ ನೆಹ್ವಾಲ್ ಮತ್ತು ಕಿದಂಬಿ ಶ್ರೀಕಾಂತ್ ಇಲ್ಲಿ ನಡೆಯುತ್ತಿರುವ ಆರ್ಲಿಯನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಎಂಟರ ಘಟ್ಟಕ್ಕೆ ಪ್ರವೇಶಿಸಿದ್ದಾರೆ.

ಸೈನಾ ನೆಹ್ವಾಲ್

ಗುರುವಾರ ನಡೆದ ಪಂದ್ಯದಲ್ಲಿ 18-21, 21-15, 21-10ರಿಂದ ಸೈನಾ ಫ್ರಾನ್ಸ್‌ನ ಮೇರಿ ಬ್ಯಾಟೊಮೆನ್ ವಿರುದ್ಧ ಜಯಿಸಿದರು.

51 ನಿಮಿಷಗಳ ಹಣಾಹಣಿಯಲ್ಲಿ ಸೈನಾ ಮೊದಲ ಗೇಮ್‌ನಲ್ಲಿ ನಿರಾಸೆ ಅನುಭವಿಸಿದ್ದರು. ನಂತರ ತಿರುಗೇಟು ನೀಡಿದ ಜಯವನ್ನು ಒಲಿಸಿಕೊಂಡರು.

ಶ್ರೀಕಾಂತ್ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 21–17, 22–20ರಲ್ಲಿ ಮಲೇಷ್ಯಾದ ಚೀಮ್ ಜುನ್ ವೀ ಎದುರು ಜಯ ಗಳಿಸಿದ್ದರು.

ಭಾರತದ ಇರಾ ಶರ್ಮಾ 21-18, 21-13ರಿಂದ ಬಲ್ಗೇರಿಯಾದ ಮರಿಯಾ ಮಿಟ್ಸೊವಾ ವಿರುದ್ಧ ಜಯಿಸಿ, ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಅವರು ಡೆನ್ಮಾರ್ಕ್‌ನ ಲೈನ್ ಕ್ರಿಸ್ಟೊಫೆರಸನ್ ವಿರುದ್ಧ ಸೆಣಸುವ ಸಾಧ್ಯತೆ ಇದೆ.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಸಿಕ್ಕಿ ರೆಡ್ಡಿ ಜೋಡಿ ಕ್ವಾರ್ಟರ್‌ಫೈನಲ್ ತಲುಪಿದೆ.

ಭಾರತದ ಜೋಡಿ 21–9, 17–21, 21–19ರಿಂದ ಡೆನ್ಮಾರ್ಕಿನ ಅಮೆಲಿ ಮಾಗ್ಲೆಂಡ್ ಮತ್ತು ಫ್ರೆಜಾ ರೆವನ್ ವಿರುದ್ಧ ಜಯಿಸಿತು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಎಂ.ಆರ್. ಅರ್ಜುನ್ ಮತ್ತು ಧ್ರುವ ಕಪಿಲಾ 21–14, 21–16ರಿಂದ ಇಂಗ್ಲೆಂಡ್‌ನ ಮ್ಯಾಥ್ಯೂ ಕ್ಲೇರ್ ಮತ್ತು ಏಥಾನ್ ವ್ಯಾನ್ ಲೀಯುನ್ ವಿರುದ್ಧ ಜಯಿಸಿದರು.

ಪ್ಯಾರಾ ಅಥ್ಲೆಟಿಕ್ಸ್: ದೀಪಿಕಾ, ಕೇಶವಮೂರ್ತಿಗೆ ಬೆಳ್ಳಿ; ಸಂಗೀತಾ ಸತೀಶಗೆ ಕಂಚಿನ ಪದಕ

ಓಟದಲ್ಲಿ ಮಿಂಚಿದ ಶರತ್, ಶಾಲಿನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶರತ್ ಎಂ.ಎಸ್ ಮತ್ತು ಶಾಲಿನಿ ಎಸ್ ಅವರು ನಗರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಓಟದ ಸ್ಪರ್ಧೆಗಳಲ್ಲಿ ಗುರುವಾರ ಚಿನ್ನ ಗೆದ್ದು ಸಂಭ್ರಮಿಸಿದರು.

ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಸಮಿತಿ, ರಾಜ್ಯ ಅಥ್ಲೆಟಿಕ್ ಸಂಸ್ಥೆ ಮತ್ತು ತಮಿಳುನಾಡು ಅಥ್ಲೆಟಿಕ್ ಸಂಸ್ಥೆ ಆಯೋಜಿಸಿರುವ ಕೂಟದ ಪುರುಷರ ವಿಭಾಗದ 1500 ಮೀಟರ್ಸ್ ಓಟದಲ್ಲಿ ಶರತ್ ಮತ್ತು ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಶಾಲಿನಿ ಸಾಧನೆ ಮಾಡಿದರು.

ಪುರುಷರ ಟಿ11 ವಿಭಾಗದ 1500 ಮೀಟರ್ಸ್ ಓಟದಲ್ಲಿ ಕರ್ನಾಟಕದ ಕೇಶವಮೂರ್ತಿ ಮತ್ತು ಮಹಿಳೆಯರ ಟಿ13 ವಿಭಾಗದ 100 ಮೀಟರ್ಸ್ ಓಟದಲ್ಲಿ ದೀಪಿಕಾ ಬೆಳ್ಳಿ ಗಳಿಸಿದರು.

ಪುರುಷರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಸತೀಶ ಎ.ವಿ ಮತ್ತು ಮಹಿಳೆಯರ ಟಿ42/63 ವಿಭಾಗದ 100 ಮೀಟರ್ಸ್ ಓಟದಲ್ಲಿ ಸಂಗೀತಾ ಕಂಚಿನ ಪದಕ ಗೆದ್ದುಕೊಂಡರು.

ಎರಡನೇ ದಿನದ ಫಲಿತಾಂಶಗಳು: ಪುರುಷರ ಡಿಸ್ಕಸ್ ಥ್ರೋ; ಎಫ್–32, 33,34: ನಿತಿನ್ ಚೌಧರಿ (ಗುಜರಾತ್)–1, ದೇವರ್ಷಿ (ಹರಿಯಾಣ)–2. ಸತೀಶ ಎ.ವಿ (ಕರ್ನಾಟಕ)–3; 100 ಮೀ ಓಟ: ಟಿ38: ಅಜಯ್ ಕುಮಾರ್ (ಉತ್ತರ ಪ್ರದೇಶ)–1, ಚಂದನ್ ವರ್ಮಾ (ರಾಜಸ್ಥಾನ)–2, ಗೌರವ್ ಕುಮಾರ್ (ದೆಹಲಿ)–3; ಟಿ63: ಸೊಲೈರಾಜ್ (ತಮಿಳುನಾಡು)–1; ಟಿ53/54: ಮನೋಜ್ ಕುಮಾರ್ (ತಮಿಳುನಾಡು)–1, ಅನಿಲ್ ಕುಮಾರ್ (ಹರಿಯಾಣ)–2, ಮಣಿ ಕಂಠನ್ (ತಮಿಳುನಾಡು)–3; ಟಿ–36: ವಿಕಾಸ್ ದಗಾರ್ (ದೆಹಲಿ)–1, ಸೋಂಬೀರ್ (ಹರಿಯಾಣ)–2, ದಿನೇಶ್ ಕುಮಾರ್ (ಹರಿಯಾಣ)–3; ಟಿ35: ನಾರಾಯಣ್ ಠಾಕೂರ್ (ದೆಹಲಿ)–1, ರವಿಕುಮಾರ್ (ಉತ್ತರ ಪ್ರದೇಶ)–2, ಜತಿನ್ ಸಿಂಗ್ (ದೆಹಲಿ)–3; 1500 ಮೀಟರ್ಸ್: ಟಿ 37/38: ರಮಣ್ ಶರ್ಮಾ (ಹರಿಯಾಣ)–1, ನಿಯಾಸ್ (ಕೇರಳ)–2, ಸಂಜಯ್ ಕುಮಾರ್ (ಹರಿಯಾಣ)–3; ಟಿ20: ಇಶಾನ್ (ರಾಜಸ್ಥಾನ್)–1, ಗೌತಮ್ (ತಮಿಳುನಾಡು)–2, ಲಕ್ಷ್ಮಿ ನರಸಿಂಹ (ತಮಿಳುನಾಡು)–3; ಟಿ12/13: ಶರತ್ ಎಂ.ಎಸ್ (ಕರ್ನಾಟಕ)–1, ಬಲವಂತ ಸಿಂಗ್ (ದೆಹಲಿ)–2, ರಾಹುಲ್ ಕುಮಾರ್ (ದೆಹಲಿ)–3; ಟಿ45/46/47: ರಾಕೇಶ್ (ರಾಜಸ್ಥಾನ್)–1, ಸುಂದರ್ ಸಿಂಗ್ (ಉತ್ತರಾಖಂಡ್)–2, ಪ್ರಮೋದ್ (ಹರಿಯಾಣ)–3; ಟಿ11: ಅಂಕುರ್ ಧಾಮ (ಹರಿಯಾಣ)–1, ಕೇಶವಮೂರ್ತಿ ಕೆ.ಜಿ (ಕರ್ನಾಟಕ)–2, ಗೌರವ್ ಸಿಂಗ್ (ದೆಹಲಿ)–3.

ಮಹಿಳೆಯರ ಡಿಸ್ಕಸ್ ಥ್ರೋ; ಎಫ್ 51: ಏಕತಾ (ಹರಿಯಾಣ)–1, ರಾಮ್ ದೇವಿ (ಹರಿಯಾಣ)–2; ಎಫ್ 54: ಪೂಜಾ ಯಾದವ್ (ಹರಿಯಾಣ)–1, ಸಂಗೀತ (ದೆಹಲಿ)–2, ಕವಿತಾ ಕುಮಾರಿ (ಹರಿಯಾಣ)–3; ಎಫ್ 55: ಕರಮ್ ಜ್ಯೋತಿ (ಹರಿಯಾಣ)–1, ಸಾಕ್ಷಿ (ದೆಹಲಿ)–2, ಜ್ಯೋತಿ (ರಾಜಸ್ಥಾನ)–3; ಎಫ್ 56: ಕುಸುಮ್ ಕುಮಾರಿ (ಹರಿಯಾಣ)–1, ಫಾತಿಮಾ (ಉತ್ತರ ಪ್ರದೇಶ)–2, ಸಾಧನಾ (ರಾಜಸ್ಥಾನ)–3; 100 ಮೀ; ಟಿ 36: ಮೀನಾ ವಿ (ತಮಿಳುನಾಡು)–1, ಪ್ರಿಯಾಂಕಾ (ದೆಹಲಿ)–2, ಜೀತು ಕನ್ವರ್ (ರಾಜಸ್ಥಾನ)–3, ಟಿ11: ನಿಧಿ ಮಿಶ್ರಾ (ದೆಹಲಿ)–1, ನೀಲಂ ಪಲ್ಲವಿ (ಆಂಧ್ರಪ್ರದೇಶ)–2, ಚೊನ್ಸಿನ್ (ದೆಹಲಿ)–3; ಟಿ13: ಸಿಮ್ರನ್ (ದೆಹಲಿ)–1, ದೀಪಿಕಾ (ಕರ್ನಾಟಕ)–2, ಶ್ವೇತಾ (ದೆಹಲಿ)–3; ಟಿ35: ಪ್ರೀತಿ (ಉತ್ತರ ಪ್ರದೇಶ)–1, ಜ್ಯೋತಿ (ದೆಹಲಿ)–2, ಅವನಿ (ಹರಿಯಾಣ)–3; ಟಿ62: ಶಾಲಿನಿ (ಕರ್ನಾಟಕ)–1; ಟಿ38: ಅಸ್ಮಿತಾ ಸಾಂಗ್ವಾನ್ (ಮಧ್ಯಪ್ರದೇಶ)–1; ಟಿ 42/63: ಪಾಲಕ್ ತನ್ವರ್ (ಹರಿಯಾಣ)–1, ಭವಾನಿ (ಅಂಡಮಾನ್)–2, ಸಂಗೀತಾ (ಕರ್ನಾಟಕ)–3.

ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಹರಿಯಾಣದ ತೇಕ್ ಚಂದ್ –ಪ್ರಜಾವಾಣಿ ಚಿತ್ರ

ಕೋಲ್ಕತ್ತ ರೇಸ್

ಕೋರ್ಟ್ ಜೆಸ್ಟರ್ ಗೆಲ್ಲುವ ನಿರೀಕ್ಷೆ

ಮಿ.ಮಾರಿಷಿಯಸ್ ಹ್ಯಾಂಡಿಕ್ಯಾಪ್ ಶುಕ್ರವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಕೋರ್ಟ್ ಜೆಸ್ಟರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.45ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲಿಟ್ಲ್ ಫಿಂಗರ್ 5, ವಯಾರೆಗ್ಗಿಯೊ 1, ಬಿಯೊವುಲ್ಫ್ 6
2ನೇ ರೇಸ್: ದಂಡಿ ಸತ್ಯಾಗ್ರಹ 1, ಯುವಿ 2, ರೋಮನ್ 4
3ನೇ ರೇಸ್: ಕೋರ್ಟ್ ಜೆಸ್ಟರ್ 5, ಕಿಲ್ಕರ್ರಿ ಬ್ರಿಡ್ಜ್ 2, ಹುಕುಮತ್ 4
4ನೇ ರೇಸ್: ಯಹಲ್ಲಾ 2, ಎಂಬರ್ ಗ್ಲೋ 2, ಪೊಸ್ಸಿ 3
5ನೇ ರೇಸ್: ಕ್ಲಿಫ್‌ಹ್ಯಾಂಗರ್ 5, ಡಿವೈನ್ ಚಕ್ರ 2, ರೆಸೊಲ್ಯೂಟ್ 7
6ನೇ ರೇಸ್: ವಾಂಡರಿಂಗ್ ಏಂಜೆಲ್ 3, ಡೋತ್ರಾಕಿ 7, ಕ್ರೈಟೀರಿಯಾ 4

ಉತ್ತಮ ಬೆಟ್: ಕ್ಲ ಫ್‌ಹ್ಯಾಂಗರ್

ಜಾಕ್‌ಪಾಟ್	1ನೇ ಟ್ರೆಬಲ್	2ನೇ ಟ್ರೆಬಲ್
2,3,4,5,6	1,2,3	4,5,6

ಫುಟ್‌ಬಾಲ್: ಭಾರತ–ಒಮಾನ್ ಪಂದ್ಯ ಡ್ರಾ

ದುಬೈ (ಪಿಟಿಐ): ಒಂದು ವರ್ಷದ ನಂತರ ಅಂತರರಾಷ್ಟ್ರೀಯ ಪಂದ್ಯವಾಡಲು ಕಣಕ್ಕಿಳಿದ ಭಾರತ ಫುಟ್‌ಬಾಲ್ ತಂಡವು ಗುರುವಾರ ಒಮಾನ್ ಎದುರಿನ ಸೌಹಾರ್ದ ಪಂದ್ಯ ಜಯಿಸುವ ಅವಕಾಶವನ್ನು ಕೈಚೆಲ್ಲಿತು.

ಒಮಾನ್‌ಗೆ 'ಉಡುಗೊರೆ' ಗೋಲು ನೀಡಿದ ಭಾರತವು 1–1ರ ಡ್ರಾಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು. ಪಂದ್ಯದ 43ನೇ ನಿಮಿಷದಲ್ಲಿ ಚಿಂಗ್ಲೆನ್ಸನ್ ಸಿಂಗ್ ಒಮಾನ್‌ಗೆ ಉಡುಗೊರೆ ಗೋಲು ನೀಡಿದರು. ಇದರಿಂದಾಗಿ ಒಮಾನ್ ಮುನ್ನಡೆ ಪಡೆಯಿತು.

55ನೇ ನಿಮಿಷದಲ್ಲಿ ಮನ್ವೀರ್ ಸಿಂಗ್ ಚುರುಕಾದ ಕಾಲ್ಚಳಕದಿಂದ ಗೋಲು ದಾಖಲಿಸಿ ಸಮಬಲ ಸಾಧನೆಗೆ ಕಾರಣರಾದರು.

ನಂತರದ ಅವಧಿಯಲ್ಲಿ ಉಭಯ ತಂಡಗಳು ಗೋಲು ಗಳಿಸಲು ಮಾಡಿದ ಪ್ರಯತ್ನಗಳು ಫಲ ಕೊಡಲಿಲ್ಲ. ಒಮಾನ್ ತಂಡವು ಹೋದ ಶನಿವಾರ ಜೋರ್ಡಾನ್ ಎದುರು ಆಡಿದ್ದ ಪಂದ್ಯದಲ್ಲಿಯೂ ಡ್ರಾ ಮಾಡಿಕೊಂಡಿತ್ತು.

ಮನ್ವೀರ್ ಸಿಂಗ್

ಟೆನಿಸ್: ಗಂಧರ್ವ, ಹರ್ಷಿಣಿ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ನಾಲ್ಕನೇ ಶ್ರೇಯಾಂಕಿತ ಗಂಧರ್ವ ಜಿ.ಕೆ ಮತ್ತು ಅಗ್ರ ಶ್ರೇಯಾಂಕಿತೆ ಹರ್ಷಿಣಿ ಎನ್ ಅವರು ಎಂಎಟಿ–ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಗಂಧರ್ವ 6-2, 6-1ರಲ್ಲಿ ನಿಖಿಲ್ ಶ್ರೀನಿವಾಸ್ ಎದುರು ಗೆಲುವು ಸಾಧಿಸಿದರೆ ಹರ್ಷಿಣಿ ನಾಲ್ಕನೇ ಶ್ರೇಯಾಂಕದ ದೇವಾಂಶಿ ಪ್ರಭುದೇಸಾಯಿ ಅವರನ್ನು 6-2, 6-1ರಲ್ಲಿ ಮಣಿಸಿದರು.

ಗಂಧರ್ವ

ಬಾಲಕರ ವಿಭಾಗದ ಮತ್ತೊಂದು ಸೆಮಿಫೈನಲ್‌ನಲ್ಲಿ ತಮಿಳುನಾಡಿನ ನವೀನ್ ಸುಂದರಂ 6-3, 6-1ರಲ್ಲಿ ಶ್ರೀಕರ್ ದೋನಿ ವಿರುದ್ಧ ಜಯ ಗಳಿಸಿದರೆ, ಬಾಲಕಿಯರ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಅನ್ವಿ ಪುನೆಗಂಟಿ 6-4, 6-2ರಲ್ಲಿ ಸಾಯಿ ಅರಣ್ಯ ವಿರುದ್ಧ ಗೆಲುವು ಸಾಧಿಸಿದರು.

ನಮ್ಮ ಮೆಟ್ರೋ namma metro

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ–ಮೇಲ್ : bmrcl@dataone.in ವೆಬ್‌ಸೈಟ್ : www.bmrc.co.in
ಸಂ.: ಬಿಎಂಆರ್‌ಸಿಎಲ್/0103/ಡಿಎಫ್/2021/ಸಿ–27275 ದಿನಾಂಕ: 26.03.2021

ನಿರ್ದೇಶಕರು(ಹಣಕಾಸು) ಹುದ್ದೆಗೆ ಅಧಿಸೂಚನೆ

ಬಿಎಂಆರ್‌ಸಿಎಲ್, ಈ ಕೆಳಕಂಡ ಹುದ್ದೆ ನೇಮಕಾತಿಗೆ ಅರ್ಹತೆ ಮತ್ತು ಅನುಭವ ಹೊಂದಿರುವ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆ ಸಂಖ್ಯೆ
1	ನಿರ್ದೇಶಕರು (ಹಣಕಾಸು)	01

ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **30.04.2021 ಸಂಜೆ 4.00 ಗಂಟೆವರೆಗೆ.** ಅರ್ಹತಾ ಮಾನದಂಡ, ಆನ್‌ಲೈನ್ ಅರ್ಜಿ ಮುಂತಾದವುಗಳಿಗೆ ಸಂಬಂಧಿಸಿದ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್: **www.bmrc.co.in /Career Section** ಪರಿವೀಕ್ಷಿಸುವುದು.

ಸಹಿ/- ಪ್ರಧಾನ ವ್ಯವಸ್ಥಾಪಕರು (ಹೆಚ್‌ಆರ್ & ಟಿ)

Honda Motorcycle and Scooter India Pvt. Ltd., Registered Office: Commercial Complex II, Sector - 49-50, Golf Course Extension Road, Gurugram - 122018 (Haryana), India; **Website:** www.honda2wheelersindia.com; **Customer Care:** customercare@honda2wheelersindia.com

^ಮೋಟಾರ್‌ಸೈಕಲ್‌ಗಳಲ್ಲಿ 125cc ಭಾರತದಲ್ಲಿ ಪ್ರಪ್ರಥಮ ಬಾರಿಗೆ ಪರಿಚಯಿಸಲಾಗುತ್ತಿದೆ. *ಅಂತರ-ದಿಂದ ಖಾಲಿ, ರಿಯಲ್ ಟೈಮ್ ಮತ್ತು ಸರಾಸರಿ ಮೈಲೇಜ್ ರೀಡಿಂಗ್ಸ್ ವೇರಿಯೆಂಟ್ ಪ್ರಕಾರ ಮತ್ತು ಸವಾರಿ ಪರಿಸ್ಥಿತಿಗೆ ಅನುಗುಣವಾಗಿ ಭಿನ್ನವಾಗಿರಬಹುದಾಗಿದೆ. ಚಿತ್ರದಲ್ಲಿ ತೋರಿಸಿರುವ ಪ್ರೊಡಕ್ಟ್ ಮಾರುಕಟ್ಟೆಯಲ್ಲಿ ತೋರಿಸಿರುವ ಪ್ರೊಡಕ್ಟ್‌ಗಿಂತ ಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿರುವ ಆಕ್ಸೆಸ್ಸರಿಗಳು ಸ್ಟಾಂಡರ್ಡ್ ಉಪಕರಣದ ಭಾಗವಾಗಿರುವುದಿಲ್ಲ. ಎಲ್ಲಾ ವೈಶಿಷ್ಟ್ಯತೆಗಳು ಎಲ್ಲಾ ವೇರಿಯೆಂಟ್‌ಗಳಲ್ಲಿ ಲಭ್ಯವಿಲ್ಲದಿರಬಹುದು. #ಫೈನಾನ್ಸ್ ಸ್ಕೀಮ್ ಸೌಲಭ್ಯ ಹಣಕಾಸು ಕಂಪೆನಿಯ ಸಂಪೂರ್ಣ ಅಧಿಕಾರದಲ್ಲಿರುತ್ತದೆ. ಇದು ಕಂಪೆನಿಯ ಸಂಪೂರ್ಣ ಅಧಿಕಾರದ ಮೇರೆಗೆ ಆದ್ಯತೆಯ ಹಣಕಾಸು ಪಾಲುದಾರರೊಂದಿಗೆ ಮಾತ್ರವೇ ಲಭ್ಯವಿರುತ್ತದೆ. ಹಣಕಾಸು ನೀತಿಗೆ ಅನುಗುಣವಾಗಿ ಹಣಕಾಸು ಆಯ್ದ ಗ್ರಾಹಕರಿಗೆ ಆಯ್ದ ಮಾಡೆಲ್‌ಗಳ ಮೇಲೆ ಮಾತ್ರವೇ ಲಭ್ಯವಿರುತ್ತದೆ. ಎರಡು ಕೊಡುಗೆಗಳನ್ನು ಯಾವತ್ತೂ ಒಟ್ಟು ಸೇರಿಸಲು ಸಾಧ್ಯವಿಲ್ಲ. ಎಲ್ಲಾ ಸ್ಕೀಮ್‌ಗಳು ಕೇವಲ ಸೀಮಿತ ಅವಧಿಯ ವರೆಗೆ ಮಾತ್ರವೇ ಜಾರಿಯಲ್ಲಿರುತ್ತದೆ ಹಾಗೂ ಯಾವುದೇ ಮುನ್ಸೂಚನೆ ಇಲ್ಲದೆಯೇ ಇವುಗಳನ್ನು ಮಾರುಕಟ್ಟೆಯಿಂದ ಹಿಂತೆಗೆಯಬಹುದಾಗಿದೆ. **ಷರತ್ತುಗಳು ಅನ್ವಯಿಸುತ್ತವೆ.

Scan the QR code with your mobile camera, and send a "Hi" on Whatsapp to get more information on your nearby Honda2wheeler dealer.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSUR ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 25320623, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 8884434200; Haiku Honda - **DOMLUR:** 49656565, 9342432156; **INDIRANAGAR:** 9343796289, 08049692323; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** 23010300, 8050503111; **NAGARBHAVI:** 23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BANNERAGHATTA RD:** 08068818881; **KANAKAPURA RD:** 08068818881; **PUTTENAHALLI:** 08068818881; **GOTTIGERE:** 08068818881; VFM Honda - **KR PURAM:** 49499299, 9071858885; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 08042620600, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022038682; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 08152-221414, 9900018515; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 7829767340, 8892610223; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 0816-2279979, 9449334359; **KUNIGAL:** 7022276603; **KUNIGAL ROAD:** 9844351599, 9844351399; Honey Honda - **PAVAGADA:** 9686724405; Annapoorna Honda - **MADHUGIRI:** 9886627429; Vignesh Honda - **TIPTUR:** 9448214014; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579.

For Bulk/Institutional enquiries, please write us at: institutionalsales@honda2wheelersindia.com